₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಶುಕ್ರವಾರ 29.08.2025 ಸಂಪುಟ: 10 ಸಂಚಿಕೆ: 226 ಪುಟಗಳು: 12 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ದಾಂಪತ್ಯಕ್ಕೆ ಕಾಲಿಟ್ಟ ಅನುಶ್ರೀ

ಖ್ಯಾತ ನಿರೂಪಕಿ ಹಾಗೂ ನಟಿ ಅನುಶ್ರೀ ದಾಂಪತ್ಯಕ್ಕೆ ಕಾಲಿಟ್ಟಿದ್ದಾರೆ. ತಾನು ಮೆಚ್ಚಿದ ಹುಡುಗ ರೋಷನ್ ಅವರನ್ನು ವರಿಸಿದ್ದಾರೆ. ಬೆಂಗಳೂರಿನ ಹೊರವಲಯದಲ್ಲಿ ನಡೆದ ಅದ್ದೂರಿ ವಿವಾಹ ಸಮಾರಂಭದಲ್ಲಿ ಬಂಧು ಬಳಗದವರು, ಸ್ನೇಹಿತರ ಸಮ್ಮುಖದಲ್ಲಿ ರೋಷನ್ ಹಾಗೂ ಅನುಶ್ರೀ ಸತಿಪತಿಗಳಾದರು. ಕೊಡಗಿನ ಮೂಲದವರಾದ ರೋಷನ್ ಬೆಂಗಳೂರಿನಲ್ಲಿಯೇ ನೆಲೆಸಿದ್ದು, ಐಟಿ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದಾರೆ.

ಸೊಂಪಾದ ಪುಟಗಳು

ಎಲ್ನೋಡಿ ಅಲ್ಲಿ ಕಾರು, ಆದರೆ ಬಿಡುವಂತಿಲ್ಲ ಜೋರು

ಶಿಶಿರಕಾಲ
ಶಿಶಿರ್ ಹೆಗಡೆ 6

ಬಿರು ಬೇಸಗೆಯ ದಿನಗಳಲ್ಲಿ ತಾರಕ ಸ್ವರ!

ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ

ಪ್ರತಿ ಸಂಬಂಧವೂ ಕನ್ನಡಿ ಇದ್ದಂತೆ. ಕನ್ನಡಿಯ ಒಂದು ಕಡೆಗೆ ಆದ ಗೀರು ಮತ್ತೊಂದು ಕಡೆಗೆ ಗೋಚರಿಸುತ್ತದೆ. ಆದ್ದರಿಂದ ಪ್ರತಿ ಸಂಬಂಧವನ್ನು ಕಾಳಜಿಪೂರ್ವಕವಾಗಿ ನೋಡಿಕೊಳ್ಳಬೇಕು. ಎಲ್ಲೂ ಗೀರಾಗದಂತೆ ಎಚ್ಚರವಹಿಸಬೇಕು.

ವಕ್ರತುಂಡೋಕ್ತಿ

ಹೆಂಗಸರು ತಮ್ಮ ವಯಸ್ಸಲ್ಲದೇ ಜಾಸ್ತಿಯಾಗಿ ಸುಳ್ಳು ಹೇಳುವ ಮತ್ತೊಂದು ವಿಷಯವೆಂದರೆ ತಮ್ಮ ದೇಹದ ತೂಕ.

9ನೇ ತರಗತಿ ವಿದ್ಯಾರ್ಥಿನಿಗೆ ಹೆರಿಗೆ!

ಯಾದಗಿರಿ: ಶಹಾಪುರದ ವಸತಿ ಶಾಲೆಯೊಂದರಲ್ಲಿನ ಶೌಚಾಲಯದಲ್ಲಿ ವಿದ್ಯಾರ್ಥಿಯೊಬ್ಬಳು ಮಗುವಿಗೆ ಜನ್ಮ ನೀಡಿದ ಕಳವಳಕಾರಿ ಸಂಗತಿಯೊಂದು ತಡವಾಗಿ ಬೆಳಕಿಗೆ ಬಂದಿದೆ. ವಸತಿ ಶಾಲೆಯ ಶೌಚಾಲಯದಲ್ಲಿ ಬುಧವಾರ ಮಧ್ಯಾಹ್ನ 2:30ರ ಸುಮಾರಿಗೆ 9ನೇ ತರಗತಿ ಓದುತ್ತಿದ್ದ ವಿದ್ಯಾರ್ಥಿನಿಯ ಹೆರಿಗೆಯಾಗಿದ್ದು, ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಸದ್ಯ, ತಾಯಿ-ಮಗು ಆರೋಗ್ಯವಾಗಿದ್ದು, ನಗರದ ಸರಕಾರಿ ಆಸ್ಪತ್ರೆಗೆ ದಾಖಲಿಸ ಲಾಗಿದೆ. ನಂತರ ಬಾಲಕಿಯನ್ನು ಬಾಲಭವ ನಕ್ಕೆ ಕಳುಹಿಸಿ ಕೊಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಗುವಿಗೆ ಜನ್ಮ ನೀಡಿದ ಸಂಗತಿ ಹೊರಬೀಳುತ್ತಿದ್ದಂತೆ ಅಧಿಕಾರಿಗಳ ತಂಡ ಶಾಲೆಗೆ ಭೇಟಿ ಮಾಹಿತಿ ಪಡೆದುಕೊಂಡಿದೆ. ಈ ಸಂಬಂಧ ವಸತಿ ಶಾಲೆಯ ಪ್ರಿನ್ಸಿಪಾಲ್, ವಾರ್ಡನ್, ಬಾಲಕಿ ಸಹೋದರ ಸೇರಿ ಐವರ ವಿರುದ್ಧ ಶಹಾಪುರ ಠಾಣೆಯಲ್ಲಿ ವಿರುದ್ಧ ಎಫ್ಐಆರ್ ದಾಖಲಾಗಿದೆ.

ಒಗ್ಗಟ್ಟಿನ ಮಂತ್ರ ಜಪಿಸಿದ ಭಾಗವತ್

ದೆಹಲಿ: ಅಮೆರಿಕ-ಭಾರತ ನಡುವಿನ ಹಗ್ಗಜಗ್ಗಾಟದ ನಡುವೆಯೇ, ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ನೆರೆ ದೇಶಗಳೊಂದಿಗೆ ಭಾರತ ಸಂಬಂಧ ಸುಧಾರಿಸಿಕೊಳ್ಳಲಿ ಎಂದು ಸಲಹೆ ನೀಡಿ ದ್ದಾರೆ. ಆರ್‌ಎಸ್‌ಎಸ್ ಶತಮಾ ನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿ ರುವ ಅವರು, ಹಲವು ಭಾಗವಾಗಿರುವ ಮೂಲತಃ ಭಾರತೀಯರೇ ಆಗಿರುವ ಈ ಜನರಲ್ಲಿ 'ನಾವು ಒಂದಾಗಬೇಕು' ಎಂಬ ಭಾವ ಬೆಳೆಸುವುದು ನಮ್ಮ ಮೊದಲ ಕರ್ತವ್ಯವಾಗಿದೆ. ಈಗಿನ ನೆರೆಯ ದೇಶಗಳು ಈ ಹಿಂದೆ ಭಾರತದ ಭಾಗವೇ ಆಗಿದ್ದವು. ಭೌಗೋಳಿಕತೆ, ಕಾಡು, ನದಿ, ಬೆಟ್ಟ-ಪರ್ವತ, ಜನರು ಎಲ್ಲವೂ ಒಂದೇ ಆಗಿದ್ದು, ನಕ್ಷೆಗಳಲ್ಲಿ ಮಾತ್ರ ಗೆರೆ ಎಳೆದು ಬೇರೆ ಮಾಡಲಾಗಿದೆ. ಈಗಲಾದರೂ ನೆರೆ ದೇಶಗಳೊಂದಿಗಿನ ಭಾರತದ ಸಂಬಂಧ ಸುಧಾರಿಸಲಿ ಎಂದು ಆಶಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸದನದಲ್ಲಿ RSS ಗೀತೆ ಹಾಡಿದ 'ಕೈ' ಪಕ್ಷದ ಮುಖಂಡ

ಸುದ್ದಿ

ನಾನು ಸ್ಟುಡಿಯೋ ಹೋಗಿ ಹಾಡಿದ್ರೂ ನನ್ ಹಾಡು ಹಿಟ್ ಆಗ್ತಿಲ್ಲ...ನಿಮ್ದು ಸದನದಲ್ಲಿ ಹಾಡಿದ್ರೂ ಸೂಪರ್ ಹಿಟ್ ಆಯ್ತಲ್ಲ ಡ್ಯಾಡ್..!

ಪ್ರಕರಣದಲ್ಲಿ ಸುಜಾತ ಭಟ್ ಹಾಗೂ ತಿಮರೋಡಿ ಬಂಧಿಸುವ ಸಾಧ್ಯತೆ | ಗಿರೀಶ್ ಮಟ್ಟಣ್ಣನವರ್ ವಿರುದ್ಧ ಕೇಸ್ ದಾಖಲು

ಬುರುಡೆ ಅಜ್ಜಿ ಲಾಕ್?

ವಿ ಬೆಂಗಳೂರು/ಮಂಗಳೂರು

ಬುರುಡೆ ಪ್ರಕರಣದಲ್ಲಿ ದಿನಕ್ಕೊಂದು ತಿರುವು ಸಿಗುತ್ತಿದ್ದು, ಈಗಾಗಲೇ ಚಿನ್ನಯ್ಯನನ್ನು ವಶಕ್ಕೆ ಪಡೆದಿರುವ ಎಸ್‌ಐಟಿ ಅಧಿಕಾರಿಗಳು ಇದೀಗ ಅನನ್ಯ ಭಟ್ ಎನ್ನುವ ಕಾಲ್ಪನಿಕ ವ್ಯಕ್ತಿಯ ತಾಯಿಯೆಂದು ಪರಿಚಯಿಸಿಕೊಂಡಿರುವ ಸುಜಾತ ಭಟ್ ಹಾಗೂ ಇಡೀ ಪ್ರಕರಣದ ಪ್ರಮುಖ ಎನಿಸಿರುವ ಮಹೇಶ್ ತಿಮರೋಡಿಯನ್ನು ವಶಕ್ಕೆ ಪಡೆಯಲು ಸಿದ್ಧತೆ ನಡೆಸಿಕೊಂಡಿದೆ.

ಬುರುಡೆ ರಹಸ್ಯ

ಅನನ್ಯ ಭಟ್ ಪತ್ತೆಗೆ ದೂರು ನೀಡಿದ್ದ ಸುಜಾತ ಭಟ್ ದಿನಕ್ಕೊಂದು ಹೇಳಿಕೆ ನೀಡುತ್ತಾ, ಕೊನೆಯಲ್ಲಿ ತನಗೆ ಅನನ್ಯ ಭಟ್ ಎನ್ನುವ ಮಗಳಿರಲಿಲ್ಲ ಎಂದು ಒಪ್ಪಿಕೊಂಡಿದ್ದಾಳೆ. ಇದೀಗ ಎಸ್‌ಐಟಿ ವಿಚಾರಣೆ ವೇಳೆ ತಪ್ಪೊಪ್ಪಿಕೊಂಡಿರುವ ಸುಜಾತ ಅವರನ್ನು ವಶಕ್ಕೆ ಪಡೆಯಲು ಹಾಗೂ ತನಿಖೆಯನ್ನು ತಪ್ಪು ದಾರಿಗೆ ಎಳೆದ ಆರೋಪದಲ್ಲಿ ಎ2 ಆರೋಪಿಯನ್ನಾಗಿ ಮಾಡುವ ಸಾಧ್ಯತೆಯ ಬಗ್ಗೆ ಪರಿಶೀಲಿಸುತ್ತಿದೆ ಎನ್ನಲಾಗಿದೆ. ದೆಹಲಿಗೆ ತಾವೊಬ್ಬಳೇ ಹೋಗಿದ್ದೆ ಎಂದು ಹೇಳಿಕೊಂಡಿದ್ದ ಸುಜಾತ ಭಟ್ ಅವರನ್ನು ಗಿರೀಶ್ ಮಟ್ಟಣ್ಣನವರ್ ಕರೆದುಕೊಂಡು ಹೋಗಿರುವ ಅಂಶ ಬಯಲಾಗಿದೆ. ಈ ನಡುವೆ ಚಿನ್ನಯ್ಯ ವಾಸವಿದ್ದ ತಿಮರೋಡಿ ಅವರ ನಿವಾಸದಲ್ಲಿರುವ ಕೋಣೆಯಲ್ಲಿನ ಪರಿಶೀಲನೆ ವೇಳೆ ಸಿಕ್ಕ ಹಲವು ಸಾಕ್ಷ್ಯಗಳನ್ನು ಮುಂದಿಟ್ಟುಕೊಂಡು ವಿಚಾರಣೆ ಮುಂದುವರೆದಿದೆ.

ಮಟ್ಟಣ್ಣನವರ್ ವಿರುದ್ಧ ಕೇಸ್: ಇನ್ನು ಬುರುಡೆ ಗ್ಯಾಂಗ್ ಮತ್ತೊಬ್ಬ ಪ್ರಮುಖ ಎನಿಸಿದ್ದ ಗಿರೀಶ್ ಮಟ್ಟಣ್ಣನವರ್ ವಿರುದ್ಧ ಪ್ರಕರಣ ದಾಖಲಾಗಿದೆ. ಬೆಳ್ತಂಗಡಿ ಠಾಣೆಯಲ್ಲಿ ಮಾಧ್ಯಮಗಳಿಗೆ ಹೇಳಿಕೆ ನೀಡುವಾಗ ಮದನ್ ಬುಗಡಿ ಎಂಬ ವ್ಯಕ್ತಿಯನ್ನು ಮಾನವ ಹಕ್ಕುಗಳ ಆಯೋಗದ ಅಧಿಕಾರಿಯೆಂದು ಪರಿಚಯಿಸಿದ್ದರು. ಆದರೆ ಈ ವ್ಯಕ್ತಿ ಮಾನವ ಹಕ್ಕು ಅಧಿಕಾರಿಯಲ್ಲ ಬದಲಾಗಿ ಹುಬ್ಬಳ್ಳಿಯ ರೌಡಿಶೀಟರ್ ಎಂಬ ಸಂಗತಿ ಬೆಳಕಿಗೆ ಬಂದಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗವು ಸ್ವಯಂಪ್ರೇರಿತವಾಗಿ ಕ್ರಿಮಿನಲ್ ಕೇಸ್ ದಾಖಲಿಸಿ, ದಕ್ಷಿಣ ಕನ್ನಡ ಎಸ್ಪಿಗೆ ಸೆಪ್ಟೆಂಬರ್ 21ರೊಳಗೆ ವರದಿ ಸಲ್ಲಿಸಲು ಸೂಚಿಸಿದೆ.

ಇನ್ನು ಈ ಬಗ್ಗೆ ಮದನ್ ಬುಗಡಿ ಪ್ರತಿಕ್ರಿಯಿಸಿದ್ದು, ನಾನು ಮಾನವ ಹಕ್ಕು ಅಧಿಕಾರಿಯೆಂದು ಹೇಳಿಕೊಂಡಿಲ್ಲ. ನಾನು ಅಂತಾರಾಷ್ಟ್ರೀಯ ಮಾನವ ಹಕ್ಕುಗಳ ಭ್ರಷ್ಟಾಚಾರ ವಿರೋಧಿ ಸಾಮಾಜಿಕ ನ್ಯಾಯ ಆಯೋಗದ ಪದಾಧಿಕಾರಿಯಾಗಿದ್ದೇನೆ. ಕಳೆದ ಕೆಲವು ವರ್ಷಗಳಿಂದ ಸಜ್ಜನನಾಗಿ ಬದುಕುತ್ತಿದ್ದೇನೆ ಎಂದಿದ್ದಾರೆ. ಗಿರೀಶ್ ಮಟ್ಟಣ್ಣನವರ್ ವಿರುದ್ಧ ದೂರುಗಳು ಬಂದ ಹಿನ್ನೆಲೆಯಲ್ಲಿ ಬೆಳ್ತಂಗಡಿಗೆ ಹೋಗಿದ್ದೆವು ಎಂದು ಸ್ಪಷ್ಟಪಡಿಸಿದ್ದಾನೆ.

ಚಿನ್ನಯ್ಯನ ಮಂಪರು ಪರೀಕ್ಷೆಗೆ ಸೌಜನ್ಯ ತಾಯಿ ಆಗ್ರಹ

ಬುರುಡೆ ಪ್ರಕರಣದಲ್ಲಿ ಇದೀಗ ಸೌಜನ್ಯ ಕುಟುಂಬ ಪ್ರವೇಶಿಸಿದ್ದು, ಚಿನ್ನಯ್ಯನ ಮಂಪರು ಪರೀಕ್ಷೆಯಿಂದ ಸೌಜನ್ಯ ಕೊಲೆ ಪ್ರಕರಣದ ಸತ್ಯಾಂಶ ಹೊರಬರಲಿದೆ ಎಂದು ಆಗ್ರಹಿಸಿದ್ದಾರೆ. ಗುರುವಾರ ಸೌಜನ್ಯ ತಾಯಿ ಕುಸುಮಾವತಿ ಎಸ್‌ಐಟಿ ಮುಖ್ಯಸ್ಥ ಪ್ರಣಬ್ ಮೊಹಂತಿ ಅವರಿಗೆ, 2012ರಲ್ಲಿ ಧರ್ಮಸ್ಥಳದಲ್ಲಿ ನಡೆದಿದ್ದ 17 ವರ್ಷದ ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಕ್ಕಾಗಿ ಸಂತ್ರಸ್ತೆಯ ತಾಯಿ ಕುಸುಮಾವತಿ ಮತ್ತೆ ಮನವಿ ಸಲ್ಲಿಸಿದ್ದಾರೆ. ಹಲವು ಶವಗಳನ್ನು ಹೂತಿಟ್ಟಿದ್ದೆ ಎಂದು ಹೇಳಿಕೆ ನೀಡಿದ್ದ ಅಪರಿಚಿತ ಸಾಕ್ಷಿ-ದೂರುದಾರನ ಮಂಪರು ಪರೀಕ್ಷೆ ನಡೆಸುವಂತೆ ಒತ್ತಾಯಿಸಿದ್ದಾರೆ. ಸೌಜನ್ಯ ಹಲ್ಲೆ ಮತ್ತು ಕೊಲೆಯ ಬಗ್ಗೆ ತಿಳಿದಿದ್ದಕ್ಕಾಗಿ ದೂರುದಾರರು 2014ರಲ್ಲಿ ದೇವಸ್ಥಾನಕ್ಕೆ ಸಂಬಂಧಿಸಿದ ಪ್ರಮುಖ ವ್ಯಕ್ತಿಯಿಂದ ಜೀವ ಬೆದರಿಕೆ ಎದುರಿಸಿದ ನಂತರ ಧರ್ಮಸ್ಥಳದಿಂದ ಪರಾರಿಯಾಗಿದ್ದರು ಎಂದು ಚಿನ್ನಯ್ಯನ ಸಹೋದರಿ ರತ್ನಾ ಹೇಳಿಕೆ ನೀಡಿದ್ದಾರೆ. ಆದ್ದರಿಂದ ಚಿನ್ನಯ್ಯನ ಮಂಪರು ಪರೀಕ್ಷೆ ಮಾಡುವುದರಿಂದ ಘಟನೆಯ ಹಿಂದಿನ ಸಂಪೂರ್ಣ ಸತ್ಯ ಮತ್ತು ಅದರ ಹಿಂದೆ ಇರುವವರನ್ನು ಬಹಿರಂಪಡಿಸಬಹುದು ಎಂದು ಕುಟುಂಬವು ಒತ್ತಾಯಿಸುತ್ತದೆ. ಕರ್ನಾಟಕ ಸರ್ಕಾರ ಮತ್ತು ಎಸ್‌ಐಟಿ ನ್ಯಾಯವನ್ನು ಖಾತ್ರಿಪಡಿಸುತ್ತದೆ ಎಂಬ ವಿಶ್ವಾಸದಲ್ಲಿರುವುದಾಗಿ ಕುಸುಮಾವತಿ ಹೇಳಿದ್ದಾರೆ.

ಅಮೆರಿಕ ಹತ್ತಿ ಆಮದು ಸುಂಕ ರಿಯಾಯಿತಿ ಡಿ.31ರವರೆಗೂ ವಿಸ್ತರಣೆ
ಅಮೆರಿಕ ಮಾರುಕಟ್ಟೆಗೆ ಹೊರತಾಗಿ ಹೊಸ ಮಾರುಕಟ್ಟೆಗಳ ಹುಡುಕಾಟ

ಅಮೆರಿಕ ಸುಂಕ: ಭಾರತದ ಜವಳಿ ರಫ್ತಿಗೆ ಶೇ.25 ಪೆಟ್ಟು

ದೆಹಲಿ: ಭಾರತದ ಉತ್ಪನ್ನಗಳ ಮೇಲೆ ಅಮೆರಿಕ ವಿಧಿಸಿರುವ ಶೇ.50 ಪ್ರತಿಸುಂಕ ಬುಧವಾರ ದಿಂದಲೇ ಜಾರಿಗೆ ಬಂದಿದ್ದು, ಭಾರತದ ರಫ್ತುದಾರರಲ್ಲಿ ತಳಮಳ ಶುರುವಾಗಿದೆ. ಮುಖ್ಯವಾಗಿ ಜವಳಿ ಉದ್ಯಮದ ರಫ್ತು ವಹಿವಾಟಿನ ಮೇಲೆ ಮುಂದಿನ 6 ತಿಂಗಳಲ್ಲಿ ಶೇ.25ರಷ್ಟು ಹೊಡೆತ ಬೀಳುವ ಸಂಕಷ್ಟ ಎದುರಾಗಿದೆ. ಜವಳಿ ಕ್ಷೇತ್ರದ ನಂತರ ರತ್ನ-ವಜ್ರ ಆಭರಣಗಳ ಕ್ಷೇತ್ರಕ್ಕೂ ದೊಡ್ಡ ಮಟ್ಟದ(ಶೇ.15ರಷ್ಟು) ಪೆಟ್ಟು ಬೀಳಲಿದೆ ಎಂದು ಅಂದಾಜು ಮಾಡಲಾಗಿದೆ.

ಅಮೆರಿಕ ಭಾರತದ ಜವಳಿ ಮತ್ತು ಸಿದ್ಧ ಉಡುಪು ಉದ್ಯಮಕ್ಕೆ ಅತಿದೊಡ್ಡ ಮಾರುಕಟ್ಟೆಯಾಗಿದೆ. ಅದಾಗಲೇ ಸಿದ್ಧ ಉಡುಪು ಮತ್ತು ಜವಳಿ ಉತ್ಪನ್ನಗಳ ರಫ್ತುದಾರರು ಬೇಡಿಕೆ ಕುಸಿತವಾಗುವ ಸವಾಲು ಎದುರಿಸಲಾರಂಭಿಸಿದ್ದಾರೆ ಎಂದು ಆಮದು-ರಫ್ತು ವಹಿವಾಟು ಕ್ಷೇತ್ರದ ತಜ್ಞರು ಗುರುವಾರ ಕಳವಳ ವ್ಯಕ್ತಪಡಿಸಿದ್ದಾರೆ. ದೇಶದ ಜವಳಿ ಉದ್ಯಮದ ಮೇಲೆ ಟ್ರಂಪ್ ಸುಂಕಾಸ್ತ್ರದ ಪರಿಣಾಮವನ್ನು ತಗ್ಗಿಸುವ ಸಲುವಾಗಿ ಭಾರತ ಸರಕಾರವೂ ಹಲವು ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಯತ್ನಿಸುತ್ತಿದೆ. ಮೊದಲ ಹೆಜ್ಜೆಯಾಗಿ ಅಮೆರಿಕದಿಂದ ಭಾರತಕ್ಕೆ ಆಮದಾಗುವ ಹತ್ತಿ ಮೇಲೆ ವಿಧಿಸುತ್ತಿದ್ದ ಸುಂಕವನ್ನು ಈ ಹಿಂದೆಯೇ ರದ್ದು ಮಾಡಲಾಗಿದೆ. ಅದನ್ನು ಮತ್ತಷ್ಟು ಕಾಲಕ್ಕೆ (ಡಿ.31ರವರೆಗೂ) ವಿಸ್ತರಿಸಲಾಗಿದೆ.

ಇದಕ್ಕೂ ಮುನ್ನ ಕೇಂದ್ರ ಹಣಕಾಸು ಸಚಿವಾಲಯ ಆ.19ರಿಂದ ಸೆ.30ರವರೆಗೆ ಅಮೆರಿಕದ ಹತ್ತಿ ಆಮದು ಮೇಲೆ ಸುಂಕ ವಿನಾಯಿತಿಗೆ ಆ.18ರಂದು ಆದೇಶಿಸಿತ್ತು. ಈಗ ಅದನ್ನು ಡಿ.31ರವೆಗೂ ವಿಸ್ತರಿಸಲಾಗಿದೆ. ಆ ಮೂಲಕ ದೇಶದ ಜವಳಿ ಉದ್ಯಮಕ್ಕೆ ಆಮದು ಹತ್ತಿ ಸುಂಕ ರಹಿತವಾಗಿ ಸಿಗುವಂತೆ ಮಾಡಲಾಗಿದೆ. 3 ತಿಂಗಳ ಕಾಲ ಸುಂಕ ರಹಿತ ಹತ್ತಿ ಆಮದು ಅವಕಾಶ ವಿಸ್ತರಣೆ ಆಗಿರುವುದರಿಂದ ದೇಶೀ ಜವಳಿ ಉದ್ಯಮ ಸ್ವಲ್ಪ ಮಟ್ಟಿಗೆ ಪರಿಹಾರ ಕಾಣಲಿದೆ ಎಂದೇ ವಿಶ್ಲೇಷಿಸಲಾಗಿದೆ.

40 ದೇಶಗಳ ಪಟ್ಟಿ ಸಿದ್ಧ!

ರಫ್ತು ಕಾರ್ಯತಂತ್ರವನ್ನು ಬದಲಿಸಿಕೊಳ್ಳಲು ಯೋಜಿಸಿರುವ ಭಾರತದ ವಾಣಿಜ್ಯ ಸಚಿವಾಲಯ, ಅಸ್ತಿತ್ವದಲ್ಲಿರುವ ಮುಕ್ತ ವ್ಯಾಪಾರ ಒಪ್ಪಂದ(ಎಫ್‌ಟಿಎ) ಅವಕಾಶಗಳನ್ನು ಬಳಸಿಕೊಂಡು ಹೊಸ ಹೊಸ ಮಾರುಕಟ್ಟೆಗಳ ಅನ್ವೇಷಣೆ ಆರಂಭಿಸಿದೆ. ಆ ಮೂಲಕ ಅಮೆರಿಕಕ್ಕೆ ಹೊರತಾದ ಅವಕಾಶಗಳನ್ನು ಶೋಧಿಸಲಾರಂಭಿಸಿದೆ. ಉತ್ತರ ಅಮೆರಿಕ, ಲ್ಯಾಟಿನ್ ಅಮೆರಿಕ, ಯುರೋಪ್, ಏಷ್ಯಾ, ಆಫ್ರಿಕಾ ಮತ್ತು ಓಷಿಯಾನಿಯಾ ಮತ್ತಿತರ ದೇಶಗಳಲ್ಲಿರುವ ಮಾರುಕಟ್ಟೆ ಒಟ್ಟಾರೆಯಾಗಿ ಜವಳಿ ಮತ್ತು ಉಡುಪುಗಳಿಗೆ ಜಾಗತಿಕ ಬೇಡಿಕೆಯ ಶೇ.25ರಷ್ಟನ್ನು ಹೊಂದಿವೆ. ಈ ದಿಸೆಯಲ್ಲಿ ಚಿಂತನೆ ನಡೆಸಿರುವ ವಾಣಿಜ್ಯ ಸಚಿವಾಲಯ, ಜವಳಿ ಮತ್ತು ಸಿದ್ಧ ಉಡುಪುಗಳಿಗೆ ಉತ್ತಮ ಮಾರುಕಟ್ಟೆಯಾಗಬಲ್ಲ 40 ದೇಶಗಳ ಪಟ್ಟಿಯನ್ನು ತಯಾರಿಸಿದೆ. ಆ ಮೂಲಕ ಟ್ರಂಪ್ ಪ್ರತಿಸುಂಕ ಅಸ್ತ್ರದ ಪರಿಣಾಮವನ್ನು ಆದಷ್ಟೂ ತಗ್ಗಿಸಲು ಭಾರತ ಪ್ರಯತ್ನಿಸುತ್ತಿದೆ ಎನ್ನಲಾಗಿದೆ.

ಕನಿಷ್ಠ ಶೇ.20ರಿಂದ ಗರಿಷ್ಠ ಶೇ.25ರವರೆಗೆ ನಕಾರಾತ್ಮಕ ಪರಿಣಾಮ ನಿರೀಕ್ಷಿತ

ಅಮೆರಿಕ ಮಾರುಕಟ್ಟೆ ಆಶ್ರಯಿಸಿದ ದೇಶದ ಜವಳಿ ರಫ್ತು ವಹಿವಾಟಿನ ಮೇಲೆ ಮುಂದಿನ 6 ತಿಂಗಳಲ್ಲಿ ಏನಿಲ್ಲವೆಂದರೂ ಶೇ.20ರಿಂದ ಶೇ.25ರಷ್ಟು ನಕಾರಾತ್ಮಕ ಪರಿಣಾಮ ಬೀರಬಹುದು ಎಂಬ ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಅದಕ್ಕೂ ಹೆಚ್ಚು ಎಂದರೆ ಈ ಅಂಶವು ಒಟ್ಟು ಜವಳಿ ರಫ್ತಿನ ಶೇ.28ರಷ್ಟಕ್ಕೆ ಏರಿಕೆ ಕಾಣಬಹುದು. ಹೆಚ್ಚಾಗಿ ಸಿದ್ಧ ಉಡುಪು ಮತ್ತು ಮೇಕಪ್ ಉತ್ಪನ್ನಗಳ ರಫ್ತು ವಹಿವಾಟಿಗೆ ಪೆಟ್ಟು ಬೀಳಲಿದೆ ಎಂದು ಭಾರತೀಯ ಜವಳಿ ಉದ್ಯಮ ಒಕ್ಕೂಟದ (ಸಿಐಟಿಐ) ಪ್ರಧಾನ ಕಾರ್ಯದರ್ಶಿ ಚಂದ್ರಿಮಾ ಚಟರ್ಜಿ ಪ್ರತಿಕ್ರಿಯಿಸಿದ್ದಾರೆ. ಅಮೆರಿಕದಿಂದ ಹಡಗುಗಳಲ್ಲಿ ಹತ್ತಿ ಸಾಗಿಬರಲು 45-50 ದಿನ ಬೇಕಾಗುತ್ತದೆ. ಹೊಸದಾಗಿ ಹತ್ತಿ ಆಮದು ಆರ್ಡರ್ ಮಾಡಿದವರಿಗೆ ಸುಂಕ ವಿನಾಯಿತಿ ಪ್ರಯೋಜನ ಸಿಗುವುದು ತಪ್ಪಿಹೋಗುತ್ತಿತ್ತು. ಈಗ ವಿನಾಯಿತಿ ಗಡುವ ಡಿ.31ರವರೆಗೂ ವಿಸ್ತರಿಸಿರುವುದರಿಂದ ಜವಳಿ ಉದ್ಯಮದವರಿಗೆ ಬಹಳ ನಿರಾಳವಾಗಿದೆ ಎಂದು ಚಟರ್ಜಿ ಸಮಾಧಾನ ವ್ಯಕ್ತಪಡಿಸಿದ್ದಾರೆ.

ವಾಲ್ಮೀಕಿ ಹಗರಣ : ಐದು ಕೋಟಿ ಜಪ್ತಿ

ಬೆಂಗಳೂರು: ಭಾರಿ ವಿವಾದಕ್ಕೆ ಕಾರಣವಾಗಿದ್ದ ವಾಲ್ಮೀಕಿ ನಿಗಮದಲ್ಲಿನ ಹಗರಣಕ್ಕೆ ಸಂಬಂಧಿಸಿದಂತೆ ತನಿಖೆ ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ ಈವರೆಗೆ ಐದು ಕೋಟಿ ರು. ಮೌಲ್ಯದ ಆಸ್ತಿಪಾಸ್ತಿಗಳನ್ನು ಜಪ್ತಿ ಮಾಡಿರುವುದಾಗಿ ಪ್ರಕಟಿಸಿದೆ. ಈ ಸಂಬಂಧ ಇ.ಡಿ. ಟ್ವೀಟ್ ಮಾಡಿದ್ದು, 2002ರ ಹಣ ಅಕ್ರಮ ವರ್ಗಾವಣೆ ತಡೆ ಕಾಯಿದೆಯಲ್ಲಿ ಬೆಂಗಳೂರಿನ ಇ.ಡಿ ಅಧಿಕಾರಿಗಳು, ಆರೋಪಿಗಳಿಂದ ಸ್ಥಿರಾಸ್ತಿ ಮತ್ತು ಬ್ಯಾಂಕ್ ಠೇವಣಿ ರೂಪದಲ್ಲಿ ಐದು ಕೋಟಿ ರು.ವರೆಗಿನ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಪ್ರಕರಣದ ಪ್ರಮುಖ ಆರೋಪಿಗಳಾದ ನೆಕ್ಕುಂಟಿ ನಾಗರಾಜ್, ಚಂದ್ರಮೋಹನ್, ಗೋಲಪಲ್ಲಿ ಕಿಶೋರ್ ರೆಡ್ಡಿ, ಎಟಕೇರಿ ಸತ್ಯನಾರಾಯಣ ಎಂಬುವರಿಗೆ ಸೇರಿದ 4.45 ಕೋಟಿ ಮೌಲ್ಯದ ಭೂಮಿ, ಫ್ಲ್ಯಾಟ್‌ಗಳು, ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೊ-ಆಪರೇಟಿವ್ ಬ್ಯಾಂಕ್ ನಲ್ಲಿದ್ದ 50 ಲಕ್ಷ ರು. ನಗದನ್ನು ಜಪ್ತಿ ಮಾಡಿದ್ದಾರೆ.

ಬಿಹಾರಕ್ಕೆ ಸಿಎಂ: ರಾಗಾ ಯಾತ್ರೆಯಲ್ಲಿ ಭಾಗಿ

ಬೆಂಗಳೂರು: ಮತಗಳ್ಳತನದ ವಿರುದ್ಧ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಬಿಹಾರದಲ್ಲಿ ನಡೆಯುತ್ತಿರುವ ರ್‍ಯಾಲಿಯಲ್ಲಿ ಶುಕ್ರವಾರ ಸಿಎಂ ಸಿದ್ದರಾಮಯ್ಯ ಅವರು ಭಾಗವಹಿಸಲಿದ್ದಾರೆ. ರ್‍ಯಾಲಿಯಲ್ಲಿ ಭಾಗ ವಹಿಸಲು ಶುಕ್ರವಾರ ಬೆ.9ಗಂಟೆಗೆ ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಉತ್ತರ ಪ್ರದೇಶದ ಮಹಾಯೋಗಿ ಗೋರಖ್‌ನಾಥ್ ವಿಮಾನ ನಿಲ್ದಾಣಕ್ಕೆ ತೆರಳಲಿದ್ದು, ಅಲ್ಲಿಂದ ರಸ್ತೆ ಮಾರ್ಗವಾಗಿ ಬಿಹಾರದ ಸಿವಾನ್‌ಗೆ ತೆರಳಲಿದ್ದಾರೆ. ಅಲ್ಲಿನ ನಡೆಯಲಿರುವ ಸಮಾವೇಶದಲ್ಲಿ ಭಾಗವಹಿಸಿ, ರಾತ್ರಿ 11.35ಕ್ಕೆ ಬೆಂಗಳೂರಿಗೆ ವಾಪಸಾಗಲಿದ್ದಾರೆ ಎಂದು ಮೂಲಗಳು ತಿಳಿಸಿವೆ. ಕೆಲ ದಿನಗಳ ಹಿಂದಷ್ಟೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ರಾಹುಲ್ ಗಾಂಧಿ ಅವರ ರ್‍ಯಾಲಿಯಲ್ಲಿ ಕರ್ನಾಟಕದ ಹಲವು ಶಾಸಕರೊಂದಿಗೆ ತೆರಳಿ ಭಾಗವಹಿಸಿದ್ದರು.

ರಾಜ್ಯದಲ್ಲಿ 30ರವರೆಗೆ ಭಾರಿ ಮಳೆಯ ಎಚ್ಚರಿಕೆ | ಜಮ್ಮು ಕಾಶ್ಮೀರದಲ್ಲಿ ಸಾವಿನ ಸಂಖ್ಯೆ 43ಕ್ಕೆ ಏರಿಕೆ

ದೇಶಾದ್ಯಂತ ಮುಂದುವರಿದ ಭಾರಿ ಮಳೆ

ಬೆಂಗಳೂರು: ಕರ್ನಾಟಕ ಸೇರಿದಂತೆ ದೇಶದ ಬಹುತೇಕ ರಾಜ್ಯಗಳಲ್ಲಿ ವರುಣನ ಆರ್ಭಟ ಮುಂದುವರೆದಿದ್ದು, ಅನೇಕ ಭಾಗಗಳಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ನಡುವೆ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ ವಾಯುಭಾರ ಕುಸಿತದ ಹಿನ್ನಲೆಯಲ್ಲಿ ಆ.30ರವರೆಗೆ ರಾಜ್ಯಾದ್ಯಂತ ಭಾರಿ ಮಳೆಯಾಗುವ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದೆ.

30ರವರೆಗೆ ರಾಜ್ಯದ ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಈ ಹಿನ್ನಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು, ಪುತ್ತೂರು, ಮೂಲ್ಕಿ, ಮೂಡಬಿದ್ರಿ, ಉಳ್ಳಾಲ ಮತ್ತು ಬಂಟ್ವಾಳ ತಾಲೂಕುಗಳಲ್ಲಿನ ಎಲ್ಲಾ ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಸರಕಾರಿ ಅನುದಾನಿತ ಮತ್ತು ಖಾಸಗಿ ಸಂಸ್ಥೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಿದೆ. ತಗ್ಗು ಪ್ರದೇಶಗಳು, ಕೆರೆ, ಸಮುದ್ರ ತೀರಗಳು ಮತ್ತು ನದಿ ತೀರಗಳಿಗೆ ಮಕ್ಕಳು ಹೋಗದಂತೆ ನೋಡಿಕೊಳ್ಳುವಂತೆ ಪೋಷಕರಿಗೆ ಎಚ್ಚರಿಕೆ ನೀಡಲಾಗಿದೆ. ಮೀನುಗಾರರು ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ. ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಪ್ರಧಾನ ಕಚೇರಿಯಲ್ಲಿರಲು ಸೂಚಿಸಲಾಗಿದ್ದು, ನೋಡಲ್ ಅಧಿಕಾರಿಗಳು ಜಾಗರೂಕರಾಗಿರಲು ಮತ್ತು ಸಾರ್ವಜನಿಕ ದೂರುಗಳಿಗೆ ಸ್ಪಂದಿಸಲು ಸೂಚಿಸಲಾಗಿದೆ.

ಜಮ್ಮು ಕಾಶ್ಮೀರದಲ್ಲಿ ಭಾರಿ ಮಳೆ; ಸಾವಿನ ಸಂಖ್ಯೆ 43ಕ್ಕೆ ಏರಿಕೆ: ಇನ್ನು ಜಮ್ಮು-ಕಾಶ್ಮೀರದಲ್ಲಿ ಸರಣಿಯೋಪಾದಿ ಮೇಘಸ್ಫೋಟವಾದ ಕಾರಣ ಕಳೆದ 2-3 ದಿನಗಳಿಂದಲೂ ಧಾರಾಕಾರ ಮಳೆಯಾಗುತ್ತಿದ್ದು, ಎಲ್ಲೆಲ್ಲೂ ಪ್ರವಾಹ ಪರಿಸ್ಥಿತಿ ತಲೆದೋರಿದೆ, ಹತ್ತಾರು ಕಡೆ ಭೂಕುಸಿತವಾಗಿದೆ.

→ 4

ಭಾರಿ ಅಪಘಾತ; ಆರು ಸಾವು

- ಕೆಎಸ್‌ಆರ್‌ಟಿಸಿ ಬಸ್ಸಿನ ಬ್ರೇಕ್‌ಫೇಲ್; ಆಟೋಗೆ ಗುದ್ದಿದ ಬಸ್
- ಉಳ್ಳಾಲದ ತಲಪಾಡಿ ಟೋಲ್‌ಗೇಟ್‌ನಲ್ಲಿ ಭೀಕರ ಅಪಘಾತ

ಮಂಗಳೂರು: ಕೆಎಸ್‌ಆರ್‌ಟಿಸಿ ಬಸ್ಸಿನ ಬ್ರೇಕ್ ಫೇಲ್ ಆಗಿ ಹಿಮ್ಮುಖವಾಗಿ ಚಲಿಸಿದ್ದರಿಂದ ಉಳ್ಳಾಲದ ತಲಪಾಡಿ ಟೋಲ್ ಗೇಟ್ ಬಳಿ ಭೀಕರ ಅಪಘಾತ ಸಂಭವಿಸಿದ್ದು, ಅವಘಡದಲ್ಲಿ ಸ್ಥಳದಲ್ಲಿಯೇ ಐವರು ಮೃತಪಟ್ಟಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಇನ್ನೊಬ್ಬರು ಆಸ್ಪತ್ರೆಯಲ್ಲಿ ಅಸುನೀಗಿರುವ ಘಟನೆ ನಡೆದಿದೆ.

ಕೇರಳ ಮತ್ತು ಕರ್ನಾಟಕದ ಗಡಿ ಪ್ರದೇಶವಾದ ತಲಪಾಡಿ ಟೋಲ್‌ಗೇಟ್‌ನಲ್ಲಿ ಬ್ರೇಕ್ ವಿಫಲಗೊಂಡಿದ್ದ ಹಿನ್ನೆಲೆ ಹಿಮುಖವಾಗಿ ಕೆಎಸ್‌ಆರ್‌ಟಿಸಿ ಬಸ್ ನಿಯಂತ್ರಣ ತಪ್ಪಿ ಚಲಿಸಿದೆ. ಈ ವೇಳೆ ನಿಲ್ದಾಣದ ಶೆಲ್ಟರ್ ಹಾಗೂ ಬಸಿನ ನಡುವೆ ಆಟೋ ಸಿಲುಕಿಕೊಂಡು ಅಪ್ಪಚ್ಚಿಯಾಗಿರುವ ಘಟನೆ ನಡೆದಿದೆ. ಅಪಘಾತದ ರಭಸಕ್ಕೆ ಆರು ಮಂದಿ ಮೃತಪಟ್ಟಿದ್ದಾರೆ. ಅಪಘಾತದಲ್ಲಿ ಮೃತಪಟ್ಟವರಲ್ಲಿ ಮೂವರು ಮಹಿಳೆಯರು, ಬಾಲಕಿ, ಒಂದು ಮಗು, ಆಟೋ ಚಾಲಕ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಇನ್ನು ಏಳು ಜನರ ಪರಿಸ್ಥಿತಿ ಗಂಭೀರವಾಗಿದ್ದು, ಮಂಗಳೂರಿನ ಆಸ್ಪತ್ರೆಗೆ ಸಾಗಿಸಲಾಗಿದೆ ಎಂದು ತಿಳಿದುಬಂದಿದೆ.

→ 4

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ರಹಸ್ಯ ಪತ್ರ

ಭಾರತ-ಚೀನಾ ಹತ್ತಿರ ತಂದ ಜಿನ್‌ಪಿಂಗ್ ಪತ್ರ!

ಬೀಜಿಂಗ್: ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತದ ಮೇಲೆ ಶೇ.50ರಷ್ಟು ಪ್ರತಿಸುಂಕ ಹಾಕಿರುವುದು, ಚೀನಾ ದೇಶವನ್ನು ನಿಯಂತ್ರಿಸಲು ಯತ್ನಿಸುತ್ತಿರುವುದು ಬೇರೆಯದೇ ದೊಡ್ಡ ಮಟ್ಟದ ರಾಜತಾಂತ್ರಿಕ ಬೆಳವಣಿಗೆಗೆ ಪ್ರೇರಕ ಶಕ್ತಿಯಾಗಿ ಕೆಲಸ ಮಾಡಲಾರಂಭಿಸಿದೆ. ಟ್ರಂಪ್ ಅವರ ಒರಟು ನಡೆಯೇ, ಕಮ್ಯುನಿಸ್ಟ್ ದೇಶ ಚೀನಾ ಮತ್ತು ಪ್ರಜಾಪ್ರಭುತ್ವ ರಾಷ್ಟ್ರ ಭಾರತವನ್ನು ಒಂದಾಗಿಸಲು ಉತ್ತೇಜನಕಾರಿಯಾಗಿ ಪರಿಣಮಿಸಿದೆ ಎಂಬ ವಿಶ್ಲೇಷಣೆ ಕೇಳಿಬಂದಿದೆ. ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರು ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ 'ರಹಸ್ಯ' ಪತ್ರ ಬರೆದಿರುವುದು ಭಾರತ-ಚೀನಾ ಆಪ್ತವಾಗಲು ಬಹಳ ಸಹಕಾರಿಯಾಗಿದೆ ಎಂದು ಅಮೆರಿಕದ ಮಾಧ್ಯಮ ಸಂಸ್ಥೆ 'ಬ್ಲೂಮ್‌ಬರ್ಗ್' ವಿಶ್ಲೇಷಣಾತ್ಮಕ ವರದಿ ಪ್ರಕಟಿಸಿದೆ.

→ 4

2038ಕ್ಕೆ ಭಾರತ ವಿಶ್ವದ 2ನೇ ಅತಿದೊಡ್ಡ ಆರ್ಥಿಕಶಕ್ತಿ!

ದೆಹಲಿ: ಭಾರತದ 2038ರ ವೇಳೆಗೆ ವಿಶ್ವದ 2ನೇ ಅತಿದೊಡ್ಡ ಆರ್ಥಿಕ ಶಕ್ತಿಯಾಗಿ ಬೆಳವಣಿಗೆ ಕಾಣಲಿದೆ ಎಂದು ಆಗಸ್ಟ್‌ನಲ್ಲಿ ಪ್ರಕಟವಾದ 'ಅರ್ನೆಸ್ಟ್ ಅಂಡ್ ಯಂಗ್' ಮುನ್ನೋಟ ವರದಿಯಲ್ಲಿ ಹೇಳಲಾಗಿದೆ.

ಭಾರತದ ಆರ್ಥಿಕತೆ ಮುಂದಿನ ದಶಕದಲ್ಲಿ ಸ್ಥಿರ ಬೆಳವಣಿಗೆ ಸಾಧಿಸಲಿದೆ. ಅಲ್ಲದೇ 34.2 ಲಕ್ಷ ಕೋಟಿ ಡಾಲರ್ ಜಿಡಿಪಿ ಸಾಧಿಸುವುದರೊಂದಿಗೆ 2ನೇ ಸ್ಥಾನಕ್ಕೇರಲಿದೆ. ಆ ಮೂಲಕ, ಈಗ ವಿಶ್ವದ ಸಿರಿವಂತ ದೇಶ ಎನಿಸಿಕೊಂಡಿರುವ ಅಮೆರಿಕವನ್ನು 3ನೇ ಸ್ಥಾನಕ್ಕೆ ದೂಡಲಿದೆ. ಚೀನಾ ಮೊದಲ ಸ್ಥಾನಕ್ಕೇರಲಿದೆ ಎಂದು ಅಮೆರಿಕದ ನ್ಯೂಯಾರ್ಕ್‌ನಲ್ಲಿ ಪ್ರಧಾನ ಕಚೇರಿ ಹೊಂದಿರುವ 'ಇ ಅಂಡ್ ವೈ' ಸಂಸ್ಥೆಯ ಆಗಸ್ಟ್ ವರದಿಯಲ್ಲಿ ಹೇಳಲಾಗಿದೆ. ಭಾರತೀಯರ ಖರೀದಿ ಸಾಮರ್ಥ್ಯ ದಿನೇ ದಿನೇ ಹೆಚ್ಚುತ್ತಿದ್ದು, ಅದರ ಆಧಾರದ ಮೇಲೆಯೇ 2030ರ ವೇಳೆಗೆ ಭಾರತದ ಜಿಡಿಪಿ 20.7 ಲಕ್ಷ ಕೋಟಿ ಡಾಲರ್‌ಗೆ ಮುಟ್ಟಲಿದೆ.

→ 4

ರಾತ್ರಿ ವೇಳೆ ಏಕ ವಾಹನ ಸಂಚಾರ ನಿರ್ಬಂಧ | ಅಪರಾಧ ತಡೆ ಉದ್ದೇಶದಿಂದ ಚಿಕ್ಕಮಗಳೂರು ಪೊಲೀಸರ ತೀರ್ಮಾನ

ಚಾರ್ಮಾಡಿ ಘಾಟ್ ಸಂಚಾರ ನಿಯಮದಲ್ಲಿ ಬದಲಾವಣೆ

ಬೆಂಗಳೂರು: ಪ್ರಕೃತಿ ಸೌಂದರ್ಯವನ್ನು ಸವಿಯಲೆಂದೇ ಹೋಗುವ ಅನೇಕರಿಗೆ ಸ್ಥಳೀಯ ಜಿಲ್ಲಾಡಳಿತ ಮಹತ್ವದ ಘೋಷಣೆ ಯೊಂದನ್ನು ಮಾಡಿದ್ದು, ಇದರ ಭಾಗವಾಗಿ ಇನ್ನು ಮುಂದೆ ಚಾರ್ಮಾಡಿ ಘಾಟಿನಲ್ಲಿ ರಾತ್ರಿ ವಾಹನ ಸಂಚಾರದಲ್ಲಿ ಮಹತ್ವದ ಬದಲಾವಣೆ ಮಾಡಿದೆ. ಹೌದು, ಚಾರ್ಮಾಡಿಯಲ್ಲಿ ಇಷ್ಟು ದಿನ ರಾತ್ರಿಯಿಡೀ ವಾಹನ ಸಂಚಾರಕ್ಕೆ ಯಾವುದೇ ನಿರ್ಬಂಧಗಳಿರಲಿಲ್ಲ. ಆದರೀಗ, ರಾತ್ರಿ ವೇಳೆ ಚಾರ್ಮಾಡಿ ಪ್ರವೇಶಿಸಲು ಏಕ ವಾಹನಗಳನ್ನು ಬಿಡುವುದಿಲ್ಲ. ಬದಲಿಗೆ ರಾತ್ರಿ ವೇಳೆಗೆ ಒಂದೇ ಬಾರಿಗೆ ಐದು ವಾಹನಗಳಿದ್ದರೆ ಮಾತ್ರ ಘಾಟಿನೊಳಗೆ ಪ್ರವೇಶ ನೀಡಲು ಅವಕಾಶ ನೀಡಲು ತೀರ್ಮಾನಿಸಲಾಗಿದೆ.

ಚಿಕ್ಕಮಗಳೂರು ಹಾಗೂ ದಕ್ಷಿಣ ಕನ್ನಡವನ್ನು ಸಂಪರ್ಕಿಸುವ ಕೊಂಡಿಯಾಗಿರುವ ರಾಷ್ಟ್ರೀಯ ಹೆದ್ದಾರಿ 173ರ ಚಾರ್ಮಾಡಿ ಘಾಟ್‌ನಲ್ಲಿ 24 ಗಂಟೆಯೂ ವಾಹನಗಳು ಸಂಚರಿಸುತ್ತವೆ. ಚಾರ್ಮಾಡಿ ಘಾಟ್‌ನ ಕೊಟ್ಟಿಗೆಹಾರ ಬಳಿಯಿರುವ ಚೆಕ್ ಪೋಸ್ಟ್‌ನಲ್ಲಿ ವಾಹನ ತಪಾಸಣೆ ನಡೆಸುತ್ತಿದ್ದರೂ ಅಕ್ರಮವಾಗಿ ಮರಳು ಸಾಗಾಟ, ಗೋ ಸಾಗಾಟ ಮತ್ತು ವಾಹನಗಳನ್ನು ಅಡ್ಡಗಟ್ಟಿ ದರೋಡೆ ಮಾಡುವುದು ಸೇರಿದಂತೆ ವಿವಿಧ ಅಪರಾಧ ಚಟುವಟಿಕೆಗಳು ನಡೆಯುತ್ತಿವೆ ಎನ್ನುವ ಆರೋಪ ಕೇಳಿಬಂದಿತ್ತು.

ದಟ್ಟ ಅರಣ್ಯದಿಂದ ಸುತ್ತುವರಿದ ಚಾರ್ಮಾಡಿ ಘಾಟ್‌ನಲ್ಲಿ ರಾತ್ರಿ ವೇಳೆ ಗೋ ಕಳ್ಳತನ ಹಾಗೂ ಅಪರಾಧ ಚಟುವಟಿಕೆಗಳು ನಡೆಯುತ್ತಿವೆ ಎಂಬ ದೂರುಗಳು ಹೆಚ್ಚಾಗುತ್ತಿದ್ದು, ಇದನ್ನು ನಿಯಂತ್ರಿಸುವ ಉದ್ದೇಶದಿಂದ ಈ ತೀರ್ಮಾನ ಮಾಡಲಾಗಿದೆ. ರಾತ್ರಿ ವೇಳೆ ಚಾರ್ಮಾಡಿಘಾಟ್‌ನಲ್ಲಿ ಕನಿಷ್ಠ ಐದು ವಾಹನಗಳು ಸೇರಿದಾಗ ಮಾತ್ರ ಪ್ರವೇಶ ಸಿಗಲಿದೆ.
- ವಿಕ್ರಂ ಅಮಟೆ, ಚಿಕ್ಕಮಗಳೂರು ಪೊಲೀಸ್ ವರಿಷ್ಠಾಧಿಕಾರಿ

→ 4

ಮುಧೋಳದಲ್ಲಿ ಕಳವು ತಡೆದ ಶ್ರುತಿ | ಸಿಸಿ ಕ್ಯಾಮೆರಾ ಗಮನಿಸಿ, ಪೋಷಕರಿಗೆ ಕಳ್ಳನ ಬಗ್ಗೆ ಮಾಹಿತಿ ನೀಡಿದ ಯುವತಿ

ಸಪ್ತಸಾಗರದಾಚೆ ಕೂತು ಕಳವು ತಪ್ಪಿಸಿದ ಯುವತಿ

ಬಾಗಲಕೋಟೆ: ಇಂದಿನ ತಂತ್ರಜ್ಞಾನ ಯುಗದಲ್ಲಿ ಎಲ್ಲವೂ 'ಕೈಬೆರಳ' ಅಂಚಿನಲ್ಲಿಯೇ ಇರುತ್ತದೆ ಎನ್ನುವುದಕ್ಕೆ ಉದಾಹರಣೆ ಎನ್ನುವ ರೀತಿಯಲ್ಲಿ, ಬಾಗಲ ಕೋಟೆ ಜಿಲ್ಲೆಯ ಮುಧೋಳ ಮೂಲದ ಯುವತಿ ದೂರದ ಅಮೆರಿಕದಲ್ಲಿ ಕೂತು, ಮನೆಯ ಕಳ್ಳತನವನ್ನು ತಪ್ಪಿಸಿದ ಘಟನೆ ಇದೀಗ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಹೌದು, ಮುಧೋಳದ ಸಿದ್ದರಾಮೇಶ್ವರ ನಗರದಲ್ಲಿರುವ ಹನುಮಂತಗೌಡ ಸಂಕಪ್ಪನವರ ಪುತ್ರಿ ಶ್ರುತಿ ಅಮೆರಿಕದ ನೆಲೆಸಿದ್ದಾರೆ. ಮುಧೋಳದಲ್ಲಿ ಇತ್ತೀಚಿಗೆ ಚಡ್ಡಿ ಗ್ಯಾಂಗ್‌ನಿಂದ ಮನೆಗಳ್ಳತನ ಪ್ರಕರಣ ಹೆಚ್ಚಾಗುತ್ತಿರುವುದರಿಂದ ಅಮೆರಿಕದಲ್ಲಿಯೇ ಕೂತು ಶ್ರುತಿ ತಮ್ಮ ಮನೆಗೆ ಅಳವಡಿಸಿರುವ ಸಿಸಿ ಕ್ಯಾಮೆರಾದ ದೃಶ್ಯಾವಳಿಗಳನ್ನು ವೀಕ್ಷಿಸಿದ್ದಾರೆ. ಈ ವೇಳೆ ಮನೆಗೆ ಚಡ್ಡಿ ಗ್ಯಾಂಗ್ ಬಂದಿರುವುದು ಗಮನಕ್ಕೆ ಬರುತ್ತಿದ್ದಂತೆ ತಂದೆಗೆ ಕರೆ ಮಾಡಿ ಎಚ್ಚರಿಸಿದ್ದಾರೆ. ಕೂಡಲೇ ಮನೆಯ ಬಾಗಿಲು ತೆರೆಯುತ್ತಿದ್ದಂತೆ ಚಡ್ಡಿ ಗ್ಯಾಂಗ್ ಕಾಲ್ಕಿತ್ತಿದೆ.

ಭಾರತ-ಅಮೆರಿಕ ನಡುವೆ ಸರಿಸುಮಾರು 9ರಿಂದ 10 ಗಂಟೆ ಅಂತರವಿರುವುದರಿಂದ ಇಲ್ಲಿ ರಾತ್ರಿಯಾಗಿದ್ದಾಗ ಅಲ್ಲಿ ಬೆಳಗಾಗಿತ್ತು. ಆದ್ದರಿಂದ ಮನೆಯ ಸುತ್ತಮುತ್ತಲಿನ ಚಲನವಲನವನ್ನು ಗಮನಿಸಲು ಮೊಬೈಲ್‌ನಲ್ಲಿ ಅಳವಡಿಸಿಕೊಂಡಿದ್ದ ಸಿಸಿ ಟಿವಿಯನ್ನು ಗಮನಿಸಿದಾಗ ಕಳ್ಳರು ನುಗ್ಗಿರುವುದು ಗಮನಕ್ಕೆ ಬಂದಿದೆ. ಕೂಡಲೇ ತಂದೆಗೆ ಕರೆ ಈ ವಿಷಯ ತಿಳಿಸಿದಾಗ ಅವರು ಎದ್ದು, ಮನೆಯಲ್ಲಿದ್ದ ಲೈಟ್‌ಗಳನ್ನು ಆನ್ ಮಾಡಿ, ಬಾಗಿಲು ತೆರೆಯುತ್ತಿದ್ದಂತೆ ಕಳ್ಳರು ಅಲ್ಲಿಂದ ಕಾಲ್ಕಿತ್ತಿದ್ದಾರೆ ಎಂದು ತಿಳಿದುಬಂದಿದೆ.



ವೃದ್ಧ ದಂಪತಿಗಳೇ ಟಾರ್ಗೆಟ್: ಚಡ್ಡಿ ಗ್ಯಾಂಗ್ ಶ್ರುತಿ ಅವರ ಪೋಷಕರು ಮನೆಯಲ್ಲಿ ವಾಸವಿರುವುದನ್ನು ಖಚಿತಪಡಿಸಿಕೊಂಡಿದ್ದಾರೆ. ಮನೆಯಲ್ಲಿ ವೃದ್ಧ ದಂಪತಿಗಳು ಮಾತ್ರ ವಾಸ ಮಾಡುವುದರಿಂದ, ರಾತ್ರಿ ದಾಳಿ ನಡೆಸಿ ಕಳ್ಳತನ ಮಾಡುವ ಪ್ಲಾನ್ ಮಾಡಿದ್ದರು. ಆದರೆ ಮನೆಯ ಸುತ್ತ ಅಳವಡಿಸಿರುವ ಸಿಸಿ ಕ್ಯಾಮೆರಾದ ಬಗ್ಗೆ ಗಮನಿಸಿರಲಿಲ್ಲ. ಆದರೆ ಶ್ರುತಿ ತಮ್ಮ ಮೊಬೈಲ್‌ನಲ್ಲಿ ಕಳ್ಳರನ್ನು ನೋಡಿ ತಂದೆಗೆ ತಿಳಿಸಿದ್ದಾರೆ. ತಕ್ಷಣ ಹನುಮಂತಗೌಡರು ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಕೆಲವೇ ನಿಮಿಷಗಳಲ್ಲಿ ಮನೆ ಮುಂದೆ ಬಂದಿದ್ದಾರೆ. ನಂತರ ಬಾಗಿಲು ತೆಗೆದು ವೃದ್ಧ ದಂಪತಿ ಹೊರ ಬಂದಿದ್ದಾರೆ. ಪೊಲೀಸರೊಂದಿಗೆ ಸೇರಿ ಮನೆಯ ಸುತ್ತ ಮುತ್ತಲು ಹುಡಿಕಿದರೂ ಯಾರು ಕಾಣಲಿಲ್ಲ ಎಂದು ಸ್ಥಳೀಯರು ಹೇಳಿದ್ದಾರೆ.

ಆದರೆ ಈ ಮನೆಗೆ ಕನ್ನ ಹಾಕುವ ಮೊದಲು ಆದೇ ಕಾಲೋನಿಯ ಮತ್ತೊಬ್ಬರ ಮನೆ ಕಳ್ಳತನ ಮಾಡಿರುವುದು ಬೆಳಕಿಗೆ ಬಂದಿದೆ. ಆ ಮನೆಯಲ್ಲಿ 11 ಗ್ರಾಂ ಚಿನ್ನ, 40 ಸಾವಿರ ರು. ಕಳ್ಳತನವಾಗಿದೆ. ಘಟನೆ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಹೆಚ್ಚುವರಿ ಎಸ್‌ಪಿ ಮಹಾಂತೇಶ್ವರ ಜಿದ್ದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆ ಕುರಿತು ಮುಧೋಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಂತ್ರಜ್ಞಾನ ಇಷ್ಟೊಂದು ಮುಂದುವರಿದಿದ್ದರಿಂದ ಮನೆ ದರೋಡೆಯೊಂದು ತಪ್ಪಿದಂತಾಗಿದೆ. ತಂತ್ರಜ್ಞಾನವು ಹೇಗೆ ಸಹಾಯ ಮಾಡುತ್ತದೆ ಎಂಬುದಕ್ಕೆ ಇದು ಒಂದು ಉದಾಹರಣೆ. ಮನೆ ಸಿಸಿ ಕ್ಯಾಮೆರಾ ಲಿಂಕ್‌ಗಳು ತಮ್ಮ ಮೊಬೈಲ್‌ನಲ್ಲಿ ಅಳವಡಿಸಿಕೊಂಡಿದ್ದರಿಂದ ಕಳ್ಳರು ಮನೆಯೊಳಗೆ ನುಗ್ಗಿರುವುದು ತಿಳಿಯಿತು.
- ಶ್ರುತಿ

ಅಲರ್ಟ್ ಕೊಟ್ಟ ಸಿಸಿ ಕ್ಯಾಮೆರಾ?

ಇನ್ನು ವೃದ್ಧ ದಂಪತಿ ವಾಸಿಸುತ್ತಿರುವುರಿಂದ ಶ್ರುತಿ ಅವರು ಮನೆಯ ಸುತ್ತ ಆಧುನಿಕ ತಂತ್ರಜ್ಞಾನದ ಸಿಸಿ ಕ್ಯಾಮೆರಾದಲ್ಲಿ ಅನುಮಾನಾಸ್ಪದ ಓಡಾಟ ದಾಖಲಾದರೆ ಅದು ಲಿಂಕ್ ಆಗಿರುವ ಮೊಬೈಲ್‌ಗೆ ಅಲರ್ಟ್ ಬರುತ್ತದೆ. ಇದೇ ರೀತಿಯ ಶ್ರುತಿ ಅವರಿಗೆ ಆ.27ರ ಮಧ್ಯರಾತ್ರಿ 1ಗಂಟೆಗೆ ಅಲರ್ಟ್ ಬಂದಿತ್ತು. ಅಮೆರಿಕದಲ್ಲಿರುವ ಶ್ರುತಿ ಅವರು ಪೋಷಕರ ಮನೆಯ ಸಿಸಿಟಿವಿ ಲಿಂಕ್ ಮೊಬೈಲ್‌ಗೆ ಕನೆಕ್ಟ್ ಮಾಡಿಕೊಂ ನೋಡಿ, ಮಾಹಿತಿ ನೀಡಿದ್ದಾರೆ.

ಗಾಂಧಿ ಆತ್ಮಕಥೆ ಸಂಪುಟ-2: ಪಿಐಎಲ್ ವಜಾ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಕಣ್ಮರೆಯಾಗಿರುವ ಆತ್ಮಕಥೆ ಸತ್ಯದೊಂದಿಗೆ ನನ್ನ ಪ್ರಯೋಗಗಳು ಸಂಪುಟ-2ರ ಬಗ್ಗೆ ಬೆಳಕು ಚೆಲ್ಲಲು ವಿಪಕ್ಷ ನಾಯಕ ರಾಹುಲ್ ಗಾಂಧಿ, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ರಾಜ್ಯ ಶಿಕ್ಷಣ ಇಲಾಖೆ ಮತ್ತು ಬಾರ್ ಅಸೋಸಿಯೇಶನ್‌ಗೆ ನಿರ್ದೇಶನ ಕೋರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹೈಕೋರ್ಟ್ ಗುರುವಾರ ವಜಾಗೊಳಿಸಿದೆ.

ಜಾಗೃತ ಕರ್ನಾಟಕ, ಜಾಗೃತ ಭಾರತದ ಅಧ್ಯಕ್ಷ ಕೆ.ಎನ್. ಮಂಜುನಾಥ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಕ್ರು ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರ ವಿಭಾಗೀಯ ಪೀಠವು ವಜಾಗೊಳಿಸಿತು. ಅರ್ಜಿದಾರರ ಪ್ರಕಾರ ಇತಿಹಾಸದಲ್ಲಿ ಕೆಲ ಖಾಲಿ ಜಾಗಗಳಿದ್ದು, ಅದಕ್ಕೆ ಉತ್ತರ ಬಯಸಿದ್ದಾರೆ. ಈ ವಿಚಾರದಲ್ಲಿ ಯಾವುದೇ ಆದೇಶ ಮಾಡಲಾಗದು. ಇತಿಹಾಸ ವಿಷಯದಲ್ಲಿ ಸಂಶೋಧನೆ ನಡೆಸಲು ಅರ್ಜಿದಾರರು ಬಯಸಿದಲ್ಲಿ ಅದಕ್ಕೆ ಯಾವುದೇ ಅಡ್ಡಿ-ಆತಂಕಗಳಿಲ್ಲ. ಸತ್ಯದೊಂದಿಗೆ ನನ್ನ ಪ್ರಯೋಗಗಳು (ಮೈ ಎಕ್ಸ್‌ಪರಿಮೆಂಟ್ಸ್ ವಿತ್ ಟ್ರುತ್) ಸಂಪುಟ-2 ಪುನರ್ ಶೋಧ ಕೋರಿರುವ ಮನವಿ ಅಸ್ಪಷ್ಟವಾಗಿದ್ದು, ಅಂಥದ್ದಕ್ಕೆ ಯಾವುದೇ ಪರಿಹಾರವಿಲ್ಲ ಎಂದು ನ್ಯಾಯಾಲಯ ಆದೇಶಿಸಿದೆ.

ಪಾರ್ಟಿ ಇನ್ ಪರ್ಸನ್ ಆಗಿ ಹಾಜರಾಗಿದ್ದ ಮಂಜುನಾಥ್, ಗಾಂಧೀಜಿ ಆತ್ಮಕತೆಯ ಎರಡನೇ ಸಂಪುಟದಲ್ಲಿ 1926-1947 ನಡುವಿನ ಭಾರತದ ಇತಿಹಾಸ ದಾಖಲಿಸಲಾಗಿದೆ.

ನೇಣು ಬಿಗಿದ ಸ್ಥಿತಿಯಲ್ಲಿ ಶಿಲ್ಪಾ ಶವ ಪತ್ತೆ

ಮಹಿಳೆ ಸಾವು: ಪತಿ ವಿರುದ್ಧ ದೂರು

ಬೆಂಗಳೂರು: ಸುದ್ದುಗುಂಟೆಪಾಳ್ಯ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮನೆಯೊಂದರಲ್ಲಿ ನೇಣುಬಿಗಿದ ಸ್ಥಿತಿಯಲ್ಲಿ ಮಹಿಳೆಯ ಶವ ಪತ್ತೆಯಾಗಿದೆ. ವಿವಾಹಿತೆ ಸಾವಿನ ಹಿಂದೆ ಗಂಡ ಹಾಗೂ ಆತನ ಮನೆಯವರು ಕಾರಣ ಆರೋಪಿಸಿ ಮೃತ ಮಹಿಳೆ ಪರ ಪೋಷಕರು ಆರೋಪಿಸಿ ದೂರು ನೀಡಿದ್ದಾರೆ.

ಶಿಲ್ಪಾ ಅನುಮಾನಾಸ್ಪದವಾಗಿ ಸಾವನ್ನಪ್ಪಿರುವ ಮಹಿಳೆ. ನಮ್ಮ ಮಗಳ ಸಾವಿನ ಹಿಂದೆ ಆಕೆಯ ಗಂಡ ಪ್ರವೀಣ್ ಹಾಗೂ ಆತನ ಮನೆಯವರು ಕಾರಣ ಎಂದು ಆರೋಪಿಸಿ ಶಿಲ್ಪಾ ಪೋಷಕರು ನೀಡಿದ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಜುಲೈ 6ರಂದು ಘಟನೆ ನಡೆದಿದ್ದು, ತಡವಾಗಿ ಬೆಳಕಿಗೆ ಬಂದಿದೆ.

ಹುಬ್ಬಳ್ಳಿ ಮೂಲದ ಶಿಲ್ಪಾಳ ಪೋಷಕರಾದ ಶಾರದ ಹಾಗೂ ಬಸಯ್ಯ ಅವರು ಕಳೆದ 30 ವರ್ಷಗಳಿಂದ ನಗರದಲ್ಲಿ ವಾಸಿಸುತ್ತಿದ್ದಾರೆ. ಮೂವರ ಮಕ್ಕಳ ಪೈಕಿ ಶಿಲ್ಪಾ ಹಿರಿಮಗಳಾಗಿದ್ದರು. ಮೂರು ವರ್ಷದ ಹಿಂದೆ ಪ್ರವೀಣ್ ಎಂಬಾತನೊಂದಿಗೆ ಮದುವೆಯಾಗಿತ್ತು. ಬಿ.ಟೆಕ್ ಮಾಡಿಕೊಂಡಿದ್ದ ಶಿಲ್ಪಾ ಪ್ರತಿಷ್ಠಿತ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಳು. ಬಿಇ ಎಂಟೆಕ್ ಮಾಡಿರುವುದಾಗಿ ಹೇಳಿಕೊಂಡಿದ್ದ ಪ್ರವೀಣ್ ಮದುವೆ ಬಳಿಕ ಕೆಲಸ ತೊರೆದು ಪಾನಿಪುರಿ ಶಾಪ್ ಇಟ್ಟುಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ
ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLMAL00343387 1. ಭಕ್ತ ವತ್ಸಲನ್ ಕೆ ಎಸ್ 2. ಅಂಕಿತ ಮಂಜುನಾಥ 3. ಜಿ ಕೆ ಶ್ರೀನಿವಾಸನ್	ಫ್ಲಾಟ್ ನಂ. ಟಿಎಫ್-04 ಮೂರನೇ ಮಹಡಿ ಶ್ರೀ ಸಾಯಿ ಕೃಷ್ಣರೆಸಿಡೆನ್ಸಿ ಬೆಂಗಳೂರು- 560061 ಕರ್ನಾಟಕ.	09.07.2025	ದಿನಾಂಕ 28.07.2025 ರಂತೆ ರೂ. 28,32,023.71/- (ರೂಪಾಯಿ ಇಪ್ಪತ್ತ ಎಂಟು ಲಕ್ಷ ಮೂವತ್ತ ಎರಡು ಸಾವಿರದ ಇಪ್ಪತ್ತ ಮೂರು ಮತ್ತು ಪೈಸೆ ಎಪ್ಪತ್ತ ಒಂದು ಮಾತ್ರ)
2.	ಸಾಲ ಖಾತೆ ನಂ. HHEMAL00343385 1. ಭಕ್ತ ವತ್ಸಲನ್ ಕೆ ಎಸ್ 2. ಅಂಕಿತ ಮಂಜುನಾಥ 3. ಜಿ ಕೆ ಶ್ರೀನಿವಾಸನ್	ಫ್ಲಾಟ್ ನಂ. ಟಿಎಫ್-04 ಮೂರನೇ ಮಹಡಿ ಶ್ರೀ ಸಾಯಿ ಕೃಷ್ಣರೆಸಿಡೆನ್ಸಿ ಬೆಂಗಳೂರು- 560061 ಕರ್ನಾಟಕ.	09.07.2025	ದಿನಾಂಕ 28.07.2025 ರಂತೆ ರೂ. 25,08,159,59/- (ರೂಪಾಯಿ ಇಪ್ಪತ್ತ ಐದು ಲಕ್ಷ ಎಂಟು ಸಾವಿರದ ನೂರ ಐವತ್ತ ಒಂಬತ್ತು ಮತ್ತು ಪೈಸೆ ಐವತ್ತ ಒಂಬತ್ತು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

PRESIDENT

ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್

CIN: L32109KA1984PLC079103
ನೋಂ.ಕಚೇರಿ: 5ಸಿ/1, ಕೆಐಎಡಿಬಿ ಕೈಗಾರಿಕಾ ಪ್ರದೇಶ, ಅತ್ತಿಬೆಲೆ, ಬೆಂಗಳೂರು ಗ್ರಾಮಾಂತರ, ಬೆಂಗಳೂರು-562107, ಕರ್ನಾಟಕ, ಭಾರತ;
ದೂರವಾಣಿ: +91 80 67888300
ವೆಬ್‌ಸೈಟ್: www.schneiderelectricpresident.com; ಇ-ಮೇಲ್: companysecretary@se.com

ಸದಸ್ಯರಿಗೆ ಸೂಚನೆ
ನಲವತ್ತೊಂದನೇ (41ನೇ) ವಾರ್ಷಿಕ ಮಹಾಸಭೆ

ಸದಸ್ಯರು ಗಮನಿಸಬೇಕಾದುದೇನೆಂದರೆ, ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ (**"ದಿ ಕಂಪನಿ"**) ಯ ನಲವತ್ತೊಂದನೇ (**41ನೇ**) ವಾರ್ಷಿಕ ಮಹಾ ಸಭೆಯು (**ಎಜಿಎಂ**) ದಿನಾಂಕ **ಸೆಪ್ಟಂಬರ್ 24, 2025ರ ಬುಧವಾರದಂದು** ಮಧ್ಯಾಹ್ನ 3.30ಕ್ಕೆ (ಭಾ.ಕಾ.) ವಿಡಿಯೋ ಕಾನ್ಫರೆನ್ಸಿಂಗ್ (**"ವಿಸಿ"**)/ ಇತರೆ (**'ವಿಸಿ'**)/ಇತರೆ ಅಡಿಯೊ ವಿಷುಯಲ್ ಮೀನ್ಸ್ (**'ಒಎವಿಎಂ'**) ಮೂಲಕ ಸಾಮಾನ್ಯ ಸ್ಥಳದಲ್ಲಿ ಸದಸ್ಯರ ಭೌತಿಕ ಉಪಸ್ಥಿತಿ ಇಲ್ಲದೆ ಕಂಪನಿಗಳು ಎಜಿಎಂನ್ನು ವಿಸಿ / ಒಎವಿಎಂ ಮೂಲಕ ನಡೆಸಲು ಅವಕಾಶವಿದೆ ಕಂಪನಿ ಕಾಯಿದೆ 2013 (**"ಕಾಯಿದೆ"**) ಮತ್ತು ಇತರೆ ಅನ್ವಯವಾಗುವ ಅನ್ವಯವಾಗುವ ಎಲ್ಲಾ ನಿಯಂತ್ರಣಗಳು, ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (**ಲಿಸ್ಟಿಂಗ್ ಅಬ್ಲಿಗೇಷನ್ಸ್ ಮತ್ತು ಡಿಸ್‌ಕ್ಲೋಸರ್ ರಿಕ್ವಯರ್‌ಮೆಂಟ್ಸ್**) ನಿಯಂತ್ರಣಗಳು, 2015 (**"ದಿ ಲಿಸ್ಟಿಂಗ್ ರೆಗ್ಯುಲೇಶನ್ಸ್"**), ಮತ್ತು ಸಾಮಾನ್ಯ ಸುತ್ತೋಲೆಗಳ ಸಂ. 20/2020 ದಿನಾಂಕ ಮೇ 05, 2020 ಮತ್ತು 09/2024 ದಿನಾಂಕ ಸೆಪ್ಟಂಬರ್ 19, 2024 ರಂದು ಕಾರ್ಪೊರೇಟ್ ವ್ಯಹಾರಗಳ ಸಚಿವಾಲಯ (**"ಎಂಸಿಎ ಸುತ್ತೋಲೆಗಳು"**) ಮತ್ತು ಸುತ್ತೋಲೆ ಸಂ. SEBI/HO/CFD/CFD-PoD-2/P/CIR/2024/133 ದಿನಾಂಕ ಅಕ್ಟೋಬರ್ 03, 2024 ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯ (**"ಸೆಬಿ ಸುತ್ತೋಲೆಗಳು"**) (ಎಲ್ಲವನ್ನೂ ಒಟ್ಟಾಗಿ **"ಸೂಕ್ತ ಸುತ್ತೋಲೆಗಳು"** ಎನ್ನಲಾಗುವುದು) 41ನೇ ಎಜಿಎಂ ಸೂಚನೆಯ ದಿನಾಂಕ ಆಗಸ್ಟ್ 26, 2025 (**"ಸೂಚನೆ"**) ಹೇಳಲಾದ ವ್ಯವಹಾರಗಳನ್ನು ನಡೆಸಲಾಗುವುದು.

ಮೇಲಿನ ಸುತ್ತೋಲೆಗಳಿಗೆ ಅನುಸಾರವಾಗಿ ಎಜಿಎಂನ ಸೂಚನೆ ಮತ್ತು 2024-25ರ ವಾರ್ಷಿಕ ವರದಿ ಮತ್ತು ಆರ್ಥಿಕ ಹೇಳಿಕೆಗಳು ಮತ್ತು ಇತರೆ ಶಾಸನಬದ್ಧ ವರದಿಗಳನ್ನು (**"ವಾರ್ಷಿಕ ವರದಿ"**) ಯನ್ನು ನಿಗದಿತ ಸಮಯದಲ್ಲಿ ವಿದ್ಯುನ್ಮಾನ ಮಾದರಿಯಲ್ಲಿರುವ ಕಂಪನಿ / ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್/ ಡೆಪಾಸಿಟರಿ ಪಾರ್ಟಿಸಿಪೆಂಟ್ (**"ಡಿಪಿ"ಗಳು**) ಅಂದರೆ ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (**"ಎನ್‌ಎಸ್‌ಡಿಎಲ್"**) ಮತ್ತು ಸೆಂಟ್ರಲ್ ಡೆಪಾಸಿಟರಿ ಸರ್ವಿಸಸ್ (ಇಂಡಿಯ) ಲಿಮಿಟೆಡ್ (**"ಸಿಡಿಎಸ್‌ಎಲ್"**) ಮತ್ತು /ಅಥವಾ ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ಟ್ರಾನ್ಸ್‌ಫರ್ ಏಜೆಂಟ್ (**"ಆರ್‌ಟಿಎ"**) ಅಂದರೆ ಎಂಯುಎಫ್‌ಜಿ ಇನ್‌ಟೈಮ್ ಇಂಡಿಯ ಪ್ರೈವೇಟ್ ಲಿಮಿಟೆಡ್ ಶುಕ್ರವಾರ, ಆಗಸ್ಟ್ 15, 2025 (**"ಕಟ್‌ಆಫ್ ದಿನಾಂಕ"**) ರವರಲ್ಲಿ ನೋಂದಾಯಿತವಾದ ಎಲ್ಲಾ ಷೇರುದಾರರಿಗೆ ಇ-ಮೇಲ್ ಮೂಲಕ ಕಳುಹಿಸಲಾಗುವುದು. ಕಂಪನಿಯು ಸೂಚನೆ ಮತ್ತು ವಾರ್ಷಿಕ ವರದಿಯ ಭೌತಿಕ ಪ್ರತಿಯನ್ನು ಕೋರಿಕೆಯ ಮೇರೆಗೆ companysecretary@se.com ಗೆ ತಮ್ಮ ಫೋಲಿಯೋ ಸಂ. /ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಯನ್ನು ನಮೂದಿಸಿ ಕಳುಹಿಸಿದರೆ, ಅಂಥವರಿಗೆ ಭೌತಿಕ ಪ್ರತಿಯನ್ನು ಒದಗಿಸುತ್ತಿದೆ. ಆದಾಗ್ಯೂ, ಷೇರುದಾರರು ಪರಿಸರಪೂರಕವಾಗಿರುವ ಕಂಪನಿಯ ಇ-ಮೇಲ್ ಮೂಲಕವೇ ವ್ಯವಹಾರ ನಡೆಸಬೇಕೆಂದು, ನಾವು ಆಶಿಸುತ್ತೇವೆ.

ಕಂಪನಿಯು ಎನ್‌ಎಸ್‌ಡಿಎಲ್ ರವರನ್ನು ಎಜಿಎಂ ನಲ್ಲಿ ವಿಸಿ/ಒಎವಿಎಂ ಮೂಲಕ ಮತದಾನದ ವ್ಯವಸ್ಥೆ (ರಿಮೋಟ್ ಇ-ವೋಟಿಂಗ್ ಮತ್ತು ಎಜಿಎಂ ಸಂದರ್ಭದಲ್ಲಿ ಇ-ವೋಟಿಂಗ್) ನಡೆಸಲಿದೆ. ಸದಸ್ಯರು ವಿಸಿ/ಒಎವಿಎಂ ಮೂಲಕ ಮಾತ್ರವೇ ಎಜಿಎಂ ಗೆ ಹಾಜರಾಗಬಹುದು. ಎಜಿಎಂ ಹಾಜರಾಗಲು ಸೂಚನೆಯ ವಿವರವಾದ ಸೂಚನೆಗಳು ಮತ್ತು ಎಜಿಎಂ ಗೆ ಮೊದಲು ರಿಮೋಟ್ ಇ-ಮತದಾನ ಅಥವಾ ಎಜಿಎಂ ಸಂದರ್ಭದಲ್ಲಿ ಮತದಾನದ ಬಗ್ಗೆ ಸೂಚನೆಯಲ್ಲಿ ನೀಡಲಾಗಿದೆ.

ಸದಸ್ಯರು ತಮ್ಮ ಇ-ಮೇಲ್ ಐಡಿಯನ್ನು ನೋಂದಾಯಿಸದೆ ಇದ್ದು, ಸೂಚನೆ ಮತ್ತು ವಾರ್ಷಿಕ ವರದಿ ಮತ್ತು ಇತರೆ ಎಲ್ಲಾ ಸಂವಹನಗಳನ್ನು ಕಂಪನಿಯಿಂದ ಕಾಲಾನುಕಾಲಕ್ಕೆ ಸ್ವೀಕರಿಸಬೇಕೆಂದು ಬಯಸಿದಲ್ಲಿ, ತಾವು ನಮೂನೆ ಐಎಸ್‌ಆರ್-1 ರಿಂದ ಆರ್‌ಟಿಎ ಗೆ rnt.helpdesk@in.mpms.mufg.com ಅಥವಾ ಕಂಪನಿ ಕಾರ್ಯದರ್ಶಿ companysecretary@se.com ಗೆ ನೋಂದಾಯಿಸಿಕೊಳ್ಳಬಹುದು. ಆದಾಗ್ಯೂ, ಡಿಮ್ಯಾಟ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರು ತಮ್ಮ ಫೋಲಿಯೋ ಸಂ. /ಡಿಪಿ ಐಡಿ ಮತ್ತು ಕ್ಲೈಂಟ್ ಐಡಿ ಯನ್ನು ನಮೂದಿಸಿ ಕಳುಹಿಸಿದರೆ, ಅಂಥವರಿಗೆ ಭೌತಿಕ ಪ್ರತಿಯನ್ನು ಅಥವಾ ತಮ್ಮ ಇ-ಮೇಲ್ ಐಡಿಯನ್ನು ಕಂಪನಿಯೊಂದಿಗೆ ನೊಂದಾಯಿಸಿಕೊಳ್ಳದೆ, ಎಜಿಎಂ ನಲ್ಲಿ ಭಾಗವಹಿಸಿ ರಿಮೋಟ್ ಇ-ಮತದಾನ ಅಥವಾ ರಿಮೋಟ್ ಇ-ಮತದಾನ ಪದ್ಧತಿಯಲ್ಲಿ ಸಭೆಯ ಸಂದರ್ಭದಲ್ಲಿ ಮಾಡಲು ಬಯಸಿದಲ್ಲಿ, ಅಂಥವರು ಎನ್‌ಎಸ್‌ಡಿಎಲ್ ಗೆ evoting@nsdl.com ಗೆ ಅಥವಾ ಕಂಪನಿ ಕಾರ್ಯದರ್ಶಿಗೆ companysecretary@se.com ಇ-ಮೇಲ್ ಮಾಡಿ ಪ್ರಕ್ರಿಯೆಯನ್ನು ಅನುಸರಿಸಿ, ಯೂಸರ್ ಐಡಿ ಮತ್ತು ಪಾಸ್‌ವರ್ಡ್‌ಗಳನ್ನು ಪಡೆದುಕೊಂಡು ರಿಮೋಟ್ ಇ-ವೋಟಿಂಗ್ ಮೂಲಕ ಮತ ಚಲಾಯಿಸಬಹುದು.

ವಿಸಿ/ಒಎವಿಎಂ ಸೌಲಭ್ಯದ ಮೂಲಕ ಭಾಗವಹಿಸುವ ಸದಸ್ಯರನ್ನು ಕಾಯಿದೆಯ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಹಾಕುವ ಉದ್ದೇಶಕ್ಕಾಗಿ ಎಣಿಸಲಾಗುತ್ತದೆ.

ಸೂಚನೆ ಮತ್ತು ವಾರ್ಷಿಕ ವರದಿಯು ಕಂಪನಿಯ ವೆಬ್‌ಸೈಟ್‌ನಲ್ಲಿ ಅಂದರೆ www.schneiderelectricpresident.com ನಲ್ಲಿಯೂ, ಮೆಟ್ರೋಪಾಲಿಟನ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (ಎಂಎಸ್‌ಇಐ) ನ ವೆಬ್‌ಸೈಟ್ www.msei.in ನಲ್ಲಿಯೂ ಲಭ್ಯವಿರುತ್ತದೆ.

ಪ್ರಮುಖ ಮಾಹಿತಿ:

ಎ ಸದಸ್ಯರು ತಮ್ಮ ಕೆವೈಸಿ ವಿವರಗಳು ಅಂದರೆ ಪ್ಯಾನ್, ವಿಳಾಸ, ಮೊಬೈಲ್ ಸಂಖ್ಯೆ, ಬ್ಯಾಂಕ್ ಖಾತಾ ವಿವರಗಳು, ಇ-ಮೇಲ್ ವಿಳಾಸ ಮತ್ತು ನಾಮಿನೇಶನ್ ಇವುಗಳನ್ನು ಅಪ್‌ಡೇಟ್ ಮಾಡಲು ಕೋರಲಾಗಿದೆ. ಭೌತಿಕ ರೂಪದಲ್ಲಿ ಕಂಪನಿಯ ಷೇರುಗಳನ್ನು ಹೊಂದಿರುವ ಎಲ್ಲಾ ಷೇರುದಾರರು ತಮ್ಮ ಕೆವೈಸಿ ವಿವರಗಳನ್ನು ಸೆಬಿಯು ಕಡ್ಡಾಯಗೊಳಿಸಿರುವುದರಿಂದ ಕಂಪನಿಯ ಆರ್‌ಟಿಎ ಗೆ ಲಿಖಿತ ಮೂಲಕ rnt.helpdesk@in.mpms.mufg.com ಗೆ ಇ-ಮೇಲ್ ಕಳುಹಿಸಿ ತಮ್ಮ ಸೆಕ್ಯುರಿಟಿಗಳನ್ನು ಡಿಮೆಟೀರಿಯಲೈಸ್ಡ್ ರೂಪದಲ್ಲಿಡಲು ಸಲಹೆ ನೀಡಲಾಗಿದೆ. ಮುಂದುವರಿದು, ಎಲೆಕ್ಟ್ರಾನಿಕ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಸದಸ್ಯರು ತಮ್ಮ ಕೆವೈಸಿ ವಿವರಗಳನ್ನು ತಮ್ಮ ಡೆಪಾಸಿಟರಿ ಪಾರ್ಟಿಸಿಪೆಂಟ್ಸ್‌ಗಳ ಬಳಿ ಸಲ್ಲಿಸಲು ಕೋರಲಾಗಿದೆ.

ಬಿ. **ಭೌತಿಕ ಷೇರುಗಳಿಗೆ ವರ್ಗಾವಣೆ ವಿನಂತಿಗಳ ಮರು-ನಿವೇಶನಕ್ಕಾಗಿ ವಿಶೇಷ ವಿಂಡೋ ತೆರೆಯುವಿಕೆ:** ಜುಲೈ 02, 2025 ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD-PoD/P/CIR/2025/97 ರ ಪ್ರಕಾರ, ಏಪ್ರಿಲ್ 01, 2019 ರ ಗಡುವಿನ ಮೊದಲು ಸಲ್ಲಿಸಲಾದ ಮತ್ತು ದಾಖಲೆಗಳು/ಪ್ರಕ್ರಿಯೆಯಲ್ಲಿನ ಕೊರತೆಯಿಂದಾಗಿ ತಿರಸ್ಕರಿಸಲ್ಪಟ್ಟ/ ಹಿಂದಿರುಗಿಸಲಾದ/ಪರಿಗಣಿಸದ ಭೌತಿಕ ಷೇರುಗಳ ವರ್ಗಾವಣೆ ವಿನಂತಿಗಳನ್ನು ಮರು-ನಿವೇಶನ ಮಾಡಲು/ ಅಥವಾ ತಾವು ಸ್ವತಃ ಅಗತ್ಯ ದಾಖಲೆಗಳನ್ನು ಕಂಪನಿಗೆಯ ಆರ್‌ಟಿಎ ಗೆ ಜುಲೈ 07, 2025 ರಿಂದ ಜನವರಿ 06, 2026 ರವರೆಗೆ ಸಲ್ಲಿಸಲು ಆರು (06) ತಿಂಗಳುಗಳ ಕಾಲ ವಿಶೇಷ ವಿಂಡೋವನ್ನು ತೆರೆಯಲಾಗಿದೆ.

ಸಿ. **100 ದಿನಗಳ ಅಭಿಯಾನ – "ಸಕ್ಷಮ್ ನಿವೇಶಕ್":** ಎಂಸಿಎ ಅಡಿಯಲ್ಲಿ ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರ (ಐಇಪಿಎಫ್‌ಎ), ಹೂಡಿಕೆದಾರರ ಜಾಗೃತಿಯನ್ನು ಹೆಚ್ಚಿಸಲು ಮತ್ತು ಹಕ್ಕು ಪಡೆಯದ ಲಾಭಾಂಶಗಳು ಮತ್ತು ಷೇರುಗಳ ಮರುಪಡೆಯುವಿಕೆಯನ್ನು ಸುಗಮಗೊಳಿಸಲು ಜುಲೈ 28, 2025 ರಿಂದ ನವೆಂಬರ್ 06, 2025 ರವರೆಗೆ "ಸಕ್ಷಮ್ ನಿವೇಶಕ್" ಎಂಬ ಶೀರ್ಷಿಕೆಯ ರಾಷ್ಟ್ರವ್ಯಾಪಿ 100 ದಿನಗಳ ಅಭಿಯಾನವನ್ನು ಪ್ರಾರಂಭಿಸಿದೆ. ಕಂಪನಿಯಿಂದ ಸಕಾಲಿಕ ಮತ್ತು ಪರಿಣಾಮಕಾರಿ ಸಂವಹನವನ್ನು ಖಚಿತಪಡಿಸಿಕೊಳ್ಳಲು ಕಂಪನಿಯ ಷೇರುದಾರರು ಅಭಿಯಾನದ ಅವಧಿಯೊಳಗೆ ತಮ್ಮ ಕೆವೈಸಿ ವಿವರಗಳು, ಬ್ಯಾಂಕ್ ಆದೇಶಗಳು ಮತ್ತು ಇಮೇಲ್ ವಿಳಾಸಗಳ ನೋಂದಣಿ ಸೇರಿದಂತೆ ಸಂಪರ್ಕ ಮಾಹಿತಿಯನ್ನು ನವೀಕರಿಸಲು ಪ್ರೋತ್ಸಾಹಿಸಲಾಗುತ್ತದೆ. ಇದು ಕಂಪನಿಯು ಭವಿಷ್ಯದಲ್ಲಿ ಲಾಭಾಂಶವನ್ನು ಸರಿಯಾದ ಹಕ್ಕುದಾರರಿಗೆ ನೇರವಾಗಿ ಪಾವತಿಸಲು ಅನುವು ಮಾಡಿಕೊಡುತ್ತದೆ, ವರ್ಗಾವಣೆ ಅಥವಾ ಯಾವುದೇ ಹಕ್ಕು ಪಡೆಯದ ಮೊತ್ತವನ್ನು ಐಇಪಿಎಫ್ ಈ ಪ್ರಾಧಿಕಾರಕ್ಕೆ ತಪ್ಪಿಸುತ್ತದೆ.

ಮೇಲಿನ ಮಾಹಿತಿಯನ್ನು ಕಂಪನಿಯ ಎಲ್ಲಾ ಸದಸ್ಯರ ಮಾಹಿತಿ ಮತ್ತು ಪ್ರಯೋಜನಕ್ಕಾಗಿ ನೀಡಲಾಗುತ್ತಿದೆ ಮತ್ತು ಇದು ಕಾನೂನಿಗೆ ಅನುಸಾರವಾಗಿದೆ.

ಗಮನಿಸಿ: ಈ ವಿಷಯದಲ್ಲಿ ಮೇಲೆ ತಿಳಿಸಲಾದ ವಿಷಯವು ಆಗಸ್ಟ್ 19, 2025 ರ ನಮ್ಮ ಪತ್ರಿಕಾ ಜಾಹೀರಾತನ್ನು ರದ್ದುಗೊಳಿಸುತ್ತದೆ.

ಮಂಡಳಿಯ ಆದೇಶದ ಮೇರೆಗೆ
ಸ್ನೇಯ್ಡರ್ ಎಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ ಪರವಾಗಿ
ಸಹಿ/-
ಸ್ವಪ್ನ ಭಾಟಿಯಾ
ಕಂಪನಿ ಕಾರ್ಯದರ್ಶಿ
ಸ. ಸಂ.ಎ32349

ದಿನಾಂಕ: ಆಗಸ್ಟ್ 27, 2025
ಸ್ಥಳ: ಬೆಂಗಳೂರು

Life Is On | Schneider Electric

SOUTH INDIAN Bank Date: 28.08.2025
GOLD AUCTION NOTICE
JAYANAGAR BRANCH
P.B. NO 1137, 28TH CROSS, 10TH MAIN
BANGALORE - 560 011.
Ph: 080-26530214 Email: br0151@sib.co.in

The Gold articles pledged under the following number/s at **Bank's Jayanagar Branch** which are not cleared by payment of Bank dues even after serving registered notice and Gold articles pledged under the same number against which registered notices have been served/returned undelivered will be sold in public auction or **private treaty on as is where is condition** at Branch premises as under or any other convenient date and time without further notice at the risk and responsibility of the pawners, if they are not released from the branch. Auction of Gold ornaments pledged under the following accounts will be held at **Jayanagar Branch on 10.09.2025 at 2:30 PM. EMD amount is Rs. 5,000/-.**

Sl. No.	Name	A/c No.	Gross Wt (in gms)
1	DAVEDEDVERDRAJI	0151653000089172	26.40

Bank reserves its rights to cancel/ adjourn the auction without giving any reason at any time. Sd/- **Asst Manager**

Corporate Office Regd. Office: SIB House, T B Road, Mission Quarters, Thrissur, Kerala - 680001
Telephone Number : + 91-487-2420020, Fax Number : + 91-487-2420020, E-Mail : sibcorporate@sib.co.in,
Website : www.southindianbank.com. Corporate Identity Number: L65191KL1929PLC001017

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ACRE MAKING ASSETS WORK
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ. (CIN:L65922DL2005PLC136029) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **28.12.2023** ರಂದು ಕರೆದು ಸಾಲಗಾರ **ಸತೀಶ್ ಕುಮಾರ್ ಕೆ. ಎನ್ ಮತ್ತು ಜಾಹ್ನವಿ ಸತೀಶ್** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 33,36,505.92 (ಮೂವತ್ತಮೂರು ಲಕ್ಷದ ಮೂವತ್ತಾರು ಸಾವಿರದ ಐದುನೂರ ಐದು ರೂಪಾಯಿಗಳು ಮತ್ತು ತೊಂಬತ್ತೆರಡು ಪೈಸೆ ಮಾತ್ರ) ಲೋನ್ ಅಕೌಂಟ್ ನಂ. S014OXVIII** ಮೇಲೆ (ಹಿಂದಿನ ಲ್ಯಾನ್ ಕೋಡ್ **HHLBAN00330864** ಐಎಚ್‌ಎಫ್‌ಎಲ್) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತ, ಹೇಳಲಾಗಿರುವ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **19.12.2023** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಆಸ್ತಿಯ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೂಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **25.08.2025** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.** ಬಾಕಿ ಇರುವ ಮೊತ್ತ **ರೂ. 33,36,505.92 (ಮೂವತ್ತಮೂರು ಲಕ್ಷದ ಮೂವತ್ತಾರು ಸಾವಿರದ ಐದುನೂರ ಐದು ರೂಪಾಯಿಗಳು ಮತ್ತು ತೊಂಬತ್ತೆರಡು ಪೈಸೆ ಮಾತ್ರ) 19.12.2023** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಫ್ಲಾಟ್ ಸಂ 107, 674 ಚದರ ಅಡಿಗಳ ಸೂಪರ್ ಬಿಲ್ಟ್ ಅಪ್ ವಿಸ್ತೀರ್ಣವನ್ನು ಹೊಂದಿದ್ದು 425.97 ಚದರ ಅಡಿ ಭೂಮಿಯಲ್ಲಿ ಅವಿಭಜಿತ ಪಾಲನ್ನು ಹೊಂದಿದೆ, ಮೊದಲ ಮಹಡಿ, ಬ್ಲಾಕ್-ಎಚ್, ಲ್ಯಾಂಡ್ ಬೇರಿಂಗ್ ಸೈಟ್ ನಂ. 97, ಐಕಾನ್ ಹ್ಯಾಪಿ ಲಿವಿಂಗ್, ಕಮ್ಮಸಂದ್ರ ಗ್ರಾಮ, ಅಟ್ಟಿಬೆಲೆ ಹೋಬಳಿ, ಆನೇಕಲ್ ಬೆಂಗಳೂರು ಅರ್ಬನ್, ಬೆಂಗಳೂರು-560100, ಕರ್ನಾಟಕ ಮತ್ತು ಒಂದು ಮುಚ್ಚಿದ ಕಾರ್ ಪಾರ್ಕ್ ಸ್ಥಳ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 25.08.2025 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in.ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಸಿಆರ್‌ಇ)
CIN: U65993DL2002PLC115769
ACRE MAKING ASSETS WORK
ನೋಂದಾಯಿತ ಕಚೇರಿ: 14 ನೇ ಮಹಡಿ, ಎರೋಸ್ ಕಾರ್ಪೊರೇಟ್ ಟವರ್, ನೆಹರು ಪ್ಲೇಸ್, ನವದೆಹಲಿ-110019
ಇ-ಮೇಲ್: acre.arc@acreindia.in, ಜಾಲತಾಣ: www.acreindia.in
ಕಾರ್ಪೊರೇಟ್ ಕಚೇರಿ: ಘಟಕ ಸಂಖ್ಯೆ. 502, ಸಿ ವಿಂಗ್, ಒಂದು ಬಿಕೆಸಿ, ಪ್ಲಾಟ್ ನಂ. ಸಿ-66, ಜಿ-ಬ್ಲಾಕ್ ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಮುಂಬೈ - 400051 ದೂರವಾಣಿ: 022 68643101

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಸಮ್ಮಾನ್ ಕ್ಯಾಪಿಟಲ್ ಲಿ. (ಈಗಿನ ಹೆಸರು: **ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್**) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್‌ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟೀಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕೆಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **30.05.2019** ರಂದು ಕರೆದು ಸಾಲಗಾರ **ರಹಮತುಲ್ಲಾ ಖಾನ್ ಮತ್ತು ಸಮೀಹಾ ಶಾಜಿಯಾ ದೇಸಾಯಿ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ **ರೂ. 4,87,139/- (ನಾಲ್ಕು ಲಕ್ಷ ಎಂಬತ್ತೇಳು ಸಾವಿರದ ನೂರ ಮೂವತ್ತೊಂಬತ್ತು ರೂಪಾಯಿಗಳು ಮಾತ್ರ)** ಲೋನ್ ಅಕೌಂಟ್ ನಂ. **R003OXVI** ಮೇಲೆ (ಹಿಂದಿನ ಲ್ಯಾನ್ ಕೋಡ್ **HHEBAN00202492** ಐಎಚ್‌ಎಫ್‌ಎಲ್) ಈ ಲೋನ್ ಅಕೌಂಟ್‌ಗೆ ಸಂಬಂಧಿಸಿದಂತೆ, ಸದರಿ ನೋಟಿಸ್ ನಿಮ್ಮನ್ನು ತಲುಪಿ 60 ದಿನಗಳಾಗುವುದರೊಳಗೆ **30.05.2019** ರ ವರೆಗಿನ ಮೊತ್ತ ಮತ್ತು ಅದರ ಮೇಲಿನ ಬಡ್ಡಿ. ಈ ಹಿಂದೆ, **ಇಂಡಿಯಾಬುಲ್ಸ್ ಎಆರ್‌ಸಿ- XVI, ಟ್ರಸ್ಟ್‌ನ ಟ್ರಸ್ಟಿಯಾಗಿ** ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು **30.09.2020** ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ **ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ.**-ನ ಹೆಸರಿಗೆ ನಿಯುಕ್ತಿಪಡಿಸಿದೆ. ಅಲ್ಲದೆಯೆ, **ಇಂಡಿಯಾಬುಲ್ಸ್ ಎಆರ್‌ಸಿ- XVI, ಟ್ರಸ್ಟ್‌ನ ಟ್ರಸ್ಟಿಯಾಗಿ ಇಂಡಿಯಾಬುಲ್ಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿ. ಮೇಲಿನ ಲೋನ್ ಅಕೌಂಟ್‌ನ ಎಲ್ಲಾ ಹಕ್ಕುಗಳು, ಹಕ್ಕುಪತ್ರಗಳು ಮತ್ತು ಹಿತಾಸಕ್ತಿಯನ್ನು 26.04.2021 ದಿನಾಂಕ ತಿದ್ದುಪಡಿ ಒಪ್ಪಂದದೊಂದಿಗೆ ಓದಲಾಗಿದೆ ರ ಅಸೈನ್‌ಮೆಂಟ್ ಅಗ್ರಿಮೆಂಟ್ ಮೂಲಕ ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.-ನ ('ಎಸಿಆರ್‌ಇ') ಹೆಸರಿಗೆ ನಿಯುಕ್ತಿಪಡಿಸಿದೆ. 26.08.2021** ದಿನಾಂಕದ ತಿದ್ದುಪಡಿ ಒಪ್ಪಂದ ಮತ್ತು ಸಾಲ ಖಾತೆಯೊಂದಿಗೆ ಓದಲಾಗಿದೆ, ಇದನ್ನು ಎಸಿಆರ್‌ಇ ಪುಸ್ತಕಗಳಲ್ಲಿ ಸಾಲ ಖಾತೆ ಸಂ **R003OXVI** ಎಂದು ಮರುಸಂಖ್ಯೆ ಮಾಡಲಾಗಿದೆ.

ಸಾಲಗಾರ (ರು) ಮೊತ್ತವನ್ನು ಮರುಪಾವತಿಸಲು ವಿಫಲರಾದ ಕಾರಣ, ಕೆಳಗೆ ಸಹಿ ಮಾಡಿದವರು ಉಪ-ಅಧಿಕಾರದ ಅಡಿಯಲ್ಲಿ ತನಗೆ ನೀಡಿರುವ ಅಧಿಕಾರವನ್ನು ಚಲಾಯಿಸುವ ಮೂಲಕ ಕೆಳಗೆ ವಿವರಿಸಿದ ಆಸ್ತಿಯ **ಆಸ್ತಿಯ ಸ್ವಾಧೀನ** ವನ್ನು ತೆಗೆದುಕೊಂಡಿದ್ದಾರೆ ಎಂದು ಈ ಮೂಲಕ ಸಾಲಗಾರರಿಗೆ (ರು) ಮತ್ತು ಸಾರ್ವಜನಿಕರಿಗೆ ಸೂಚನೆಯನ್ನು ನೀಡಲಾಗಿದೆ. ಕಾಯಿದೆಯ ಸೆಕ್ಷನ್ 13 ರ ವಿಭಾಗ (4) ಅನ್ನು **25.08.2025** ರಂದು ಭದ್ರತಾ ಆಸಕ್ತಿ (ಎನ್ಫೋರ್ಸ್ಮೆಂಟ್) ನಿಯಮಗಳು, 2002 ರ ನಿಯಮ 8 ರೊಂದಿಗೆ ಓದಲಾಗಿದೆ.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಅಸ್ತಿ ವ್ಯವಹಾರವು ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.** ನ ಬಾಕಿ ಇರುವ ಮೊತ್ತ **ರೂ. 4,87,139/- (ನಾಲ್ಕು ಲಕ್ಷ ಎಂಬತ್ತೇಳು ಸಾವಿರದ ನೂರ ಮೂವತ್ತೊಂಬತ್ತು ರೂಪಾಯಿಗಳು ಮಾತ್ರ) 30.05.2019** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ದವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8) ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ವಸತಿ ಘಟಕ ಸಂ. ಸಿ -203, 1276 ಚದರ ಅಡಿಯ ಸೂಪರ್ ಬಿಲ್ಟ್ ಅಪ್ ಪ್ರದೇಶವನ್ನು ಹೊಂದಿದೆ. 1ನೇ ಮಹಡಿಯಲ್ಲಿ, ಟೈಪ್-ಸಿ, ಡೆಲ್ ಪ್ರಾಡೊ ಜೊತೆಗೆ ಒಂದು ಮುಚ್ಚಿದ ಕಾರು ಪಾರ್ಕಿಂಗ್ ಪ್ರದೇಶ, ಭೂಮಿಯಲ್ಲಿ ಅನುಪಾತದ ಅವಿಭಜಿತ ಪಾಲು (1/12ನೇ ಪಾಲು ಅಂದರೆ 358.33 ಚದರ ಶುಲ್ಕ) ಹಳೆಯ ಮನೆಗಳ ಪಟ್ಟಿ ಖಾತಾ ಸಂ.123/170/2 ಪ್ಲಾಟ್ ಸಂ. 8 ಶಿನವಾಗಲು, ಬೇಗೂರು ಹೋಬಳಿ ಮತ್ತು ಹೊಸ ಪುರಸಭೆ ಸಂ 18/5 ಎ, ವಾರ್ಡ್ ಸಂ. 68, ಪಿಐಡಿ ಸಂ 68-9-18/5ಎ ಖಾತಾ ಸಂ-ಕೆಎಂಪಿ / ಆಇಆರ್‌ವಿ / 2006-07 /ಕೆಪಿ/175451, ಎಜಿಪುರ, ಸ್ಟಾಗ್ ವಿಸ್ತರಣೆ, ಬೆಂಗಳೂರು - 560068, ಕರ್ನಾಟಕ.

ಅಧಿಕಾರವಿರುವ ಅಧಿಕಾರಿ
ದಿನಾಂಕ: 25.08.2025 **ಅಸೆಟ್ಸ್ ಕೇರ್ ಅಂಡ್ ರೀಕನ್‌ಸ್ಟ್ರಕ್ಷನ್ ಎಂಟರ್‌ಪ್ರೈಸಸ್ ಲಿ.**
ಸ್ಥಳ : ಬೆಂಗಳೂರು (102-ಟ್ರಸ್ಟ್)

ಯಾವುದೇ ಕುಂದುಕೊರತೆಗಾಗಿ ನೀವು ಶ್ರೀ ಮೊಹದ್ ಶಾರಿಕ್ ಮಲಿಕ್, ಕುಂದುಕೊರತೆ ನಿವಾರಣಾ ಅಧಿಕಾರಿ, ದೂರವಾಣಿ ಸಂಖ್ಯೆ. 011-66115609, ಇಮೇಲ್: complaint@acreindia.in.ಅನ್ನು ಸಂಪರ್ಕಿಸಬಹುದು. ಸಂಸ್ಥೆಯೊಳಗಿನ ಕುಂದುಕೊರತೆ ಪರಿಹಾರ ಕಾರ್ಯವಿಧಾನದ ವಿವರವಾದ ನೀತಿಯನ್ನು https://www.acreindia.in/compliance ನಲ್ಲಿ ಪ್ರವೇಶಿಸಬಹುದು.

PUBLIC NOTICE

This is to inform the General Public that Our Client had earlier negotiated the purchase of the Immovable Property more-fully described in the Schedule hereunder i.e., **"Schedule Property"** from its present owners (1) **Shri SHYAMLAL G SACHDEV,** aged about 54 years, son of Shri Sachdev and (2) **Smt SHRADDHA S SACHDEV,** daughter of Shyamlal G Sachdev, both residing at No.19, Alexander Street, Flat No.S-2, Gold Plazzio, Richmond Town, Bangalore-560 025, by way of an Agreement of Assignment.

Our clients inform us that they have misplaced/ lost the Original Agreement for Sale between Shri Shyamlal G Sachdev/Smt Shraddha S Sachdev & M/s. Esteem Emblem, Our clients further inform us that they have paid the entire sale consideration and also received the due acknowledgement for the receipt of the entire sale consideration and have also further received a "No Objection Certificate" from the Promoter/ Builder M/s. Esteem Emblem, for the assignment/sale of the **"Schedule Property".**

Our clients further inform us that they are in the process of entering into a "Cancellation of Agreement for Sale and Assignment, with the Promoter/ Builder and the Owners, in respect of the "Schedule Property".

Our clients also inform us that they have filed an Online Police Complaint vide Acknowledgement No 1764400/2025 dt 22/08/2025 , regarding the misplaced/loss of the Original Agreement for Sale.

If any person/s finds the same, he/she/they may please return the same to the under-signed. If any Person/s, Bank/Society/Firm or anybody having any right, title, interest, lien or claims over the below-mentioned property, may lodge his/her/their objections/claims, if any, in writing with authenticated documentary evidence, to the undersigned within **7 (SEVEN) DAYS** from the date of issuance of this Public Notice, failing which it shall be construed by our client that there are no claims/objections of whatsoever nature in respect of the Schedule Property and the intended transaction will be finalized by our client as if no such claims exist or that they have been waived or abandoned and our client will go ahead with the intended transaction in respect of the Schedule Property.

SCHEDULE PROPERTY

All that piece and parcel of the immovable property of One Bedroom Apartment unit bearing No.206, on the Second Floor in Block B having a Super Built up Area of 660 Sq. Ft (Carpet Area 40.4 Sq. Mtrs) together with One Car parking space at basement and proportionate undivided share interest of 204 Sq Ft in the Apartment building known as "ESTEEM EMBLEM" duly constructed on the property bearing No.60/6, measuring 1 Acre 04 Guntas, situated at Hebbagodi Village, Attibele Hobli, Anekal Taluk which is bounded on the: **East by :** Kamasandra Village Boundary; **West by :** Huskur Road; **North by :** Property bearing Sy No.60/16; **South by :** Property bearing Sy No.60/5

G. SREENIVAS, Senior Partner
Vruksha Law Chambers,
Advocates & Consultants
Ground Floor, Chitrapur Bhavan, 8th Main, 15th Cross, Malleswaram, Bengaluru-560 055.
Date: 29.08.2025

IN THE COURT OF THE X Addl CITY CIVIL AND SESSIONS JUDGE , AT BENGALURU (CCH26)
P& SC No. 305/2025

Between
1. Smt.Leela Devi W/o. Tejaram @ Tejaram Choudhary @ Tejaram.G Aged about 46 years No.270, Magadi Main Road Machohalli colony, Machohalli, Bangalore-560091
2. Smt. Niharika D/o. Tejaram @ Tejaram Choudhary @ Tejaram.G Aged about 28 years C/o.Rakesh Seervi Mohan electrical and Hardware Belur Road, Vijayanagara Hassan-573 201
3. Ms. Sonika.T D/o. Tejaram @ Tejaram Choudhary @ Tejaram.G Aged about 24 years No.270, Magadi Main Road Machohalli colony, Machohalli, Bangalorc-560091
4. Ms. Pooja.T D/o. Tejaram @ Tejaram Choudhary @ Tejaram.G Aged about 20 years No.270, Magadi Main .ad Machohalli colony, Machohalli,Bangalore-560091
5. Kum. Arathi.T D/o. Tejaram @ Tejaram Choudhary @ Tejaram.G Aged about 17 years No.270, Magadi Main Road Machohalli colony, Machohalli, Bangalore-560091
6. Master. Pawan Kumar Choudhary S/o Tejaram @ Tejaram Choudhary @ Tejaram.G Aged about 9 years No.270, Magadi Main Road Machohalli Colony, Machohalli, Bangalore-560091
Plaintiff No.5 and 6 are minors hence duly rep by their natural guardian/mother Plaintiff No.1 herein
-- Petitioners
AND
Nil --Respondent

PUBLIC NOTICE

WHEREAS, the above-named petitioner has filed a petition under section 372 of Indian Succession Act, praying for grant of succession certificate in their favour to the estates of late Tejaram Choudhary expired on 12-2-2025. The petitioner No.1 is the wife and petitioners 2 to 6 are the children of late Tejaram Choudhary

Any person having their objection/s for issue of Succession Certificate in respect of the schedule in favour of the Petitioners and any person having interest may cause the same by appearing before the court in person or through their Advocate on this 17th day of October 2025 at 11.00 AM failing which the matter will be heard and disposed of in accordance with law.

SCHEDULE

1. SBI General Arogya plus policy vide Customer ID No. 000000012663632
2. SBI Bank account No. 64122924745 in SBI, Kadabagere Cross, in the name of Tejaram Choudhary.
3. Mahalakshmi Enterprises, No.7/8. Hosahalli Magadi Main Road, Gollarapalya, Bangalore-560091 proprietor Tejaram Choudhary, Bangalore North.
4. And other general purposes

Given under hand and the Seal of the Hon'ble Court on 19-08-2025

By order of the court
Senior Sheristedar
City Civil Court Bengaluru-09

Advocate for Petitioners
K.V. Pradeepa, Advocate
No. 1st Floor, Opp Anjananagara Bus Stop Magadi Main Road, Anjana Nagara Bangalore-560 091
Mobile: 8892287764

ಕುಕ್ಕರ್ ಬಾಂಬ್: ಆರೋಪಿಗಳ ವಿಚಾರಣೆಗೆ ಇಡಿ ಸಜ್ಜು

ಬೆಂಗಳೂರು: ಮಂಗಳೂರು ಕುಕ್ಕರ್ ಬಾಂಬ್ ಬ್ಲಾಸ್ಟ್ ಪ್ರಕರಣದಲ್ಲಿ ಜೈಲು ಸೇರಿರುವ ಆರೋಪಿಗಳಿಗೆ ಇದೀಗ ಜಾರಿ ನಿರ್ದೇಶನಾಲಯ ಇ.ಡಿ ಅಧಿಕಾರಿಗಳು ಶಾಕ್ ನೀಡಿದ್ದಾರೆ. ನ್ಯಾಯಾಲಯದ ಅನುಮತಿ ಪಡೆದು ವಿಚಾರಣೆ ನಡೆಸಲು ಮುಂದಾಗಿದ್ದಾರೆ.

2022ರಲ್ಲಿ ಮಂಗಳೂರಿನಲ್ಲಿ ಸಂಭವಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ತನಿಖೆ ಚುರುಕುಗೊಳಿಸಿದ್ದ ಎನ್‌ಐಎ ಅಧಿಕಾರಿಗಳು ರಾಜ್ಯದ ವಿವಿಧ ಕಡೆ ದಾಳಿ ಮಾಡಿ ಹಲವರನ್ನು ಬಂಧಿಸಿ ಜೈಲಿಗಟ್ಟಿದರು. ತನಿಖೆಯ ವೇಳೆ ಅಧಿಕಾರಿಗಳ ಮುಂದೆ ವಿವಿಧ ಕಡೆ ಸ್ಫೋಟಿಸಲು ಸಂಚು ರೂಪಿಸಿ ರುವುದು ಕೂಡ ಬೆಳಕಿಗೆ ಬಂದಿತ್ತು. ಇಷ್ಟೆಲ್ಲಾ ಮಾಡುವುದಕ್ಕೆ ಈ ಆರೋಪಿಗಳಿಗೆ ಪ್ರಮುಖವಾಗಿ ಹಣದ ಸಹಾಯ ಮಾಡಿದ್ದು ಯಾರು ಅನ್ನೋದರ ಹಿಂದಿನ ರಹಸ್ಯ ಭೇದಿಸುವುದಕ್ಕೆ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಮುಂದಾಗಿದ್ದಾರೆ.

ನ್ಯಾಯಾಲಯದ ಅನುಮತಿ ಪಡೆದು ಇ.ಡಿ ಅಧಿಕಾರಿಗಳು ಪರಪ್ಪನ ಅಗ್ರಹಾರ ಜೈಲಿಗೆ ಭೇಟಿ ಕೊಟ್ಟು ತನಿಖೆ ನಡೆಸಿದ್ದಾರೆ. ಆರೋಪಿಗಳು ಅಕ್ರಮವಾಗಿ ಹಣ ಸಂಗ್ರಹಿಸಿದ್ದಾರೆ. ಕೆಲ ಮುಸ್ಲಿಂ ರಾಷ್ಟ್ರಗಳಿಂದ ವಿವಿಧ ಬ್ಯಾಂಕ್ ಅಕೌಂಟ್‌ಗಳ ಮೂಲಕ ಶಂಕಿತ ಉಗ್ರರಾದ ಶಾರೀಕ್, ಮಾಜ್ ಮುನೀರ್ ಅವರಿಗೆ ಹಣ ಸಂದಾಯವಾಗಿದೆ. ಇನ್ನೂ ಶಾರೀಕ್ ತಾಯಿಯ ಬ್ಯಾಂಕ್ ಅಕೌಂಟ್ ಮೂಲಕ ಕೂಡಾ ಹಣ ವರ್ಗಾವಣೆ ಆಗಿರುವ ಬಗ್ಗೆ ದಾಖಲೆಗಳನ್ನು ಅಧಿಕಾರಿಗಳು ಸಂಗ್ರಹಿಸಿದ್ದಾರೆ. ದೇಶದ ವಿವಿಧ ಕಡೆ ಬಾಂಬ್ ಸ್ಫೋಟಿಸಲು ಆರೋಪಿಗಳು ಸಂಚು ರೂಪಿಸಿದ್ದರು. ಇದಕ್ಕೆ ಬೇಕಾದ ಕಚ್ಚಾ ಸಾಮಗ್ರಿಗಳನ್ನು ಆನ್‌ಲೈನ್ ಮೂಲಕ ಖರೀದಿಸಿರುವುದು ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಹಿನ್ನೆಲೆ

ಮಂಗಳೂರಿನ ಕಂಕನಾಡಿಯಿಂದ ಆಟೋದಲ್ಲಿ ತೆರಳುವಾಗಿ ಏಕಾಏಕಿ ಕುಕ್ಕರ್ ಬ್ಲಾಸ್ಟ್ ಆದ ರಭಸಕ್ಕೆ ಪ್ರಮುಖ ಆರೋಪಿ ಶಾರೀಕ್ ಮತ್ತು ಆಟೋ ಚಾಲಕ ಪುರುಷೋತ್ತಮ್ ತೀವ್ರವಾಗಿ ಗಾಯಗೊಂಡಿದ್ದರು. ಬಳಿಕ ಚಿಕಿತ್ಸೆಗಾಗಿ ನಗರದ ಆಸ್ಪತ್ರೆಗೆ ಸೇರಿಸಲಾಗಿತ್ತು. ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಾರೀಕ್‌ನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು. ಎನ್‌ಐಎ(ರಾಷ್ಟ್ರೀಯ ತನಿಖಾ ಸಂಸ್ಥೆ) ಹಾಗೂ ಸ್ಥಳೀಯ ಪೊಲೀಸರ ಭದ್ರತೆ ನಡುವೆ ಶಾರೀಕ್ ಚಿಕಿತ್ಸೆ ಪಡೆದಿದ್ದ. 2022 ಸೆ. 19 ರಂದು ಶಿವಮೊಗ್ಗ ಗ್ರಾಮಾಂತರ ಠಾಣೆಯಲ್ಲಿ ದಾಖಲಾಗಿದ್ದ ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ 1967 ರಲ್ಲಿ ಶಾರೀಕ್ 1ನೇ ಆರೋಪಿಯಾಗಿದ್ದ. ಪ್ರಕರಣ ದಾಖಲಾದ ನಂತರ ಶಾರೀಕ್ ಅಲ್ಲಿಂದ ತಲೆಮರೆಸಿಕೊಂಡು ಮೈಸೂರಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ ವಾಸ ಮಾಡಿಕೊಂಡಿದ್ದ.

ಎ1 ಜಗದೀಶ್ ಅಲಿಯಾಸ್ ಜಗ್ಗನಿಗೆ ಸಿಐಡಿ ಗ್ರಿಲ್

ಬಿಕ್ಲು ಕೊಲೆ ಕೇಸ್: ಸಿಐಡಿ ತೀವ್ರ ವಿಚಾರಣೆ

ಬೆಂಗಳೂರು: ರೌಡಿಶೀಟರ್ ಶಿವಪ್ರಕಾಶ್ ಆಲಿಯಾಸ್ ಬಿಕ್ಲು ಶಿವ ಕೊಲೆ ಪ್ರಕರಣದ ತನಿಖೆ ಚುರುಕುಗೊಂಡಿದೆ. ಭೀಕರ ಕೊಲೆಯ ಎ1 ಆರೋಪಿ ಜಗದೀಶ್ ಅಲಿಯಾಸ್ ಜಗ್ಗನಿಗೆ ಸಿಐಡಿ ತೀವ್ರ ವಿಚಾರಣೆ ನಡೆಸುತ್ತಿದೆ.

ಕಳೆದ ತಿಂಗಳ (ಜುಲೈ 15 ರಂದು) ಭಾರತಿನಗರ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ರೌಡಿಶೀಟರ್ ಕೊಲೆ ಇಡೀ ಬೆಂಗಳೂರನ್ನೇ ಬೆಚ್ಚಿಬೀಳುವಂತೆ ಮಾಡಿತ್ತು. ಬಿಕ್ಲು ಶಿವ ಭೀಕರ ಕೊಲೆಯ ಮಾಸ್ಟರ್ ಮೈಂಡ್ ಆಗಿದ್ದ ಪ್ರಮುಖ ಆರೋಪಿ ಜಗದೀಶ್ ಅವರನ್ನು ಕೊನೆಗೂ ಸಿಐಡಿ ಖೆಡ್ಡಾಗೆ ಕೆಡವಿದ್ದಾರೆ. ಆ.26ರಂದು ಜಗ್ಗ ಅವರನ್ನು ದೆಹಲಿ ವಿಮಾನ ನಿಲ್ದಾಣದಲ್ಲಿ ವಶಕ್ಕೆ ಪಡೆದಿದ್ದ ಸಿಐಡಿ ಅಧಿಕಾರಿಗಳು, ಬಳಿಕ ಬೆಂಗಳೂರಿಗೆ ಕರೆತಂದಿದ್ದರು. ನಂತರ ಆರೋಪಿಯನ್ನು 5ನೇ ಎಸಿಎಂಎಂ ಕೋರ್ಟ್‌ನ ನ್ಯಾಯಾಧೀಶರ ನಿವಾಸಕ್ಕೆ ಹಾಜರುಪಡಿಸಿ, 10 ದಿನಗಳ ಕಾಲ ತಮ್ಮ ವಶಕ್ಕೆ ಪಡೆದಿದ್ದಾರೆ.

ಕೊಲೆ ಪ್ರಕರಣ ಹಾಗೂ ಕೋಕಾ ಕಾಯಿದೆಯಡಿ ಆರೋಪಿಯನ್ನು ಸಿಐಡಿ ಬಂಧಿಸಿ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಕೊಲೆ ನಡೆದ ವಿಚಾರ ತಿಳಿಯುತ್ತಿದ್ದಂತೆ ಚೆನ್ನೈ ವಿಮಾನ ನಿಲ್ದಾಣದಿಂದ ದುಬೈಗೆ ಜಗದೀಶ್ ಪರಾರಿಯಾಗಿದ್ದರು. ಬಿಕ್ಲು ಶಿವ ಹಾಗೂ ಜಗ್ಗನ ನಡುವಿನ ವೈಷಮ್ಯದ ಬಗ್ಗೆ ವಿಚಾರಣೆ ಮಾಡಲಾಗುತ್ತಿದೆ. ಅಲ್ಲದೆ ಕಿತ್ತಗನೂರು ಜಮೀನಿನ ಗಲಾಟೆ, ಹಳೇ ಪ್ರಕರಣಗಳು, ಭೈರತಿ ಬಸವರಾಜ್ ಜತೆಗಿನ ಸಂಪರ್ಕದ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ.ಅಲ್ಲದೆ ಹಲವು ಬಾರಿ ಶಾಸಕರ ಜತೆ ಕಾಣಿಸಿಕೊಂಡಿದ್ದೀರ, ಕುಂಭಮೇಳದಲ್ಲೂ ಜತೆಯಲ್ಲಿ ಕಾಣಿಸಿಕೊಂಡಿದ್ದೀರ, ನಿಮಗೂ ಶಾಸಕರಿಗೂ ಏನು ಸಂಪರ್ಕ, ಹೇಗೆ ಪರಿಚಯ ಎಂದು ಬುಧವಾರದಿಂದ ಅಧಿಕಾರಿಗಳು ತೀವ್ರ ವಿಚಾರಣೆ ಆರಂಭಿಸಿರುವ ಬಗ್ಗೆ ಸಿಐಡಿ ಮೂಲಗಳಿಂದ ಮಾಹಿತಿ ಸಿಕ್ಕಿದೆ.

IN THE COURT OF THE HON'BLE 88th ADDL DISTRICT AND SESSIONS JUDGE, COMMERCIAL COURT, BENGALURU URBAN, BENGALURU
COM. O.S. No. 450/2025

Between : Bank of India
Malleshwaram, No.112, Margosa Road, Between 10th & 11th Cross, Malleswaram, Bengaluru -560 003 **...Plaintiff**
And : Mr. Sandeep @ Sandeep Tiwari **...Defendant**

Summons to Defendant Under Order 5 Rule 20 of CPC
By Way of Paper Publication

Mr. Sandeep @ Sandeep Tiwari aged about 38 Years, S/o. Mr. Motilalji, Propriator of VARSHA TEXTILES', No.7, 9th Cross, Pipeline Road, Malleshwaram, Bengaluru-560003. And also at No.U-65/4, Dattatreya Temple Road, Pipeline, Malleshwaram, Bengaluru -560003.
And also at No.8 (J93) 2nd Floor, Anjaneya Block, Sheshadripuram, Bengaluru -560020.

Whereas, the Plaintiff Bank herein has filed the above suit against you for recovery of Rs.11,35,094.00 (Rupees Eleven Lakhs Thirty Five Thousands and Ninety Four Only) towards the Loan A/c No. 840173210000058 along with the current and future interest at the rate of 11.25% p.a. compounded monthly and 2% penal interest & other reliefs and you are hereby directed to appear before the Hon'ble Commercial Court (CCH-89) Bengaluru District, at Bengaluru, in the above suit, in person or through a pleader advocate duly instructed and also to answer all the questions related the above suit on the Day of **15th September 2025 at 11 A.M.,** forenoon. Take further notice that in case of default of your appearance at the day and time afore mentioned, the above suit will be heard Exparte and it will be decided in your absence.
Given under my hand and seal on this 28th day of August 2025

By Order of the Court
Sd/- Senior Sheristedar
Commercial Court Unit
City Civil Court, Bengaluru

Advocate for Plaintiff :
Anuradha D. Advocate

2 ದಿನ ವಿದ್ಯುತ್ ವ್ಯತ್ಯಯ

ಬೆಂಗಳೂರು: ನಗರದ ವಿವಿಧ ಭಾಗಗಳಲ್ಲಿ ಕೆಪಿಟಿಸಿಎಲ್ ವತಿಯಿಂದ ನಿರ್ವಹಣಾ ಕಾರ್ಯದ ಹಿನ್ನೆಲೆ ಆ.30 ಹಾಗೂ 31ರಂದು ಬೆಳಗ್ಗೆ 10 ರಿಂದ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಮಾಹಿತಿ ನೀಡಿದೆ. 66/11 ಕೆವಿ ಎಲೆಕ್ಟ್ರಾನಿಕ್ ಸಿಟಿ ಫೇಸ್-2 ವಿವಿ ಕೇಂದ್ರ, ಮಾಲ್ಗುಡಿ ವಿವಿಕೇಂದ್ರ ಮತ್ತು ಚೊಕ್ಕಸಂದ್ರ ವಿವಿಕೇಂದ್ರದ ಎಲೆಕ್ಟ್ರಾನ್ ಸಿಟಿ ಫೇಸ್-2, ವೀರಸಂದ್ರ, ದೊಡ್ಡನಾಗ ಮಂಗಳ, ಟೆಕ್ ಮಹೀಂದ್ರ, ಇ.ಎಚ್.ಟಿ. ಟಾಟಾ ಸುತ್ತಮುತ್ತಲಿನ ಪ್ರದೇಶ ಗಳು, ಬಿ.ಪಿ ಸೋಲಾರ್ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಹಾಗೂ 66/11ಕೆವಿ ಎಲೆಕ್ಟ್ರಾನಿಕ್ ಸಿಟಿ ವಿವಿ ಕೇಂದ್ರ, (ವೆಲಂಕಣಿ ವಿವಿ ಕೇಂದ್ರ)ದ ಎನ್.ಜಿ.ಆರ್. ಲೇಔಟ್, ಎಲೆಕ್ಟ್ರಾನ್ ಸಿಟಿ ಫೇಸ್-1, ದೊಡ್ಡತೋಗೂರು. ಬೊಮ್ಮನಹಳ್ಳಿ ಚಿಕ್ಕತೋಗೂರು, ಹೊಂಗಸಂದ್ರ, ಕೋನಪ್ಪನ ಅಗ್ರಹಾರ. ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತಿತರ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಸಮಾಚಾರ ಸಣ್ಣದಲ್ಲ

ನಾಳೆ ಘಟಿಕೋತ್ಸವ

ಬೆಂಗಳೂರು: ನಗರದ ಭಾರತೀಯ ವಿದ್ಯಾಭವನದ ಖಿಂಚಾ ಸಭಾಂಗಣದಲ್ಲಿ ಆ.30 ರಬೆಳಗ್ಗೆ 9.30ರಂದು ಎಂ.ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ 24ನೇ ಬ್ಯಾಚ್‌ನ ಘಟಿಕೋತ್ಸವವನ್ನು ಆಯೋಜಿಸಲಾಗಿದೆ. ಬೆಂಗಳೂರು ಉತ್ತರ ವಿವಿಯ ಉಪ-ಕುಲಪತಿ ಡಾ.ನಿರಂಜನ ವಾನಳ್ಳಿ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ಸಂಸ್ಥೆಯ ಚೇರ್ ಮೆನ್ ಎನ್. ರಾಮಾನುಜ ಅಧ್ಯಕ್ಷತೆ ವಹಿಸಲಿದ್ದಾರೆ.ಬೆಂಗಳೂರು ಸಿಟಿ ವಿವಿ ಸಿಂಡಿಕೇಟ್ ಸದಸ್ಯ ಡಾ.ಎಚ್. ಕೃಷ್ಣರಾಮ್ ಅತಿಥಿಯಾಗಿರಲಿದ್ದಾರೆ.

ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ವಿಜ್ಞಾನ ವಿಷಯಗಳ ಬರವಣಿಗೆಯನ್ನು ಪ್ರೋತ್ಸಾಹಿಸುವ ಸಲುವಾಗಿ ಕೃಷಿ ವಿಜ್ಞಾನ ತಂತ್ರಜ್ಞಾನ ಮತ್ತು ವೈದ್ಯಕೀಯ ವಿಷಯಗಳ ಮೇಲೆ ಕನ್ನಡದಲ್ಲಿ ಜನವರಿ-2023 ರಿಂದ ಡಿಸೆಂಬರ್ 2025ರೊಳಗೆ ಪ್ರಕಟವಾಗಿರುವ ಪುಸ್ತಕಗಳ ಲೇಖಕರಿಂದ ಶ್ರೇಷ್ಠ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಿದೆ. ಅರ್ಜಿಗಳನ್ನು 2026 ಜ.5ರೊಳಗಾಗಿ ಸಲ್ಲಿಸಬೇಕು. ಅರ್ಜಿ ನಮೂನೆ ಮತ್ತು ಮಾರ್ಗಸೂಚಿಗಳನ್ನು ಅಕಾಡೆಮಿಯ ಜಾಲತಾಣ https://kstacademy.in ನಲ್ಲಿ ಪಡೆಯಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಅಹರ್ನಿಶು -2025 ನೃತ್ಯೋತ್ಸವ

ಬೆಂಗಳೂರು: ಮಲ್ಲೇಶ್ವರದ ಸೇವಾ ಸದನ ಸಭಾಂಗಣದಲ್ಲಿ ಆ.29ರ ಸಂಜೆ 6 ಗಂಟೆಗೆ ಅನನ್ಯ ಕಲಾನಿಕೇತನದ ಅಹರ್ನಿಶು-2025 ನೃತ್ಯೋತ್ಸವ

ವನ್ನು ಆಯೋಜಿಸಲಾಗಿದೆ. ಕಾರ್ಯಕ್ರಮದ ಮುಖ್ಯ ಅತಿಥಿಯಾಗು ಗೀತಾಂಜಲಿ ನೃತ್ಯ ಶಾಲೆಯ ನಾಟ್ಯಾಚಾರ್ಯ ಗೀತ ಅನಂತನಾರಾಯಣ್ ಆಗಮಿಸಲಿದ್ದು, ಕರ್ನಾಟಕ ರಾಜ್ಯ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಗುರು ಕರ್ನಾಟಕ ಕಲಾಶ್ರೀ ಡಾ.ಸತ್ಯನಾರಾಯಣ ರಾಜುರಿಂದ ಭರತನಾಟ್ಯ ಕಾರ್ಯಕ್ರಮ ಹಾಗೂ ಅನನ್ಯ ಕಲಾನಿಕೇತನದ ಗುರು ಕಲಾಶ್ರೀಕೆ.ಬೃಂದ ಮತ್ತು ವಿದುಷಿ ಅನನ್ಯ.ಎಂ ಇವರ ಶಿಷ್ಯ ವೃಂದದಿಂದ ಸಮೂಹ ಭರತನಾಟ್ಯ ಕಾರ್ಯಕ್ರಮ ನಡೆಯಲಿದೆ.

ಆಕ್ಷೇಪಣೆ ಸಲ್ಲಿಸಲು ಸೆ.1ರವರೆಗೆ ಅವಕಾಶ

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗವು ಕರ್ನಾಟಕ ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳು, ಇತರೆ ಜಾತಿಗಳು ಅನುಸೂಚಿತ ಜಾತಿ ಮತ್ತು ಪಂಗಡಗಳು ಸೇರಿದಂತೆ ಎಲ್ಲ ಜಾತಿಗಳ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯನ್ನು ಸರಕಾರದ ಆದೇಶಾನುಸಾರ ಕೈಗೊಂಡಿದೆ. ಈ ಹಿನ್ನೆಲೆ ಹಿಂದುಳಿದ ವರ್ಗಗಳು ಮತ್ತು ಇತರೆ ಜಾತಿ/ಉಪಜಾತಿಗಳ ಬಗ್ಗೆ ಸಾರ್ವಜನಿಕರ ಮಾಹಿತಿಗಾಗಿ 2025ನೇ ಆಗಸ್ಟ್ 22 ರಂದು ಮಾಧ್ಯಮಗಳಿಗೆ ಸುದ್ದಿ ಬಿಡುಗಡೆ ಮಾಡಿ ಯಾವುದೇ ಜಾತಿ/ಉಪಜಾತಿಗಳು ಬಿಟ್ಟು ಹೋಗಿದ್ದಲ್ಲಿ, ಅಂತಹ ಅಂಶಗಳ ಬಗ್ಗೆ ಸಲಹೆ, ಸೂಚನೆಗಳು ಇದ್ದಲ್ಲಿ, 7 ದಿನಗಳ ಒಳಗೆ ನೀಡಲು ಕೋರಲಾಗಿತ್ತು. ಸಾರ್ವಜನಿಕರು ಹಾಗೂ ವಿವಿಧ ಸಂಘ ಸಂಸ್ಥೆಗಳು ಈ ಅವಧಿಯನ್ನು ವಿಸ್ತರಿಸಲು ಕೋರಿರುವ ಕಾರಣ, ಈ ಬಗ್ಗೆ ಸಲಹೆ/ಸೂಚನೆ ಮನವಿಗಳನ್ನು ನೀಡುವ ಅವಧಿಯನ್ನು 2025ನೇ ಸೆ. 1ರ ಸಂಜೆ 5 ಗಂಟೆಯವರೆಗೆ ವಿಸ್ತರಿಸಲಾಗಿದೆ. ಸಂಗ್ರಹಿಸಲಾದ ಜಾತಿ/ಉಪಜಾತಿಗಳ ಪಟ್ಟಿಯನ್ನು ಸೆ. ತಿಂಗಳಲ್ಲಿ ಪ್ರಾರಂಭವಾಗಲಿರುವ ಸಮೀಕ್ಷೆಗಾಗಿ ಮಾತ್ರ ಉಪಯೋಗಿಸಲಾಗುವುದು. ಹೆಚ್ಚಿನ ಮಾಹಿತಿಗೆ 080-29506668 ಸಂಪರ್ಕಿಸಿ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಕೆಐಎಎಲ್‌ಗೆ ಎಸಿಐ 2ನೇ ಹಂತದ ಮಾನ್ಯತೆ

ಬೆಂಗಳೂರು: ಪ್ರಯಾಣಿಕ ಸ್ನೇಹಿ ಸೌಲಭ್ಯ, ತಂತ್ರಜ್ಞಾನ ಬಳಕೆ ಮತ್ತು ಸುಲಭ ಪ್ರವೇಶ ವ್ಯವಸ್ಥೆಗಾಗಿ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವು (ಕೆಐಎಎಲ್) ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿಯ (ಎಸಿಐ) 2ನೇ ಹಂತದ ಪ್ರವೇಶ ವರ್ಧಕ ಮಾನ್ಯತೆ ಪಡೆದಿದೆ. ಆ ಮೂಲಕ ಎಸಿಐ ಎರಡನೇ ಪ್ರಮಾಣ ಪತ್ರ ಪಡೆದ ದೇಶದ ಮೊದಲ ವಿಮಾನ ನಿಲ್ದಾಣ ಎಂಬ ಹೆಗ್ಗಳಿಕೆಗೆ ಕೆಐಎಎಲ್ ಪಾತ್ರವಾಗಿದೆ. ಅಂಗವಿಕಲರು, ಹಿರಿಯ ನಾಗರಿಕರು ಹಾಗೂ ವಿಶೇಷ ಚೇತನ ಪ್ರಯಾಣಿಕರು ಸುಲಭವಾಗಿ ಸಂಚರಿಸಲು ಬೇಕಾದ ಅಗತ್ಯ ಸೌಲಭ್ಯ ಒದಗಿಸಿರುವ ಹಿನ್ನೆಲೆಯಲ್ಲಿ ಈ ಮಾನ್ಯತೆ ನೀಡಲಾಗಿದೆ. ಎಸಿಐ ಮಾನ್ಯತೆಯು ಕೇವಲ ಮೂಲಸೌಕರ್ಯವನ್ನು ಮಾತ್ರ ಪರಿಗಣಿಸುವುದಿಲ್ಲ,ಪ್ರಯಾಣಿಕರ ಅನುಭವವನ್ನು ಒಳಗೊಂಡಿರುತ್ತದೆ. ಈ ಮಾನ್ಯತೆ ನಮ್ಮ ತಂಡದ ಪರಿಶ್ರಮ ಮತ್ತು ಪ್ರಯಾಣಿಕರ ವಿಶ್ವಾಸದ ಫಲವಾಗಿದೆ ಎಂದು ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸತ್ಯಕಿ ರಘುನಾಥ್ ಹೇಳಿದ್ದಾರೆ. ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳ ಮಂಡಳಿ (ಎಸಿಐ) ಪ್ರವೇಶ ವರ್ಧಕ ಮಾನ್ಯತೆ ಕಾರ್ಯಕ್ರಮದಡಿ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ಅನುಭವ, ತಂತ್ರಜ್ಞಾನ ಬಳಕೆ ಮತ್ತು ಸುಲಭ ಪ್ರವೇಶ ಸೌಲಭ್ಯಗಳನ್ನು ಮೌಲ್ಯಮಾಪನ ಮಾಡಿ ಮಾನ್ಯತೆ ನೀಡುತ್ತದೆ. ಪ್ರಸ್ತುತ 170 ದೇಶಗಳ 2,181 ವಿಮಾನ ನಿಲ್ದಾಣಗಳು ಮತ್ತು 830 ಸದಸ್ಯರೊಂದಿಗೆ ಕಾರ್ಯನಿರ್ವಹಿಸುತ್ತಿರುವ ಎಸಿಐ ಸಂಸ್ಥೆಯು ಜಾಗತಿಕ ವಿಮಾನಯಾನ ಸುರಕ್ಷತೆ, ಭದ್ರತೆ ಮತ್ತು ದೀರ್ಘಕಾಲಿಕತೆಯನ್ನು ಉತ್ತೇಜಿಸಲಿದೆ.

ಶಿಕ್ಷಣ ನೀತಿ ಬಗ್ಗೆ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ: ಸುಧಾಕರ್

ಎಸ್‌ಇಪಿ ವರದಿ ಅಧ್ಯಯನಕ್ಕೆ ಉನ್ನತ ಅಧಿಕಾರಿಗಳ ತಂಡ ನಿಯೋಜನೆ

ಬೆಂಗಳೂರು: ರಾಜ್ಯ ಶಿಕ್ಷಣ ನೀತಿ ಜಾರಿಗೆ ಸಂಬಂಧಿಸಿದಂತೆ ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ತೀರ್ಮಾನ ಕೈಗೊಳ್ಳಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಸ್ಪಷ್ಟಪಡಿಸಿದರು.

ವಿಕಾಸಸೌಧದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಶಿಕ್ಷಣ ನೀತಿ (ಎಸ್‌ಇಪಿ)ಗೆ ಸಂಬಂಧಿಸಿದ ವರದಿಯನ್ನು ಮುಂದಿನ ಸಚಿವ ಸಂಪುಟ ಸಭೆಯ ಮುಂದಿಟ್ಟು ಚರ್ಚಿಸಲಾಗುವುದು. ಅಲ್ಲಿ ಕೈಗೊಳ್ಳುವ ತೀರ್ಮಾನದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಎಸ್‌ಇಪಿ ವರದಿಯು ಸುಮಾರು 600-700 ಪುಟಗಳಿಂದ ಕೂಡಿದ 5-6 ಸಂಪುಟಗಳಿವೆ. ಅದೆಲ್ಲವನ್ನೂ ಸಂಪುಟದ ಮುಂದಿಟ್ಟು ಚರ್ಚಿಸಲು ಆಗುವುದಿಲ್ಲ. ಹಾಗಾಗಿ, ಉನ್ನತ ಶಿಕ್ಷಣ ಇಲಾಖೆಯೂ ಸೇರಿದಂತೆ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ತಂಡವನ್ನು ಅಧ್ಯಯನಕ್ಕಾಗಿ ನಿಯೋಜಿಸಲಾಗಿದೆ. ಅದು ಉದ್ದೇಶಗಳೊಂದಿಗೆ ಸಾರವನ್ನು ಸಿದ್ಧಪಡಿಸಲಿದ್ದಾರೆ. ನಂತರ ಆ ವರದಿಯನ್ನು ಸಂಪುಟದಲ್ಲಿ ಮಂಡಿಸಲಾಗುವುದು. ಅಲ್ಲಿ ತೆಗೆದುಕೊಳ್ಳುವ ತೀರ್ಮಾನದಂತೆ ಮುಂದುವರಿಯಲಾಗುವುದು ಎಂದು ಹೇಳಿದರು.

ವಿವಿಗಳ ಅನುದಾನ ಆಯೋಗ (ಯುಜಿಸಿ)ದ ಕಲಿಕಾ ಕರಡು ಕುರಿತು ಕೇರಳ ಸರಕಾರ ಆಕ್ಷೇಪಣೆ ವಿಚಾರವಾಗಿ ಪ್ರತಿಕ್ರಿಯಿಸುತ್ತಾ, ಪದೇ ಪದೇ ಯುಜಿಸಿ ಹಸ್ತಕ್ಷೇಪ ಮಾಡುತ್ತಿದೆ. ಅದೊಂದು ನಿಯಂತ್ರಣ ಆಯೋಗ ಅಷ್ಟೇ. ಪಠ್ಯದಲ್ಲಿ ಏನಿರಬೇಕು ಎನ್ನುವುದು ಆಯಾ ವಿವಿಯ ಅಧ್ಯಯನ ಮಂಡಳಿ ನಿರ್ಧರಿಸುವಂತದ್ದಾಗಿದೆ. ನಿಮ್ಮ ಅಜೆಂಡಾವನ್ನು ಇಲ್ಲಿ ತರುವ ಕೆಲಸ ಆಗಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಯುಜಿಸಿಗೆ ಕಲಿಕಾ ವಿಚಾರದಲ್ಲಿ ಒಂದು ವಿಶಾಲ ಚೌಕಟ್ಟು ಸಿದ್ಧಪಡಿಸಲು ಅಧಿಕಾರ ಇದೆ. ಆದರೆ, ಮಕ್ಕಳಿಗೆ ಇಂತಹದ್ದೇ ಹೇಳಿಕೊಡಬೇಕು ಎಂದಿಲ್ಲ. ತನ್ನ ಇತಿಮಿತಿಯಲ್ಲಿ ಯುಜಿಸಿ ನಿರ್ದೇಶನ ನೀಡಬೇಕಾಗುತ್ತದೆ. ಈ ವರ್ಷದ ಆರಂಭದಲ್ಲೂ ಯುಜಿಸಿಯು ಕುಲಪತಿಗಳ ಅಧಿಕಾರಾವಧಿ, ನೇಮಕಾತಿ, ಅತಿಥಿ ಉಪನ್ಯಾಸಕರ ನೇಮಕ ಇತ್ಯಾದಿ ವಿಚಾರದಲ್ಲಿ ನಿಯಮಗಳ ಕರಡು ಪ್ರಕಟಿಸಿತ್ತು. ಆಗ ಅದನ್ನು ತೀವ್ರವಾಗಿ ವಿರೋಧಿಸಿದ್ದೆವು. ಬಿಜೆಪಿಯ ಅಂಗಪಕ್ಷಗಳು ಕೂಡ ಆಗ ಅದನ್ನು ವಿರೋಧಿಸಿದ್ದವು. ಅದು ನಂತರದಲ್ಲಿ ಅಲ್ಲಿಯೇ ಸ್ತಬ್ದವಾಯಿತು. ಈಗ ಮತ್ತೆ ಅಂತಹದ್ದೇ ಪ್ರಯತ್ನ ನಡೆದಿದೆ ಎಂದು ಆರೋಪಿಸಿದರು.

ಕೌಶಲ್ಯಾಧಾರಿತ ಕಾರ್ಯಕ್ರಮಕ್ಕೆ ಚಿಂತನೆ

ಕೌಶಲ್ಯಾಧಾರಿತ ಎಇಡಿಪಿ (ಅಪ್ರೆಂಟಿಸ್‌ಶಿಪ್ ಎಂಬೆಡೆಡ್ ಡಿಗ್ರಿ ಪ್ರೋಗ್ರಾಮ್)ಯನ್ನು ಮುಂಬರುವ ದಿನಗಳಲ್ಲಿ ಡಿಪ್ಲೊಮಾ ಜತೆಗೆ ವಿಜ್ಞಾನ ಮತ್ತು ಕಲಾ ಪದವಿ ವಿಭಾಗಕ್ಕೂ ಪರಿಚಯಿಸುವ ಚಿಂತನೆ ಇದೆ. ಬಿಕಾಂ ಓದುತ್ತಿರುವ ವಿದ್ಯಾರ್ಥಿಗಳಿಗೆ ನೇರವಾಗಿ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ 2024-25ನೇ ಸಾಲಿನಲ್ಲಿ ಕೌಶಲ್ಯಾಧಾರಿತ ಎಇಡಿಪಿ ಶೈಕ್ಷಣಿಕ ಕೋರ್ಸ್‌ಗಳನ್ನು ಪರಿಚಯಿಸಲಾಗಿದೆ. ಇದರಡಿ ರಾಜ್ಯದ 44 ಪ್ರಥಮದರ್ಜೆ ಕಾಲೇಜುಗಳ ಸುಮಾರು 1,600 ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದರು. ಈ ಬಾರಿ ಮತ್ತೆ 24 ಕಾಲೇಜುಗಳ 1,682 ವಿದ್ಯಾರ್ಥಿನಿಯರು

ಹಾಗೂ 1,005 ವಿದ್ಯಾರ್ಥಿಗಳು ಸೇರಿ ಪ್ರವೇಶ ಪಡೆದಿದ್ದಾರೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿನಿಯರಿಗೆ ಶುಲ್ಕ ಸಂಪೂರ್ಣ ವಿನಾಯ್ತಿ

ಈವರೆಗೆ ಬಿಕಾಂನ ನಾಲ್ಕು ಕೋರ್ಸ್‌ಗಳಿಗೆ ಅಪ್ರೆಂಟಿಶಿಪ್ ಎಂಬೆಡೆಡ್ ಡಿಗ್ರಿ ಪ್ರೋಗ್ರಾಮ್ ಸೀಮಿತವಾಗಿದೆ. ಮುಂಬರುವ ದಿನಗಳಲ್ಲಿ ತೆಲಂಗಾಣ ಮತ್ತು ತಮಿಳುನಾಡು ಮಾದರಿಯಲ್ಲಿ ಡಿಪ್ಲೊಮಾ, ವಿಜ್ಞಾನ ಮತ್ತು ಕಲಾ ಪದವೀಧರರಿಗೂ ಈ ಕೋರ್ಸ್ ಪರಿಚಯಿಸುವ ಯೋಚನೆ ಇದೆ. ಬಿಕಾಂ ಲಾಜಿಸ್ಟಿಕ್, ಇ- ಕಾಮರ್ಸ್, ಬಿಕಾಂ ರಿಟೈಲ್ ಮತ್ತು ಬಿಎಫ್‌ಎಸ್‌ಐ ಕೋರ್ಸ್‌ಗಳನ್ನು ಕಳೆದ ವರ್ಷ ಆರಂಭಿಸಲಾಗಿದೆ. ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ಪದವಿಗೆ ಸೇರಿದ ವಿದ್ಯಾರ್ಥಿಗಳಿಗೆ ಪದವಿ ಜತೆಗೆ ಪ್ರತ್ಯೇಕ ಪಠ್ಯ ಚಟುವಟಿಕೆಗಳಲ್ಲಿ ತರಬೇತಿ ನೀಡಿ ಅಂತಿಮ ವರ್ಷದ ಐದು ಮತ್ತು 6ನೇ ಸೆಮಿಸ್ಟರ್ ವೇಳೆಗೆ ನೇರವಾಗಿ ಕಂಪನಿಗಳಲ್ಲಿ ಉದ್ಯೋಗವಕಾಶಗಳನ್ನು ಶಿಷ್ಯವೇತನದೊಂದಿಗೆ ನೀಡಲಾಗುತ್ತಿದೆ. ಈ ಕೋರ್ಸ್ ಪ್ರವೇಶಕ್ಕೆ ವಿದ್ಯಾರ್ಥಿಗಳಿಗೆ (ವಿದ್ಯಾರ್ಥಿನಿಯರಿಗೆ ವಿನಾಯ್ತಿ) 5 ಸಾವಿರ ರು. ಶುಲ್ಕ ನಿಗದಿಪಡಿಸಲಾಗಿತ್ತು. ಈ ವರ್ಷ ಶುಲ್ಕದಿಂದ ವಿನಾಯ್ತಿ ನೀಡಿರುವುದರಿಂದ ಹೊರೆ ಆಗುವುದಿಲ್ಲ ಎಂದು ಸಚಿವ ಸುಧಾಕರ್ ತಿಳಿಸಿದರು.

ಧರ್ಮಸ್ಥಳ ಪ್ರಕರಣ: ಸರಕಾರ ರಾಜಕೀಯ ಲೇಪ ಹಚ್ಚಿಲ್ಲ

ಬೆಂಗಳೂರು: ಧರ್ಮಸ್ಥಳ ರಕ್ಷಣೆ ವಿಚಾರದಲ್ಲಿ ನಾವು ಸದಾ ಬೆಂಬಲವಾಗಿದ್ದೇವೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ರಕ್ಷಣೆ ವಿಚಾರ ಬಂದಾಗ ಹಿಂದೇಟು ಹಾಕುವ ಪ್ರಶ್ನೆಯಿಲ್ಲ. ಬಿಜೆಪಿ ಕಾಂಗ್ರೆಸ್ ಮೇಲೆ ಹಿಂದೂ ವಿರೋಧಿ ಎಂದು ಗೂಬೆ ಕುರಿಸುವ ಪ್ರಯತ್ನ ನಡೆಸುತ್ತಿದೆ. ಸೌಜನ್ಯ ಪ್ರಕರಣ ಇದ್ದಿದ್ದು ಬಿಜೆಪಿ ಅಧಿಕಾರದ ಅವಧಿಯಲ್ಲಿ. ದುರುದ್ದೇಶಪೂರ್ವಕವಾಗಿ ಧರ್ಮಸ್ಥಳಕ್ಕೆ ಕಳಂಕ ತರುವ ಪ್ರಯತ್ನ ನಡೆಸಿದವರು ಯಾರು ಸಫಲರಾಗಲು ಸಾಧ್ಯವಿಲ್ಲ. ತನಿಖೆಯಲ್ಲಿ ಎಲ್ಲವು ಸ್ಪಷ್ಟವಾಗಿ ಹೊರಬರಲಿದೆ ಎಂದು ಹೇಳಿದರು.

ಎಸ್‌ಐಟಿ ವರದಿ ಬರಬೇಕಿದೆ. ಅನಾಮಿಕ ಕೊಟ್ಟ ದೂರು, ಅದರ ಮೇಲೆ ಉತ್ಖನನ ಮಾಡಿ ಸಿಕ್ಕ ವಸ್ತುಗಳನ್ನು ಎಫ್‌ಎಸ್‌ಎಲ್‌ಗೆ ಕಳಿಸಲಾಗಿದೆ. ಇವರೆಲ್ಲಾ ಯಾವ ರೀತಿ ನೂರಾರು ಶವಗಳಿವೆ ಅಂತ ದೊಡ್ಡ ಮಟ್ಟದಲ್ಲಿ ಬಿಂಬಿಸಿದ್ದರು. ಇದು ಪೂರ್ವ ನಿಯೋಜಿತವಾಗಿತ್ತಾ ಎಂಬುದರ ಬಗ್ಗೆಯೂ ಎಸ್.ಐ.ಟಿ ತನಿಖೆ ಮಾಡುತ್ತಿದ್ದಾರೆ. ಬಿಜೆಪಿ ಇದನ್ನು ರಾಜಕೀಯಕ್ಕೆ ಬಳಸಿಕೊಳ್ಳಿದೆ. ಧರ್ಮಸ್ಥಳ ವಿಚಾರದಲ್ಲಿ ಕಾಂಗ್ರೆಸ್ ಸರಕಾರ ಯಾವುದೇ ರಾಜಕೀಯ ಲೇಪ ಹಚ್ಚುವ ಪ್ರಯತ್ನ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

ಬಾನು ಮುಷ್ತಾಕ್ ಅವರ ಬಗ್ಗೆ ಬಿಜೆಪಿಗೆ ಏನು ಸಮಸ್ಯೆ. ಬಾನು ಮುಸ್ತಾಕ್ ಅವರಿಂದ ದಸರಾ ಉದ್ಘಾಟನೆಗೆ ಬಿಜೆಪಿ ಯಾಕೆ ವಿರೋಧ ಮಾಡ್ತಿದ್ದಾರೆ. ನಮ್ಮ ರಾಜ್ಯದ ಮಹಿಳೆ, ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದಿದ್ದಾರೆ. ಅಂದು ನಿಸಾರ್ ಅಹ್ಮದ್ ಅವರನ್ನು ಒಪ್ಪಿದವರು ಇಂದು ಬಾನು ಮುಸ್ತಾಕ್ ಅವರಿಗೆ ಏಕೆ ವಿರೋಧ. ಇದು ಬಿಜೆಪಿಯವರ ಸಂಕುಚಿತ ಮನೋಭಾವ ತೋರಿಸುತ್ತದೆ.

- ದಿನೇಶ್ ಗುಂಡೂರಾವ್ ಆರೋಗ್ಯ ಸಚಿವ

ವಿರಾಮ
ಪ್ರತಿ ಭಾನುವಾರ

ಫೋಟೋ: ಸುಧಾಕರ್ ದೇವರಾಜ್

ನಗರದ ಕೆಜಿ ಹಳ್ಳಿಯಲ್ಲಿ ಕಂಡು ಬಂದ ಕಸದ ರಾಶಿ.

ನಾಗವಾರ ಮುಖ್ಯ ರಸ್ತೆಯಲ್ಲಿರುವ ವೆಂಕಟೇಶಪುರದಲ್ಲಿ ಭಾರತೀಯ ಸೇನೆಯ ಯುದ್ಧ ಥೀಮ್ ಆಪರೇಷನ್ ಸಿಂಧೂರ ಗಣಪತಿ ಮೂರ್ತಿಯು ಸಾರ್ವಜನಿಕರ ಗಮನ ಸೆಳೆಯಿತು.

ಸುಭಾಷ್‌ಚಂದ್ರ ಬೋಸ್ ಕೃತಿ ಲೋಕಾರ್ಪಣೆಗೆ ಸಿದ್ಧ

ಪ್ರೊ.ಕೆ.ಇ.ರಾಧಾಕೃಷ್ಣ ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ | ಆ.30ಕ್ಕೆ ಲೋಕಾರ್ಪಣೆ

ಬೆಂಗಳೂರು: ನಗರದ ಸನ್‌ಸ್ಟಾರ್ ಪಬ್ಲಿಷರ್ಸ್ ಹಾಗೂ ಆರ್.ಆರ್.ನಗರದ ನೇತಾಜಿ ಸುಭಾಷ್‌ಚಂದ್ರ ಬೋಸ್ ಟ್ರಸ್ಟ್ ಸಹಯೋಗದಲ್ಲಿ ಪ್ರೊ.ಕೆ.ಇ.ರಾಧಾಕೃಷ್ಣ ಅವರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದಿಸಿರುವ ಸುಭಾಷ್‌ಚಂದ್ರ ಬೋಸ್ ಕುರಿತ ಮೂರು ಕೃತಿಗಳು ಆ.30 ರಂದು ಸಂಜೆ 3.30ಕ್ಕೆ ಟೌನ್‌ಹಾಲ್‌ನಲ್ಲಿ ಲೋಕಾರ್ಪಣೆಗೊಳ್ಳಲಿವೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನೇತಾಜಿ ಸುಭಾಷ್ ಚಂದ್ರ ಬೋಸ್ ಟ್ರಸ್ಟ್‌ನ ಅಧ್ಯಕ್ಷ ಎಂ. ರಾಜ್‌ಕುಮಾರ್, ಭಾರತೀಯ ಹೋರಾಟ, ಓರ್ವ ಭಾರತೀಯ ಯಾತ್ರಿಕ, ಒಂದು ಅಪೂರ್ಣ ಆತ್ಮಕಥೆ ಮತ್ತು ಅಸಾಮಾನ್ಯ ದಿನಚರಿ ಎಂಬ ಪುಸ್ತಕಗಳು ಬಿಡುಗಡೆಗೊಳ್ಳಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ..ಪರಮೇಶ್ವರ್, ಸಮಾಜ ಕಲ್ಯಾಣ ಸಚಿವ ಡಾ.ಎಚ್ .ಸಿ.ಮಹದೇವಪ್ಪ, ಲೇಖಕ ಪ್ರೊ.ಸುಮಂತ್ರ ಬೋಸ್ ಭಾಗವಹಿಸಲಿದ್ದಾರೆ ಎಂದರು.

ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ನೇತಾಜಿ ಸುಭಾಷ್ ಚಂದ್ರ ಬೋಸರು ಭಾರತದ ಇತಿಹಾಸದಲ್ಲಿ ಮೂಡಿಬಂದ ಒಂದು ಪ್ರಮುಖ ನಕ್ಷತ್ರ. ಭಗತ್ ಸಿಂಗ್‌ರಿಂದ ಭಾವನಾತ್ಮಕ ದೇಶಭಕ್ತ ಬೆಂಗಾಲಿ ಬಾಬು ಮತ್ತು ಮಹಾತ್ಮ ಗಾಂಧಿಯಿಂದ ನನ್ನ ಮಗನಂತೆ ಎಂದು ಕರೆಯಿಸಿಕೊಂಡ ಸುಭಾಶ್‌ಚಂದ್ರ ಬೋಸರ ಬದುಕೇ ತಲ್ಲಣ, ದ್ವಂದ್ವ, ತೀವ್ರ ದೇಶಾಭಿಮಾನ, ಸಮಾಜವಾದ, ಮತಾಂಧವಿರೋಧಿಯ ಸಂಗಮ. 1920ರಿಂದ 1924ರವರೆಗೆ ಮೊದಲ ಭಾಗದಲ್ಲಿ 1924ರಿಂದ 1942ರವರೆಗೆ ಮತ್ತೆ ಬರೆದ ಎರಡನೇ ಭಾಗದಲ್ಲಿ ನೇತಾಜಿ ಬೋಸ್ ಸ್ವಾತಂತ್ರ್ಯ ಹೋರಾಟದ ವಿದ್ಯಮಾನಗಳನ್ನು 'ಇಂಡಿಯನ್ ಸ್ಟ್ರಗಲ್' (ಭಾರತೀಯ ಹೋರಾಟ) ಎನ್ನುವ ಗ್ರಂಥದಲ್ಲಿ ನೇತಾಜಿ ದಾಖಲಿಸುತ್ತಾರೆ. ಬೋಸ್ ದಾಖಲಿಸಿರುವ ಈ ಗ್ರಂಥ ಚಾರಿತ್ರಿಕವಾಗಿ ಸ್ಪಷ್ಟ ವಾಸ್ತವತೆಯನ್ನು ಬಿಂಬಿಸುವ ಕಥಾನಕವಾಗಿದೆ ಎಂದು ಕೃತಿಯ ಬಗ್ಗೆ ಮಾಹಿತಿ ನೀಡಿದರು.

ಸುಭಾಷ್‌ಚಂದ್ರ ಬೋಸ್ ಕುರಿತ ಮೂರು ಕೃತಿಗಳು ಆ.30 ರಂದು 3.30ಕ್ಕೆ ಟೌನ್‌ಹಾಲ್‌ನಲ್ಲಿ ಬಿಡುಗಡೆಯಾಗಲಿದ್ದು, ಪುಸ್ತಕಗಳ ರಕ್ಷಾ ಪುಟಗಳನ್ನು ಬಿಡುಗಡೆ ಮಾಡಲಾಯಿತು.

ಅಸಾಮಾನ್ಯ ದಿನಚರಿ ಪುಸ್ತಕ ರೋಮಾಂಚಕ: ಅಸಾಮಾನ್ಯ ದಿನಚರಿ ಈ ಅಪರೂಪದ ದಿನಚರಿಯನ್ನು ಬರೆದು ದಾಖಲಿಸಿದವರು ಶ್ರೀಮತಿ ಎಂ.ಎನ್ನುವ, ತನ್ನ ಹೆಸರನ್ನು ಹೇಳಿಕೊಳ್ಳದ ಓರ್ವ ಧೀರ ಮಹಿಳೆ. ಮಲೇಷ್ಯಾದಲ್ಲಿ 1942ರಲ್ಲಿ ಸ್ಥಾಪಿತವಾಗಿದ್ದ (ಸುಭಾಷ್‌ಚಂದ್ರ ಅವರು ಪೂರ್ವ ಏಶಿಯಾಗೆ ಬರುವ ಮೊದಲೇ) ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್‌ನ ಸ್ವಯಂ ಸೇವಕಿ. ಬಳಿಕ ಅವರು ಸುಭಾಷ್‌ಚಂದ್ರ ನೇತೃತ್ವದ ಅಜಾದ್ ಹಿಂದ್ ಫೌಜ್‌ಗೆ ಸೈನಿಕರಾಗಿಯೂ ಸೇರಿ ಭಾರತ್‌ವರ್ಮಾ ಗಡಿಯಲ್ಲಿ ಮುಂಚೂಣಿಯಲ್ಲಿ ಯುದ್ಧ ಮಾಡುತ್ತಾರೆ. ಬ್ರಿಟಿಷ್ ಭಾರತದ ಸ್ಯೂನಾನ್‌ನಲ್ಲಿದ್ದ ಬಳಿಕ ಜಪಾನೀಯರ ಸೆರೆಯಾಳಾಗಿ ಬಳಿಕ ಅಜಾದ್ ಹಿಂದ್ ಫೌಜ್‌ನ ಸೇನೆಯಲ್ಲಿ ಅಧಿಕಾರಿಗಳಾಗಿ, ಆತ್ಮಾರ್ಪಣಾ ದಳಕ್ಕೆ ಸೇರಿ, ಬ್ರಿಟಿಷರ ಶಸ್ತ್ರಾಗಾರವನ್ನು ಧ್ವಂಶಗೊಳಿಸಿ ತಾನೂ ಹುತಾತ್ಮರಾದ ಪಿ.. ಅವರ ಗಂಡ. ದಂಪತಿಗಳಿಬ್ಬರೂ ಅಪ್ರತಿಮ ದೇಶಭಕ್ತರು. ನೇತಾಜಿಯವರ ನಿಷ್ಠಾವಂತ ಬೆಂಬಲಿಗರು. ಅವರ ಕತೆ ನಿಜಕ್ಕೂ ರೋಮಾಂಚಕ. ಈ ಪುಸ್ತಕವೂ ಶನಿವಾರ ಬಿಡುಗಡೆಯಾಗಲಿದೆ.

ಜಿಎಸ್ಟಿ ಸರಳೀಕರಣದಿಂದ ಜಿಡಿಪಿ ಎರಡಂಕಿಗೆ ಹೆಚ್ಚಳ

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಸಂಸದ ಬಸವರಾಜ ಬೊಮ್ಮಾಯಿ ಅಭಿನಂದನೆ

ಬೆಂಗಳೂರು: ಜಿಎಸ್‌ಟಿ ಕಡಿತ ಮತ್ತು ಸರಳೀಕರಣ ಮಾಡಲು ತೀರ್ಮಾನಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್‌ಗೆ ಸಂಸದ ಬಸವರಾಜ ಬೊಮ್ಮಾಯಿ ಅಭಿನಂದನೆ ಸಲ್ಲಿಸಿದ್ದಾರೆ.

ಈ ಕುರಿತು ಸಚಿವೆಗೆ ಪತ್ರ ಬರೆದಿರುವ ಅವರು, ಜಿಎಸ್ ಟಿ ಸರಳೀಕರಣದಿಂದ ದೇಶದ ಜಿಡಿಪಿ ಎರಡಂಕಿಗೆ ಹೆಚ್ಚಳವಾಗಲಿದ್ದು, ಭಾರತ ವಿಶ್ವದ ನಾಲ್ಕನೇ ಆರ್ಥಿಕ ಶಕ್ತಿಯಿಂದ ಮೂರನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವ ವಿಶ್ವಾಸ ಇದೆ ಎಂದು ತಿಳಿಸಿದ್ದಾರೆ. ನಿಮ್ಮ ನಾಯಕತ್ವದಲ್ಲಿ ನಮ್ಮ ದೇಶದ ಆರ್ಥಿಕತೆ ಬಲಗೊಳಿಸಲು ಬಲಿಷ್ಠ ಮತ್ತು ಪರಿಣಾಮಕಾರಿ ಸುಧಾರಣೆಗಳನ್ನು ತರುತ್ತಿರುವುದಕ್ಕೆ ನಿಮಗೆ ಹೃತ್ಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಪ್ರಧಾನ ಮಂತ್ರಿ ನರೇಂದ್ರ ಮೋದಿ ನಾಯಕತ್ವ ಹಾಗೂ ನಿಮ್ಮ ಬದ್ಧತೆಯಿಂದಾಗ ದೇಶದ ತೆರಿಗೆ ಕಾಯ್ದೆಗಳ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಜಿಎಸ್‌ಟಿ ಜಾರಿ ಮಾಡುವ ಮೂಲಕ ಮಹತ್ವದ ಹೆಜ್ಜೆ ಇಟ್ಟಿದ್ದೀರ ಎಂದು ತಿಳಿಸಿದ್ದಾರೆ.

ಜಿಎಸ್‌ಟಿ 2 ಮುಂದಿನ ತಲೆಮಾರಿನ ಸುಧಾರಣೆ ಕ್ರಮವಾಗಿದ್ದು, ನಾನು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ನೀವು ನನಗೆ ಜಿಎಸ್‌ಟಿ ಕೌನ್ಸಿಲ್ ನ ಮಂತ್ರಿಗಳ ತಂಡದ ನಾಯಕತ್ವ ವಹಿಸಿಕೊಳ್ಳಲು ಅವಕಾಶ ಕಲ್ಪಿಸಿದ್ದಕ್ಕೆ ನಿಮಗೆ ವೈಯಕ್ತಿಕವಾಗಿ ಧನ್ಯವಾದ ಸಲ್ಲಿಸುತ್ತೇನೆ. ಆ ಸಮಯದಲ್ಲಿ ಜಿಎಸ್‌ಟಿ ತೆರಿಗೆ ಸುಧಾರಣೆಯಲ್ಲಿ ಸಾಕಷ್ಟು ಸಲಹೆ ನೀಡಲಾಗಿದೆ. ಜಿಎಸ್‌ಟಿ ತೆರಿಗೆ ಸುಧಾರಣೆ ಮತ್ತು ಸ್ಲ್ಯಾಬ್ ಕಡಿತ ಮಾಡಲು ತೀರ್ಮಾನಿಸಿದ್ದು, ಈ ತೀರ್ಮಾನ ದೇಶ ಮುಕ್ತ ಮನಸ್ಸಿನಿಂದ ಸ್ವಾಗತಿಸಿದೆ. ವಿಶೇಷವಾಗಿ ವಾಣಿಜ್ಯೋದ್ಯಮ ಸಮುದಾಯ ಸ್ವಾಗತಿಸಿದೆ. ಇದರ ಪರಿಣಾಮ ಮುಂದಿನ ದಿನಗಳಲ್ಲಿ ಸಾಕಷ್ಟು ವಾಣಿಜ್ಯ ವಹಿವಾಟುಗಳು ಜಿಎಸ್‌ಟಿ ವ್ಯಾಪ್ತಿಗೆ ಒಳಪಡಲಿವೆ. ಇದರಿಂದ ತೆರಿಗೆ ಸಂಗ್ರಹ ಹೆಚ್ಚಳವಾಗಲಿದೆ. ಅಲ್ಲದೇ ದೇಶದ ಜಿಡಿಪಿ ಎರಡಂಕಿಗೆ ಹೆಚ್ಚಳವಾಗುವ ನಂಬಿಕೆ ಇದೆ ಎಂದು ತಿಳಿಸಿದ್ದಾರೆ.

ಭಾರತವನ್ನು ಬಲಿಷ್ಠ ಆರ್ಥಿಕ ಶಕ್ತಿಯನ್ನಾಗಿ ಮಾಡುತ್ತಿರುವ ನಿಮಗೆ ಮತ್ತೊಮ್ಮೆ ತುಂಬು ಹೃದಯದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಶೀಘ್ರವೇ ನಿಮ್ಮ ಅವಧಿಯಲ್ಲಿಯೇ ಭಾರತ ವಿಶ್ವದ ನಾಲ್ಕನೇ ಆರ್ಥಿಕ ಶಕ್ತಿಯಿಂದ ಮೂರನೇ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮುವ ವಿಶ್ವಾಸ ಇದೆ. ಇದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಕನಸಾಗಿರುವ ವಿಕಸಿತ ಭಾರತಕ್ಕೆ ನಾಂದಿಯಾಗಲಿದೆ.

-ಬಸವರಾಜ ಬೊಮ್ಮಾಯಿ ಸಂಸದ

ಭ್ರೂಣಹತ್ಯೆ ತಡೆಗೆ ಆಂಧ್ರ ಮಾದರಿ ಸೇವ್ ಮಾಮ್!

ಬೆಂಗಳೂರು: ಭ್ರೂಣಹತ್ಯೆ ತಡೆಯಲು ಹಾಗೂ ಹೆಣ್ಣು ಭ್ರೂಣವನ್ನು ಕಾಪಾಡುವ ಸಲುವಾಗಿ ಅನೇಕ ಯೋಜನೆಗಳನ್ನು ಜಾರಿ ತರಲು ಸರಕಾರ ಮುಂದಾಗಿದೆ. ಆಂಧ್ರಪ್ರದೇಶ ಮಾದರಿಯನ್ನು ಬೆಂಗಳೂರಿನಲ್ಲಿ ಅಳವಡಿಸಲು ಚಿಂತನೆ ನಡೆಸಲಾಗಿದೆ.

ಗರ್ಭಿಣಿಯರ ದತ್ತಾಂಶ ಸಿಗುತ್ತಿಲ್ಲ. ಅವರು ಎಲ್ಲಿ ಹೋದರು, ಡೆಲಿವರಿ ಆಯಿತಾ?, ಯಾವ ಮಗು, ತಾಯಿ ಹಾಗೂ ಮಗು ಹೇಗಿದ್ದಾರೆ ಎಂಬ ಮಾಹಿತಿಯೇ ಸಿಗುತ್ತಿಲ್ಲ. ಅನೇಕರು ಗರ್ಭಿಣಿಯರಾಗಿ ತಾಯಿ ಕಾರ್ಡ್ ಮಾಡಿಸುತ್ತಾರೆ. ಅದಾದ ಕೆಲ ತಿಂಗಳ ಬಳಿಕ ರೆಗ್ಯುಲರ್ ಚೆಕ್‌ಅಪ್ ಸೇರಿದಂತೆ ಅನೇಕ ಮಾಹಿತಿ ಸಿಗುತ್ತಿಲ್ಲ. ಅನೇಕರು ಗರ್ಭಪಾತ ಮಾಡಿಸಿಕೊಳ್ಳುತ್ತಿದ್ದರೂ, ಖಾಸಗಿ ಆಸ್ಪತ್ರೆಗೆ ಹೋಗುತ್ತಿರುವ ಪ್ರಕರಣ ಹೆಚ್ಚುತ್ತಿರುವ ಕಾರಣ ಮಾಹಿತಿಗಳ ಕೊರತೆ ಹೆಚ್ಚಾಗುತ್ತಿದೆ. ಇಂಥ ಪ್ರಕರಣಗಳಲ್ಲಿ ಯಾವ ಕೆಟಗರಿಗೆ ಸೇರಿಸಬೇಕು ಎಂಬುದು ಕೂಡಾ ತಿಳಿಯಂದತಾಗಿದೆ. ಈ ಹಿನ್ನೆಲೆ ಸೇವ್ ಮಾಮ್ ಎಂಬ ಹೊಸ ಯೋಜನೆ ಬೆಂಗಳೂರಿನಲ್ಲಿ ಆರಂಭ ಮಾಡಲಾಗುತ್ತಿದೆ. ಆಂಧ್ರ ಪ್ರದೇಶದ ಮಾದರಿಯಲ್ಲಿ ಯೋಜನೆ ಜಾರಿಗೊಳಿಸಲು ರೂಪುರೇಷೆ ಸಿದ್ಧಪಡಿಸಲಾಗಿದೆ.

ಹೇಗಿರಲಿದೆ ಯೋಜನೆ?: ಆನ್‌ಲೈನ್ ಅಪ್ಲಿಕೇಶನ್ ಮೂಲಕ ಡೇಟಾವನ್ನು ಆರೋಗ್ಯ ಇಲಾಖೆಯ ಪೋರ್ಟಲ್‌ಗೆ ಕಳುಹಿಸುವ ಯೋಜನೆ ಇದಾಗಿದೆ. ಅಂದರೆ, ಬೆಂಗಳೂರು ಹಾಗೂ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಗರ್ಭಿಣಿಯರನ್ನು ಅಪ್ಲಿಕೇಶನ್ ಮೂಲಕ ಟ್ರ್ಯಾಕ್ ಮಾಡಲು ಉದ್ದೇಶಿಸಲಾಗಿದೆ. ಗರ್ಭಿಣಿಯರು ಖಾಸಗಿ ಅಥವಾ ಬೇರೆ ಊರಿನ ಆಸಪತ್ರೆಗಳಿಗೆ ಹೋದರೂ ಅವರ ಟ್ರ್ಯಾಕಿಂಗ್ ಡಿಟೇಲ್ಸ್ ಸಿಗುವಂತೆ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಮಗು ಹುಟ್ಟಿ ಎರಡು ವರ್ಷದವರೆಗೂ ಟ್ರ್ಯಾಕ್

ಗರ್ಭಿಣಿಯಾಗಿನಿಂದ ಮಗು ಹುಟ್ಟಿ ಎರಡು ವರ್ಷದವರೆಗೂ ಮಾಹಿತಿ ಟ್ರ್ಯಾಕಿಂಗ್ ಮಾಡಲಾಗುತ್ತದೆ . ಆಶಾ ಕಾರ್ಯಕರ್ತೆಯರ ಮೂಲಕ ಈ ಆ್ಯಪ್‌ನಲ್ಲಿ ಸಂಪೂರ್ಣ ಮಾಹಿತಿ ಅಪ್‌ಲೋಡ್ ಮಾಡಿಸಿ, ಸಂಪೂರ್ಣ ಮಾಹಿತಿ ಕಲೆಹಾಕಲಾಗುತ್ತದೆ. ಈಗಾಗಲೇ ಪ್ರಾಯೋಗಿಕ ಯೋಜನೆ ಸಿದ್ಧವಾಗಿದ್ದು, ಶೀಘ್ರದಲ್ಲೇ ಪೂರ್ಣ ಪ್ರಮಾಣದಲ್ಲಿ ಯೋಜನೆ ಆರಂಭವಾಗಲಿದೆ.

ರಾಜ್ಯದ 8.69 ಲಕ್ಷ ರೈತರಿಗೆ ಸಾಲ ವಿತರಣೆ: ಮುಖ್ಯಮಂತ್ರಿ ಸಿದ್ದರಾಮಯ್ಯ

ಸಿಎಂ ನೇತೃತ್ವದಲ್ಲಿ ಸಹಕಾರ ಇಲಾಖೆ ಪ್ರಗತಿ ಪರಿಶೀಲನೆ ಸಭೆ | ಹಾಲು ಉತ್ಪಾದನೆ ಹೆಚ್ಚಿಸುವುದು ಸಂಘಗಳ ಕಾರ್ಯದರ್ಶಿಯ ಜವಾಬ್ದಾರಿ

ಬೆಂಗಳೂರು: ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ 37 ಲಕ್ಷ ರೈತರಿಗೆ 28 ಸಾವಿರ ಕೋಟಿ ಸಾಲ ವಿತರಣೆ ಗುರಿ ಹೊಂದಲಾಗಿದ್ದು, ಜುಲೈ ಅಂತ್ಯದವರೆಗೆ 8,69,284 ರೈತರಿಗೆ 8362.68 ಕೋಟಿ ಸಾಲ ವಿತರಣೆ ಮಾಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಸಿದ್ದರಾಮಯ್ಯ ಗೃಹ ಕಚೇರಿ ಕೃಷ್ಣಾದಲ್ಲಿ ಸಹಕಾರ ಇಲಾಖೆ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿ, ರೈತರಿಗೆ ಸಕಾಲದಲ್ಲಿ ಕೃಷಿ ಸಾಲವನ್ನು ಸಿಗುವುದನ್ನು ಖಾತ್ರಿಪಡಿಸಬೇಕು. ನಬಾರ್ಡ್ ರಿಯಾಯಿತಿ ಬಡ್ಡಿ ದರದ ಸಾಲದ ಮಿತಿಯನ್ನು ಹಿಂದಿನ ಸಾಲಿನಲ್ಲಿದ್ದ 5,600 ಕೋಟಿಗಳಿಂದ 3,236.11 ಕೋಟಿ ರು.ಗೆ ಅಂದರೆ ಶೇ.42.21ರಷ್ಟು ಕಡಿಮೆ ಮಾಡಿದೆ. ಆದರೂ ಸಾಲ ವಿತರಣೆಯಲ್ಲಿ ಶೇ.96.07 ರಷ್ಟು ಪ್ರಗತಿ ಸಾಧಿಸಲಾಗಿದೆ. 2024-25ನೇ ಸಾಲಿನಲ್ಲಿ 29,75,598 ರೈತರಿಗೆ 25,939.09 ಕೋಟಿ ರೂ ಕೃಷಿ ಸಾಲ ವಿತರಣೆ ಮಾಡಲಾಗಿದೆ. ರಾಜ್ಯದಲ್ಲಿ 28,516 ಸಹಕಾರ ಸಂಘಗಳು ಲಾಭದಲ್ಲಿದ್ದು, 14,670 ಸಂಘಗಳು ನಷ್ಟದಲ್ಲಿವೆ. ಸಾಲ ವಸೂಲಾತಿ ಸರಿಯಾಗಿ ಆಗದ ಕಾರಣ ಬಹುತೇಕ ಸಂಘಗಳು ನಷ್ಟದಲ್ಲಿದ್ದು, ಅಂತಹ ಸಾಲ ವಸೂಲಾತಿಗೆ ಕೈಗೊಂಡ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸಬೇಕು ಎಂದು ಸೂಚಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಕಚೇರಿ ಕೃಷ್ಣಾದಲ್ಲಿ ಸಹಕಾರ ಇಲಾಖೆ ಪ್ರಗತಿ ಪರಿಶೀಲನೆ ಸಭೆ ನಡೆಸಿದರು.

ಇದರಲ್ಲಿ 2200 ಹಾಲು ಉತ್ಪಾದಕ ಸಂಘಗಳು ನಷ್ಟದಲ್ಲಿವೆ. ಹಾಲು ಉತ್ಪಾದಕ ಸಹಕಾರ ಸಂಘಗಳ ವೆಚ್ಚದ ಮೇಲೆ ನಿಗಾ ಇರಿಸಬೇಕು. ಹಾಲು ಉತ್ಪಾದನೆಯನ್ನು ಹೆಚ್ಚಿಸುವುದು ಸಂಘಗಳ ಕಾರ್ಯದರ್ಶಿಗಳ ಜವಾಬ್ದಾರಿ. ಹಾಲು ಉತ್ಪಾದಕ ಸಹಕಾರ ಸಂಘಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಬೇಕು. ಕನ್ನಡ ಸಾಹಿತ್ಯ ಪರಿಷತ್‌ನ ಅವ್ಯವಹಾರಗಳ ಕುರಿತು ಡಿಆರ್‌ಸಿಎಸ್ ತನಿಖೆ ನಡೆಸುತ್ತಿದೆ. ತನಿಖೆ ನಡೆಯುತ್ತಿರುವ ಸಂದರ್ಭದಲ್ಲೇ ಕೆಲವು ಸದಸ್ಯರ ಸದಸ್ಯತ್ವವನ್ನು ಪರಿಷತ್ ರದ್ದುಪಡಿಸುತ್ತಿರುವ ಕುರಿತು ದೂರುಗಳು ಬಂದಿದ್ದು, ಈ ಕುರಿತು ಕಾನೂನು ಪ್ರಕಾರ ಕ್ರಮ ಕೈಗೊಳ್ಳಲು ಸೂಚನೆ ನೀಡಿದರು.

ಸಹಕಾರ ಸಂಘಗಳ ಖಾಲಿ ಹುದ್ದೆ ಭರ್ತಿಯಾಗಲಿ: ಸಹಕಾರ ಸಂಘಗಳ ಹಿರಿಯ ನಿರೀಕ್ಷಕರ 126 ಹುದ್ದೆಗಳು ಹಾಗೂ ನಿರೀಕ್ಷಕರ 403 ಹುದ್ದೆಗಳು ಖಾಲಿಯಿವೆ. ಹುದ್ದೆಗಳ ಭರ್ತಿಗೆ ಪ್ರಸ್ತಾವನೆ ಸಲ್ಲಿಸುವಂತೆ ಸೂಚನೆ ನೀಡಿದರು. ಸಹಕಾರ ಸಂಘಗಳ ನಿಬಂಧಕರ ಕಚೇರಿ ವ್ಯಾಪ್ತಿಯ ಸೇವೆಗಳನ್ನು ಗಣಕೀಕರಿಸುವ ಕಾರ್ಯವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ರಾಜ್ಯದಲ್ಲಿ 7074 ಗಿರವಿದಾರ ಸಂಸ್ಥೆಗಳು ಹಾಗೂ 1468 ಚೀಟಿ ಸಂಸ್ಥೆಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ 1961, ಕರ್ನಾಟಕ ಗಿರವಿದಾರರ ಅಧಿನಿಯಮ 1961 ಮತ್ತು ಚೀಟಿನಿಧಿಗಳ ಅಧಿನಿಯಮ 1982ರಡಿ ನೋಂದಣಿಯಾಗಿವೆ. ಅನಧಿಕೃತವಾಗಿ ಕಾರ್ಯಾಚರಿಸುತ್ತಿರುವ ಗಿರವಿದಾರ ಸಂಸ್ಥೆಗಳು ಹಾಗೂ ಚೀಟಿ ಸಂಸ್ಥೆಗಳ ಮೇಲೆ ನಿಗಾ ಇರಿಸಬೇಕು. ರಾಜ್ಯದಲ್ಲಿ ಸಹಕಾರಿ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಹಕಾರ ಇಲಾಖೆ

ಅಧಿಕಾರಿಗಳು ಕಾನೂನು ಪ್ರಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಸಿಎಂ ಸಿದ್ದರಾಮಯ್ಯ ಸೂಚನೆ ನೀಡಿದರು.

2038ಕ್ಕೆ ಭಾರತ ವಿಶ್ವದ 2ನೇ ಅತಿದೊಡ್ಡ ಆರ್ಥಿಕಶಕ್ತಿ!

← ಮೊದಲಪುಟದಿಂದ



ಅದೇ ಪ್ರಗತಿಗತಿ ಮುಂದುವರಿದರೆ 2038ರ ವೇಳೆಗೆ ಭಾರತದ ಜಿಡಿಪಿ 34.2 ಟ್ರಿಲಿಯನ್(ಲಕ್ಷ ಕೋಟಿ) ಡಾಲರ್‌ಗೆ ಏರುವುದು ನಿಶ್ಚಿತ ಎಂದು 'ಇ ಅಂಡ್ ವೈ' ವರದಿ ವಿಶ್ವಾಸ ವ್ಯಕ್ತಪಡಿಸಿದೆ..

ಖರೀದಿ ಸಾಮರ್ಥ್ಯ: ಈ ಅಂಶದ ಆಧಾರದಲ್ಲಿ ಪ್ರಸ್ತುತ ಭಾರತ ಅದಾಗಲೇ 3ನೇ ಸ್ಥಾನಕ್ಕೇರಿದೆ. ಭಾರತದ ಸದ್ಯದ ಜಿಡಿಪಿ 14.2 ಟ್ರಿಲಿಯನ್(ಲಕ್ಷ ಕೋಟಿ) ಡಾಲರ್‌ಗಳಷ್ಟಾಗಿದೆ ಎಂದೂ ವರದಿಯಲ್ಲಿ ಇ-ವೈ ಉಲ್ಲೇಖಿಸಿದೆ.

ವಿನಿಮಯ ದರ: ಜಾಗತಿಕ ವಿನಿಮಯ ದರ ವಿಚಾರದಲ್ಲಿ ಭಾರತ ವೇಗದ ಬೆಳವಣಿಗೆ ಕಾಣುತ್ತಿದ್ದು, 2028ರ ವೇಳೆಗೆ ಜರ್ಮನಿಯನ್ನು ಹಿಂದಿಕ್ಕಿ ವಿಶ್ವದ ಸಿರಿವಂತ ದೇಶಗಳ ಪಟ್ಟಿಯಲ್ಲಿ 3ನೇ ಸ್ಥಾನಕ್ಕೇರಲಿದೆ ಎಂದು ಅರ್ನೆಸ್ಟ್ ಅಂಡ್ ಯಂಗ್‌ನ 'ಎಕಾನಮಿ ವಾಚ್'ನ ಆಗಸ್ಟ್ ವರದಿಯಲ್ಲಿ ವಿವರಿಸಲಾಗಿದೆ.

ಪ್ರಸ್ತುತ ಜಿಡಿಪಿ ಪ್ರಗತಿಯ ದರ ಭಾರತದ್ದು ಶೇ.6.5ರಷ್ಟಿದ್ದರೆ, ಅಮೆರಿಕದ್ದು ಶೇ.2.1ರಷ್ಟಿದೆ. 2028-30 ಅವಧಿಯಲ್ಲಿ (ಐಎಂಎಫ್ ಮುನ್ಸೂಚನೆ) ಭಾರತೀಯರ 'ಪರ್ಚೇಸಿಂಗ್ ಪವರ್ ಪ್ಯಾರಿಟಿ'(ಪಿಪಿಪಿ) ಹೆಚ್ಚಳವಾಗಲಿದೆ. 'ಪಿಪಿಪಿ' ಲೆಕ್ಕಾಚಾರ ಪ್ರಕಾರವೇ ಅಮೆರಿಕದ ಆರ್ಥಿಕತೆಯನ್ನು 2038ರ ವೇಳೆಗೆ ಭಾರತ ಮೀರಿಸಲಿದೆ. 2ನೇ ಸ್ಥಾನಕ್ಕೆ ಏರಲಿದೆ ಎಂದು ವರದಿಯಲ್ಲಿ ದೃಢವಾಗಿ ಹೇಳಲಾಗಿದೆ.

ಕರ್ನಾಟಕ ಸರಕಾರ

(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ-4/ಇ-ಟೆಂಡರ್ ಪ್ರಕಟಣೆ/2025-26/ 2393, ದಿನಾಂಕ: 26.08.2025

ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ

1) **ಕಾಮಗಾರಿ ವಿವರ:** ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-3 ರಂತೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2024-25 ನೇ ಸಾಲಿನ 8443 ಎಂಎಲ್‌ಸಿ-ಲ್ಯಾಡ್ ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ವರ್ಕ ಇಂಡೆಂಟ್ ಸಂಖ್ಯೆ: 22392 (Providing Digital Computer Labs Fully Furnished with fully equipped and Latest Version Hi-tech/Smart Class lab in Agreeculture Collage at Bheemarayanagudi in Shahapur Taluka, Yadgir District. (Under MLC-LAD for the year 2024-25)ಕ್ಕೆ ಟೆಂಡರ್ ಆಹ್ವಾನಿಸಲಾಗಿದೆ. 2) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.100.72 ಲಕ್ಷಗಳು 3) **ಗುತ್ತಿಗೆದಾರರ ಅರ್ಹತೆ ವಿವರ:** MSME Certificate 4) **ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, 5) **ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 30.08.2025 (17.30 ಗಂಟೆವರೆಗೆ) 6) **ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 06.09.2025 (16.00 ಗಂಟೆವರೆಗೆ) 7) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 08.09.2025 (11.30 ಗಂಟೆ ನಂತರ) 8) **ಆರ್ಥಿಕ ಬಿಡ್ ತೆರೆಯುವ ದಿನಾಂಕ :** 10.09.2025 (11.30 ಗಂಟೆ ನಂತರ) 9) **ಹೆಚ್ಚಿನ ವಿವರಗಳಿಗೆ :** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ 10) **ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆ: ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/- ಕಾರ್ಯನಿರ್ವಾಹಕ ಇಂಜಿನೀಯರರು,

ವಾ.ಸಾ.ಸಂ.ಇ/ಯಾದಗಿರಿ/222/ಕೆ.ಎಸ್.ಎಂ.ಸಿ.&ಎ/2025-26 ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ.

ಎಕ್ಸಿಸ್ ಬ್ಯಾಂಕ್ ಪ್ಲಾಟ್ ಸಂಖ್ಯೆ 41, ಶೇಷಾದ್ರಿ ರಸ್ತೆ, ಆನಂದ್ ರಾವ್ ಸರ್ಕಲ್, ಬೆಂಗಳೂರು -560009

ತಗಾದೆ ಸೂಚನೆ

ಈ ಕೆಳಗಿನ ಸಾಲಗಾರರು ಬ್ಯಾಂಕಿನಿಂದ ಪಡೆದ ಸಾಲ ಸೌಲಭ್ಯಗಳ ಮೇಲಿನ ಅಸಲು ಮತ್ತು ಬಡ್ಡಿಯನ್ನು ಹಿಂಪಾವತಿಸುವಲ್ಲಿ ವಿಫಲರಾಗಿರುವುದರಿಂದ ಆ ಸೌಲಭ್ಯಗಳು ನಿರ್ವಹಣಾರಹಿತ ಸ್ವತ್ತುಗಳಾಗಿ ಪರಿವರ್ತಿತವಾಗಿವೆ ಎಂದು ಈ ಸೂಚನೆಯ ಮೂಲಕ ತಿಳಿಸಲಾಗಿದೆ. 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ ವಿಭಾಗ 13(2)ರ ಅಡಿಯಲ್ಲಿ, ಅವರು ಕೊನೆಯದಾಗಿ ತಿಳಿಸಲಾಗಿರುವಂತಹ ತಮ್ಮ ವಿಳಾಸಗಳಿಗೆ ಸೂಚನೆಗಳನ್ನು ಕಳುಹಿಸಲಾಯಿತಾದರೂ, ಅವು ಸ್ವೀಕೃತಗೊಳ್ಳದೇ ಹಿಂದಿರುಗಿರುವುದರಿಂದ ಸಾರ್ವಜನಿಕ ಪ್ರಕಟಣೆಯ ಮೂಲಕ ಅವರಿಗೆ ಈ ಕುರಿತು ತಿಳಿಸಲಾಗುತ್ತಿದೆ.

ಕ್ರ. ಸಂ	ಸಾಲಗಾರರ ಹೆಸರು ಮತ್ತು ವಿಳಾಸ	ಸಾಲಗಾರರು ಅಡಮಾನ ಮಾಡಿರುವ ಆಸ್ತಿಯ ವಿವರ	ನೋಟೀಸ್ ದಿನಾಂಕ	ಬರಬೇಕಾದ ಬಾಕಿ (ರೂ.ಗಳಲ್ಲಿ)
1	(1) **M/s. Plastech Formwork Systems Private Limited**, ಜಾಮೀನುದಾರರು **ಶ್ರೀ ಅರ್ಜುನ್ ಕೊಪ್ಪ ಮತ್ತು ಶ್ರೀ ಸಂತೋಷ್ ಕುಮಾರ್,** ನೆಲ ಮಹಡಿ ನಂ.39, ಸ್ಮಾರ್ಟ್ ಹೋಮ್ ಪೈಪ್‌ಲೈನ್ ರಸ್ತೆ, ಮಹಾಲಕ್ಷ್ಮಿಪುರಂ WOC 2ನೇ ಹಂತ, 2ನೇ ಫೇಸ್, ಬೆಂಗಳೂರು-560086. (2) **ಶ್ರೀ ಅರ್ಜುನ್ ಕೊಪ್ಪ** ಬಿನ್ ಶ್ರೀ ಅಗ್ರ ಯೋಗೇಂದ್ರನಾಯಕ್ ಶಿವಶಂಕರ, ಫ್ಲಾಟ್ ನಂ.ಇ-702, ಜಿ/ಎಫ್, ಬ್ಲಾಕ್ ನಂ.1, ವಿಂಗ್ 7 ಶೋಭಾ ಡ್ಯೂಪ್ಲವರ್ ಎಂಜಿ ಗಾರ್ಡನ್ಸ್ ಸಾರಕ್ಕಿ ಮುಖ್ಯ ರಸ್ತೆ ಜೆಪಿ ನಗರ, 1ನೇ ಹಂತ-560078. (3) **ಶ್ರೀ ಸಂತೋಷ್ ಕುಮಾರ್** ಬಿನ್ ಶ್ರೀ ವಿ. ಬೈರಪ್ಪ, #3929, ಎಲ್ ಆರ್ ಬಂಡೆ ಬಸ್ ನಿಲ್ದಾಣ ನಂದಗೋಕುಲ ಲೇಔಟ್, ಬೆಂಗಳೂರು ಉತ್ತರ, ಅರೇಬಿಕ್ ಕಾಲೇಜು-560045.	**ಶ್ರೀ ಸಂತೋಷ್ ಕುಮಾರ್‌ರವರರಿಗೆ ಸೇರಿದ ಆಸ್ತಿಯ ವಿವರ.** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪೂರ್ವ ಭಾಗದ ಮುನಿಸಿಪಲ್ ನಂ.475/4, ಖಾತಾ ನಂ.475, ಅಸೆಸ್‌ಮೆಂಟ್ ನಂ.7 ಮತ್ತು 4/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 68 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (50+48-06)/2 ಅಡಿ, ಒಟ್ಟು ವಿಸ್ತೀರ್ಣ 3349 ಚದರ ಅಡಿ, ಈ ಆಸ್ತಿಯು ಶಾಂಪುರ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರಿನಲ್ಲಿದ್ದು, ಪ್ರಸ್ತುತ 7ನೇ 'ಬಿ' ಮೇನ್, ನಂದ ಗೋಕುಲ ಲೇಔಟ್, ಶಾಂಪುರ ಎ.ಸಿ.ಪೋಸ್ಟ್, ಬೆಂಗಳೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಅಪ್ಪಾಜಪ್ಪರವರ ಆಸ್ತಿ, ಪಶ್ಚಿಮಕ್ಕೆ: ಆಸ್ತಿಯ ಪಶ್ಚಿಮ ಭಾಗದ ಹಳೆಯ ಆಸ್ತಿ ನಂ.475, ಹೊಸ ಆಸ್ತಿಯ ನಂ.475/2 (ಐಟಂ ನಂ.2ರ ಆಸ್ತಿ), ಉತ್ತರಕ್ಕೆ: ಶ್ರೀ ದೊಡ್ಡ ಸೊಣ್ಣಪ್ಪರವರ ಆಸ್ತಿ, ದಕ್ಷಿಣಕ್ಕೆ: ಶಾಂಪುರ ಮುಖ್ಯರಸ್ತೆ. ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ಆಸ್ತಿಯ ಪಶ್ಚಿಮ ಭಾಗದ ಮುನಿಸಿಪಲ್ ನಂ.475/3, ಖಾತಾ ನಂ.475, ಅಸೆಸ್‌ಮೆಂಟ್ ನಂ.7 ಮತ್ತು 4/1, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 30 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ (48+06-48)/2 ಅಡಿ, ಒಟ್ಟು ವಿಸ್ತೀರ್ಣ 1447 ಚದರ ಅಡಿ, ಈ ಆಸ್ತಿಯು ಶಾಂಪುರ ಗ್ರಾಮ, ಕಸಬಾ ಹೋಬಳಿ, ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರಿನಲ್ಲಿದ್ದು, ಪ್ರಸ್ತುತ 7ನೇ 'ಬಿ' ಮೇನ್, ನಂದ ಗೋಕುಲ ಲೇಔಟ್, ಶಾಂಪುರ ಎ.ಸಿ.ಪೋಸ್ಟ್, ಬೆಂಗಳೂರಿನಲ್ಲಿದೆ ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಆಸ್ತಿಯ ಪಶ್ಚಿಮ ಭಾಗದ ಹಳೆಯ ಆಸ್ತಿ ನಂ.475, ಹೊಸ ಆಸ್ತಿಯ ನಂ.475/1 (ಐಟಂ ನಂ.1ರ ಆಸ್ತಿ), ಪಶ್ಚಿಮಕ್ಕೆ: ಖಾಸಗಿ ಆಸ್ತಿ, ಉತ್ತರಕ್ಕೆ: ಶಾಂಪುರ ಮುಖ್ಯರಸ್ತೆ, ದಕ್ಷಿಣಕ್ಕೆ: ಶ್ರೀ ದೊಡ್ಡ ಸೊಣ್ಣಪ್ಪರವರ ಆಸ್ತಿ. **ಯಾವುದೇ ಮಾಹಿತಿಗಾಗಿ ಪ್ರಕಾಶ್, ಕಲೆಕ್ಷನ್ ಮ್ಯಾನೇಜರ್,** 9986316545 **ರವರನ್ನು ಸಂಪರ್ಕಿಸಿ.**	05.08.2025 ಎನ್‌ಪಿಎ ದಿನಾಂಕ: 29.06.2025	SBB SECURED TERM LOAN Loan A/c No. 92306005 0342330 Amount Rs. 2,80,000/- ಒಟ್ಟು ಬಾಕಿ ಮೊತ್ತ ರೂ. 2,55,37,651/- (ದಿನಾಂಕ: 04.08.2025ರವರೆಗಿನ ಬಡ್ಡಿಯನ್ನು ಒಳಗೊಂಡಿದೆ)
2	(1) **ಶ್ರೀ ಟಿ.ಎಲ್. ದಾಸರ್** ಬಿನ್ ಶ್ರೀ ಲಕ್ಷ್ಮಪ್ಪ ಯಂಕಪ್ಪ ದಾಸರ್, (2) **ಶ್ರೀಮತಿ ಪಾರ್ವತಿ** ಕೋಂ ಶ್ರೀ ಟಿ.ಎಲ್. ದಾಸರ್, **ಇವರಿಬ್ಬರ ವಿಳಾಸ:** ಮನೆ ನಂ.226ಎ, ಸೆಕ್ಟರ್ ನಂ.28, ನವನಗರ, ಬಾಗಲಕೋಟೆ-587103. **ಮತ್ತೊಂದು ವಿಳಾಸ:** ವಾಸಯೋಗ್ಯ ಆಸ್ತಿಯ ಪ್ಲಾಟ್ ನಂ.ಎ226, ಸೆಕ್ಟರ್ ನಂ.28, ಅಮರಿ ಮಸೀದಿ, ನವನಗರ, ಬಾಗಲಕೋಟೆ-587103.	**ಶ್ರೀ ತುಕರಾಮ್ ಲಕ್ಷ್ಮಪ್ಪ ದಾಸರ ಅವರಿಗೆ ಸೇರಿದ ಆಸ್ತಿಯ ವಿವರ.** ಪ್ಲಾಟ್ ನಂ.ಎ226, ಸೆಕ್ಟರ್ ನಂ.28, ಅಮರಿ ಮಸೀದಿ ಹತ್ತಿರ, ನವನಗರ, ಬಾಗಲಕೋಟೆ-587101, ಒಟ್ಟು ಸೂಪರ್ ಬಿಲ್ಟ್‌ಅಪ್ ಪ್ರದೇಶದ ವಿಸ್ತೀರ್ಣ 936.13 ಚದರ ಅಡಿ. ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.ಎ-225, ಪಶ್ಚಿಮಕ್ಕೆ: ಪ್ಲಾಟ್ ನಂ.ಎ-227, ಉತ್ತರಕ್ಕೆ: ಪ್ಲಾಟ್ ನಂ.ಎ-223, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ರಘನಾಥ್, 9886960484 ರವರನ್ನು ಸಂಪರ್ಕಿಸಿ.**	04.08.2025 ಎನ್‌ಪಿಎ ದಿನಾಂಕ: 10.12.2020	ASSET POWER BRE Loan A/c No. LPR012903032265 Amount : Rs.13,37,406/- ಒಟ್ಟು ಬಾಕಿ ಮೊತ್ತ ರೂ.21,50,230/- ದಿನಾಂಕ: 31.07.2025ರಂದು ಇದ್ದಂತೆ
3	(1) **ಶ್ರೀ ಮನೋಜ್ ಕುಮಾರ್** ಬಿನ್ ಶ್ರೀ ಚಂದ್ರ ಪ್ರಕಾಶ್, (2) **ಶ್ರೀಮತಿ ಕವಿತಾ** ಕೋಂ ಶ್ರೀ ಮನೋಜ್ ಕುಮಾರ್, **ಇವರಿಬ್ಬರ ವಿಳಾಸ:** ಮನೆ ನಂ.2294, 10ನೇ ಕ್ರಾಸ್, ಚಂದ್ರನಗರ, ಕುಮಾರಸ್ವಾಮಿ ಲೇಔಟ್, ಓಂ ಶಕ್ತಿ ದೇವಸ್ಥಾನ, ಬೆಂಗಳೂರು-560078. **ಮತ್ತೊಂದು ವಿಳಾಸ:** ಪ್ಲಾಟ್ ನಂ.21, ಎನ್‌ಎ ಲ್ಯಾಂಡ್ ಸರ್ವೆ ನಂ.1400 1401/2 1402 1401/1 1412/2 & 1413/5, ರಾಯಚೂರು ವಿಲ್ ಅಜಮತ ಕಾಲೋನಿ ಹತ್ತಿರ, ಆಶಾಪುರ ರಸ್ತೆ, ರಾಯಚೂರು-584101. **ಮತ್ತೊಂದು ವಿಳಾಸ: ಶ್ರೀ ಮನೋಜ್ ಕುಮಾರ್** ಬಿನ್ ಶ್ರೀ ಚಂದ್ರ ಪ್ರಕಾಶ್ 11-5-91 Brestwarpeth, ಯೂನಿಯನ್ ಬ್ಯಾಂಕ್ ಹತ್ತಿರ, Brestwarpeth ಪ್ರದೇಶ, ರಾಯಚೂರು-584101. ಮತ್ತೊಂದು ವಿಳಾಸ: ಶ್ರೀಮತಿ ಕವಿತಾ ಕೋಂ ಶ್ರೀ ಮನೋಜ್ ಕುಮಾರ್ ಮನೆ ನಂ.3125 ಗಟ್ಟು ಮಂಡಲಂ ಗೋರ್ಲಖಾ, Ndoddi, ಮಹಬೂಬ್ ನಗರ, ಆಂಧ್ರ ಪ್ರದೇಶ-509129.	**ಶ್ರೀ ಮನೋಜ್ ಕುಮಾರ್ ಅವರಿಗೆ ಸೇರಿದ ಆಸ್ತಿಯ ವಿವರ.** ಸಂಪೂರ್ಣ ತೆರೆದ ಪ್ಲಾಟ್ ನಂ.21, ಮುನಿಸಿಪಲ್ ನಂ.1-3-1400/21, ವಿಸ್ತೀರ್ಣ 9.00 X 12.00 ಮೀಟರ್ಸ್ = 108 ಚದರ ಮೀಟರ್ಸ್, ಈ ಆಸ್ತಿಯು ಎನ್.ಎ. ಭೂಮಿ ಸರ್ವೆ ನಂಬರ್ಸ್ 1400, 1401/2, 1402, 1401/1, 1412/2 ಮತ್ತು 1413/5ಗಳನ್ನಾಗಿ ಅನುಮೋದಿಸಲಾಗಿದ್ದು, ರಾಯಚೂರು ಗ್ರಾಮ, ರಾಜಮಾತ ಕಾಲೋನಿ, ಆಶಾಪುರ ರಸ್ತೆ, ರಾಯಚೂರಿನಲ್ಲಿದ್ದು, ರಾಯಚೂರು ಸಿಟಿ ಮುನಿಸಿಪಲ್ ವ್ಯಾಪ್ತಿಯಲ್ಲಿದೆ, ಮತ್ತು ಚಕ್ಕುಬಂದಿ: ಪೂರ್ವಕ್ಕೆ: ಪ್ಲಾಟ್ ನಂ.22, ಪಶ್ಚಿಮಕ್ಕೆ: ಪ್ಲಾಟ್ ನಂ.20, ಉತ್ತರಕ್ಕೆ: ಪ್ಲಾಟ್ ನಂ.16, ದಕ್ಷಿಣಕ್ಕೆ: 9.00 ಮೀಟರ್‌ಗಳ ಅಗಲದ ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್‌ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.**	04.08.2025 ಎನ್‌ಪಿಎ ದಿನಾಂಕ: 25.07.2025	POWER HOME VANILLA Loan A/c No. PHR0342 08220671 Amount Rs. 8,18,656/- ಒಟ್ಟು ಬಾಕಿ ಮೊತ್ತ ರೂ. 8,21,468/- ದಿನಾಂಕ: 04.08.2025ರಂದು ಇದ್ದಂತೆ
4	(1) **ಮೆ॥ ಈರಣ್ಣ ಕೊಟ್ರಪ್ಪ ಬಾಳಿಕಾಯಿ ಇದನ್ನು ಪ್ರತಿನಿಧಿಸುವ ಮಾಲೀಕರು ಶ್ರೀ. ಈರಣ್ಣ ಕೊಟ್ರಪ್ಪ ಬಾಳಿಕಾಯಿ,** ಪ್ಲಾಟ್ ನಂ.87, R.M.Chincali ಕಾಂಪೌಂಡ್, ಎಪಿಎಂಸಿ ಯಾರ್ಡ್, ಗದಗ-582101. (2) **ಶ್ರೀ ಈರಣ್ಣ ಕೊಟ್ರಪ್ಪ ಬಾಳಿಕಾಯಿ** ಬಿನ್ ಶ್ರೀ.ಕೊಟ್ರಪ್ಪ ಬಾಳಿಕಾಯಿ, ರಾಚೋಟೇಶ್ವರ ದೇವಸ್ಥಾನದ ಹತ್ತಿರ ಒಕ್ಕಲಗೇರಿ, ಗದಗ-582101.	**ಶ್ರೀ ಈರಣ್ಣ ಕೊಟ್ರಪ್ಪ ಬಾಳಿಕಾಯಿ ಅವರಿಗೆ ಸೇರಿದ ಆಸ್ತಿಯ ವಿವರ. ಆಸ್ತಿಯ ವಿವರ:** ಎಲ್ಲಾ ಭಾಗ ಮತ್ತು ವಿಭಾಗಗಳನ್ನೊಳಗೊಂಡಿರುವ ವಾಸಯೋಗ್ಯ ಆಸ್ತಿಯ (1) ಸಿ.ಟಿ.ಎಸ್.ನಂ.3095ಡಿ, ಇ-ಸ್ವತ್ತು ನಂ.22-1-504-137, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 6.40 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 3.35 ಮೀಟರ್‌ಗಳು, ಒಟ್ಟು ವಿಸ್ತೀರ್ಣ 27.59 ಚದರ ಮೀಟರ್‌ಗಳು ಅಂದರೆ 33 ಚದರ ಯಾರ್ಡ್ (2) ಸಿ.ಟಿ.ಎಸ್.ನಂ.3095ಜಿ, ಇ-ಸ್ವತ್ತು ನಂ.22-1-504-137ಎ, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ: 5.48 ಮೀಟರ್‌ಗಳು, ಉತ್ತರದಿಂದ ದಕ್ಷಿಣಕ್ಕೆ: 12.49 ಮೀಟರ್‌ಗಳು, ಒಟ್ಟು ವಿಸ್ತೀರ್ಣ 66.89 ಚದರ ಮೀಟರ್‌ಗಳು ಅಂದರೆ 80 ಚದರ ಯಾರ್ಡ್ ಈ ಆಸ್ತಿಯು ಗದಗ-ಬೆಟಗೇರಿ ಟೌನ್, ತಾಲ್ಲೂಕು & ಗದಗ ಜಿಲ್ಲೆಯಲ್ಲಿದೆ. ಷೆಡ್ಯೂಲ್ ಆಸ್ತಿಯ ಚಕ್ಕುಬಂದಿ: (1) ಸಿ.ಟಿ.ಎಸ್.ನಂ.3095ಡಿ, ಇ-ಸ್ವತ್ತು ನಂ.22-1-504-137 : ಪೂರ್ವಕ್ಕೆ: ಈರಣ್ಣ ಲಕ್ಕುಂಡಿರವರ ಆಸ್ತಿ, ಪಶ್ಚಿಮಕ್ಕೆ: ಕೊಟ್ರೇಶ್ ಬಾಳಿಕಾಯಿರವರ ಆಸ್ತಿ, ಉತ್ತರಕ್ಕೆ: ಕೊಟ್ರೇಶ್ ಬಾಳಿಕಾಯಿರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. (2) ಸಿ.ಟಿ.ಎಸ್.ನಂ.3095ಜಿ, ಇ-ಸ್ವತ್ತು ನಂ.22-1-504-137ಎ : ಪೂರ್ವಕ್ಕೆ: ಮಹದೇವಪ್ಪ ಬಾಳಿಕಾಯಿರವರ ಆಸ್ತಿ, ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ: ಕೊಟ್ರೇಶ್ ಬಾಳಿಕಾಯಿರವರ ಆಸ್ತಿ, ದಕ್ಷಿಣಕ್ಕೆ: ರಸ್ತೆ. **ಯಾವುದೇ ಮಾಹಿತಿಗಾಗಿ ಶ್ರೀ ಸಂಜಯ್‌ಪ್ರಸಾದ್, 9916566630 ರವರನ್ನು ಸಂಪರ್ಕಿಸಿ.**	17.07.2025 ಎನ್‌ಪಿಎ ದಿನಾಂಕ: 29.06.2025	SBB OVER DRAFT Loan A/c No. 92203001 7173861 Amount Rs. 40,00,000/- ಒಟ್ಟು ಬಾಕಿ ಮೊತ್ತ ರೂ. 39,60,501/- ದಿನಾಂಕ: 18.07.2025ರಂದು ಇದ್ದಂತೆ

ದಯವಿಟ್ಟು ಗಮನಿಸಿ, ಮೇಲೆ ತಿಳಿಸಿದ ಕಾಯಿದೆಯ ಸೆಕ್ಷನ್-13 ರ ಉಪ-ಸೆಕ್ಷನ್ 13 ರಲ್ಲಿ ಉಲ್ಲೇಖಿಸಿರುವಂತೆ, ಈ ಸೂಚನೆಯಲ್ಲಿ ಉಲ್ಲೇಖಿಸಲಾದ ಭದ್ರತೆಯ ಅಡಿಯಲ್ಲಿ ಹೇಳಲಾದ ಯಾವುದೇ ಸ್ವತ್ತುಗಳನ್ನು ನಮ್ಮ ಬ್ಯಾಂಕಿನ ಪೂರ್ವ ಲಿಖಿತ ಅನುಮತಿಯಿಲ್ಲದೆ ನೀವು ಮಾರಾಟ, ಗುತ್ತಿಗೆ ಅಥವಾ ಇತರ ರೀತಿಯಲ್ಲಿ ವರ್ಗಾಯಿಸಬಾರದು.

ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್ 2002ರ ಸೂಚನೆಯ ಆದೇಶಾನುಸಾರವಾಗಿ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ ಮೇಲೆ ಉಲ್ಲೇಖಿಸಲಾದ ಸಾಲಗಾರರು ಮತ್ತು/ಅಥವಾ ಖಾತರಿದಾರರು (ಎಲ್ಲೆಲ್ಲಿ ಅನ್ವಯವಾಗುತ್ತದೆಯೋ) ಈ ಮೇಲೆ ತಿಳಿಸಿಲಾದ ಬಾಕಿ ಉಳಿದಿರುವ ಮೊತ್ತವನ್ನು ಭವಿಷ್ಯದ ಬಡ್ಡಿ ಮತ್ತು ಅನ್ವಯವಾಗುವ ಶುಲ್ಕಗಳೊಂದಿಗೆ, ಈ ಸೂಚನೆ ಪ್ರಕಟಣೆಗೊಂಡ ದಿನಾಂಕದಿಂದ 60 ದಿನಗಳೊಳಗಾಗಿ ಪಾವತಿಸುವಂತೆ ಸಲಹೆ ನೀಡಲಾಗಿದ್ದು, ವಿಫಲವಾದಲ್ಲಿ ಸೂಚನಾ ತಾರೀಖಿನಿಂದ 60 ದಿನಗಳ ಅವಧಿ ಮುಕ್ತಾಯದ ನಂತರ, 2002ರ ಹಣಕಾಸು ಆಸ್ತಿಗಳ ಖಾತರೀಕರಣ ಮತ್ತು ಪುನನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆಯ ನಿಬಂಧನೆಗನುಸಾರವಾಗಿ, ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು.

ಮೇಲೆ ತಿಳಿಸಲಾದ ಕಾಯ್ದೆಯ ವಿಭಾಗ 13(13), ಉಪ-ವಿಭಾಗ(2)ರ ಅಡಿಯಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಒಬ್ಬ ಸಾಲಗಾರ ಈ ಸೂಚನೆಯು ತಲುಪಿದ ನಂತರ, ಭದ್ರತಾ ಸಾಲ ನೀಡಿದವರ ಲಿಖಿತ ಪೂರ್ವಾನುಮತಿ ಪಡೆಯದೇ, ಸೂಚನೆಯಲ್ಲಿ ಪ್ರಸ್ತಾಪಿಸಲಾಗಿರುವ ಭದತಾ ಆಸ್ತಿಗಳನ್ನು, ಮಾರಾಟದ ಮೂಲಕ ವರ್ಗಾಯಿಸುವುದಾಗಲಿ, ಭೋಗ್ಯಕ್ಕೆ ನೀಡುವುದಾಗಲಿ ಅಥವಾ ಬೇರೆ ರೀತಿಯಲ್ಲಿ ಬಳಸಿಕೊಳ್ಳುವುದಾಗಲಿ ಮಾಡುವಂತಿಲ್ಲ ಎಂಬುದನ್ನು ದಯವಿಟ್ಟು ಗಮನಿಸತಕ್ಕದ್ದು.

ಆಕ್ಟ್‌ನ ಸೆಕ್ಷನ್ 13ರ ಸಬ್ ಸೆಕ್ಷನ್ (8)ರಲ್ಲಿನ ನಿಯಮಗಳ ಅನುಸಾರ ಭದ್ರತಾ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳಲು ಕಾಲಾವಕಾಶವನ್ನು ನೀಡಲಾಗುವುದು ಎಂದು ಈ ಮೂಲಕ ಸಾಲಗಾರರ ಗಮನಕ್ಕೆ ತರಲಾಗುವುದು. ಸಾರ್ವಜನಿಕ ಹರಾಜಿಗಾಗಿ ಅಥವಾ ಭೋಗ್ಯ, ಹಂಚಿಕೆ ಅಥವಾ ಮಾರಾಟದ ಮೂಲಕ ಭದ್ರತಾ ಸ್ವತ್ತುಗಳ ವರ್ಗಾವಣೆಗಾಗಿ ಸಾರ್ವಜನಿಕ ಅಥವಾ ಖಾಸಗಿ ಒಪ್ಪಂದಕ್ಕೆ ಉಲ್ಲೇಖಗಳನ್ನು ಅಥವಾ ಟೆಂಡರ್ ಆಹ್ವಾನಿಸುವ ಸೂಚನಾ ಪ್ರಕಟಣೆಯ ದಿನಾಂಕಕ್ಕಿಂತ ಮೊದಲು ಯಾವುದೇ ಸಮಯದಲ್ಲಿ ಸಾಲಗಾರರು, ಸುರಕ್ಷಿತ ಸಾಲದಾತರ ಖರ್ಚು, ವೆಚ್ಚ ಮತ್ತು ಶುಲ್ಕಗಳನ್ನು ಒಳಗೊಂಡಂತೆ ಎಲ್ಲಾ ಬಾಕಿಯನ್ನು ಪಾವತಿಸಿ, ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಬಹುದು.

ದಿನಾಂಕ : 28.08.2025 — ಸಹಿ/- ಅಧಿಕೃತ ಅಧಿಕಾರಿ

ಸ್ಥಳ : ಬೆಂಗಳೂರು — ಎಕ್ಸಿಸ್ ಬ್ಯಾಂಕ್ ಲಿಮಿಟೆಡ್

ಅಕ್ರಮ ಹಣ ವರ್ಗಾವಣೆ, ಪ್ರಕರಣ | ಜಾಮೀನು ನೀಡುವಂತೆ ಕೋರ್ಟ್‌ಗೆ ಪಪ್ಪಿ ಪರ ವಕೀಲರ ಮನವಿ

ಶಾಸಕ ಪಪ್ಪಿ ಮತ್ತೆ 6 ದಿನ ಇ.ಡಿ ಕಸ್ಟಡಿಗೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಕ್ರಮ ಹಣ ವರ್ಗಾವಣೆ ಹಾಗೂ ಗೇಮಿಂಗ್ ಆ್ಯಪ್‌ಗಳಿಗೆ ಹಣ ಪೂರೈಕೆ ಆರೋಪ ಸಂಬಂಧ ಬಂಧನಕ್ಕೆ ಒಳಗಾಗಿದ್ದ ಕಾಂಗ್ರೆಸ್ ಶಾಸಕ ವಿರೇಂದ್ರ ಪಪ್ಪಿ ಮತ್ತೆ 6 ದಿನ ಇ.ಡಿ (ಜಾರಿ ನಿರ್ದೇಶನಾಲಯ) ಕಸ್ಟಡಿಗೆ ನೀಡಿ ಕೋರ್ಟ್ ಆದೇಶಿಸಿದೆ.

ವಾದ ಪ್ರತಿವಾದ ಆಲಿಸಿದ ಬಳಿಕ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಗುರುವಾರ ಕಸ್ಟಡಿ ವಿಸ್ತರಣೆ ಮಾಡಿ ಆದೇಶ ಹೊರಡಿಸಿದೆ. ಅಲ್ಲದೇ ಅವರಿಗೆ 24 ಗಂಟೆಗಳಿಗೊಮ್ಮೆ ವೈದ್ಯಕೀಯ ತಪಾಸಣೆ ಮಾಡಿಸಬೇಕು ಎಂದು ಕೋರ್ಟ್ ಸೂಚಿಸಿದೆ. ಇದರೊಂದಿಗೆ ಶುದ್ಧವಾದ ಆಹಾರ, ನೀರು, ವೈದ್ಯಕೀಯ ನೆರವು ನೀಡಬೇಕು. ಆರೋಪಿಗೆ ಸ್ವಲ್ಪ ವಿಶ್ರಾಂತಿ ಕೊಟ್ಟು ವಿಚಾರಣೆ ಮಾಡಬೇಕು. 30 ನಿಮಿಷ ವಕೀಲರ ಭೇಟಿಗೆ ಅವಕಾಶ ನೀಡಬೇಕು. ರಾತ್ರಿ 9 ಗಂಟೆಯ ತನಕ ವಿಚಾರಣೆ ನಡೆಸಬೇಕು ಎಂದು ಕೋರ್ಟ್ ಹೇಳಿದೆ.

ವಿರೇಂದ್ರ ಪಪ್ಪಿ ಇಡಿ ಕಸ್ಟಡಿ ಗುರುವಾರಕ್ಕೆ ಅಂತ್ಯಗೊಂಡ ಹಿನ್ನೆಲೆ ಬೆಂಗಳೂರಿನಲ್ಲಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈ ವೇಳೆ ಮತ್ತೆ 15 ದಿನ ಕಸ್ಟಡಿಗೆ ನೀಡುವಂತೆ ಇ.ಡಿ ಅಧಿಕಾರಿಗಳ ಪರ ಎಸ್‌ಪಿಪಿ ಪ್ರಮೋದ್ ಚಂದ್ರ ವಾದ ಮಂಡಿಸಿದರು. ಇದಕ್ಕೆ ಆಕ್ಷೇಪಿಸಿದ ವಿರೇಂದ್ರ ಪಪ್ಪಿ ಪರ ಹಿರಿಯ ವಕೀಲ ಕಿರಣ್ ಜವಳಿ, ಇಡಿ ಅಧಿಕಾರಿಗಳು ಯಾವುದೇ ಸೌಲಭ್ಯ ನೀಡದೇ ಕಿರುಕುಳ ನೀಡಿದ್ದಾರೆ. ಹೀಗಾಗಿ ಜಾಮೀನು ನೀಡುವಂತೆ ಮನವಿ ಮಾಡಿದರು.

ಇ.ಡಿ ಪರ ವಕೀಲ: ಆರೋಪಿ ಕಾನೂನುಬಾಹಿರ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದಾರೆ. ವಿದೇಶಿ ವ್ಯವಹಾರ ದಾಖಲೆಗಳು ಲಭ್ಯವಾಗಿವೆ. ದಾಳಿ ವೇಳೆ ಮಹತ್ವದ ದಾಖಲೆ ಲಭ್ಯವಾಗಿದ್ದು ತನಿಖೆ ಮಾಡಬೇಕಿದೆ. ಬೆಟ್ಟಿಂಗ್ ಆ್ಯಪ್ ಅವ್ಯವಹಾರದಲ್ಲಿ ಸಾಕಷ್ಟು ಜನ ಭಾಗಿಯಾಗಿದ್ದು, ಇ.ಡಿ ಅಧಿಕಾರಿಗಳ ದಾಳಿ ನಡೆಸಿದಾಗ ಕೆಲವರು ಪರಾರಿಯಾಗಿದ್ದಾರೆ. ಸಾಕಷ್ಟು ಅವ್ಯವಹಾರ ನಡೆದಿದ್ದು, ವಶದಲ್ಲಿಟ್ಟು ಕೊಂಡು ತನಿಖೆ ಅಗತ್ಯವಿದೆ. ಹಣದ ಮೂಲದ ಬಗ್ಗೆಯೂ ತನಿಖೆ ಮಾಡಬೇಕಿದೆ. ಹೀಗಾಗಿ 15 ದಿನ ಇ.ಡಿ ವಶಕ್ಕೆ ನೀಡುವಂತೆ ಎಸ್ ಪಿಪಿ ಪ್ರಮೋದ್ ಚಂದ್ರ ವಾದ ಮನವಿ ಮಾಡಿದರು.

ವೀರೇಂದ್ರ ಪಪ್ಪಿ ಪರ ವಕೀಲ: ಸಿಕ್ಕಿಂನಲ್ಲಿ ವೀರೇಂದ್ರ ಪಪ್ಪಿ ಬಂಧಿಸಿ ಗ್ರೌಂಡ್ಸ್ ಆಫ್ ಅರೆಸ್ಟ್ ನೀಡಿದ್ದಾರೆ. ಗ್ಯಾಂಗ್ಟಾಕ್‌ನ ರಮಡಾ ಹೋಟೆಲ್‌ನಲ್ಲಿ ವೀರೇಂದ್ರ ಪಪ್ಪಿ ಬಂಧಿಸಲಾಗಿದೆ. ಆದರೆ ಯಾವ ಪ್ರಕರಣ ಆಧರಿಸಿ ಇಡಿ ತನಿಖೆಗೆ ಆರಂಭಿಸಿದೆ ಎಂದು ತಿಳಿಸಿಲ್ಲ. ಸುಪ್ರೀಂಕೋರ್ಟ್‌ನ ಮಾರ್ಗಸೂಚಿ ಇ.ಡಿ ಅನುಸರಿಸಿಲ್ಲ.2016ರಲ್ಲಿ ಚಳ್ಳಕೆರೆ ಠಾಣೆಯಲ್ಲಿ ಸೆ.420ರ ಅಡಿಯಲ್ಲಿ ಸಿಬಿಐನಲ್ಲಿ ದಾಖಲಾಗಿದ್ದ ಪ್ರಕರಣ ಉಲ್ಲೇಖಿಸಲಾ ಗಿದೆ ಎಂದು ಇಡಿ ಪರ ವಕೀಲ ಕಿರಣ್ ಜವಳಿ ವಾದ ಮಂಡಿಸಿದರು.

ಇ.ಡಿ ಅಧಿಕಾರಿಗಳಿಗೆ ಜಡ್ಜ್ ತರಾಟೆ

ಬಂಧಿಸುವಾಗ ಆರೋಪಿ ವಿರುದ್ಧ ಯಾವ ಪ್ರಕರಣಗಳನ್ನು ಉಲ್ಲೇಖಿಸಿದ್ದೀರಿ? 2011ರ ಪ್ರಕರಣ ರದ್ದಾಗಿದೆ. 2016ರ ಸಿಬಿಐ ಪ್ರಕರಣ ಸಹ ಇತ್ಯರ್ಥವಾಗಿದೆ. ಆರೋಪಿ ಬಂಧನ ನಂತರ ಯಾವುದೋ ಪ್ರಕರಣಗಳನ್ನು ಉಲ್ಲೇಖಿಸುತ್ತಿದ್ದೀರಿ. ಯಾವ ಪ್ರಕರಣ ಆಧರಿಸಿ ಇಸಿಐಆರ್ ದಾಖಲಿಸಿದ್ದೀರಿ?. ಕೋರ್ಟ್ ಅನ್ನು ಏಕೆ ಮಿಸ್ ಲೀಡ್ ಮಾಡುತ್ತಿದ್ದೀರಿ ಎಂದು ಇ.ಡಿ ಅಧಿಕಾರಿಗಳಿಗೆ ಜನಪ್ರತಿನಿಧಿಗಳ ಕೋರ್ಟ್‌ನ ಜಡ್ಜ್ ಗಜಾನನ ಭಟ್ ತರಾಟೆಗೆ ತೆಗೆದುಕೊಂಡರು. ಬಳಿಕ ಇ.ಡಿ ಪರ ವಕೀಲ ಪ್ರಕರಣದ ಬಗ್ಗೆ ಮಾಹಿತಿ ನೀಡಿದರು. ಅಂತಿಮವಾಗಿ ವಾದ ಪ್ರತಿವಾದ ಆಲಿದ ನ್ಯಾಯಾಧಿಶ ಗಜಾನನ ಭಟ್,ಮೂಲ ಸೌಕರ್ಯ ಒದಗಿಸಬೇಕೆಂದು ಕೆಲ ಸೂಚನೆಗಳೊಂದಿಗೆ ಆರೋಪಿ ವಿರೇಂದ್ರ ಪಪ್ಪಿ ಅವರನ್ನು 15 ದಿನ ಬದಲಾಗಿ 6 ದಿನ ಮಾತ್ರ ಇ.ಡಿ ಕಸ್ಟಡಿಗೆ ನೀಡಿ ಆದೇಶ ಹೊರಡಿಸಿದರು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಬಿ.ಎಂ.ಆರ್.ಡಿ.ಎ ಕಛೇರಿ ಸಮುಚ್ಚಯ ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052

ದೂರವಾಣಿ ಸಂಖ್ಯೆ: 080-22263479, ಇ-ಮೇಲ್: gbbscpa@gmail.com

ಸಂಖ್ಯೆ: GBDA//ಭೂ.ಪ-ಆನ್‌ಲೈನ್/103/2025-26 ದಿನಾಂಕ: 18.08.2025

ಸಾರ್ವಜನಿಕ ಪ್ರಕಟಣೆ

ಅರ್ಜಿದಾರರಾದ ಶ್ರೀ ಶಿವ ಕುಮಾರ್ ಕೆ. ರವರು ಬೆಂಗಳೂರು ದಕ್ಷಿಣ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಹಾರೋಹಳ್ಳಿ ಹೋಬಳಿ, ವಡೇರಹಳ್ಳಿ ಗ್ರಾಮದ ಸರ್ವೆ ನಂ.6/10 ರಲ್ಲಿ 0-8ಎಕರೆ ವಿಸ್ತೀರ್ಣದ ಜಮೀನನ್ನು ಶೈಕ್ಷಣಿಕ ಹಾಗೂ ಆರೋಗ್ಯ ಸಂಸ್ಥೆ (Educational and Health) ಉದ್ದೇಶಕ್ಕೆ ಭೂಪರಿವರ್ತನೆ ಕೋರಿರುತ್ತಾರೆ. ಈ ಪ್ರಸ್ತಾವನೆಯ ಕುರಿತು ಸಾರ್ವಜನಿಕರಿಂದ ಸಲಹೆ/ಆಕ್ಷೇಪಣೆಗಳೇನಾದರೂ ಇದ್ದಲ್ಲಿ, ಈ ಪತ್ರಿಕಾ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಆಯುಕ್ತರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬಿಎಂಆರ್‌ಡಿಎ ಕಛೇರಿ ಸಮುಚ್ಛಯ, ನಂ.01, ಆಲಿ ಆಸ್ಕರ್ ರಸ್ತೆ, ಬೆಂಗಳೂರು-560 052, ಬೆಂಗಳೂರು ಜಿಲ್ಲೆ ಇವರಿಗೆ ಲಿಖಿತ ರೂಪದಲ್ಲಿ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ.

ಸಹಿ/-

ನಗರ ಯೋಜನ ಸದಸ್ಯರು, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/2515/ಆಕಾರ್/2025-26

ನಗರಸಭೆ ಕಾರ್ಯಾಲಯ,ರಾಣೇಬೆನ್ನೂರು

ನಂ:ನಸರಾ/ಕಾವಿ/ಅಮೃತ 2.0/ವಹಿ-13/2025-26 ದಿನಾಂಕ: 26-08-2025

ಟೆಂಡರ್ ಪ್ರಕಟಣೆ

(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 1900-2000) ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಸ್ಟ್ಯಾಂಡರ್ಡ್, ಟೆಂಡರ್ ಡಾಕ್ಯೂಮೆಂಟ್ ನಿಯಮದನ್ವಯ **ಕೇಂದ್ರ ಪುರಸ್ಕೃತ ಅಮೃತ-2.0 ಯೋಜನೆಯಡಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳ ಅನುದಾನ:** ರೂ. 99.63 ಲಕ್ಷಗಳಲ್ಲಿ 01 ಕಾಮಗಾರಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ಸಹಿ ಮಾಡಿರುವವರು ಆಹ್ವಾನಿಸಿರುತಾರೆ. ಅರ್ಹ ಗುತ್ತಿಗೆದಾರರು / ಏಜನ್ಸಿದಾರರು / ಸರಬರಾಜುದಾರರು ಇ-ಪ್ರಕ್ಯೂರ್‌ಮೆಂಟ್, ವೆಬ್ ಸೈಟ್ www.kppp Karnataka gov.in ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ಪ್ರಕಟಣೆಯ ವಿವರಗಳನ್ನು ನಗರಸಭೆಯ ಕಛೇರಿಯ ವೆಬ್ ಸೈಟ್ http// www.ranebennurcity.mrc.gov.in ರಲ್ಲಿ ನಡೆಯಬಹುದಾಗಿದೆ. ಹೆಚ್ಚಿನ ವಿವರಗಳಿಗೆ ನಗರಸಭೆಯ ಕಛೇರಿ ವೇಳೆಯಲ್ಲಿ, ಹಾಗೂ ಇ-ಪ್ರಕ್ಯೂರ್‌ಮೆಂಟ್ ಸಹಾಯಕ, ದೂರವಾಣಿ ಸಂಖ್ಯೆ.: +91 8046010000, +91 8068945777 ರಿಂದ ಮಾಹಿತಿ ಪಡೆಯಬಹುದು.

ಸೂಚನೆ:ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಇ-ಪಕ್ಯೂರ್‌ಮೆಂಟ್ ಪೋರ್ಟಲ್ ನಲ್ಲಿ ಗಮನಿಸುವುದು ಹಾಗೂ ಯಾವುದೇಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿನಾಂಕ & ವೇಳೆ	:	09-09-2025 ಸಮಯ :16:30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	:	09-09-2025 ಸಮಯ :17:30
ಟೆಂಡರ್ ತಾಂತ್ರಿಕ ಬಿಡ್ ಕರೆಯುವ ದಿನಾಂಕ & ವೇಳೆ	:	11-09-2025 ಸಮಯ :11:30
ಟೆಂಡರ್ ತಾಂತ್ರಿಕ ಬಿಡ್ ತರೆಯುವ ದಿನಾಂಕ & ವೇಳೆ	:	15-09-2025 ಸಮಯ :11:30

ಅಥವಾ ಸಕ್ಷಮ ಪ್ರಾಧಿಕಾರದ ಅನುಮೋದನೆಯಾದ ನಂತರ

ಸಹಿ/- ಅಧ್ಯಕ್ಷರು ನಗರಸಭೆ ರಾಣೇಬೆನ್ನೂರು — ಸಹಿ/- ಪೌರಾಯುಕ್ತರು ನಗರಸಭೆ ರಾಣೇಬೆನ್ನೂರು

ನಗರಸಭಾ ಕಾರ್ಯಾಲಯ ಮಾದನಾಯಕನಹಳ್ಳಿ

ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-562123

ದೂರವಾಣಿ ಸಂಖ್ಯೆ: 080-23718487

ಇ-ಮೇಲ್: itstaff_ulb_mnhalli@yahoo.com

ಸಂಖ್ಯೆ: ಮಾ.ನ.ಕಾ/ತಾ.ಶಾ/ಸಿ.ಆರ್/26/2025-26 ದಿನಾಂಕ: 26-08-2025

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮಾದನಾಯಕನಹಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಅಮೃತ್-2.0 ಯೋಜನೆಯ ಅನುದಾನದಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿ ನಿರ್ವಹಿಸಲು ಮೊಹರಾದ ಟೆಂಡರ್‌ಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (ಕೆ.ಪಿ.ಪಿ) ಮೂಲಕ ಆಹ್ವಾನಿಸಲಾಗಿದೆ. ಇಂಡೆಂಟ್ ಸಂಖ್ಯೆ: **INDENT48043.** (1) ಮಾಹಿತಿಯನ್ನು ಪಡೆಯಲು ಕೊನೆಯ ದಿನಾಂಕ: **04.09.2025 ಸಂಜೆ 5.30 ಗಂಟೆಯವರೆಗೆ.** (2) ಕಾಮಗಾರಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **06.09.2025 ಸಂಜೆ 5.30ರ ವರೆಗೆ.** (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **08.09.2025 ಬೆಳಿಗ್ಗೆ 11.00 ಗಂಟೆಗೆ.**

ಸೂಚನೆ: ಹೆಚ್ಚಿನ ಮಾಹಿತಿಗಾಗಿ ಕೆ.ಪಿ.ಪಿ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ ಹಾಗೂ ಟೆಂಡರ್‌ನಲ್ಲಿ ಯಾವುದಾದರು ತಿದ್ದುಪಡಿಗಳಿದ್ದಲ್ಲಿ ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಪೌರಾಯುಕ್ತರು, ನಗರಸಭೆ, ಮಾದನಾಯಕನಹಳ್ಳಿ

ವಾಸಾಸಂಇ/ವಾಪ್ರಾ/2511/ಸ್ಪ್ಯಾನ್/2025-26

ನಗರಸಭಾ ಕಾರ್ಯಾಲಯ, ಹೂಟಗಳ್ಳಿ

ಎಸ್.ಆರ್.ಎಸ್. ಸ್ಟೇಷನ್ ಎದುರು, ಹೈಟೆನ್ಷನ್ ಜೋಡಿ ರಸ್ತೆ, ಹೂಟಗಳ್ಳಿ, ಮೈಸೂರು ಜಿಲ್ಲೆ-570018.

ಸಹಾಯವಾಣಿ ಸಂಖ್ಯೆ : 0821-2001737, E-Mail: ka.hootagalli.cmc@gmail.com

Website : http://www.hootagallicity.mrc.gov.in

ಸಂಖ್ಯೆ: ನಸಹೂ/ತಾ.ಶಾ./ಸ.ಅ./ಸಿ.ಆರ್-06/2025-26 ದಿನಾಂಕ: 26.08.2025

ಟೆಂಡರ್ ಪ್ರಕಟಣೆ

ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಎಸ್.ಬಿ.ಎಂ.2ರ ಯೋಜನೆಯಡಿ ಮತ್ತು ನಗರಸಭೆಯ ಸಾಮಾನ್ಯ ನಿಧಿಯಡಿ ನಗರಸಭೆಯ ಕಾಮಗಾರಿಗಳನ್ನು ಕೈಗೊಳ್ಳಲು ಕೆ.ಟಿ.ಪಿ.ಪಿ. ಕಾಯ್ದೆ 2000ರ ಪ್ರಕಾರ ಕೆ.ಡಬ್ಲ್ಯೂ-02 ಮತ್ತು ಕೆ.ಡಬ್ಲ್ಯೂ-03ರ ನಿಯಮದಂತೆ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಸಿವಿಲ್ ಗುತ್ತಿಗೆದಾರರು **kppp.karnataka.gov.in** ಪೋರ್ಟಲ್ ಮೂಲಕ ಸದರಿ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಯ ಇಂಡೆಂಟ್ ನಂ. **(1) DMA/2025-26/OW/WORK_INDENT47793, ಅಂದಾಜು ಮೊತ್ತ ರೂ.73.00 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ.1,24,000/- (2) DMA/2025-26/OW/WORK_INDENT48202 ಅಂದಾಜು ಮೊತ್ತ ರೂ.50.00 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ.84,700/-** ಗುತ್ತಿಗೆದಾರರು ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 10.09.2025 ಸಂಜೆ 5.30 ಗಂಟೆಗೆ,** ಟೆಂಡರನ್ನು ತೆರೆಯುವ **ದಿನಾಂಕ: 12.09.2025, ಬೆಳಿಗ್ಗೆ 11.00 ಗಂಟೆಗೆ.** ಕ್ರ.ಸಂ.1ರ ಕಾಮಗಾರಿಯ ಆರ್ಥಿಕ ಬಿಡ್ಡನ್ನು ತೆರೆಯುವ **ದಿನಾಂಕ :18.09.2025, ಬೆಳಿಗ್ಗೆ 11.00 ಗಂಟೆಗೆ** ಹೆಚ್ಚಿನ ಮಾಹಿತಿಗಾಗಿ ಕಛೇರಿಯ ತಾಂತ್ರಿಕ ಶಾಖೆಯ ಅಭಿಯಂತರರನ್ನು ಸಂಪರ್ಕಿಸಬಹುದಾಗಿದೆ. ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.

ಸಹಿ/- ಪೌರಾಯುಕ್ತರು ನಗರಸಭೆ, ಹೂಟಗಳ್ಳಿ

ವಾಸಾಸಂಇ/ಮೈಸೂರು/ಶಿರಡಿಸಾಯಿ/863/2025-26

ವಿಜೇತ ವಿದ್ಯಾರ್ಥಿನಿಗೆ ಐಶ್ವರ್ಯಾ ಡಿಕೆಎಸ್ ಹೆಗಡೆ ಶೈಕ್ಷಣಿಕ ಸ್ಕಾಲರ್‌ಶಿಪ್ ವಿತರಣೆ

ಅಂಬರ್ ವ್ಯಾಲಿ ಶಾಲೆ ವಿಶ್ವ ಮಟ್ಟದ ರಸಪ್ರಶ್ನೆ

ಚಿಕ್ಕಮಗಳೂರು: ದಿವಂಗತ ವಿ.ಜಿ ಸಿದ್ದಾರ್ಥ ಅವರ ಸ್ಮರಣಾರ್ಥ ಅಂಬರ್ ವ್ಯಾಲಿ ಶಾಲೆ ಆಯೋಜಿಸಿದ್ದ ವಿಶ್ವ ಮಟ್ಟದ ರಸಪ್ರಶ್ನೆ ಸ್ಪರ್ಧೆಯಲ್ಲಿ ಬೆಂಗಳೂರಿನ ಶಿಶುಗೃಹ ಶಾಲೆಯ ವಿದ್ಯಾರ್ಥಿನಿ ಹಂಸಿಣಿ ಭಾಸ್ಕರ್ ಅವರಿಗೆ 1 ಲಕ್ಷ ರು. ಶೈಕ್ಷಣಿಕ ಸ್ಕಾಲರ್ ಶಿಪ್ ಹಾಗೂ ಮೂವರು ರನ್ನರ್ ಅಪ್ ಗಳಿಗೆ ಐಪ್ಯಾಡ್ ಗಳನ್ನು ನೀಡಲಾಯಿತು.

ಈ ಸ್ಪರ್ಧೆಯಲ್ಲಿ ವಿಶ್ವದ ಅನೇಕ ರಾಷ್ಟ್ರಗಳು ಹಾಗೂ ದೇಶದ ಇತರೆ ರಾಜ್ಯಗಳ ಹಲವು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅಂತಿಮ ಸುತ್ತಿನ ಸ್ಪರ್ಧೆಯನ್ನು ಆ.23ರಂದು ಸಿದ್ಧಾರ್ಥ ಅವರ ಜನ್ಮದಿನದಂದು ನಡೆಸಲಾಯಿತು. ಮುಖ್ಯ ಅತಿಥಿಯಾಗಿ ಪ್ರದ್ಮಶ್ರೀ ಪ್ರಶಸ್ತಿ

ವಿಜೇತೆ ಅಂಜು ಬಾಬಿ ಜಾರ್ಜ್ ಆಗಮಿಸಿದ್ದರು.

ಅಂತಿಮ ಸುತ್ತಿನಲ್ಲಿ ಮಸ್ಕತ್‌ನಿಂದ ಇಬ್ಬರು ವಿದ್ಯಾರ್ಥಿ ಸೇರಿ ಒಟ್ಟು 10 ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಅಂಬರ್ ವ್ಯಾಲಿ ಶಿಕ್ಷಣ ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿ ಐಶ್ವರ್ಯಾ ಡಿಕೆಎಸ್ ಹೆಗಡೆ, ಅಂಜು ಬಾಬಿ ಜಾರ್ಜ್ ಹಾಗೂ ಕ್ವಿಕ್ ಬ್ರೈನ್ ಖ್ಯಾತಿಯ ಗಿರಿ ಬಾಲಸುಬ್ರಮಣ್ಯಂ ಅವರು ವಿಜೇತರಿಗೆ ಪ್ರಶಸ್ತಿ ವಿತರಣೆ ಮಾಡಿದರು. ಈ ವೇಳೆ ಅಂಜು ಬಾಬಿ ಜಾರ್ಜ್ ಅವರು ಮಾತನಾಡಿ, ನಿಮ್ಮ ಕನಸುಗಳು ನನಸಾಗುವ ತನಕ ನೀವು ಕನಸು ಕಾಣುತ್ತಲೇ ಇರಬೇಕು. ಯು ತಮ್ಮ ಕನಸುಗಳನ್ನು ನಂಬುತ್ತಾರೋ ಅವರಿಗೆ ಯಶಸ್ಸು ಸಿಗುತ್ತದೆ ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ವಿದ್ಯಾರ್ಥಿಗಳು ಸಾಧನೆಯ ಹಾದಿಯಲ್ಲಿ ತಮ್ಮ ಯಶಸ್ಸಿನ ಹೆಜ್ಜೆ ಗುರುತುಗಳನ್ನು ಮೂಡಿಸುತ್ತಾ ತಮ್ಮ ಶಾಲೆ, ಪೋಷಕರು ಹೆಮ್ಮೆಪಡುವಂತೆ ಮಾಡಬೇಕು. ಈ ಸ್ಪರ್ಧೆಯಲ್ಲಿ ಭಾಗವಹಿಸಿರುವ ಎಲ್ಲಾ ವಿದ್ಯಾರ್ಥಿಗಳು ಸಮಾಜಕ್ಕೆ ಉತ್ತಮ ಕೊಡುಗೆಯಾಗಿದ್ದು, ಇವರಿಂದ ಉತ್ತಮ ಸಮಾಜ ನಿರ್ಮಾಣವಾಗಲಿದೆ.

-ಐಶ್ವರ್ಯಾ ಡಿಕೆಎಸ್ ಹೆಗಡೆ

ದಿವಂಗತ ವಿ.ಜಿ ಸಿದ್ಧಾರ್ಥ ಅವರ ಸ್ಮರಣಾರ್ಥ ಚಿಕ್ಕಮಗಳೂರಿನ ಅಂಬರ್ ವ್ಯಾಲಿ ಶಾಲೆ ಆಯೋಜಿಸಿದ್ದ ವಿಶ್ವ ಮಟ್ಟದ ರಸಪ್ರಶ್ನೆ ಸ್ಪರ್ಧೆ ವಿಜೇತೆ ಹಂಸಿಣಿ ಭಾಸ್ಕರ್‌ಗೆ ಐಶ್ವರ್ಯಾ ಡಿಕೆಎಸ್ ಹೆಗಡೆ ಅವರು ಬಹುಮಾನ ನೀಡಿದರು.

ಲೋಕಾ ಬಲೆಗೆ ಗಣಿ ಮತ್ತು ಭೂ ವಿಜ್ಞಾನ ಅಧಿಕಾರಿ

ಬೆಳಗಾವಿ: ಜಪ್ತಿಯಾಗಿದ್ದ ಮರಳನ್ನು ಸಾಗಾಟ ಮಾಡಲು ಲಂಚಕ್ಕೆ ಬೇಡಿಕೆ ಇಟ್ಟಿದ್ದ ಬೆಳಗಾವಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿ ಫಯಾಜ್ ಅಹ್ಮದ್ ಶೇಖ್ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ. ಅಥಣಿ ತಾಲೂಕಿನ ಐಗಳಿ ಗ್ರಾಮದಲ್ಲಿ ಜಪ್ತಿ ಮಾಡಲಾಗಿದ್ದ ಮರಳು ಬಳಕೆಗೆ ಗುತ್ತಿಗೆದಾರನಿಗೆ ಟಾಸ್ಕ್‌ಫೋರ್ಸ್ ಸಮಿತಿಯ ಸದಸ್ಯರ ಬೆಲೆ ನಿಗದಿ ಮಾಡಿ ವಿಲೇವಾರಿ ಆದೇಶ ನೀಡಲು ಅಧಿಕಾರಿ ಫಯಾಜ್ ಅಹ್ಮದ್ ಶೇಖ್ 15 ಸಾವಿರ ರೂ. ಲಂಚಕ್ಕೆ ಬೇಡಿಕೆ ಇಟ್ಟಿದ್ದರು. ಅಥಣಿ ತಾಲೂಕಿನ ಶೀತಲ ಸನದಿ ಎಂಬುವವರು ಲೋಕಾಯುಕ್ತ ಕಚೇರಿಗೆ ನೀಡಿದ್ದ ದೂರಿನ ಹಿನ್ನಲೆಯಲ್ಲಿ ಅಧಿಕಾರಿಗಳು ದಾಳಿ ನಡೆಸಿದ್ದು ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಕಾಗವಾಡ ತಾಲೂಕಿನ ಐನಾಪುರ ಗ್ರಾಮದಲ್ಲಿ ಸಿಸಿ ರಸ್ತೆ ನಿರ್ಮಾಣ ಮಾಡಲು ಗುತ್ತಿಗೆದಾರ ಬಿ. ಕೆ ಮಗದುಮ್ಮ ಎಂಬುವವರಿಗೆ ಲಂಚಕ್ಕೆ ಬೇಡಿಕೆ ಇಡಲಾಗಿತ್ತು.

ಭಾರಿ ಅಪಘಾತ; ಆರು ಸಾವು

← ಮೊದಲಪುಟದಿಂದ

ಏನಿದು ಘಟನೆ ?: ಮಂಗಳೂರಿನಿಂದ ಕಾಸರಗೋಡಿಗೆ ವೇಗವಾಗಿ ಬರುತ್ತಿದ್ದ ಬಸ್ ನಿಯಂತ್ರಣ ತಪ್ಪಿ ಹಿಂದಕ್ಕೆ ಸರಿದು ಆಟೋರಿಕ್ಷಾಗೆ ಡಿಕ್ಕಿ ಹೊಡೆದಿದೆ. ಬಸ್‌ಗಾಗಿ ಕಾಯುತ್ತಿದ್ದ ಪ್ರಯಾಣಿಕರು ಮತ್ತು ಆಟೋರಿಕ್ಷಾ ಮೇಲೆ ಬಸ್ ಹರಿದಿದೆ. ಈ ಹಿನ್ನೆಲೆ ಆಟೋ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅಪಘಾತದ ಈ ವಿಡಿಯೊ ಭಾರಿ ವೈರಲ್ ಆಗಿದೆ. ಅಪಘಾತದ ಬಗ್ಗೆ ಮಾಹಿತಿ ಪಡೆದ ನಂತರ ಸ್ಥಳಕ್ಕೆ ಆಗಮಿಸಿದ ಮಂಜೇಶ್ವರ ಠಾಣಾ ಪೊಲೀಸರು ರಕ್ಷಣಾ ಕಾರ್ಯಾಚರಣೆ ನಡೆಸಿದ್ದಾರೆ. ಪೊಲೀಸರು ಮತ್ತು ಸ್ಥಳೀಯರ ಸಹಾಯದಿಂದ ಮೃತದೇಹಗಳನ್ನು ಮಂಜೇಶ್ವರ ತಾಲೂಕು ಆಸ್ಪತ್ರೆಯ ಶವಾಗಾರಕ್ಕೆ ಮತ್ತು ಮಂಗಳೂರು ಮತ್ತು ದೇರ್ಲಕಟ್ಟೆಯ ಆಸ್ಪತ್ರೆಯ ಶವಾಗಾರಗಳಿಗೆ ಸ್ಥಳಾಂತರಿಸಲಾಗಿದೆ.

ದೇಶಾದ್ಯಂತ ಮುಂದುವರಿದ ಭಾರಿ ಮಳೆ

← ಮೊದಲಪುಟದಿಂದ

ಪರಿಣಾಮ, ಶ್ರೀ ಮಾತಾ ವೈಷ್ಣೋದೇವಿ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದ್ದು, ಅದಾಗಲೇ ಯಾತ್ರೆಯಲ್ಲಿ ಭಾಗಿಯಾಗಿರುವ ನೂರಾರು ಭಕ್ತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈವರೆಗೆ ಒಟ್ಟು 43 ಮಂದಿ ಸಾವಿಗೀಡಾಗಿದ್ದಾರೆ. ಇನ್ನೊಂದೆಡೆ, ಛತ್ತೀಸ್‌ಗಢ, ಒಡಿಶಾ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿಯೂ ವರುಣನ ಆರ್ಭಟ ಜೋರಾಗಿದೆ. ಛತ್ತೀಸ್‌ಗಢದ ಬಸ್ತಾರ್ ಜಿಲ್ಲೆಯಲ್ಲಿಯೂ ನದಿಗಳು ಉಕ್ಕಿ ಹರಿಯುತ್ತಿದ್ದು, 9 ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಬಿಯಾಸ್ ನದಿಯ ಪ್ರವಾಹದ ಆತಂಕ ತರಿಸಿದೆ.

ಹಿಮಾಚಲ ಪ್ರದೇಶದಲ್ಲಿ ಹಲವೆಡೆ ಭೂಕುಸಿತವಾಗಿದ್ದು, ಒಂದೆಡೆ ರಾಷ್ಟ್ರೀಯ ಹೆದ್ದಾರಿಯ ಒಂದು ಭಾಗವೇ ಕುಸಿದುಹೋಗಿದೆ. ಪರಿಣಾಮ, ಮನಾಲಿ-ಚಂಡೀಗಢ ಮಾರ್ಗದಲ್ಲಿನ ವಾಹನ ಸಂಚಾರ ಪೂರ್ಣ ಸ್ಥಗಿತವಾಗಿದೆ. ಉತ್ತರಾಖಂಡ್‌ನಲ್ಲಿ ಜೀವಗಂಗೆ, ಯಮುನಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ. ಆಂಧ್ರಪ್ರದೇಶದಲ್ಲಿಯೂ ಕೆಲ ದಿನಗಳಿಂದ ಧಾರಾಕಾರ ಮಳೆಯಾಗಿದ್ದು, ರಾಜ್ಯದ ಪ್ರಮುಖ ನದಿಗಳಾದ ಕೃಷ್ಣೆ ಮತ್ತು ಗೋಧಾವರಿ ಅಪಾಯಮಟ್ಟ ಮೀರಿ ಹರಿಯುತ್ತಿವೆ.

ಚಾರ್ಮಾಡಿ ಘಾಟ್; ಸಂಚಾರ ನಿಯಮದಲ್ಲಿ ಬದಲಾವಣೆ

← ಮೊದಲಪುಟದಿಂದ

ಆದ್ದರಿಂದ ಈ ಅಪರಾಧ ಕೃತ್ಯಗಳಿಗೆ ಬ್ರೇಕ್ ಹಾಕಲು ಮುಂದಾಗಿರುವ ಪೊಲೀಸ್ ಇಲಾಖೆ, ಕೊಟ್ಟಿಗೆಹಾರ ಚೆಕ್ ಪೋಸ್ಟ್‌ನಲ್ಲಿ ಪ್ರತಿ ವಾಹನಗಳ ತಪಾಸಣೆ ಮಾಡುವುದರೊಂದಿಗೆ ಘಾಟ್‌ನಲ್ಲಿ ರಾತ್ರಿ ವೇಳೆ ಐದು ವಾಹನಗಳನ್ನು ಒಟ್ಟಿಗೆ ಕಳುಹಿಸಲಾಗುತ್ತಿದೆ. ಚಾರ್ಮಾಡಿ ಘಾಟ್‌ಗೆ ತೆರಳಲು ರಾತ್ರಿ 12 ಗಂಟೆಯಿಂದ ಬೆಳಗ್ಗೆ 6 ಗಂಟೆಯವರೆಗು ಬರುವ ವಾಹನಗಳನ್ನು ಕೊಟ್ಟಿಗೆಹಾರ ಚೆಕ್‌ಪೋಸ್ಟ್ ಬಳಿ ನಿಲ್ಲಿಸಿ 5 ವಾಹನ ಜತೆ ಮಾಡಿ ಬಿಡಲಾಗುತ್ತಿದೆ. ಈ ನಿಯಮ ಅಪರಾಧ ತಡೆಯುವ ನಿಟ್ಟಿನಲ್ಲಿ ಜಾರಿ ಮಾಡಲಾಗಿದೆ. 24 ಗಂಟೆಯೂ ಕೊಟ್ಟಿಗೆಹಾರ ಚೆಕ್‌ಪೋಸ್ಟ್‌ನಲ್ಲಿ ಓರ್ವ ಸಬ್ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 24 ಗಂಟೆಯೂ ಚಾರ್ಮಾಡಿ ಘಾಟ್‌ನಲ್ಲಿ ಪೊಲೀಸ್ ವಾಹನ ಗಸ್ತು ತಿರುಗುವಂತೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತ-ಚೀನಾ ಹತ್ತಿರ ತಂದ ಜಿನ್‌ಪಿಂಗ್ ಪತ್ರ!

← ಮೊದಲಪುಟದಿಂದ

ಪ್ರಸ್ತುತ ವಿಶ್ವದ ಸಿರಿವಂತ ದೇಶಗಳ ಪಟ್ಟಿಯಲ್ಲಿ 2ನೇ ಸ್ಥಾನದಲ್ಲಿರುವ ಚೀನಾ, 4ನೇ ಸ್ಥಾನದಲ್ಲಿರುವ ಭಾರತ ಹಳೆಯ ಭಿನ್ನಾಭಿಪ್ರಾಯಗಳನ್ನು ಬದಿಗಿರಿಸಿ ಅಮೆರಿಕದ ವಿರುದ್ಧದ ನಿಲುವಿನ ನೆಪದಲ್ಲಿ ಪರಸ್ಪರ ಕೈಜೋಡಿಸಲು ಸಜ್ಜಾಗುತ್ತಿವೆ. ಇದರಿಂದಾಗಿ ಅಮೆರಿಕದ ಶೇ.50 ಪ್ರತಿಸುಂಕ ಸಂಕಷ್ಟವನ್ನು ಎದುರಿಸಲು ಭಾರತಕ್ಕೆ ಚೀನಾ ಮೂಲಕ ಸಹಕಾರ ಸಿಗುವ ಸಾಧ್ಯತೆ ಇದೆ. ಈ ದಿಸೆಯಲ್ಲಿ ಬೀಜಿಂಗ್ ಮತ್ತು ದೆಹಲಿ ಹಳೆಯ ಜಗಳವನ್ನು ಮರೆತು ಸದ್ಯದಲ್ಲೇ ಹಸ್ತಲಾಘವ ಮಾಡಲಿವೆ. ಈ ದಿಸೆಯಲ್ಲಿ ವಿಶೇಷ ರಾಜತಾಂತ್ರಿಕ ಮಟ್ಟದ ಮಾತುಕತೆ ಅದಾಗಲೇ ಶುರುವಾಗಿದೆ ಎಂದು ಬ್ಲೂಮ್‌ಬರ್ಗ್ ವಿವರಿಸಿದೆ.

ಮುರ್ಮು ಅವರಿಗೆ ಜಿನ್‌ಪಿಂಗ್ ಅವರು ಬರೆದಿರುವ 'ರಹಸ್ಯ' ಪತ್ರದಲ್ಲಿ ಎರಡೂ ದೇಶಗಳು ಕೈಜೋಡಿಸಿದರೆ ಅದು ಹೇಗೆಲ್ಲಾ ಪರಿಣಾಮಕಾರಿಯಾಗಿರುತ್ತದೆ.

ಮುಖ್ಯವಾಗಿ ಮಾರುಕಟ್ಟೆ ವಿಚಾರದಲ್ಲಿ ಎಷ್ಟು ಪ್ರಯೋಜನಕಾರಿಯಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಅದರಲ್ಲೂ ಈಗಿನ ಅಮೆರಿಕ ಪ್ರತಿಸುಂಕ ಸಂಕಷ್ಟದ ಸಮಯದಲ್ಲಿ ನೆರೆಹೊರೆಯ ದೇಶಗಳು ಪರಸ್ಪರ ಸಹಕಾರದಿಂದ ಇರುವುದು ಎಷ್ಟು ಮುಖ್ಯ ಎಂಬುದನ್ನೂ ಮಾರ್ಚ್‌ನಲ್ಲಿ ಬರೆದ ಪತ್ರದಲ್ಲಿ ವಿವರಿಸಿದ್ದಾರೆ ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಧರ್ಮಸ್ಥಳ ಪ್ರಕರಣ ರಾಜಕೀಯ ಬೇಡ

ವಿಜಯಪುರ: ಧರ್ಮಸ್ಥಳ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡ. ವರದಿ ಬರುವವರೆಗೆ ಕಾಯೋಣ ಎಂದು ಶಾಸಕ ಶಿವಾನಂದ ಪಾಟೀಲ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಧರ್ಮಸ್ಥಳ ವಿಚಾರದಲ್ಲಿ ರಾಜಕೀಯ ಮಾಡುವುದು ಬೇಡ, ಆ ದೇವರ ಹೆಸರಿನಲ್ಲಿ ಏನು ಆಗಿಲ್ಲ ಎಂದು ಸಾಬೀತಾದರೆ ನಾವು ಸಂತೋಷಪಡುತ್ತೇವೆ. ಕೋರ್ಟ್ ಆದೇಶದ ಮೇಲೆ ತನಿಖೆ ಆಗುತ್ತಿದೆ. ಈಗ್ಯಾಕೆ ಅದರಲ್ಲಿ ರಾಜಕೀಯ ಮಾಡೋದು. ವರದಿ ಬರುತ್ತೆ, ಕಾಯೋಣ ಎಂದು ಬಿಜೆಪಿಗರಿಗೆ ಟಾಂಗ್ ಕೊಟ್ಟರು. ನಾವು ಪ್ರಮೋದಾದೇವಿ ರಾಜಮನೆತನದ ಬಗ್ಗೆ ಯಾವತ್ತು ವಿರೋಧ ಮಾಡಿಲ್ಲ. ಯಾರೂ ಕೂಡ ವಿರೋಧ ಮಾಡಬಾರದು. ಯಾಕಂದ್ರೆ ಪ್ರಮೋದಾದೇವಿ ಅವರ ಕೊಡುಗೆ ಇಡಿ ರಾಜ್ಯಕ್ಕೆ ಮಾದರಿಯಾಗಿದೆ. ಅದನ್ನು ಇಡೀ ದೇಶ ಅನುಕರಣೆ ಮಾಡಿದೆ ಎಂದರು.

ಎಪಿಎಂಸಿ ಅಧಿಕಾರಿಗಳಿಗೆ ಲೋಕಾ ತೀವ್ರ ತರಾಟೆ



ರಾಯಚೂರು: ನಗರದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ತರಕಾರಿ ಮಾರುಕಟ್ಟೆಗೆ ಗುರುವಾರ ಬೆಳಗ್ಗೆ ದಿಢೀರ್ ಆಗಿ ಉಪ ಲೋಕಾಯುಕ್ತ ಬಿ. ವೀರಪ್ಪ ದಿಢೀರ್ ಭೇಟಿ ನೀಡಿದ್ದಾರೆ. ಎಪಿಎಂಸಿ ಅಧಿಕಾರಿಗಳ ವಿರುದ್ಧ ಎರಡು ಸುಮೋಟೊ ಪ್ರಕರಣ ದಾಖಲಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು. ವ್ಯಾಪಾರಸ್ಥರು, ರೈತರು, ಕೂಲಿ ಕಾರ್ಮಿಕರನ್ನು ಭೇಟಿ ಮಾಡಿ ಸಮಾಲೋಚಿಸಿದರು. ಎಪಿಎಂಸಿ ಅಧಿಕಾರಿಗಳು ವಿವಿಧ ಕಾರ್ಮಿಕರಿಗೆ ಸೌಲಭ್ಯ ಕಲ್ಪಿಸುವಲ್ಲಿ ವಿಫಲರಾಗಿರುವುದರಿಂದಾಗಿ, ಅವರ ವಿರುದ್ಧ ಸುಮೋಟೊ ಕೇಸ್ ದಾಖಲಿಸುವಂತೆ ಸೂಚನೆ ನೀಡಿದರು. ಇದಾದ ಬಳಿಕ ಕೈಗಾರಿಕಾ ಪ್ರದೇಶಕ್ಕೆ ತೆರಳಿ, ಟೈಮಾಕ್ಸ್ ಮತ್ತು ಹತ್ತಿರದ ಕಾರ್ಖಾನೆಗಳ ಬಳಿಯಲ್ಲಿ ಹರಿಯುತ್ತಿದ್ದ ರಾಸಾಯನಿಕಮಿಶ್ರಿತ ಕಲುಷಿತ ನೀರು ನದಿಗೆ ಹರಿಯುವುದನ್ನು ವೀಕ್ಷಿಸಿದರು. ನದಿಗೆ ಈ ರೀತಿಯಾಗಿ ನೀರು ಹರಿದು ಬಿಟ್ಟರೂ ಕ್ರಮ ಕೈಗೊಳ್ಳದ ಪರಿಸರ ಇಲಾಖೆಯ ವಿರುದ್ಧ ಗರಂ ಆದರು. ನಂತರ ಪರಿಸರ ಅಧಿಕಾರಿ ಇಲಾಖೆಯ ವಿರುದ್ಧ ಸುಮೋಟೊ ಕೇಸ್ ದಾಖಲಿಸುವಂತೆ ತಿಳಿಸಿದರು. ಇದರ ಜತೆಗೆ ಯದ್ಲಾಪುರ ಗ್ರಾಮ ಪಂಚಾಯತ್ ಪಿಡಿಒ ಮತ್ತು ರಾಯಚೂರು ತಾಲೂಕು ಪಂಚಾಯತ್ ಇಒ ವಿರುದ್ಧವೂ ಕ್ರಮ ಕೈಗೊಳ್ಳಿ ಎಂದರು.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಿಶ್ವವಾಣಿ ಕ್ಲಬ್ ಹೌಸ್
29.08.2025
ಸಂಜೆ: 06.55 ರಿಂದ 08.05 ರವರೆಗೆ
ಶುಕ್ರವಾರದ ಅತಿಥಿ

ಶ್ರೀ ಪಿ.ಕೆ.ನಂದೀಶ
ವಿಷಯ
ಶ್ರೀ ರಾಮಾಯಣ ದರ್ಶನಂ ಸಮೀಕ್ಷೆ
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- ಸ್ಥಳ: ಭಟ್ಕಳ, ಉತ್ತರ ಕನ್ನಡ

ಸಮಸ್ಯೆಯೇನು?

- ಭಟ್ಕಳ ಪುರಸಭೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ ತೆಂಗಿನಗುಂಡಿ ಕ್ರಾಸ್‌ನ ರಸ್ತೆಯಲ್ಲಿ ಮಳೆ ನೀರು ನಿಂತು ಪ್ರಯಾಣಿಕರಿಗೆ ತೊಂದರೆ ಆಗುತ್ತಿರುವ ಬಗ್ಗೆ.
- ಪರಿಹಾರವೇನು? ಮಳೆ ಬಂದ ಸಂದರ್ಭದಲ್ಲಿ ಹೈವೇ ರಸ್ತೆ ಮೇಲೆ ಚರಂಡಿ ನೀರು ಸಂಗ್ರಹ ಆಗುತ್ತಿರುವ ಬಗ್ಗೆ ಸಾರ್ವಜನಿಕರೊಬ್ಬರು ಗಮನಕ್ಕೆ ತಂದಿದ್ದು, ಪುರಸಭೆ ಹಾಗೂ ಲೋಕೋಪಯೋಗಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ರಸ್ತೆಯ ಇಕ್ಕೆಲಗಳಲ್ಲಿ ನಿರ್ಮಿಸಿದ ಚರಂಡಿಗಳ ಮೇಲಿನ ಸ್ಲ್ಯಾಬ್‌ಗಳನ್ನು ತೆರವುಗೊಳಿಸಿ, ಸರಾಗವಾಗಿ ನೀರು ಹರಿದು ಹೋಗಲು ಅನುಕೂಲ ಮಾಡಿಕೊಡಲಾಗಿದೆ. ಮಳೆಗಾಲ ಮುಗಿದ ನಂತರ ಶಾಶ್ವತ ಪರಿಹಾರ ಕಲ್ಪಿಸಲಾಗುವುದು.

ರಾಜ್ಯ ಸರಕಾರದಿಂದ ಹಿಂದೂಗಳ ಭಾವನೆಗೆ ಧಕ್ಕೆ | ಡಿಕೆಶಿ ಕ್ಷಮೆಯಾಚಿಸಲು ಪ್ರತಿಪಕ್ಷ ಆಗ್ರಹ

ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ: ಹೇಳಿಕೆ ವಿವಾದ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಾಮುಂಡೇಶ್ವರಿ ದೇವಾಲಯ ಹಿಂದೂಗಳ ಆಸ್ತಿ ಅಲ್ಲ ಎನ್ನುವ ಮೂಲಕ ಡಿಸಿಎಂ ಡಿ.ಕೆ.ಶಿವಕುಮಾರ್ ಹಿಂದೂಗಳ ಭಾವನೆಗೆ ಧಕ್ಕೆ ತಂದಿದ್ದು, ಕೂಡಲೇ ಅವರು ಹಿಂದೂಗಳ ಬಳಿ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ಆಗ್ರಹಿಸಿದೆ.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರತಿಪಕ್ಷ ನಾಯಕ ಆರ್.ಅಶೋಕ, ಕಾಂಗ್ರೆಸ್ ಸರಕಾರ ಹಿಂದೂಗಳನ್ನು ಅಪಮಾನ ಮಾಡುತ್ತಿದೆ. ಧರ್ಮಸ್ಥಳದಿಂದ ಚಾಮುಂಡೇಶ್ವರಿ ದೇವಾಲಯದವರೆಗೂ ಈ ಕೃತ್ಯ ನಡೆಯುತ್ತಿದೆ. ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳುವುದಾದರೆ, ಅದೇನು ವಕ್ಫ್ ಮಂಡಳಿಯ ಆಸ್ತಿಯೇ? ಅಲ್ಲಿ ಯಾವಾಗ ಗೋರಿ ಕಟ್ಟುತ್ತಾರೆ ಎಂದು ಪ್ರಶ್ನಿಸಿದ್ದಾರೆ.

ದಸರಾ ಹಬ್ಬವನ್ನು ಒಡೆಯರ್ ರಾಜವಂಶಸ್ಥರು ಆಚರಿಸಿಕೊಂಡು ಬಂದಿದ್ದಾರೆ. ಮುಸ್ಲಿಂ ದೊರೆಗಳು ದೇವಾಲಯ ಒಡೆದುಹಾಕಿದ್ದರು. ಸಾಹಿತಿ ಬಾನು ಮುಷ್ತಾಕ್‌ರನ್ನು ದಸರಾ ಉದ್ಘಾಟಿಸಲು ಆಹ್ವಾನಿಸಲಾಗಿದೆ. ಕನ್ನಡ ಭುವನೇಶ್ವರಿ ದೇವಿಯ ಬಗ್ಗೆ ಇವರು ಮಾತಾಡುತ್ತಾರೆ. ಇನ್ನೇನು ಪಾಕಿಸ್ತಾನದ ಮಾತೆ ಮಾಡಬೇಕಿತ್ತೇ? ಕನ್ನಡಿಗರು ಮಾತ್ರವಲ್ಲ, ಎಲ್ಲ ಭಾರತೀಯರು ಭಾಷೆ ತಾಯಿಯಾಗಿಯೇ ಕಾಣುತ್ತಾರೆ. ಇವರು ಹೇಳುವಂತೆ ಅರಿಶಿನ ಕುಂಕುಮ ಹಾಕದೆ ಅತ್ತರ್ ಹಾಕಲು ಸಾಧ್ಯವಿಲ್ಲ. ದಸರಾ ಉದ್ಘಾಟನೆಯಲ್ಲೂ ಅರಿಶಿನ ಕುಂಕುಮ ಬಳಸುತ್ತಾರೆ. ಆಗ ಕುಂಕುಮ ಹಾಗೂ ಭುವನೇಶ್ವರಿಯನ್ನು ಬೈದವರು ಈಗ ಹೇಗೆ ಚಾಮುಂಡಿಯನ್ನು ಪೂಜೆ ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಚಾಮುಂಡೇಶ್ವರಿ ಇವರನ್ನು ಕರೆಯುತ್ತಿದ್ದಾರೆ ಎನ್ನುತ್ತಾರೆ. ಆದರೆ ಇವರನ್ನು ಮಸೀದಿಯವರೂ ಕರೆಯಲ್ಲ. ಇಮಾಮ್ ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ? ಕವಿ ನಿಸಾರ್ ಅಹ್ಮದ್ ಬಗ್ಗೆ ಯಾರೂ ಮಾತಾಡಲ್ಲ. ನಾನು ಕಂದಾಯ ಸಚಿವನಾಗಿದ್ದಾಗ ಅವರ ಹೆಸರಲ್ಲಿ ಸಂಸ್ಥೆ ನಿರ್ಮಿಸಲು ಐದೆಕರೆ ಜಮೀನು ಮಂಜೂರು ಮಾಡಿಸಿದ್ದೆ.

ಜೋಗದ ಸಿರಿಯ ಕವನ ಬರೆದು ಅವರು ತಾಯಿ ನಿನಗೆ ನಿತ್ಯೋತ್ಸವ ಎಂದಿದ್ದರು. ಅವರು ಎಂದಿಗೂ ಯಾವುದೇ ಧರ್ಮದ ವಿರುದ್ಧವಾಗಿ ಮಾತಾಡಲಿಲ್ಲ. ಅಂತಹವರಿಗೆ ಬಾನು ಮುಷ್ತಾಕ್ ಅವರನ್ನು ಹೋಲಿಸುವುದೇಕೆ ? ನಿಸಾರ್ ಬಗ್ಗೆ ನಮಗೆಲ್ಲರಿಗೂ ಹೆಮ್ಮೆ ಇದೆ ಎಂದರು.

ಪ್ರತ್ಯೇಕ ಕಾನೂನು: ಯದುವೀರರ ವಂಶಸ್ಥರನ್ನು ಟಿಪ್ಪು ಕುಟುಂಬದವರು ಬಂಧನದಲ್ಲಿರಿಸಿದ್ದರು. ಅಂತಹವರನ್ನೇ ಮತ್ತೆ ಕರೆದುಕೊಂಡು ಬಂದು ತಾಯಿ ಚಾಮುಂಡೇಶ್ವರಿಗೆ ಅಪಮಾನ ಮಾಡಿದ್ದಾರೆ. ಮುಂದೆ ಬಿಜೆಪಿ ಸರಕಾರ ಬಂದ ನಂತರ ಉದ್ಘಾಟನೆ ಮಾಡುವ ಕುರಿತು ಕಾನೂನು ತರಲಾಗುವುದು ಎಂದರು.

ಸಿಎಂ ಸಿದ್ದರಾಮಯ್ಯ ಅವರಿಗೆ ಕುರುಬ, ಒಕ್ಕಲಿಗರಲ್ಲಿ ಯಾರೂ ಸಾಧಕರು ಸಿಕ್ಕಿಲ್ಲವೇ? ಕಾಂಗ್ರೆಸ್ ದಸರಾ ಪೂಜೆ ಮಾಡದೆ ವೋಟಿನ ಪೂಜೆ ಮಾಡುತ್ತಿದೆ. ಇನ್ನಾದರೂ ಒಬ್ಬ ಸಾಧಕರು, ಯೋಧರನ್ನು ಗುರುತಿಸಿ ಅವಕಾಶ ನೀಡಲಿ. ಬಾನು ಮುಷ್ತಾಕ್ ಪಡೆದ ಪ್ರಶಸ್ತಿಯಲ್ಲಿ ಮತ್ತೊಬ್ಬರ ಪಾಲು ಇದೆ. ಅವರನ್ನು ಆಹ್ವಾನಿಸಿಲ್ಲ. ಇದು ಅಲ್ಪಸಂಖ್ಯಾತರ ಸರಕಾರವಾಗಿದ್ದು ಖಂಡನೀಯ.

-**ಆರ್.ಅಶೋಕ**, ಪ್ರತಿಪಕ್ಷ ನಾಯಕ

ನಾನು ಸದನದಲ್ಲಿ ಸೇರಿದಂತೆ ಎಲ್ಲಿ ಏನೇ ಮಾತನಾಡಿದರು ಅದರಲ್ಲಿ ಕೇವಲ ತಪ್ಪು ಕಂಡು ಹಿಡಿಯುವುದೇ ಬೇರೆಯವರ ಕೆಲಸವಾಗಿದೆ. ರಾಜಕೀಯದವರು, ಮಾಧ್ಯಮಗಳು, ಪ್ರಮೋದಾ ದೇವಿ ಅವರು, ಸಂಸದ ಯದುವೀರ್ ಅವರು - ಹೀಗೇ ಎಲ್ಲರೂ ತಪ್ಪು ಹುಡುಕುವವರೇ. ಹೀಗಾಗಿ ನಾನು ಮಾತನಾಡದಿರುವುದೇ ಲೇಸು ಅನಿಸುತ್ತದೆ. ಈ ವಿಚಾರಗಳ ಬಗ್ಗೆ ಪ್ರತಿಕ್ರಿಯಿಸಲು ಪಕ್ಷದ ವಕ್ತಾರರಿದ್ದಾರೆ.

-**ಡಿ.ಕೆ. ಶಿವಕುಮಾರ್**, ಉಪಮುಖ್ಯಮಂತ್ರಿ

ಲೇಖಕಿ ಬಾನು ಮುಷ್ತಾಕ್ ದಸರಾ ಉದ್ಘಾಟನೆಗೆ ಆಹ್ವಾನಿಸಿರುವುದಕ್ಕೆ ನನ್ನ ತಕರಾರು ಏನೂ ಇಲ್ಲ. ಕೆಲವರು ಉದ್ಧಟತನ ತೋರಿಸುತ್ತಿದ್ದಾರೆ. ಅದು ಬೇಡ. ಚಾಮುಂಡೇಶ್ವರಿ ದೇಗುಲ ಹಿಂದೂಗಳ ಆಸ್ತಿಯಲ್ಲ ಅಂತಾರೆ. ಹಿಂದೂ ಧಾರ್ಮಿಕ ಕ್ಷೇತ್ರಗಳಿಗೆ ಈ ರೀತಿ ಅಪಚಾರ ಸರಿಯಲ್ಲ. ಇದು ಕಾಂಗ್ರೆಸ್‌ಗೆ ಆಪತ್ತು ತರಲಿದೆ.

-**ಎಚ್.ಡಿ.ಕುಮಾರಸ್ವಾಮಿ**, ಕೇಂದ್ರ ಸಚಿವ

ಡಿಕೆಶಿಯಿಂದ ಗಾಂಧಿ ಕುಟುಂಬದ ಓಲೈಕೆ

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಈ ಸಂಬಂಧ ಮಾತನಾಡಿ, ಡಿಸಿಎಂ ಯಾರನ್ನೋ ಸಂತಸಪಡಿಸಲು ಹಾಗೂ ಗಾಂಧಿ ಕುಟುಂಬ ಖುಷಿಪಡಿಸಲು ಈ ರೀತಿ ಹಿಂದೂಗಳಿಗೆ ಅಪಮಾನ ಮಾಡಿರುವುದನ್ನು ಹಿಂದೂ ಸಮಾಜ ಒಪ್ಪಲು ಸಾಧ್ಯವಿಲ್ಲ. ಗಾಂಧಿ ಕುಟುಂಬ ಖುಷಿಪಡಿಸಲು ರಾಮನಗರದಲ್ಲಿ ಏಸು ಕ್ರಿಸ್ತನ 115 ಅಡಿಯ ಪ್ರತಿಮೆ ಸ್ಥಾಪಿಸಲು ಮುಂದಾಗಿದ್ದರು. ದಸರಾ ಉತ್ಸವ, ಚಾಮುಂಡಿ ಬೆಟ್ಟಕ್ಕೆ ಎಲ್ಲ ಧರ್ಮೀಯರೂ ಭೇಟಿ ಕೊಡುತ್ತಾರೆ. ಆದರೆ, ಇದು ಹಿಂದೂಗಳಿಗೆ ಸಂಬಂಧಿಸಿದ್ದಲ್ಲ ಎಂಬ ಹೇಳಿಕೆ ಹಿಂದೂಗಳಿಗೆ ಮಾಡಿದ ಅಪಮಾನ. ಇದು ಅಕ್ಷಮ್ಯ ಅಪರಾಧ. ಕೂಡಲೇ ಕ್ಷಮೆಯಾಚಿಸಬೇಕೆಂದು ಆಗ್ರಹಿಸಿದ್ದಾರೆ. ಡಿ.ಕೆ.ಶಿವಕುಮಾರ್ ಸದನದಲ್ಲಿ ನಮಸ್ತೇ ಸದಾ ವತ್ಸಲೇ ಗೀತೆ ಹೇಳಿದ್ದರೂ, ದೆಹಲಿ ಹೈಕಮಾಂಡಿನ ಒತ್ತಡ ಬಂದು ಕ್ಷಮಾಪಣೆ ಕೇಳುವ ಕೆಲಸ ಮಾಡಿದ್ದಾರೆ. ಕಾಂಗ್ರೆಸ್ ಹೈಕಮಾಂಡಿನದು ಒಡೆದಾಳುವ ನೀತಿಯ ಸಂಸ್ಕೃತಿ. ಹಾಗಾಗಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದಾಗ ಪದೇಪದೇ ಹಿಂದೂಗಳ ಅಪಮಾನ, ಹಿಂದೂ ಕಾರ್ಯಕರ್ತರ ಅವಮಾನ, ನಮ್ಮ ಪರಂಪರೆಗೆ ಧಕ್ಕೆ ಬರುವಂತೆ ನಡೆದುಕೊಳ್ಳುತ್ತಿದ್ದಾರೆ.

ಡಿಕೆಶಿಯಿಂದ ನಮಗೆ ಧರ್ಮದ ಪಾಠ ಬೇಡ

ಮೈಸೂರು: ಶಿವನ ಕಪಾಲಿ ಬೆಟ್ಟವನ್ನೇ ಏಸು ಬೆಟ್ಟ ಮಾಡಲು ಹೊರಟ ಡಿ.ಕೆ. ಶಿವಕುಮಾರ್ ಅವರಿಂದ ನಮಗೆ ಧರ್ಮದ ಪಾಠ ಬೇಡ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಮಾರ್ಮಿಕವಾಗಿ ಹೇಳಿದರು.

ಚಾಮುಂಡಿ ಬೆಟ್ಟ ಹಿಂದೂಗಳದ್ದಲ್ಲ ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಅವರು, ಅನ್ಯ ಧರ್ಮದವರನ್ನು ಬರೀ ಓಲೈಕೆಗಾಗಿ ಬ್ರದರ್ಸ್ ಎಂದು ಕರೆಯುವ ಡಿ.ಕೆ. ಶಿವಕುಮಾರ್, ನಮಗೆ ಧರ್ಮದ ಬಗ್ಗೆ ತಿಳುವಳಿಕೆ ಹೇಳುವುದು ಬೇಡ ಎಂದು ವ್ಯಂಗ್ಯವಾಡಿದರು. ಸಿದ್ದರಾಮಯ್ಯ ತಂತ್ರ ಕಾಂಗ್ರೆಸ್ ಮೂರ್ಖರಿಗೆ ಅರ್ಥವಾಗುತ್ತಿಲ್ಲ. ಮುಸ್ಲಿಮರನ್ನು ತಮ್ಮ ಬೆನ್ನ ಹಿಂದೆ ಇಟ್ಟುಕೊಳ್ಳಲು ಸಿದ್ದರಾಮಯ್ಯ ಬಾನು ಮುಷ್ತಾಕ್ ಅವರನ್ನು ದಸರಾ ಉದ್ಘಾಟನೆ ಗೆ ಕರೆದಿದ್ದಾರೆ. ನಾಳೆ ಸಿಎಂ ಕುರ್ಚಿಗೆ ಕಂಟಕ ಬಂದಾಗ ಮುಸ್ಲಿಂ ಶಕ್ತಿ ತಮ್ಮ ಹಿಂದೆ ನಿಲ್ಲಿಸಿಕೊಳ್ಳಲು ಸಿದ್ದರಾಮಯ್ಯ ಹೆಣೆದಿರುವ ತಂತ್ರ ಇದು. ಕಾಂಗ್ರೆಸ್ ಅನ್ನು ಬ್ಲ್ಯಾಕ್ ಮೇಲ್ ಮಾಡಲು ಸಿದ್ದರಾಮಯ್ಯ ಮಾಡಿರುವ ಪ್ಲಾನ್ ಕಾಂಗ್ರೆಸ್ ನವರಿಗೆ ಅರ್ಥವಾಗುತ್ತಿಲ್ಲ ಎಂದು ಟೀಕಿಸಿದರು.

ಪ್ರವಾಸೋದ್ಯಮಕ್ಕಾಗಿ ಇದೆಲ್ಲ ನಾಟಕ | ಬೆಟ್ಟ ಧಾರ್ಮಿಕ ಕೇಂದ್ರವಾಗಿಯೇ ಇರಲಿ

ಚಾಮುಂಡಿಬೆಟ್ಟ ಹಿಂದೂಗಳದ್ದು: ಯದುವೀರ್

ಮೈಸೂರು: ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿಯಲ್ಲ ಎಂಬ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆಗೆ ತಿರುಗೇಟು ನೀಡಿರುವ ಸಂಸದ ಯದುವೀರ್, ಚಾಮುಂಡಿ ಬೆಟ್ಟ ಹಿಂದೂಗಳ ಆಸ್ತಿ, ಇದರಲ್ಲಿ ಎರಡು ಮಾತಿಲ್ಲ ಎಂದು ಘೋಷಿಸಿದರು.

ಚಾಮುಂಡಿಬೆಟ್ಟ ಪ್ರಾಧಿಕಾರ ಆಗಬಾರದು. ಪ್ರಾಧಿಕಾರ ಆದರೆ ಅದನ್ನು ಪ್ರವಾಸೋದ್ಯಮ ಕೇಂದ್ರ ಮಾಡುತ್ತಾರೆ. ಚಾಮುಂಡಿ ಬೆಟ್ಟ ಧಾರ್ಮಿಕ ಕೇಂದ್ರವಾಗಿಯೇ ಇರಬೇಕು.

ಯದುವೀರ್, ಸಂಸದ

ಸುದ್ದಿಗಾರರ ಜತೆ ಮಾತನಾಡಿ, ಇದೊಂದು ಆಘಾತಕಾರಿ ಹಾಗೂ ಹಾಸ್ಯಾಸ್ಪದ ಹೇಳಿಕೆ. ಗೌರಿ ವಿನಾಯಕನ ಪೂಜೆಯ ಸಂದ ರ್ಭದಲ್ಲಿ ಈ ರೀತಿ ಹೇಳಿಕೆ ಖಂಡನೀಯ ಎಂದರು. ಮಾರ್ಕಂಡೇಯರು ತಪಸ್ಸು ಮಾಡಿ ರುವ ಇತಿಹಾಸವಿರುವ ಸ್ಥಳವಿದು. ಬೆಟ್ಟಕ್ಕೆ ಸಾವಿರಾರು ವರ್ಷದ ಇತಿಹಾಸವಿದೆ. ಆ ಸಂದರ್ಭದಲ್ಲಿ ಬೇರೆ ಧರ್ಮಗಳೇ ಇರಲಿಲ್ಲ, ಬೌದ್ಧ ಧರ್ಮ ಒಂದೇ ಆಗ ಇದ್ದಿದ್ದು. ನಮ್ಮ ಧರ್ಮದ ದುರ್ಬಳಕೆ ಮಾಡಿಕೊಳ್ಳಬಾರದು. ನಮ್ಮ ಧಾರ್ಮಿಕ ಕ್ಷೇತ್ರಗಳಿಗೆ ಎಲ್ಲರಿಗೂ ಪ್ರವೇಶ ಇದೆ. ಆದರೆ, ಪ್ರವೇಶ ಇದೆ ಅನ್ನೋ ಕಾರಣಕ್ಕೆ ಅವರದ್ದು ಅನ್ನುವುದು ಸರಿಯಲ್ಲ ಎಂದು ಹೇಳಿದರು. ಸರಕಾರ ಬೆಟ್ಟವನ್ನು ನಿಯಂತ್ರಣಕ್ಕೆ ತೆಗದುಕೊಳ್ಳಲು ಮುಂದಾಗಿದೆ. ಬರೀ ಹಿಂದೂ ದೇವಾಲಯಗಳನ್ನು ಗುರಿಯಾ ಗಿಟ್ಟುಕೊಂಡು ಈ ರೀತಿ ಮಾಡುತ್ತಿದೆ ಎಂದು ಕಿಡಿ ಕಾರಿದರು.

ನನ್ನ ಮನಸ್ಸಿಗೆ ಬೇಸರ ತಂದಿದೆ: ಪ್ರಮೋದಾದೇವಿ

ದಸರಾ ಉದ್ಘಾಟಕರ ಆಯ್ಕೆಯನ್ನು ಸಮರ್ಥಿಸಿಕೊಳ್ಳುವ ಭರದಲ್ಲಿ ಚಾಮುಂಡೇಶ್ವರಿ ದೇವಸ್ಥಾನ ಹಿಂದೂ ಧರ್ಮಕ್ಕೆ ಸೇರಿದ್ದಲ್ಲ ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಅವರ ಬಾಲಿಶ ಹೇಳಿಕೆ ಬಗ್ಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ತುಸು ಖಾರವಾಗಿ ಪ್ರತಿಕ್ರಿಯೆ ನೀಡಿದ್ದಾರೆ. ಈ ಕುರಿತು ಬಹಿರಂಗ ಪತ್ರ ಬರೆದಿರುವ ಅವರು, ಸರಕಾರದ ಆಚರಣೆಗಳು ಸಾಂಸ್ಕೃತಿಕ ಕಾರ್ಯಕ್ರಮಗಳೇ ಹೊರತು ಧಾರ್ಮಿಕ ಸಂಪ್ರದಾಯವಾಗಿಲ್ಲ ಎಂದು ಉಲ್ಲೇಖಿಸಿದ್ದಾರೆ. ಸರಕಾರದ ದಸರಾ ಒಂದು ಸಾಂಸ್ಕೃತಿಕ ಆಚರಣೆ ಎಂಬುದು ನಮ್ಮ ಪರಿಣಿತರ ಅಭಿಪ್ರಾಯ. ಯಾವುದೇ ಧಾರ್ಮಿಕ ಆಚರಣೆಗಳಿಗೆ ಅವಕಾಶವಿಲ್ಲವಾಗಿದ್ದು, ಅಂತಹ ಉತ್ಸವವನ್ನು ನಡೆಸುವಲ್ಲಿ ಧಾರ್ಮಿಕ ಪಾವಿತ್ರ್ಯ, ಸಂಪ್ರದಾಯ ಅಥವಾ ಪರಂಪರೆಯನ್ನು ಪಡೆಯಲು ಸಾಧ್ಯವಿಲ್ಲ. ದಸರಾ ಉದ್ಘಾಟಕರ ಆಯ್ಕೆ ಕುರಿತು ರಾಜಕೀಯ ನಾಯಕರ ಹೇಳಿಕೆ, ಈಗ ಚಾಮುಂಡಿ ಬೆಟ್ಟದ ವಿಚಾರವನ್ನು ಆಕ್ರಮಿಸಿಕೊಂಡಿದ್ದು, ಇದು ಬೇಸರ ತಂದಿದೆ. ಮುಂದಿನ ದಿನಗಳಲ್ಲಿ ಎಲ್ಲವೂ ಸರಿ ಹೋಗಲಿದೆ ಎಂಬ ವಿಶ್ವಾಸ ಇದೆ ಎಂದಿದ್ದಾರೆ.

ಬಿಜೆಪಿ ನಿಲುವಿಗೆ ಪಾಟೀಲ್ ಖಂಡನೆ

ಕಲಬುರಗಿ: ದಸರಾ ಉತ್ಸವದ ಉದ್ಘಾಟನೆಗೆ ಬುಕರ್ ಪ್ರಶಸ್ತಿ ಪುರಸ್ಕೃತ ಬಾನು ಮುಷ್ತಾಕ್ ಅವರನ್ನು ಆಹ್ವಾನಿಸಿರುವುದು ಸಂತಸದ ವಿಚಾರವಾಗಿದೆ ಎಂದು ಶಾಸಕ ಬಿ.ಆರ್. ಪಾಟೀಲ್ ಹೇಳಿ ದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ನಾಡಹಬ್ಬವು ಸಂಸ್ಕೃತಿಯ ಪರಂಪರೆಯ ಪ್ರತಿರೂಪವಾಗಿರುವ ಸಂದರ್ಭದಲ್ಲಿ ಜಾತಿ-ಧರ್ಮದ ಭೇದವನ್ನು ಬಿತ್ತುವ ಬಿಜೆಪಿ ನಿಲುವು ಖಂಡನೀಯವೆಂದರು. ಬಾನು ಮುಷ್ತಾಕ್ ಜಾಗತಿಕ ಮಟ್ಟದಲ್ಲಿ ಕರ್ನಾಟಕದ ಗೌರವವನ್ನು ಎತ್ತಿಹಿಡಿದ ಸಂದರ್ಭದಲ್ಲಿ, ಬಿಜೆಪಿ ಶಾಂತಿ-ಸೌಹಾರ್ದತೆಗೆ ವಿರೋಧವಾಗಿ ಧಾರ್ಮಿಕ ವಿಚಾರಗಳನ್ನು ಎಳೆದು ತರುವ ಮೂಲಕ ಸಮು ದಾಯಕ್ಕೆ ಅವಮಾನ ಮಾಡುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಯೊಬ್ಬರಿಗೂ ತಮ್ಮ ನಂಬಿಕೆ- ಆಚಾರ ಪಾಲನೆಗೆ ಸಂವಿಧಾನ ಹಕ್ಕು ನೀಡಿದೆ ಎಂದು ಸ್ಮರಿಸಿದ ಅವರು, 'ಹಿಂದೆ ಕವಿ ನಿಸಾರ್ ಅಹ್ಮದ್ ದಸರಾ ಉದ್ಘಾಟಿಸಿದ್ದಾರೆಂಬುದನ್ನು ಬಿಜೆಪಿ ಮರೆತಿದೆಯೇ?. ಜಾತಿ-ಧರ್ಮದ ರಾಜಕೀಯದಲ್ಲಿ ತೊಡಗಿರುವುದು ದುರದೃಷ್ಟಕರ' ಎಂದಿದ್ದಾರೆ.

ಸಚಿವ ಸತೀಶ್ ಜಾರಕಿಹೊಳಿ ಜತೆ ಮಾತುಕತೆ ಬಳಿಕ ನಿರ್ಧಾರ

ಬಿಡಿಸಿಸಿ ಚುನಾವಣೆ: ಹಿಂದೆ ಸರಿದ ಚನ್ನರಾಜ

ಬೆಳಗಾವಿ: ರಾಜ್ಯದಲ್ಲಿಯೇ ರೈತರಿಗೆ ಅತಿ ಹೆಚ್ಚು ಸಾಲ ನೀಡಿದ ಹೆಗ್ಗಳಿಕೆ ಹೊಂದಿರುವ ಬೆಳಗಾವಿ ಜಿಲ್ಲಾ ಕೇಂದ್ರ ಸಹಕಾರಿ (ಬಿಡಿಸಿಸಿ) ಬ್ಯಾಂಕ್ ಚುನಾವಣೆ ಅ.19 ಕ್ಕೆ ನಡೆಯಲಿದೆ. ಈ ಬಾರಿ ಡಿಸಿಸಿ ಬ್ಯಾಂಕ್ ನಿರ್ದೇಶಕ ಸ್ಥಾನಕ್ಕೆ ಭರ್ಜರಿ ತಯಾರಿ ನಡೆಸಿದ್ದ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಹೋದರ ಹಾಗೂ ಎಂಎಲ್‌ಸಿ ಚನ್ನರಾಜ ಹಟ್ಟಿಹೊಳಿ ಸ್ಪರ್ಧೆಯಿಂದ ದೂರ ಸರಿದು ಅಚ್ಚರಿ ಮೂಡಿಸಿದ್ದಾರೆ.

ಖಾನಾಪುರದಿಂದ ಚುನಾವಣಾ ಸ್ಪರ್ಧೆಗೆ ಭರ್ಜರಿ ತಯಾರಿ ನಡೆಸಿದ್ದ ಹಟ್ಟಿಹೊಳಿ ಅವರು ಕೆಲ ಸೊಸೈಟಿ ಮತಗಳನ್ನು ತಮ್ಮತ್ತ ಸೆಳೆಯುವಲ್ಲಿ ಯಶಸ್ವಿಯಾಗಿದ್ದರು. ಆದರೆ ಬುಧವಾರ ಸಚಿವ ಸತೀಶ್ ಜಾರಕಿಹೊಳಿ ಅವರ ಜತೆ ನಡೆದ ಮಾತುಕತೆ ನಂತರ ಚುನಾವಣಾ ಕಣದಿಂದ ಹಿಂದೆ ಸರಿಯುವ ನಿರ್ಧಾರಕ್ಕೆ ಬಂದಿದ್ದಾರೆ. ಈ ಕುರಿತು ಸ್ವತಃ ಸಚಿವ ಸತೀಶ್ ಜಾರಕಿಹೊಳಿ ಅವರು ಚನ್ನರಾಜ ಹಟ್ಟಿಹೊಳಿ ಸ್ಪರ್ಧೆ ಮಾಡುವುದಿಲ್ಲ ಮುಂಬರುವ ದಿನಗಳಲ್ಲಿ ಈ ಕುರಿತು ಮಾಹಿತಿ ನೀಡುವುದಾಗಿ ತಿಳಿಸಿದ್ದಾರೆ.

ಜಾರಕಿಹೊಳಿ ಸಹೋದರರ ವಿರುದ್ಧ ರಮೇಶ್ ಕತ್ತಿ ಬಹಿರಂಗವಾಗಿ ವಿರೋಧ ವ್ಯಕ್ತಪಡಿಸಿದ್ದು ಮಾತ್ರವಲ್ಲದೆ ಜಿಲ್ಲೆಯ ಲಿಂಗಾಯತ ಮುಖಂಡರ ಸಭೆ ಮಾಡಿದ್ದರು. ಈ ಸಭೆಯಲ್ಲಿ ಸ್ವತಃ ಚನ್ನರಾಜ ಹಟ್ಟಿಹೊಳಿ ಅವರೂ ಭಾಗವಹಿಸಿದ್ದರು ಎಂದು ಹೇಳಲಾಗುತ್ತಿದೆ. ಈ ಮಧ್ಯೆ ಸ್ಪರ್ಧೆಯಿಂದ ಹಟ್ಟಿಹೊಳಿ ಹಿಂದೆ ಸರಿಯುವ ಅಚ್ಚರಿ ನಿರ್ಧಾರ ಕೈಗೊಂಡಿದ್ದು ಡಿಸಿಸಿ ಬ್ಯಾಂಕ್ ಚುನಾವಣಾ ಸಮೀಕರಣವೇ ಬದಲಾಗಿದೆ.

ಈ ಬಾರಿ ಡಿಸಿಸಿ ಬ್ಯಾಂಕ್ ಚುನಾವಣೆಯನ್ನು ಗಂಭೀರವಾಗಿ ತಗೆದುಕೊಂಡಿರುವ ಜಾರಕಿಹೊಳಿ ಸಹೋದರರು ಎಚ್ಚರಿಕೆ ಹೆಜ್ಜೆ ಇಟ್ಟಿದ್ದಾರೆ. ಜಿಲ್ಲೆಯಲ್ಲಿ ತನ್ನದೇ ಪ್ರಾಬಲ್ಯ ಹೊಂದಿರುವ ಲಕ್ಷ್ಮೀ ಹೆಬ್ಬಾಳಕರ್‌ಗೆ ವಿರೋಧ ಮಾಡದೇ ಮಾತುಕತೆ ಮೂಲಕ ಚುನಾವಣಾ ರಣತಂತ್ರ ಹೆಣೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ಸಿದ್ದರಾಮಯ್ಯ ಸರಕಾರದಲ್ಲಿ ಸತೀಶ್ ಜಾರಕಿಹೊಳಿ ಹಾಗೂ ಲಕ್ಷ್ಮೀ ಹೆಬ್ಬಾಳಕರ್ ಸಚಿವರಾಗಿದ್ದು ಡಿಸಿಸಿ ಬ್ಯಾಂಕ್ ಚುನಾವಣೆ ನೆಪದಲ್ಲಿ ಸರಕಾರಕ್ಕೆ ಯಾವುದೇ ತೊಂದರೆ ಆಗದಂತೆ ಚುನಾವಣೆ ಎದುರಿಸುವ ಹೆಜ್ಜೆ ಇಟ್ಟಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ.

ಡಿಸಿಸಿ ಬ್ಯಾಂಕ್ ನಿರ್ದೇಶಕ ಚುನಾವಣೆಗೆ ಚನ್ನರಾಜ ಹಟ್ಟಿಹೊಳಿ ಖಾನಾಪುರ ತಾಲೂಕಿನಿಂದ ಕಣಕ್ಕಿಳಿಯಲು ತಯಾರಿ ನಡೆಸಿದ್ದರು. ಖಾನಾಪುರದ ಪಿಕೆಪಿಎಸ್ ನಿರ್ದೇಶಕರ ಮನ ಗೆಲ್ಲಲು ಯಶಸ್ವಿಯಾಗಿದ್ದರು. ಜಿಲ್ಲೆಯ ರಾಜಕಾರಣ ಹಾಗೂ ರಾಜಕೀಯ ದೃಷ್ಟಿಯಿಂದ ಚನ್ನರಾಜ ಚುನಾವಣೆ ಕಣದಿಂದ ಹಿಂದೆ ಸರಿಯಲಿದ್ದಾರೆ. ಚನ್ನರಾಜ ಹಿಂದೆ ಸರಿದಿದ್ದೇಕೆ ಎಂಬ ಬಗ್ಗೆ ಮುಂದಿನ ದಿನಗಳಲ್ಲಿ ಮಾಹಿತಿ ಹಂಚಿಕೊಳ್ಳುವೆ.

-**ಸತೀಶ್ ಜಾರಕಿಹೊಳಿ**, ಸಚಿವ

ಜಿಲ್ಲೆಯ ರಾಜಕೀಯ ಪರಿಸ್ಥಿತಿ ಮತ್ತು ಡಿಸಿಸಿ ಬ್ಯಾಂಕ್ ಮುಂದೆ ಯಾವ ರೀತಿ ನಡೆಸಬೇಕು ಎಲ್ಲ ಹೊಂದಾಣಿಕೆ ಮಾಡಿಕೊಂಡು ಹೋಗಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹಾಗೂ ನಾವು ಒಂದು ಗಂಟೆಗಳ ಕಾಲ ಸುದೀರ್ಘ ಚರ್ಚೆ ನಡೆಸಲಾಗಿದೆ. ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಹೇಳಿಕೆಗೆ ನಾವು ಬದ್ಧರಾಗಿದ್ದೇವೆ.

-**ಚನ್ನರಾಜ ಹಟ್ಟಿಹೊಳಿ**, ಎಂಎಲ್‌ಸಿ

ಮೈಸೂರಿನಲ್ಲಿ ನಡೆದ ಪತ್ರಿಕಾ ವಿತರಕರ ಸಮ್ಮೇಳನದಲ್ಲಿ ಕೆ.ವಿ.ಪ್ರಭಾಕರ್ ಅಭಿಮತ

ಪತ್ರಿಕಾ ವಿತರಕರು ಪತ್ರಿಕೋದ್ಯಮದ ಬೆನ್ನುಮೂಳೆ

ಮೈಸೂರು: ಪತ್ರಿಕಾ ವಿತರಕರು ಪತ್ರಿಕೆಗಳನ್ನು ವಿತರಿಸುವ ಜತೆಗೆ ಚಂದಾ ಹಣ ಸಂಗ್ರಹಿಸುವ ಕೆಲಸವನ್ನೂ ಮಾಡುತ್ತಾ ತಮ್ಮ ಆದಾಯದ ಜತೆಗೆ ಸಂಸ್ಥೆಗೂ ಆದಾಯ ತಂದುಕೊಡುವ ಮೂಲಕ ರಾಜ್ಯದ ಆರ್ಥಿಕತೆಯಲ್ಲೂ ತೊಡಗಿಸಿಕೊಂಡಿದ್ದಾರೆ ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅಭಿಪ್ರಾಯ ಪಟ್ಟರು.

ವಿಶ್ವ ಪತ್ರಿಕಾ ವಿತರಕರ ದಿನದ ನಿಮಿತ್ತ ಮೈಸೂರಿನಲ್ಲಿ ಏರ್ಪಡಿಸಿದ್ದ ಪತ್ರಿಕಾ ವಿತರಕರ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು. ಕೊಳಚೆ ಪ್ರದೇಶಗಳಿಂದ ವಿಧಾನಸೌಧದ ವರೆಗೂ ವ್ಯಾಪಿಸಿರುವ ಪತ್ರಿಕಾ ವಿತರಕರು ಮುದ್ರಣ ಮಾಧ್ಯಮದ ಬೆನ್ನುಮೂಳೆ ಮತ್ತು ಪತ್ರಿಕಾ ಸಂಸ್ಥೆಗಳ ನರಮಂಡಲ ಆಗಿ ಕಲಸ ಮಾಡುತ್ತಾರೆ. ಪತ್ರಿಕೆಯ ಚಂದಾ ಹಣ ಸಂಗ್ರಹಿಸುವ ಜತೆಗೆ ಸಣ್ಣ ಜಾಹೀರಾತುದಾರರನ್ನೂ ಸಂಸ್ಥೆಯ ಜತೆ ಬೆಸೆಯುತ್ತಾರೆ ಎಂದರು. ಸುದ್ದಿಗಳು, ಪತ್ರಿಕೆಗಳು ಹಳತಾಗುವ ಮೊದಲು, ಓದುಗರ ಕೈಗೆ ಕಾಫಿ ಲೋಟ ಬರುವ ಮೊದಲು ಪತ್ರಿಕಾ ವಿತರಕರು ಓದುಗರ ಮನೆ ಬಾಗಿಲಿಗೆ ತಲುಪುತ್ತಾರೆ. ಇದಕ್ಕಾಗಿ ಕೋಳಿ ಕೂಗುವ ಮೊದಲೇ ಮನೆಯಿಂದ ಎದ್ದು ಹೊರಡುತ್ತಾರೆ. ನಾವು ಪತ್ರಕರ್ತರು ಬೆಚ್ಚಗೆ ಮಲಗಿರುವಾಗ ಮಳೆ, ಚಳಿ ಮತ್ತು ಪ್ರತಿಕೂಲ ವಾತಾವರಣ ಲೆಕ್ಕಿಸದೆ ಸೈಕಲ್ ತುಳಿಯಬೇಕಿದೆ ಎಂದರು.

ಒಬ್ಬ ಪತ್ರಿಕಾ ವಿತರಕನಿಗೆ ತಿಂಗಳಿಗೆ ಸಿಗುವುದು ಕೆಲವೇ ಸಾವಿರ ರುಪಾಯಿ ಇರಬಹುದು. ಆದರೆ, ಸಾವಿರಾರು ಪತ್ರಿಕಾ ವಿತರಕರು ಸಂಗ್ರಹಿಸುವ ಚಂದಾ ಹಣ ಮತ್ತು ಸಣ್ಣ ಪ್ರಮಾಣದ ಜಾಹೀರಾತು ಹಣವನ್ನು ಒಟ್ಟು ಲೆಕ್ಕ ಹಾಕಿದರೆ ಹತ್ತಾರು ಕೋಟಿ ಆಗುತ್ತದೆ. ಹೀಗಾಗಿ ಪತ್ರಿಕೋದ್ಯಮದ ಮತ್ತು ರಾಜ್ಯದ ಆರ್ಥಿಕ ಚಟುವಟಿಕೆಯಲ್ಲೂ ತೊಡಗಿಸಿಕೊಂಡಿರುವ ಸಮುದಾಯವಾಗಿದೆ ಎನ್ನುವುದನ್ನು ನಾವು ಮರೆಯಬಾರದು ಎಂದರು.

ಸುತ್ತೂರು ಮಠದ ಜಗದ್ಗುರು ಶಿವರಾತ್ರಿ ದೇಶೀಕೇಂದ್ರ ಮಹಾಸ್ವಾಮೀಜಿ ಅವರ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಾನಂದ ತಗಡೂರು ಮತ್ತು ಪತ್ರಿಕಾ ವಿತರಕರ ಮಹಾ ಸಂಘದ ಅಧ್ಯಕ್ಷರಾದ ಶಂಬುಲಿಂಗ ಅವರು ಸೇರಿ ಹಲವು ಮಹನೀಯರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ನಡೆದ ಪತ್ರಿಕಾ ವಿತರಕರ ಸಮ್ಮೇಳನವನ್ನು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಉದ್ಘಾಟಿಸಿದರು.

ಹಂತಹಂತವಾಗಿ ಬೇಡಿಕೆ ಈಡೇರಿಕೆ

ವಿತರಕ ಸಮುದಾಯದ ಪರವಾಗಿ ಈ ಸಮ್ಮೇಳನದಲ್ಲಿ ಕೆಲವೊಂದು ಬೇಡಿಕೆಗಳನ್ನು ಇಡಲಾಗಿದೆ. ಅವೆಲ್ಲವನ್ನೂ ಪರಿಶೀಲಿಸಿ, ಹಂತ ಹಂತವಾಗಿ ಕ್ರಮ ಕೈಗೊಳ್ಳುವ ಸಾಧ್ಯತೆಗಳ ಬಗ್ಗೆ ಚರ್ಚಿಸುತ್ತೇನೆ. ಪತ್ರಿಕಾ ವಿತರಕರಿಗೆ ಸರಕಾರದ ಸವಲತ್ತುಗಳು ಸಿಗಬೇಕು ಎನ್ನುವುದು ಒಂದು ಕಡೆ ಇರಲಿ. ಜತೆಗೆ ಪತ್ರಿಕಾ ಸಂಸ್ಥೆಗಳೂ, ಇನ್ನಿತರೆ ಉದ್ಯಮಿಗಳ ಮೂಲಕ ಸಿಎಸ್‌ಆರ್ ನಿಧಿಯಿಂದ ಈ ಸಮುದಾಯಕ್ಕೆ ಅನುಕೂಲ ಕಲ್ಪಿಸುವ ಅವಕಾಶಗಳೂ ಇವೆ. ಈ ದಿಕ್ಕಿನಲ್ಲೂ ಗಮನ ಹರಿಸುವ ಅಗತ್ಯವಿದೆ ಎಂದು ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರು ಹೇಳಿದರು.

ಗಂಡು ಮಗುವಿಗೆ ಜನ್ಮ ನೀಡಿದ 9ನೇ ತರಗತಿ ವಿದ್ಯಾರ್ಥಿನಿ | ಐವರ ವಿರುದ್ಧ ಕೇಸ್, ನಾಲ್ವರ ಅಮಾನತು

ಶಾಲಾ ಶೌಚಾಲಯದಲ್ಲಿ ವಿದ್ಯಾರ್ಥಿನಿಗೆ ಹೆರಿಗೆ

ಯಾದಗಿರಿ: ಶಹಾಪುರ ನಗರದ ವಸತಿ ಶಾಲೆಯೊಂದರಲ್ಲಿನ ಶೌಚಾಲಯದಲ್ಲಿ ವಿದ್ಯಾರ್ಥಿಯೊಬ್ಬಳು ಮಗುವಿಗೆ ಜನ್ಮ ನೀಡಿದ ಕಳವಳಕಾರಿ ಸಂಗತಿಯೊಂದು ತಡವಾಗಿ ಬೆಳಕಿಗೆ ಬಂದಿದೆ.

ವಸತಿ ಶಾಲೆಯ ಶೌಚಾಲಯದಲ್ಲಿ ಬುಧವಾರ ಮಧ್ಯಾಹ್ನ 2:30ರ ಸುಮಾರಿಗೆ 9ನೇ ತರಗತಿ ಓದುತ್ತಿದ್ದ ವಿದ್ಯಾರ್ಥಿನಿಯ ಹೆರಿಗೆ ಯಾಗಿದ್ದು, ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಸದ್ಯ, ತಾಯಿ-ಮಗು ಆರೋಗ್ಯ ವಾಗಿದ್ದು, ನಗರದ ಸರಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ನಂತರ ಬಾಲಕಿಯನ್ನು ಬಾಲ ಭವನಕ್ಕೆ ಕಳುಹಿಸಿ ಕೊಡಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಗುವಿಗೆ ಜನ್ಮ ನೀಡಿದ ಸಂಗತಿ ಹೊರಬೀಳುತ್ತಿದ್ದಂತೆ ಅಧಿಕಾರಿಗಳ ತಂಡ ಭೇಟಿ ಮಾಹಿತಿ ಪಡೆದು ಕೊಂಡಿದ್ದಾರೆ. ಈ ಸಂಬಂಧ ವಸತಿ ಶಾಲೆಯ ಪ್ರಿನ್ಸಿಪಾಲ್, ವಾರ್ಡನ್, ಬಾಲಕಿ ಸಹೋದರ ಸೇರಿ ಐವರ ವಿರುದ್ಧ ಶಹಾಪುರ ಠಾಣೆಯಲ್ಲಿ ವಿರುದ್ಧ ಎಫ್ಐಆರ್ ದಾಖಲಾಗಿದೆ.

ತಾನಾಯ್ತು, ತನ್ನ ಆಟ-ಪಾಠವಾಯ್ತು ಎನ್ನುವ ವಯಸ್ಸಿನಲ್ಲಿ ಬಾಲಕಿ ಮಗುವಿಗೆ ಜನ್ಮ ನೀಡಿರುವ ಸಂಗತಿ ವಸತಿ ಶಾಲೆಯ ಯಾರೊ ಬ್ಬರಿಗೂ ಗೊತ್ತಿರಲಿಲ್ಲವೇ..? ಇಲ್ಲವೇ, ಗೊತ್ತಿದ್ದರೂ ಸುಮ್ಮನೆ ಎನ್ನುವ ಬಗ್ಗೆ ಇನ್ನಷ್ಟೆ ತಿಳಿಯ ಬೇಕಾಗಿದೆ. ಬಾಲಕಿಯ ಈ ಪರಿಸ್ಥಿತಿಗೆ ಕಾರಣ ಯಾರೆಂಬ ಪತ್ತೆ ಕಾರ್ಯ ಸಹ ಆರಂಭ ವಾಗಿದೆ. ಪಾಲಕರಿಗೆ ಧೈರ್ಯ ತುಂಬಿದ ಡಿಸಿ, ಎಸ್ಪಿ ಸುದ್ದಿ ತಿಳಿದ ಕೂಡಲೇ ಅಧಿಕಾರಿಗಳ ತಂಡ ಸರಕಾರಿ ಆಸ್ಪತ್ರೆಗೆ ಭೇಟಿ ನೀಡಿದ್ದು, ಘಟನೆ ಯಿಂದ ಆಘಾತಕ್ಕೆ ಒಳಗಾಗಿರುವ ಬಾಲಕಿಯ ಪೋಷಕರಿಗೆ ಡಿಸಿ ಹರ್ಷಲ್ ಬೋಯರ್, ಎಸ್ಪಿ ಪೃಥ್ವಿಕ್ ಶಂಕರ್ ಧೈರ್ಯ ತುಂಬಿದ್ದಾರೆ.

ನಾಲ್ವರ ಅಮಾನತು

ವಸತಿ ಶಾಲೆಯಲ್ಲಿ ವಿದ್ಯಾರ್ಥಿನಿ ಆರೋಗ್ಯದ ಬಗ್ಗೆ ಕಾಳಜಿ ವಹಿಸದ ಹಿನ್ನೆಲೆಯಲ್ಲಿ ಕರ್ತವ್ಯಲೋಪ ಆಧಾರದಲ್ಲಿ ಶಾಲೆಯ ಪ್ರಿನ್ಸಿಪಾಲ್, ಸಹಶಿಕ್ಷಕ, ವಾರ್ಡನ್, ದೈಹಿಕ ಶಿಕ್ಷಕರನ್ನು ಅಮಾನತು ಮಾಡಿ ಕ್ರೈಸ್ ಕಾರ್ಯನಿರ್ವಾಹಕ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ. ಘಟನೆ ಸಂಬಂಧ ವಸತಿ ಶಾಲೆ ಪ್ರಿನ್ಸಿಪಾಲ್, ವಾರ್ಡನ್, ಬಾಲಕಿ ಸಹೋದರ ಸೇರಿ ಐವರ ವಿರುದ್ಧ ಶಹಾಪುರ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಇತ್ತ ಮಕ್ಕಳ ರಕ್ಷಣಾ ಘಟಕ ಆಯೋಗವೂ ಮುತುವರ್ಜಿ ವಹಿಸಿ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಡೆಸುತ್ತಿದೆ.

ಸುಮಾರು 2 ತಿಂಗಳ ಹಿಂದ ಯಷ್ಟೇ ವಿದ್ಯಾ ರ್ಥಿನಿಯು ವಸತಿ ನಿಲಯಕ್ಕೆ ಬಂದಿದ್ದಾರೆ. 9 ತಿಂಗಳ ಗರ್ಭಿಣಿ ಯಾಗಿದ್ದರು ಪೋಷಕರು ಮುಚ್ಚಿಟ್ಟಿದ್ದಾರೆ. ವಸತಿ ನಿಲಯದಲ್ಲಿ ಒಂದು ಕೋಣೆಯಲ್ಲಿ 14-15 ವಿದ್ಯಾರ್ಥಿ ಗಳು ಇದ್ದರು. ಆದರೂ ವಸತಿ ನಿಲಯದ ಸಿಬ್ಬಂದಿಗಳ ಗಮನಕ್ಕೆ ಬಂದಿಲ್ಲ. ಈ ಘಟನೆಯ ಕುರಿತು ಸಮಗ್ರ ತನಿಖೆ ಪ್ರಾರಂಭಿಸಲಾಗಿದೆ.

-**ಪೃಥ್ವಿಕ್ ಶಂಕರ್**, ಎಸ್ಪಿ, ಯಾದಗಿರಿ

97 ಲಕ್ಷ ರು.ವಂಚನೆ: ಸೆರೆ

ಚಿತ್ರದುರ್ಗ: ಕಾರು ಚಾಲಕರನ್ನೇ ನಂಬಿ ಎಷ್ಟೋ ಜನರು ದೂರದೂರಿಗೆ ಪ್ರಯಾಣ ಮಾಡುತ್ತಾರೆ. ಆದರೆ ಇಲ್ಲೊಬ್ಬ ಚಾಲಾಕಿ ಚಾಲಕ ಕಾರು ಸಮೇತ ಲಕ್ಷಾಂತರ ರೂ. ಕದ್ದು ಪಾರಾರಿಯಾಗಿದ್ದ. ಪೊಲೀಸರು ಸಿನಿಮೀಯ ಶೈಲಿಯಲ್ಲಿ ಆರೋಪಿ ಬೆನ್ನತ್ತಿ ಹೆಡೆಮುರಿ ಕಟ್ಟಿದ್ದಾರೆ.

ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಪಟ್ಟಣದಲ್ಲಿ ಈ ಘಟನೆ ನಡೆದಿದೆ. ಬೆಂಗಳೂರು ಮೂಲದ ನಿವೃತ್ತ ಎಸ್ಪಿ ಗುರುಪ್ರಸಾದ್ ತಮ್ಮ ಪತ್ನಿಯೊಂದಿಗೆ ಬಳ್ಳಾರಿಯಲ್ಲಿ ಜಮೀನು ಮಾರಾಟ ಮಾಡಲು ಬಾಡಿಗೆ ಕಾರಿನಲ್ಲಿ ತೆರಳಿದ್ದರು. ಅಲ್ಲಿ ಸರಿ ಸುಮಾರು 97 ಲಕ್ಷ ರು.ಗೆ ಜಮೀನು ಮಾರಾಟ ಮಾಡಿದ್ದು, ಕಾರಲ್ಲಿಯೇ ಬೆಂಗಳೂರಿಗೆ ಪ್ರಯಾಣ ಬೆಳೆಸಿದ್ದರು. ಈ ಮಧ್ಯೆ ಚಳ್ಳಕೆರೆಯಲ್ಲಿ ಊಟಕ್ಕೆಂದು ಕಾರು ನಿಲ್ಲಿಸಿ ತೆರಳಿದ್ದರು. ಆಗ ಕಾರು ಚಾಲಕ ಇವರಿಗೆ ಗೊತ್ತಿಲ್ಲದೇ 97 ಲಕ್ಷ ರು. ಹಣದೊಂದಿಗೆ ಕಾರು ಸಮೇತ ಪರಾರಿಯಾಗಿದ್ದ. ಈ ಬಗ್ಗೆ ನಿವೃತ್ತ ಎಸ್ಪಿ ಗುರುಪ್ರಸಾದ್ ಚಳ್ಳಕೆರೆ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಎಚ್ಚೆತ್ತ ಪೊಲೀಸರ ತಂಡ ಕಳ್ಳನ ಪತ್ತೆಗೆ ಬಲೆ ಬೀಸಿದ್ದರು. ಆರೋಪಿ ರಮೇಶ್ ಮೂಲತಃ ಆಂಧ್ರದ ಹಿಂದೂಪುರ ಮೂಲದವನಾದ ಹಿನ್ನೆಲೆ ಆಂಧ್ರದತ್ತ ಪ್ರಯಾಣ ಬೆಳೆಸಿ ಸಿನಿಮಾ ಶೈಲಿಯಲ್ಲಿ ಚೇಸ್ ಮಾಡಿ, ಬಂಧಿಸಿದ್ದಾರೆ.

ವಿಶ್ವವಾಣಿ

ಸಂಪಾದಕೀಯ

ಇದು ನಿಜನಾಯಕನ ತಾಕತ್ತು

'ಏರುವನು ರವಿ ಏರುವನು, ಬಾನೊಳು ಸಣ್ಣಗೆ ತೋರುವನು; ಏರಿದವನು ಚಿಕ್ಕವನಿರಬೇಕಲೆ ಎಂಬ ಮಾತನು ಸಾರುವನು'- ಇದು ಶಾಲೆಗಳಲ್ಲಿ ಓದುವಾಗ ನಾವು ಪದ್ಯಸಾಲಿನಲ್ಲಿ ಕಲಿತಿರುವ ಪಾಠ. ಪಂಜೆ ಮಂಗೇಶರಾಯರು ಬರೆದಿರುವ 'ಮೂಡುವನು ರವಿ ಮೂಡುವನು' ಪದ್ಯದಲ್ಲಿ ಬರುವ ಈ ಸಾಲುಗಳು, 'ಉನ್ನತ ಸ್ಥಿತಿಗೇರಿದವರು ಅಹಂಕಾರದ ಕೂಪದಲ್ಲಿ ಸಿಲುಕದೆ ಹೇಗೆ ವಿನಯವಂತಿಕೆಯನ್ನು ರೂಢಿಸಿಕೊಳ್ಳಬೇಕು' ಎಂಬುದನ್ನು ಸೂಚ್ಯವಾಗಿ ಹೇಳುತ್ತವೆ. ದಶಕಗಳಿಂದಲೂ 'ವಿಶ್ವದ ದೊಡ್ಡಣ್ಣ' ಎಂದೇ ಬೀಗುತ್ತಿರುವ ಅಮೆರಿಕ ದೇಶದ ಈಗಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಧೋರಣೆ-ಧಾರ್ಷ್ಟ್ಯ ಇತ್ಯಾದಿಗಳನ್ನು ಜೀರ್ಣಿಸಿಕೊಳ್ಳಲಾಗದವರಿಗೆ ಈ ಸಾಲುಗಳು ನೆನಪಾಗಿದ್ದರೆ ಅಚ್ಚರಿಯೇನಿಲ್ಲ. 'ತನ್ನನ್ನು ಬಿಟ್ಟರೆ ಇಲ್ಲ' ಎಂಬಂತೆ ಠೇಂಕಾರ ಮೆರೆಯುತ್ತಿರುವ ಟ್ರಂಪ್ ಅವರ ವಿರುದ್ಧ ಜಾಗತಿಕ ಸಮುದಾಯ ನಿಧಾನವಾಗಿ ಒಗ್ಗೂಡುತ್ತಿದೆ, 'ವಿರೋಧಿ-ಅಲೆ'ಯೊಂದು ನಿರುದ್ವಿಗ್ನವಾಗಿ ರೂಪುಗೊಳ್ಳುತ್ತಿದೆ. ಪರದೇಶಿ ಮಾಲುಗಳ ಮೇಲೆ ಅತಿರೇಕದ ಪ್ರಮಾಣದಲ್ಲಿ ಸುಂಕ ಏರಿಸಿ ಮೆರೆಯುತ್ತಿರುವ ಟ್ರಂಪ್, ಅದಕ್ಕಾಗಿ ಪಶ್ಚಾತ್ತಾಪ ಪಡುವ ಕಾಲವೂ ಸನ್ನಿಹಿತವಾಗಿದೆ ಎನಿಸುತ್ತದೆ. ಇದರ ಮೊದಲ 'ಡೋಸ್' ಭಾರತದಿಂದಲೇ ಸಿಕ್ಕಿದೆ. ಕಾರಣ, ಪ್ರಧಾನಿ ನರೇಂದ್ರ ಮೋದಿಯವರೊಂದಿಗೆ ಮಾತುಕತೆ ನಡೆಸಲು ಟ್ರಂಪ್ 4 ಬಾರಿ ದೂರವಾಣಿ ಕರೆ ಮಾಡಿದ್ದರೂ, ಅವರಿಗೆ 'ನಾಟ್ ರೀಚಬಲ್' ಆಗಿದ್ದಾರೆ ಮೋದಿ! ಹೀಗಾಗಿ, 'ಭಾರತದ ಮನವೊಲಿಸುವ ಟ್ರಂಪ್ ಅವರ ಕೊನೆಯ ಕ್ಷಣದ ಕಸರತ್ತು ವಿಫಲವಾಗಿರುವುದರ ದ್ಯೋತಕವಿದು' ಎಂದೇ ರಾಜಕೀಯ ಪಂಡಿತರು ವ್ಯಾಖ್ಯಾನಿಸುತ್ತಿದ್ದಾರಂತೆ. ಇದುವರೆಗೂ, ಅಮೆರಿಕದ ಕಣ್ಣ ಇಶಾರೆಗೆ ತಕ್ಕಂತೆ (ಅದು ಉಚಿತವೇ ಇರಲಿ, ಅನುಚಿತವೇ ಇರಲಿ) ಡೊಗ್ಗು ಸಲಾಮು ಹೊಡೆಯುವುದು ವಿಶ್ವದ ವಿವಿಧ ರಾಷ್ಟ್ರಗಳ ನಾಯಕರ ಚಾಳಿಯಾಗಿತ್ತು. ಆದರೆ ಇಂಥದ್ದಕ್ಕೆಲ್ಲಾ ತಾವು ಸೊಪ್ಪು ಹಾಕುವುದಿಲ್ಲ ಎಂಬ ಸೂಚ್ಯ ವರ್ತನೆಯ ಮೂಲಕ ಪ್ರಧಾನಿ ಮೋದಿಯವರು ಟ್ರಂಪ್‌ಗೆ 'ರಾಜತಾಂತ್ರಿಕ ತಪರಾಕಿ' ಯನ್ನು ಸರಿಯಾಗೇ ನೀಡಿದ್ದಾರೆ. 'ಮೇಲೆ ಏರಿದವನು ಚಿಕ್ಕವನಿರಬೇಕು' ಎಂಬ ಹಿತನುಡಿಯನ್ನು ಕಿವಿಗೆ ಹಾಕಿಕೊಳ್ಳದವರು ಇಂಥ ಪೆಟ್ಟನ್ನು ತಿನ್ನಲೇ ಬೇಕು ಬಿಡಿ!

ಸೊಂಪಾದಕೀಯ

ಗಾಸಿಪ್‌ಗಳಿಗೆ ಬ್ರೇಕ್

'ಅಂತೂ ಇಂತೂ ನಟಿ, ಆ್ಯಂಕರ್ ಅನುಶ್ರೀ ಮದುವೆ ಆಗಿಹೋಗಿದೆ. ರೋಷನ್ ಅವರೊಂದಿಗಿನ ಅನುಶ್ರೀ ಅವರ ಅನುರಾಗದ ಸಂಬಂಧಕ್ಕೆ ಈಗ ಅಧಿಕೃತ ಮುದ್ರೆ ಬಿದ್ದಿದ್ದು 'ಅನು-ಗಾಲವೂ ಸುಖವಾಗಿರಿ' ಅಂತ ಬಂಧುಗಳು, ಸ್ನೇಹಿತರೂ ಆಶೀರ್ವಾದ ಮಾಡಿದ್ದಾರೆ. ಹಾಗಾಗಿ ಅನುಶ್ರೀ ಅವರ ಮನೆಯವರಿಗೇನೋ ಮನೆ ಮಗಳ ಮದುವೆ ಆಯ್ತು ಅಂತ ಸಮಾಧಾನ ಆಗಿದೆ. ಆದರೆ ಅನುಶ್ರೀ ಮದುವೆಯಿಂದ ತುಂಬಲಾರದ ನಷ್ಟ 'ಅನು-ಭವಿಸುತ್ತಿರುವವರು' ಮಾತ್ರ ಸೋಷಿಯಲ್ ಮೀಡಿಯಾದವರು ಮತ್ತು ಮೀಡಿಯಾದವರು. ದಿನಬೆಳಗ್ಗೆ ಎದ್ರೆ ಸಾಕು 'ಏನ್ ಗಾಸಿಪ್ ಇದೆ ನೋಡ್ರೋ' ಅಂತ ಹುಡುಕೋದು, ಏನೂ ಸಿಗಲಿಲ್ಲ ಅಂದ್ರೆ, 'ಅನುಶ್ರೀ ಮದುವೆ ಸುದ್ದಿ ಇದ್ದೇ ಇದೆ' ಅಂತ ಶುರುಹಚ್ಚಿಕೊಳ್ಳೋದು. 'ಇವರೇ ನೋಡಿ ಅನುಶ್ರೀ ಮದುವೆ ಆಗೋ ಹುಡುಗ',



'ಕೊನೆಗೂ ಫಿಕ್ಸ್ ಆಯ್ತು ಆ್ಯಂಕರ್ ಅನುಶ್ರೀ ಮದುವೆ', 'ಅರ್ಜುನ್ ಜನ್ಯ ಮತ್ತು ಅನುಶ್ರೀ ನಡುವೆ ಕುಚ್ ಕುಚ್' ಅಂತ 'ಕುಛ್ ಭೀ' ಎನ್ನಿಸುವಂಥ ಹೆಡ್‌ಲೈನ್‌ಗಳನ್ನು ಬರೆದು ಅದಕ್ಕೆ ಹೊಂದುವ ಥಂಬ್ ನೈಲ್‌ಗಳನ್ನು ರೆಡಿ ಮಾಡಿ ಒಳಗೆ ಅದೇ ಹಳಸಿದ ಸುದ್ದಿ, ಯಾರಿಗೂ ಯಾವ ಕ್ಲಾರಿಟಿಯೂ ಸಿಕ್ಕದ ವಿವರಗಳನ್ನು ಬರೆದು, ಕೊನೆಗೆ ಅನುಶ್ರೀ ಮದುವೆ ಯಾವಾಗ ಅಂತ ಬರೆದು ಒಂದು ಕ್ವೆಶ್ಚನ್ ಮಾರ್ಕ್ ಹಾಕಿ ನಿರಾಳರಾಗುತ್ತಿದ್ದ ಮೀಡಿಯಾ ಮತ್ತು ಸೋಷಿಯಲ್ ಮೀಡಿಯಾದ ಕೆಲವು ಮಂದಿಗೆ ಮಾತ್ರ ಅನುಶ್ರೀ ಅವರ ಮದುವೆ ಖುಷಿ ತಂದಿರಲಿಕ್ಕಿಲ್ಲ. ಅವರ ಮದುವೆಗೇ ಹೋಗಿ ಹರಸಿ ಹೊಟ್ಟೆ ತುಂಬಾ ಊಟ ಮಾಡಿ ಬಂದರೂ ಇವರಿಗೆ ಅವರ ಮದುವೆ ನುಂಗಲಾರದ ತುತ್ತೇ ಸರಿ. ಅವರ ಪ್ರಕಾರ ಅನುಶ್ರೀ ಅವರು ಮದುವೆ ಆಗಿ ಇವರ ಹೊಟ್ಟೆಪಾಡಿಗೆ ಕಲ್ಲು ಹಾಕಿದ್ದಾರೆ. ಇವರ ಹೊಟ್ಟೆ ಮೇಲೆ ಹೊಡೆದಿದ್ದಾರೆ. ಈಗ ಕೆಲಸ ಮಾಡಬೇಕು ಅಂದ್ರೆ ಇನ್ಯಾವುದಾದರೂ ಇಲ್ಲಸಲ್ಲದ ಗಾಸಿಪ್ ಸುದ್ದಿ ಹುಡುಕಬೇಕಲ್ಲ. ಒಟ್ಟಿನಲ್ಲಿ ಒಂದು ಮದುವೆ ಆದರೆ ಅದು ಅನೇಕರ ಸಂತೋಷ ಸಮಾಧಾನಕ್ಕೆ ಕಾರಣ ಆಗುತ್ತೆ. ಆದರೆ ಕೆಲವರಿಗೆ ಮಾತ್ರ ಅವರ ಕೆಲಸಕ್ಕೇ ಕುತ್ತು ತರುತ್ತೆ ಅನ್ನೋದು ಅನುಶ್ರೀ ಅವರ ಮದುವೆಯಿಂದ ಪ್ರೂವ್ ಆಗಿದೆ.

ಸಂಪಾದಕರ ಸದ್ಯಶೋಧನೆ

ಪ್ರಣಬ್ ರಾಷ್ಟ್ರಪತಿ ಆಯ್ಕೆ

ಇದು ಕೆಲ ವರ್ಷಗಳ ಹಿಂದಿನ ಸಂಗತಿ. ಮುಂದಿನ ರಾಷ್ಟ್ರಪತಿಯನ್ನಾಗಿ ಯಾರನ್ನು ಆಯ್ಕೆ ಮಾಡಬೇಕು ಎಂಬ ಪ್ರಶ್ನೆ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿಯವರನ್ನು ಕಾಡುತ್ತಿತ್ತು. ಯಾರ ಹೆಸರೂ ಅಂತಿಮವಾಗಿರಲಿಲ್ಲ. ಆದರೆ ಪ್ರಣಬ್ ಮುಖರ್ಜಿಯವರಿಗೆ ತಮ್ಮ ಹೆಸರೇ ಅಂತಿಮವಾಗಬಹುದು ಎಂಬುದು ಅದ್ಹೇಗೋ ತಿಳಿದಿತ್ತು. ಆದರೆ ಅವರು ಯಾರ ಮುಂದೆಯೂ ಹೇಳಿರಲಿಲ್ಲ. ಅದಾಗಿ 2 ದಿನಗಳ ಬಳಿಕ, ಸೋನಿಯಾರ ರಾಜಕೀಯ ಕಾರ್ಯದರ್ಶಿ ಮತ್ತು ನಂಬುಗಸ್ಥ ಅಹ್ಮದ್ ಪಟೇಲ್, ಮುಖರ್ಜಿಯವರನ್ನು ಭೇಟಿಯಾದರು. 'ನಿಮ್ಮನ್ನು (ಮುಖರ್ಜಿ) ರಾಷ್ಟ್ರಪತಿ ಅಭ್ಯರ್ಥಿಯನ್ನಾಗಿ ಮಾಡಿದರೆ, ಎಡಪಕ್ಷ ಮತ್ತು ಮುಲಾಯಂ ಸಿಂಗ್ ಯಾದವ್ ಅವರ ಸಮಾಜವಾದಿ ಪಕ್ಷಗಳ ಬೆಂಬಲ ಪಡೆದು, ಚುನಾವಣೆಯಲ್ಲಿ ಗೆಲ್ಲುತ್ತೀರಿ ಎಂದು ನಾನು ಸೋನಿಯಾರಿಗೆ ಹೇಳಿದ್ದೇನೆ' ಎಂದು ಪಟೇಲ್ ತಿಳಿಸಿದರು. ಆಗ ಸೋನಿಯಾ ಗಾಂಧಿಯವರು, 'ಸರಿ, ಪ್ರಣಬ್ ಅವರನ್ನು ರಾಷ್ಟ್ರಪತಿಯನ್ನಾಗಿ ಮಾಡಿದರೆ, ಅವರ ಅನುಪಸ್ಥಿತಿಯಲ್ಲಿ ಸರಕಾರಕ್ಕೇನಾದರೂ ಆದರೆ, ನಿಭಾಯಿಸುವವರು ಯಾರು?' ಎಂದು ಕೇಳಿದರಂತೆ. ಆಗ ಅಹ್ಮದ್ ಪಟೇಲ್, ಸೋನಿಯಾರಿಗೆ ಒಂದು ಸಲಹೆ ನೀಡಿದರಂತೆ. ಪ್ರಧಾನಿ ಡಾ.ಮನಮೋಹನ ಸಿಂಗ್ ಅವರನ್ನು ರಾಷ್ಟ್ರಪತಿ ಸ್ಥಾನಕ್ಕೆ ಭಡ್ತಿ ನೀಡಿ, ಪ್ರಣಬ್‌ರನ್ನು ಪ್ರಧಾನಿಯನ್ನಾಗಿ ಮಾಡಿದರೆ ಹೇಗೆ? ಎಂದು ಸೂಚಿಸಿದರಂತೆ. ಈ ಪ್ರಶ್ನೆಗೆ ಸೋನಿಯಾ ತುಟಿ ಪಿಟಿಕ್ಕೆನ್ನಲಿಲ್ಲವಂತೆ. ಸೋನಿಯಾ ಏನಾದರೂ ಹೇಳಬಹುದು ಎಂದು ಪಟೇಲ್ ಎರಡು ನಿಮಿಷ ಮೌನವಾಗಿದ್ದರಂತೆ. ಆದರೆ ಸೋನಿಯಾ ಮಾತನ್ನು ಮುಂದುವರಿಸಲಿಲ್ಲವಂತೆ. ಅಹ್ಮದ್ ಪಟೇಲ್ ಹೇಳಿದ ಆ ಒಂದು ಮಾತಿನಿಂದ ಮುಖರ್ಜಿಯವರಲ್ಲಿ ಪ್ರಧಾನಿಯಾಗುವ ಕೊನೆಯ ಆಸೆ ಚಿಗುರಿತ್ತಂತೆ. ಅದಾಗಿ ಒಂದು ವಾರದ ನಂತರ ಸೋನಿಯಾರನ್ನು ಭೇಟಿಯಾಗಿ ಬಂದಾಗ, ಡಾ.ಸಿಂಗ್ ಅವರನ್ನು ರಾಷ್ಟ್ರಪತಿ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ನಿಲ್ಲಿಸಿದರೂ ನಿಲ್ಲಿಸಬಹುದು ಎಂದು ಮುಖರ್ಜಿಯವರಿಗೆ ಅನ್ನಿಸಿತ್ತಂತೆ. ಒಂದು ವೇಳೆ ಅವರನ್ನು (ಡಾ.ಸಿಂಗ್) ರಾಷ್ಟ್ರಪತಿ ಹುದ್ದೆಗೆ ಪರಿಗಣಿಸಿದರೆ, ತಮ್ಮನ್ನು ಪ್ರಧಾನಿಯನ್ನಾಗಿ ಮಾಡಬಹುದು ಎಂದು ಅಂದುಕೊಂಡರಂತೆ. ಆದರೆ ಅವರ ಊಹೆ ಸುಳ್ಳಾಗಿತ್ತು. ಅದಾಗಿ ಒಂದು ವಾರದ ಬಳಿಕ, ಪ್ರಣಬ್ ಅವರು ಸೋನಿಯರನ್ನು ಭೇಟಿ ಮಾಡಿದರಂತೆ. ಆ ಭೇಟಿಯ ಸಂದರ್ಭದಲ್ಲಿ ಸೋನಿಯಾ ಉಲ್ಲಸಿತರಾಗಿದ್ದರು. ಮುಂದಿನ ರಾಷ್ಟ್ರಪತಿ ಆಯ್ಕೆ ಪ್ರಶ್ನೆ ಬಂತು. ಪ್ರಣಬ್ ಬೇರೆ ವಿಷಯ ಪ್ರಸ್ತಾಪ ಮಾಡಬಹುದು ಎಂದು ಭಾವಿಸಿದ ಸೋನಿಯಾ, 'ರಾಷ್ಟ್ರಪತಿ ಹುದ್ದೆಗೆ ನಿಮ್ಮ ಹೆಸರನ್ನು ಸೂಚಿಸುತ್ತಿದ್ದೇನೆ' ಎಂದು ಥಟ್ಟನೆ ಹೇಳಿದರಂತೆ. ಇದು ನಿರೀಕ್ಷಿಸದೇ ಇದ್ದ ಬೆಳವಣಿಗೆಯೇನೂ ಆಗಿರಲಿಲ್ಲ. ಹೀಗಾಗಿ ಪ್ರಣಬ್‌ಗೆ ಆಶ್ಚರ್ಯವಾಗಲಿಲ್ಲ. 'ನಾನು ಪಕ್ಷದ ಕಾರ್ಯಕರ್ತ. ಪಕ್ಷ ಹೇಳುವ ಯಾವ ಜವಾಬ್ದಾರಿಯನ್ನಾದರೂ ನಿಭಾಯಿಸಲು ನಾನು ಸಿದ್ಧ' ಎಂದರಂತೆ. ಸೋನಿಯಾ ಅವರ ತಲೆಯಲ್ಲಿ ಪ್ರಣಬ್ ಬದಲಿಗೆ ಎಂ.ಹಮೀದ್ ಅನ್ಸಾರಿ ಅವರ ಹೆಸರು ಮೊದಲ ಸ್ಥಾನದಲ್ಲಿ ಇತ್ತೆಂದು ಹಿರಿಯ ಅಧಿಕಾರಿಗಳೊಬ್ಬರು ಪ್ರಣಬ್‌ಗೆ ಹೇಳಿದ್ದರಂತೆ. ಆದರೆ ಅದರ ಸತ್ಯಾಸತ್ಯತೆಯನ್ನು ಖಚಿತಪಡಿಸಿಕೊಳ್ಳುವುದು ಕಷ್ಟ. ಅನ್ಸಾರಿಯವರನ್ನು ರಾಷ್ಟ್ರಪತಿ ಚುನಾವಣೆಗೆ ನಿಲ್ಲಿಸಿದರೆ, ಎಲ್ಲ ಪಕ್ಷಗಳಿಂದ ನಿರೀಕ್ಷಿತ ಬೆಂಬಲ ಸಿಗಲಿಕ್ಕಿಲ್ಲವೆಂದು ಸೋನಿಯಾಗೆ ಅನಿಸಿತಂತೆ. ಆ ಚುನಾವಣೆಯಲ್ಲಿ ಗೆಲ್ಲಲು ಮಮತಾ ಬ್ಯಾನರ್ಜಿಯವರ ಬೆಂಬಲ ತೀರಾ ಅಗತ್ಯವಾಗಿತ್ತು. ಬಂಗಾಳದ ಅಭ್ಯರ್ಥಿಯನ್ನು ಮಮತಾ ಬೆಂಬಲಿಸಬಹುದು ಎನಿಸಿದ್ದರಿಂದ ಪ್ರಣಬ್ ಪರ ಸೋನಿಯಾ ವಾಲಿದರು.

ಎಲ್ಲೋಡಿ ಅಲ್ಲಿ ಕಾರು, ಆದರೆ ಬಿಡುವಂತಿಲ್ಲ ಜೋರು

ಶಿಶಿರಕಾಲ

ಶಿಶಿರ್ ಹೆಗಡೆ

shishirh@gmail.com

ಅಮೆರಿಕದಲ್ಲಿ ಬದುಕು ಸಾಗಬೇಕೆಂದರೆ ಜತೆಯಲ್ಲೊಂದು ಕಾರು ಇರಲೇಬೇಕು. ಸ್ವಂತಕ್ಕೆ- ವೈಯಕ್ತಿಕ ಕಾರಿಲ್ಲವೆಂದರೆ ಬದುಕು ಬಂದೀಖಾನೆ. ಕಾರು ಅವಶ್ಯಕತೆ. ಇಲ್ಲಿ ಬಸ್ ಸೌಲಭ್ಯ ಅತ್ಯಂತ ಸೀಮಿತ. ತೀರಾ ನಗರ ವ್ಯಾಪ್ತಿಯಲ್ಲಿದ್ದರೆ ನಾಲ್ಕಾರು ಬಸ್ ಓಡಾಡುತ್ತವೆ. ಅದು ಕೂಡ ನಗರದಲ್ಲಿ ಎಲ್ಲೆಂದರಲ್ಲಿ ಓಡಾಡುವುದು ಕಷ್ಟ. ಹೇಳಿದಲ್ಲಿ ಹೋಗುವಷ್ಟು- ನಮ್ಮ ಬಿಎಂಟಿಸಿ ರೀತಿಯ ವ್ಯವಸ್ಥೆ ಇಲ್ಲಿಲ್ಲ. ಅಥವಾ ಹೇಳಿದ ಊರಿಗೆ ಹೋಗಬೇಕೆಂದರೆ ಬಸ್ ಸ್ಟ್ಯಾಂಡಿಗೆ ಹೋದರೆ ಅಲ್ಲಿ ಬೋರ್ಡ್ ಹಾಕಿದ ಬಸ್‌ಗಳು ನಿಂತಿರುವುದಿಲ್ಲ. ನಾನು ಶಿಕಾಗೋದಲ್ಲಿ ವಾಸಿಸಲು ಶುರು ಮಾಡಿ ದಶಕವೇ ಕಳೆಯಿತು. ಇಲ್ಲಿಯವರೆಗೆ ಒಮ್ಮೆಯೂ ಬಸ್ ಹತ್ತುವ ಪ್ರಮೇಯವೇ ಬಂದಿಲ್ಲ. ನನಗೆ ಶಿಕಾಗೋ ಬಸ್ ಸ್ಟ್ಯಾಂಡ್ ಎಲ್ಲಿದೆ ಎನ್ನುವುದೇ ಗೊತ್ತಿಲ್ಲ. ತೀರಾ ಪೇಟೆಯಲ್ಲಿ ಬದುಕುವವರಿಗೆ ಕಾರ್ ಪಾರ್ಕಿಂಗ್ ಮಾಡುವ ವ್ಯವಸ್ಥೆ ಅಷ್ಟಿರುವುದಿಲ್ಲ. ಅಪಾರ್ಟ್‌ಮೆಂಟಿನಲ್ಲಿ ಬದುಕುವವರಾದರೂ ಅವರಿಗೆ ಸಾಮಾನ್ಯವಾಗಿ ಒಂದು ಕಾರನ್ನು ಇಡಲಷ್ಟೇ ವ್ಯವಸ್ಥೆ ಇರುತ್ತದೆ. ಎರಡನೇ ಕಾರು ಇಡಬೇಕೆಂದರೆ ಅದಕ್ಕೆ ತಿಂಗಳಿಗೆ 300 ಡಾಲರ್‌ನಿಂದ ನ್ಯೂಯಾರ್ಕ್‌ನಂಥ ನಗರಗಳಲ್ಲಿ 500-600 ಡಾಲರ್ ಪೀಕಬೇಕು. ಹತ್ತಿರತ್ತಿರ ಐವತ್ತು ಸಾವಿರ ರುಪಾಯಿ. ಹಾಗಾಗಿ ಪೇಟೆಯಲ್ಲಿರುವವರು ಅವರಿಗೆ ಅಂಗಡಿ ಇತ್ಯಾದಿ ವ್ಯವಸ್ಥೆ ಸಮೀಪದಲ್ಲಿ ಇರುವುದರಿಂದ ಕಾರ್ ಇಟ್ಟುಕೊಳ್ಳದೆ ಬದುಕಬಹುದು. ಆದರೆ ಹೆಚ್ಚಿನ ಜನವಸತಿಯಿರುವುದು ಉಪನಗರಗಳಲ್ಲಿ. ಅಲ್ಲಿ ಮನೆಗಳ ನಡುವೆ ಅಂಗಡಿಗಳಿರುವುದಿಲ್ಲ. ಮಧ್ಯರಾತ್ರಿ, ಕೊತ್ತಂಬರಿ ಸೊಪ್ಪು ತರಬೇಕೆಂದರೂ ಕಾರು ಬೇಕೇ ಬೇಕು. ಲೆಕ್ಕದ ಪ್ರಕಾರ ಪ್ರತಿ 100 ಜನಕ್ಕೆ 85 ಕಾರು ಅಮೆರಿಕದ ಸರಾಸರಿ. ಇಲ್ಲಿ ಮನೆಗೆಲಸದವರೂ ಕಾರಲ್ಲಿ ಬರುತ್ತಾರೆ ಎನ್ನುವುದು ಸುಳ್ಳಲ್ಲ. ಏಕೆಂದರೆ ಕಾರಿಲ್ಲದೆ ಅವರು ಕೂಡ ಯಾರದೇ ಮನೆ ತಲುಪಲು ಸಾಧ್ಯವೇ ಇಲ್ಲ. ಇಷ್ಟೊಂದು ಪ್ರಮಾಣದ ಕಾರುಗಳು ಇಲ್ಲಿರುವುದರಿಂದ ಅದರ ಸುತ್ತಲಿನ ಕಾನೂನುಗಳು ಕೂಡ ಅಷ್ಟೇ ಮಜಬೂತಾಗಿವೆ.

ನನ್ನ ಸ್ನೇಹಿತ ಪ್ರಸೂನ್ ದೆಹಲಿಯವನು. ಸ್ವಲ್ಪ ಭೋಳೆ ಶಂಕರನಂಥವನು. ಅಮೆರಿಕಕ್ಕೆ ಬಂದ ಹೊಸತರಲ್ಲಿ ನಾನು ಅವನಿಗೆ ಈ ದೇಶವನ್ನು ಪರಿಚಯಿಸುವ ಸ್ನೇಹಿತ. ಮನೆ ವ್ಯವಸ್ಥೆ ಎಲ್ಲ ಆದ ನಂತರ ಲೈಸೆನ್ಸ್, ಕಾರು ಖರೀದಿಸುವುದಕ್ಕೂ ಜತೆಯಲ್ಲಿ ಓಡಾಡಿ ಮಾತುಕತೆ ನಡೆಸಿ ಖರೀದಿಸಿದ್ದೂ ಆಯಿತು. ಪುಣ್ಯಾತ್ಮ ಅಮೆರಿಕಕ್ಕೆ ಬಂದ ಜೋಶ್‌ನಲ್ಲಿದ್ದ. ಹೊಸ ಕಾರು ಖರೀದಿಸಿದ್ದೇ ತಡ, ಮುಂದಿನ ವಾರಾಂತ್ಯಕ್ಕೆ ಕುಟುಂಬ ಸಮೇತ ನಯಾಗರಾ ಫಾಲ್ಸ್‌ಗೆ ಟ್ರಿಪ್ ಹೊರಟುಬಿಟ್ಟ. ಕಾರಿನಲ್ಲಿ ಸುಮಾರು ಹತ್ತು ತಾಸಿನ ದಾರಿ. ಅವನು ಹುಟ್ಟಿದ್ದು ಬೆಳೆದದ್ದು ಎಲ್ಲವೂ ದೆಹಲಿಯಲ್ಲಿ. ಪೇಟೆ ಹುಡುಗ 'ಚಾಲೂ ಇರ್ತಾನೆ' ಎಂದು ನಾನು ಜಾಸ್ತಿ ಎಚ್ಚರಿಸಲಿಲ್ಲ. ಅಮೆರಿಕದ ಹೈವೇ- ಕಾರಿನ ಆಕ್ಸಿಲೇಟರ್ ಪೂರ್ತಿ ಒತ್ತಿ ವೇಗೋತ್ಕರ್ಷದಲ್ಲಿ ಓಡಿಸಿದ್ದಾನೆ. ಅವನು ನಿಗದಿತ ವೇಗದ ಮಿತಿಗಿಂತ ಮೂವತ್ತು ಮೈಲಿ ಹೆಚ್ಚಿನ ವೇಗದಲ್ಲಿದ್ದ.

ಇವನ ಮಿತಿಮೀರಿದ ವೇಗವನ್ನು ಕಂಡದ್ದೇ ಹೈವೇ ಕಾವಲಿನ ಪೊಲೀಸರು ಎಲ್ಲಿಲ್ಲದ ಗಾಬರಿ ಬಿದ್ದಿದ್ದಾರೆ. ಸಾಮಾನ್ಯವಾಗಿ ಅಮೆರಿಕದಲ್ಲಿ ವೇಗದ ಮಿತಿಗಿಂತ 10-15ರಷ್ಟು ಹೆಚ್ಚಿದ್ದರೆ ಪೊಲೀಸರು ತಲೆಕೆಡಿಸಿಕೊಳ್ಳುವುದಿಲ್ಲ. ವೇಗದ ಮಿತಿ ಮೀರಿದರೆ, ಯರ್‍ರಾಬಿರ್‍ರಿ ಕಾರನ್ನು ಚಲಾಯಿಸಿದರೆ ಅಥವಾ ಯಾವುದೇ ನಿಯಮ ಉಲ್ಲಂಘಿಸಿದರೆ ಪೊಲೀಸರು ನಮ್ಮ ಹಿಂದೆ ಬಂದು ತಮ್ಮ ಕಾರಿನ ಮೇಲೆ ಹಾಕಿದ ಬ್ಲಿಂಕರ್ ಲೈಟ್‌ಗಳನ್ನು ಆನ್ ಮಾಡುತ್ತಾರೆ. ಅದನ್ನು ನೋಡುತ್ತಿದ್ದಂತೆ ನಾವು ಕಾರು ಚಲಾಯಿಸುವವರು ರಸ್ತೆಯ ಪಕ್ಕಕ್ಕೆ ಕಾರನ್ನು ನಿಲ್ಲಿಸಬೇಕು. ಇದು ನಿಯಮ. ಆದರೆ ನನ್ನ ಸ್ನೇಹಿತ ಪ್ರಸೂನ್ ಕುಮಾರನಿಗೆ ಅದು ತಿಳಿದಿರಲಿಲ್ಲ. ಒಬ್ಬ ಪೊಲೀಸ್ ಇವನ ಕಾರಿನ ಹಿಂದಕ್ಕೆ ಬಂದು ತನ್ನ ಪೊಲೀಸ್ ಕಾರಿನ ಬ್ಲಿಂಕರ್ ಹಚ್ಚಿದ್ದಾನೆ. ಅದು ಕಾರನ್ನು ನಿಲ್ಲಿಸಬೇಕು ಎಂಬುದರ ಸೂಚನೆ ಎಂದು ಪ್ರಸೂನ್‌ಗೆ ಗೊತ್ತಿರಲಿಲ್ಲ. ಪೊಲೀಸ್ ಬ್ಲಿಂಕರ್ ಕಾಣಿಸಿದ್ದೇ ತಡ, ನಮ್ಮ ಪ್ರಸೂನ್ ಸಾಹೇಬ್ರು ಏನೋ ಎಮರ್ಜೆನ್ಸಿ ಇರಬಹುದು ಎಂದು ತಮ್ಮ ಕಾರನ್ನು ಇನ್ನಷ್ಟು ವೇಗೋತ್ಕರ್ಷ ಮಾಡಿದ್ದಾರೆ. ಸಾಮಾನ್ಯವಾಗಿ ಇಲ್ಲಿನ ಕ್ರಿಮಿನಲ್‌ಗಳು, ಕಳ್ಳಕೋರರು ತಪ್ಪಿಸಿಕೊಳ್ಳುವುದಕ್ಕೆ ಹೀಗೆ ಪೊಲೀಸ್ ಬ್ಲಿಂಕರ್ ಹಾಕಿದ ಮೇಲೆಯೂ ಯರ್‍ರಾಬಿರ್‍ರಿ ಓಡಿಸುವುದಿದೆ. 'ಇದು ಪಕ್ಕಾ ಅದೇ ಕೇಸ್' ಎಂದೇ ಪೊಲೀಸರು ತಿಳಿದಿದ್ದರೆ, ಪೊಲೀಸ್ ಸೈರನ್ ಆದರೂ ಪ್ರಸೂನ್ ಮಾತ್ರ ಒಳ್ಳೆಯ ಪ್ರಜೆಯಾಗಲು ಅವಕ್ಕೆ ದಾರಿ ಮಾಡಿಕೊಡಲು ಇನ್ನಷ್ಟು ವೇಗದಲ್ಲಿ ಓಡಿಸುತ್ತಲೇ ಇದ್ದಾನೆ. ಈಗ ಕಾರು ಒಂದಿರುವುದು, ಎರಡಾಯ್ತು, ನಾಲ್ಕಾಯ್ತು. ಇವನ ಕಾರಿನ ಹಿಂದೆ ಗಣಪತಿಯ ಮೆರವಣಿಗೆಯಂತೆ ಪೊಲೀಸರ ಲೈಟು, ಸೈರನ್ನು. ಸುಮಾರು ಹತ್ತು ಮೈಲಿ ಇದೇ ರೀತಿ ಪೊಲೀಸರು ಇವನನ್ನು ಚೇಸ್ ಮಾಡಿದ್ದಾರೆ. ಪ್ರಸೂನ್ ರಾಯರಿಗೆ ಅದು ತಮ್ಮನ್ನೇ ಚೇಸ್ ಮಾಡುತ್ತಿರುವುದು ಎಂದು ಇನ್ನೂ ತಿಳಿದಿಲ್ಲ. ಅಷ್ಟಕ್ಕೇ ಮುಗಿಯಲಿಲ್ಲ. ಕೊನೆಯಲ್ಲಿ ಒಂದು ಪೊಲೀಸ್ ಹೆಲಿಕಾಪ್ಟರ್ ಅವನೆದುರು ಬಂದು ಹಾರಿದೆ. ಆಗ ಪ್ರಸೂನ್ ಹೌಹಾರಿದ್ದಾನೆ- ಕಾರನ್ನು ನಿಧಾನ ಮಾಡಿ ನಿಲ್ಲಿಸಿದ್ದಾನೆ. ಪೊಲೀಸರು ಪಿಸ್ತೂಲ್ ಮುಖಕ್ಕೆ ಹಿಡಿದು, ಬಂಧಿಸಿ ಆಮೇಲೆ ಕೇಸ್ ಮಾಡಿ ಬಿಟ್ಟಿದ್ದರು. ಅಯ್ಯೋ, ಆಮೇಲೆ ಆರು ತಿಂಗಳು ಕೋರ್ಟಿಗೆ ಅಲೆಯುತ್ತಿದ್ದ. ಅವನಿಗೆ ಅತಿ ವೇಗದ ದಂಡದ ಜತೆಯಲ್ಲಿ ನಾಲ್ಕು ಪೊಲೀಸ್ ವಾಹನ, ಹೆಲಿಕಾಪ್ಟರ್, ಒಂದಿಡೀ ವ್ಯವಸ್ಥೆಯನ್ನು ಅವನ ಕಾರಣದಿಂದ ನಿಯೋಜಿಸಿದ ಖರ್ಚು ಎಲ್ಲ ಸೇರಿಸಿ ಬರೋಬ್ಬರಿ ಹನ್ನೊಂದು ಸಾವಿರ ಡಾಲರ್ ದಂಡ ವಿಧಿಸ ಲಾಯಿತು. ರುಪಾಯಿಯಲ್ಲಿ ಅಂದಾಜಿಸು ವುದಾದರೆ 9 ಲಕ್ಷ ರುಪಾಯಿ.

ಅಮೆರಿಕ ಕಾನೂನು ವ್ಯವಸ್ಥೆ ಭಾಗ-4

ಈ ರೀತಿ ಪೊಲೀಸ್ ವಾಹನ ನಮ್ಮ ಕಾರಿನ ಹಿಂದೆ ಬಂದು ಬ್ಲಿಂಕರ್ ಹಚ್ಚಿದಾಗ ನಾವು ರಸ್ತೆಯ ಪಕ್ಕಕ್ಕೆ ಸರಿದು ನಿಲ್ಲಬೇಕು. ಆದರೆ ಆ ಕ್ಷಣಕ್ಕೆ ನಾವು ಕಾರಿಂದ ಇಳಿಯುವಂತಿಲ್ಲ. ಸುಮ್ಮನೆ ಕಾರಿನೊಳಗೇ ಕುಳಿತಿರಬೇಕು. ಪೊಲೀಸ್ ನಮ್ಮ ಹತ್ತಿರ ಬರುವುದಕ್ಕಿಂತ ಮೊದಲು ನಮ್ಮ ಕಾರಿನ ಸಂಖ್ಯೆಯನ್ನು ತನ್ನ ಕಾರಿನಲ್ಲಿರುವ ಕಂಪ್ಯೂಟರಿನಲ್ಲಿ ಹಾಕಿ, ಎಲ್ಲ ವಿವರಣೆಯನ್ನು ನೋಡಿಕೊಳ್ಳುತ್ತಾನೆ. ಈ ಕಾರು ಯಾರದ್ದು, ಇದರ ಓನರ್ ಯಾರು, ಅವನ ಬಳಿ ಗನ್ ಇದೆಯೇ? ಅಥವಾ ಇವ ಕ್ರಿಮಿನಲ್ ಇತಿಹಾಸವಿರುವವನೇ ಇತ್ಯಾದಿಯನ್ನೆಲ್ಲ ನೋಡಿ ತಿಳಿದು ನಂತರವೇ ಪೊಲೀಸ್ ತನ್ನ ಕಾರಿನಿಂದ ಇಳಿದು ನಮ್ಮ ಬಳಿ ಬರುವುದು. ಆತ ಬಂದಾಗಲೂ ಅಷ್ಟೇ- ಅವನೇ ಹೇಳುವಲ್ಲಿಯವರೆಗೆ ಕಾರಿನೊಳಗೆ ಅಲುಗಾಡುವಂತಿಲ್ಲ. ಎರಡೂ ಕೈ ಅನ್ನು ಸ್ಟಿಯರಿಂಗ್ ಮೇಲೆಯೇ ಇಟ್ಟು ಕಾಯಬೇಕು. ಅವನು 'ಕಾರಿನ ಗಾಜನ್ನು ಇಳಿಸು' ಎಂದಾಗ ನಿಧಾನಕ್ಕೆ ಗಾಜನ್ನು ಇಳಿಸಬೇಕು. ಅಮೆರಿಕದಲ್ಲಿ ಗನ್-ಪಿಸ್ತೂಲುಗಳು ಸಾಮಾನ್ಯ. ಪೊಲೀಸ್ ಈ ರೀತಿ ನಡೆದು ಬಳಿ ಬಂದಾಗ ಕೈ ಆಚೀಚೆ ಜಾಸ್ತಿ ಚಲನವಲನ ಮಾಡಿದರೆ ನೀವು ಗನ್ ಹುಡುಕುತ್ತಿರಬಹುದು ಎಂದು ಭಾವಿಸಬಹುದು. ಹಾಗನ್ನಿಸಿದಲ್ಲಿ ಪೊಲೀಸರಿಗೆ ತಕ್ಷಣ ಆತ್ಮರಕ್ಷಣೆಗೆಂದು ಶೂಟ್ ಮಾಡುವ ಸ್ವಾತಂತ್ರ್ಯವಿದೆ, ಸಾಧ್ಯತೆಯಿದೆ. ಹಾಗಾಗಿ ಅವನು ಬಂದು ಗ್ಲಾಸ್ ಇಳಿಸಿ ಎಂದ ಮೇಲೆಯೇ ಮಾತು. ಪೊಲೀಸ್ ಬಂದು ಯಾವ ಕಾರಣಕ್ಕೆ ತಾನು ನಿಲ್ಲಿಸಿದ್ದು ಎಂದು ವಿವರಿಸುತ್ತಾನೆ. ನಂತರ ಲೈಸೆನ್ಸ್, ಆರ್‌ಸಿ ಪರಿಶೀಲಿಸಿದ ಮೇಲೆ ದಂಡದ ಹಾಳೆ ಕೊಟ್ಟು ಹೊರಟು ಬಿಡುತ್ತಾನೆ.

ಕುಡಿದು ಕಾರು ಚಲಾಯಿಸುವುದು ಲೆಕ್ಕ ಮೀರಿದ ಅಪರಾಧ. ವಾಹನ ಚಲಾಯಿಸುವಾಗ ಅಳತೆ ಮೀರಿ ಕುಡಿದಿದ್ದರೆ ಯಥೇಚ್ಛ ದಂಡ, ಲೈಸೆನ್ಸ್ ರದ್ದು ಇತ್ಯಾದಿ. ಇನ್ನು ಕೆಲವು ರಾಜ್ಯಗಳಲ್ಲಿ ಜೈಲು. ಅಷ್ಟಾಗಿಯೂ ಅಮೆರಿಕದಲ್ಲಿನ ಕಾರು ಅಪಘಾತದಲ್ಲಿ ಶೇ.30ರಷ್ಟು ಸಾವು ಆಗುವುದು ಕುಡಿದು ವಾಹನ ಚಲಾಯಿಸುವುದರಿಂದ. ಈ ಕಾರಣಕ್ಕೆ ಕೆಲವು ರಾಜ್ಯಗಳು ವಿಚಿತ್ರ ಕಾನೂನನ್ನು ಮಾಡಿಕೊಂಡಿವೆ. ಕೆಲವು ರಾಜ್ಯಗಳಲ್ಲಿ ಅಂಥವರ ಲೈಸೆನ್ಸ್ ಅನ್ನು ಆಜೀವ ರದ್ದು ಮಾಡಲಾಗುತ್ತದೆ. ಇನ್ನು ಅಲಾಸ್ಕಾ ಮೊದಲಾದ ರಾಜ್ಯಗಳಲ್ಲಿ ಅಂಥವರಿಗೆ ಪ್ರತ್ಯೇಕ ಲೈಸೆನ್ಸ್ ಪ್ಲೇಟ್. ಅದನ್ನು ನೋಡುತ್ತಿದ್ದಂತೆ ಪೊಲೀಸರು ಯಾವಾಗ ಬೇಕಾದರೂ ನಿಲ್ಲಿಸಿ ಡ್ರೈವರ್ ಅನ್ನು ಪರೀಕ್ಷಿಸಬಹುದು. ಜತೆಯಲ್ಲಿ ಅವಮಾನ- ಇವನು ಕುಡಿದು ವಾಹನ ಚಲಾಯಿಸಿ ಸಿಕ್ಕಿಬಿದ್ದವನು ಎಂಬುದು ಕಾರಿನ ನಂಬರ್ ಪ್ಲೇಟ್ ನೋಡಿದವರಿಗೆಲ್ಲ ತಿಳಿಯುತ್ತದೆ.

ಆಂಬುಲೆನ್ಸ್‌ಗೆ ದಾರಿ ಹೇಗೆ ಕೊಡಬೇಕು ಎಂಬುದನ್ನು ಅಮೆರಿಕವನ್ನು ನೋಡಿ ಕಲಿಯಬೇಕು ಎಂಬುದು ಸುಳ್ಳಲ್ಲ. ಸಾಮಾನ್ಯವಾಗಿ ಹೆಚ್ಚಿನ ರಸ್ತೆಯ ಒಂದು ಲೇನ್ ಅನ್ನು ಎಮರ್ಜೆನ್ಸಿ ಕಾರಣಕ್ಕೆಂದೇ ಬಿಟ್ಟಿಡಲಾಗುತ್ತದೆ. ಅದರಲ್ಲಿ ಪೊಲೀಸರು ಅಥವಾ ಆಂಬುಲೆನ್ಸ್ ಮೊದಲಾದವುಗಳು ಹೋಗಲಿಕ್ಕಷ್ಟೇ ಅನುಮತಿ. ಆ ಲೇನ್ ಅನ್ನು ಜನಸಾಮಾನ್ಯರು ಬಳಸಿದರೆ ಅದು ಅಪರಾಧ. ಅದಿಲ್ಲದ ಜಾಗದಲ್ಲಿಯೂ ಯಾವುದೇ ಆಂಬುಲೆನ್ಸ್ ಅಥವಾ ಪೊಲೀಸರು ಬ್ಲಿಂಕರ್ ಹಾಕಿ ಬಂದರೆ ಸಾವಿರಾರು ಕಾರುಗಳು ದಾರಿಮಾಡಿಕೊಡಬೇಕು. ಎದುರು ರಸ್ತೆಯಲ್ಲಿ ಅಥವಾ ನಮ್ಮದೇ ರಸ್ತೆಯಲ್ಲಿ ಆಂಬುಲೆನ್ಸ್ ಬರುತ್ತಿರುವುದು ಕಾಣಿಸಿದರೆ ವಾಹನವನ್ನು ಆದಷ್ಟು ರಸ್ತೆಯ ಬದಿಗೆ ತಂದು ಸಂಪೂರ್ಣ ನಿಲ್ಲಿಸಬೇಕು, ದಾರಿ ಮಾಡಿಕೊಡಬೇಕು. ಟ್ರಾಫಿಕ್ ಎಷ್ಟೇ ಇರಲಿ, ಎಮರ್ಜೆನ್ಸಿ ವಾಹನ ಬಂದಿತೆಂದರೆ ಸಾವಿರಾರು ಕಾರುಗಳು ದಾರಿಮಾಡಿಕೊಡುತ್ತವೆ. ಆಂಬುಲೆನ್ಸ್ ಬಂದದ್ದು ತಿಳಿಯಲಿಲ್ಲ, ದಾರಿ ಮಾಡಿಕೊಡಲಿಲ್ಲ ಎಂದರೆ, ಅಂಥ ಅಪರಾಧಗಳಿಗೆ ಶಿಕ್ಷೆ ವಿಭಿನ್ನ. ಆ ರೀತಿಯ ಅಪರಾಧಕ್ಕೆ ಯಥೇಚ್ಛ 500 ಡಾಲರ್ ವರೆಗಿನ ದಂಡ, ಜತೆಯಲ್ಲಿ ಕಮ್ಯುನಿಟಿ ಸರ್ವೀಸ್.

ಕಮ್ಯುನಿಟಿ ಸರ್ವೀಸ್ ಎಂದರೆ ಏನಾದರೂ ಸಾರ್ವಜನಿಕ ಕೆಲಸ. ಇದು ತೀರಾ ಸಾಮಾನ್ಯ ಶಿಕ್ಷೆ. ತಪ್ಪು ಮಾಡಿ ಈ ಶಿಕ್ಷೆಗೊಳಗಾದವರು ವಾರಾಂತ್ಯ ಈ ಕಮ್ಯುನಿಟಿ ಸರ್ವೀಸ್‌ಗೆಂದು ನಿಗದಿತ ಜಾಗಕ್ಕೆ ತೆರಳಬೇಕು. ಅಲ್ಲಿ ಈ ರೀತಿಯ ಅಪರಾಧ ಮಾಡಿ ದವರೆಲ್ಲ ಸೇರಿರುತ್ತಾರೆ. ಅವರನ್ನು ಗುಂಪಿನಲ್ಲಿ ರಸ್ತೆಯ ಪಕ್ಕದಲ್ಲಿ, ಬ್ರಿಡ್ಜ್‌ನ ಕೆಳಗಡೆ ಇತ್ಯಾದಿ ಜಾಗದಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಲಾಗುತ್ತದೆ. ಅವರು ಅಲ್ಲಿನ ಕಸ ಹೆಕ್ಕಬೇಕು ಇತ್ಯಾದಿ. ಅಲ್ಲಿ ಪಿಕ್‌ಪಾಕೆಟ್, ಚಿಕ್ಕಪುಟ್ಟ ಅಪರಾಧ ಮಾಡಿದವರೆಲ್ಲಾ ಜತೆಯಾಗುತ್ತಾರೆ. ಅಂಥವರ ಜತೆಯಲ್ಲಿ ಸೇರಿ ನಾಲ್ಕಾರು ವಾರಾಂತ್ಯ ಈ ಕೆಲಸಕ್ಕೆ ಹೋಗಿ ಬಂದರೆ ಪಾಪ ಪರಿಹಾರ.

ಬಸ್ಸು ಕಡಿಮೆ, ಆಟೋರಿಕ್ಷಾ ಇಲ್ಲ, ಬೈಕ್ ತೀರಾ ವಿರಳ. ರಸ್ತೆಯೆಂದರೆ ಒಂದೋ ಕಾರುಗಳು, ಇಲ್ಲವೇ ಯಮಗಾತ್ರದ ಟ್ರಕ್. ಕಾರಿನ ಯಾವ ಯಾವ ದಂಡಗಳಿವೆಯೋ ದಂಡದ ಪ್ರಮಾಣ ಟ್ರಕ್ ಚಾಲಕರಿಗೆ ದುಪ್ಪಟ್ಟು. ಕುಡಿದು ಚಲಾಯಿಸಿ ಸಿಕ್ಕಿಹಾಕಿಕೊಂಡಲ್ಲಿ ಆಜೀವನ ಲೈಸೆನ್ಸ್ ರದ್ದು ಇತ್ಯಾದಿ. ಕಾರಣ ಅವರೇನಾದರೂ ಇಂಥ ತಪ್ಪು ಮಾಡಿದರೆ ಅವುಗಳ ಗಾತ್ರದ ಕಾರಣದಿಂದಾಗಿ ಹಾನಿಯೂ ಹೆಚ್ಚು. ಟ್ರಕ್ ಅನ್ನು ಪೊಲೀಸರು ನಿಲ್ಲಿಸುವ ಪರಿ ಸ್ವಲ್ಪ ವಿಭಿನ್ನ. ಉದ್ದದ ಟ್ರಕ್‌ನ ಹಿಂದೆ ಬಂದು ಪೊಲೀಸ್ ಬ್ಲಿಂಕರ್ ಹಾಕಿದರೆ ಕಾಣಿಸುವುದಿಲ್ಲ. ಹಾಗಾಗಿ ಪೊಲೀಸರು ಟ್ರಕ್ ಎದುರಿಗೆ ಬಂದು ಬ್ಲಿಂಕರ್ ಹಾಕುತ್ತಾರೆ, ಅದನ್ನು ನೋಡಿದ ಟ್ರಕ್ ಡ್ರೈವರ್ ಆ ಪೊಲೀಸ್ ವಾಹನವನ್ನು ಹಿಂಬಾಲಿಸಬೇಕು ಮತ್ತು ನಿಲ್ಲಿಸಬೇಕು. ಟ್ರಕ್ ವಾಹನ ಮತ್ತು ಚಾಲಕರು ಯಥೇಚ್ಛ ಅಪಘಾತಕ್ಕೆ ಕಾರಣರಾಗುತ್ತಾರೆ- ಹಾಗಾಗಿ ಒಬ್ಬ ಟ್ರಕ್ ಡ್ರೈವರ್ ಎಷ್ಟು ಹೊತ್ತು ಟ್ರಕ್ ಚಲಾಯಿಸಬೇಕು, ಎಷ್ಟು ವಿಶ್ರಾಂತಿ ತೆಗೆದುಕೊಳ್ಳಬೇಕು ಎಂಬುದಕ್ಕೆ ಕಾನೂನಿದೆ. ಒಬ್ಬ ಡ್ರೈವರ್ ಪ್ರತಿನಿತ್ಯ 11 ತಾಸು ಮಾತ್ರ ಟ್ರಕ್ ಚಲಾಯಿಸಬಹುದು. ಹನ್ನೊಂದು ತಾಸಿಗಿಂತ ಒಂದೇ ನಿಮಿಷ ಹೆಚ್ಚಿಗೆ ಓಡಿಸಿದರೂ ಅದು ಶಿಕ್ಷಾರ್ಹ ಅಪರಾಧ. ಪ್ರತಿ ಎಂಟು ಗಂಟೆಗೆ ಇಂತಿಷ್ಟು ವಿಶ್ರಾಂತಿ ತೆಗೆದುಕೊಳ್ಳಲೇಬೇಕು. ಅಷ್ಟೇ ಅಲ್ಲ, ಒಮ್ಮೆ 11 ತಾಸು ಕಳೆದು ವಾಹನ ನಿಲ್ಲಿಸಿದರೆ ಮುಂದಿನ 14 ತಾಸು ಟ್ರಕ್ ಚಲಾಯಿಸುವಂತಿಲ್ಲ- ವಿರಮಿಸಬೇಕು. ಅದೆಲ್ಲವನ್ನೂ ಲೆಕ್ಕವಿಡಲು ಪ್ರತಿ ಟ್ರಕ್‌ನಲ್ಲಿ Electronic Logging Device (ELD)- ಚಿಕ್ಕದೊಂದು ಇಲೆಕ್ಟ್ರಾನಿಕ್ ಸಾಧನವನ್ನು ಅಳವಡಿಸಲಾಗುತ್ತದೆ. ಅದು ಇದೆಲ್ಲದರ ಲೆಕ್ಕವಿಡುತ್ತದೆ. ಎಲ್ಲಾ ಮಾಹಿತಿಯನ್ನು ಪೊಲೀಸ್ ವ್ಯವಸ್ಥೆಗೆ ಮತ್ತು ಟ್ರಕ್ ಕಂಪನಿಗಳಿಗೆ ರವಾನಿಸುತ್ತದೆ. ಒಂದು ವೇಳೆ ಯಾವುದೇ ಡ್ರೈವರ್ ಇದನ್ನು ಮೀರಿ ವರ್ತಿಸಿದರೆ ಆತನಿಗೆ ತಕ್ಷಣ ಟ್ರಕ್ ನಿಲ್ಲಿಸುವಂತೆ ಅವನ ಕಂಪನಿಯಿಂದಲೇ ಕರೆಬರುತ್ತದೆ. ಅದನ್ನೂ ಮೀರಿದನೆಂದುಕೊಳ್ಳಿ- ಪೊಲೀಸ್ ವ್ಯವಸ್ಥೆಗೆ ಇದು ಮುಟ್ಟುತ್ತದೆ ಮತ್ತು ಆ ಟ್ರಕ್ ಇರುವ ಸ್ಥಳೀಯ ಪೊಲೀಸರು ಅವನ ಬೆನ್ನುಬಿದ್ದು ಬಂಧಿಸುತ್ತಾರೆ. ಮಂಡೆ ಸಮ ಇಲ್ಲದವರಷ್ಟೇ ಇಂಥ ನಿಯಮ ಮೀರಲು ಸಾಧ್ಯ- ಟ್ರಕ್‌ಗೆ ಕಾನೂನು ಅಷ್ಟು ಗಡ್ಡು.

ಅಮೆರಿಕದಲ್ಲಿ ಆಕ್ಸಿಡೆಂಟ್ ಮಾಡಿ ಆ ಜಾಗದಿಂದ ಓಡಿಹೋದರೆ ಅದರಷ್ಟು ದೊಡ್ಡ ತಪ್ಪು ಇನ್ನೊಂದಿಲ್ಲ. 'ಹಿಟ್ ಆ್ಯಂಡ್ ರನ್' ಮಾಡಿ ಸಿಕ್ಕಿಬಿದ್ದರೆ ಅವನು ಮುಂದೆ ಕಾರು ಚಲಾಯಿಸುವ ಆಸೆ ಬಿಡುವಷ್ಟು ಕಾನೂನು. ಓಡಿಹೋದವನು ಕುಡಿದಿರಬಹುದು, ಲೈಸೆನ್ಸ್ ಇಲ್ಲದಿರಬಹುದು ಇತ್ಯಾದಿ ಏನೇ ಸಾಧ್ಯತೆಯಿರಬಹುದು. ಹಾಗಾಗಿ ಅಪಘಾತವೇ ಇರಲಿ, ಅಥವಾ ಬೇರೊಂದು ಚಿಕ್ಕದೊಂದು ಸ್ಕ್ರಾಚ್ ಮಾಡಿದ್ದರೂ ಅಲ್ಲಿ ನಿಂತು ಬಗೆಹರಿಸಿಕೊಳ್ಳಬೇಕು ಎಂಬುದು ಕಾನೂನು. ಆಕ್ಸಿಡೆಂಟ್ ಆದಾಗಲೂ ಅಷ್ಟೇ. ನಾವು ಇನ್ನೊಬ್ಬ ಕಾರಿನವನ ಜತೆ ಜಗಳ, ಯುದ್ಧಕ್ಕೆ ನಿಲ್ಲಬೇಕೆಂದಿಲ್ಲ. ನಮ್ಮಷ್ಟಕ್ಕೆ ನಾವು, ಅವನಷ್ಟಕ್ಕೆ ಅವನು. ಪೊಲೀಸರಿಗೆ ಕರೆ ಮಾಡಿ ಅವನು ಬಂದು, ರಿಪೋರ್ಟ್ ಕೊಟ್ಟು ಹೋಗುತ್ತಾನೆ. ಆ ರಿಪೋರ್ಟ್ ಹಿಡಿದು ನಮ್ಮ ವಾಹನ ಸರಿಪಡಿಸಿಕೊಳ್ಳಬೇಕು. ಹಾಗಾಗಿ ಬಹುತೇಕ ಆಕ್ಸಿಡೆಂಟ್ ಆದಾಗ ಇನ್ನೊಬ್ಬ ವಾಹನದವನ ಜತೆ ನಾವು ಮಾತಾಡುವುದು ಕೂಡ ಇಲ್ಲ. ನಾನು ಪೊಲೀಸರಿಗೆ ಮಾಡಲೋ, ನೀನು ಮಾಡುತ್ತೀಯೋ ಎಂದು ಸೌಜನ್ಯಕ್ಕೆ ಕೇಳುವುದಷ್ಟೇ ಅಲ್ಲಿನ ಮಾತುಕತೆ.

ಇಲ್ಲಿ ವಾಹನ ಸಂಬಂಧಿ ಅಪರಾಧಕ್ಕೆ ಅತಿ ವೇಗಕ್ಕೆ ದಂಡ 200-500 ಡಾಲರ್, ಲೈಸೆನ್ಸ್ ರದ್ದು. ಅದು ಬಿಟ್ಟು ಆಕ್ಸಿಡೆಂಟ್ ಉದ್ದೇಶಪೂರ್ವಕ ಅಜಾಗರೂಕತೆಯಿಂದಾಗಿದ್ದಾದರೆ, ಉದಾಹರಣೆಗೆ ಹೈವೇಗಳಲ್ಲಿ ರೇಸಿಂಗ್, ವೀಲಿಂಗ್ ಇತ್ಯಾದಿ ಮಾಡಿದರೆ ದಂಡ 2500 ಡಾಲರ್ (ಎರಡೂಕಾಲು ಲಕ್ಷ ರುಪಾಯಿಗೆ ಸಮ) ವರೆಗೂ ಬೀಳಬಹುದು. ಈ ಎಲ್ಲಾ ಅಪರಾಧವನ್ನು ಸರಕಾರ ಇನ್ಶೂರೆನ್ಸ್ ಕಂಪನಿಯ ಜತೆ ಹಂಚಿಕೊಳ್ಳುತ್ತದೆ. ಪ್ರತಿ ಅಪರಾಧ ಮಾಡಿದಾಗಲೂ ಇನ್ಶೂರೆನ್ಸ್ ಕಂಪನಿ ತನ್ನ ಪ್ರೀಮಿಯಂ ಮೇಲೇರಿಸುತ್ತದೆ. ಏಕೆಂದರೆ ಯಾರು ವಾಹನ ಚಲಾವಣೆ ಸರಿಮಾಡುವುದಿಲ್ಲವೋ ಅಂಥವರಿಂದ ರಿಸ್ಕ್ ಜಾಸ್ತಿ, ಹಾಗಾಗಿ ಪ್ರೀಮಿಯಂ ಕೂಡ ಮೇಲೇರುತ್ತದೆ. ಈ ಎಲ್ಲಾ ಮಾಹಿತಿಯನ್ನು ನೋಡಿಯೇ ನಮ್ಮ ಪ್ರೀಮಿಯಂ ಮೊತ್ತವನ್ನು ಇನ್ಶೂರೆನ್ಸ್ ಕಂಪನಿ ನಿಗದಿಮಾಡುವುದು. ಇಲ್ಲಿನ ಸರಕಾರ ಆ ಮಾಹಿತಿಯನ್ನು ಎಲ್ಲಾ ಇನ್ಶೂರೆನ್ಸ್ ಕಂಪನಿಗೂ ಬಹಿರಂಗ ನೀಡುತ್ತದೆ. ಹಾಗಾಗಿ ನಾವು ಯಾವುದೇ ಇನ್ಶೂರೆನ್ಸ್ ಕಂಪನಿಗೆ ಹೋದರೂ ನಮ್ಮ ಜತೆಯಲಿಯ ನಮ್ಮ ವಾಹನ ಚಲಾವಣೆಯ ಇತಿಹಾಸ ಕೂಡ ಅವರಿಗೆ ತಲುಪಿರುತ್ತದೆ. ಅಮೆರಿಕದಲ್ಲಿ ಕಾರಿನ ಇನ್ಶೂರೆನ್ಸ್ ಬಲು ತುಟ್ಟಿ. ಒಂದು ಅಂದಾಜಿಗೆ- ಎರಡು ಕಾರಿಗೆ ವಾರ್ಷಿಕ ನಾನು ತುಂಬುವ ಇನ್ಶೂರೆನ್ಸ್ ಪ್ರೀಮಿಯಂ 3000 ಡಾಲರ್. ಒಂದುವೇಳೆ ನಾನು ಸ್ಪೀಡಿಂಗ್- ಅತಿವೇಗಕ್ಕೆ ಸಿಕ್ಕಿಬಿದ್ದೆ ಎಂದಿಟ್ಟುಕೊಳ್ಳಿ. ಅದು ಪೊಲೀಸ್ ರಿಪೋರ್ಟ್ ಆಗಿ ಇನ್ಶೂರೆನ್ಸ್‌ಗೆ ತಿಂಗಳೊಳಗೆ ತಲುಪಿ 3000 ಇದ್ದ ಪ್ರೀಮಿಯಂ 4000 ಡಾಲರ್ ಆಗಬಹುದು. ರಸ್ತೆಯ ಅಪರಾಧ ಹೆಚ್ಚಿಗೆ ಮಾಡಿದಂತೆ ಹೆಚ್ಚಿನ ಪ್ರೀಮಿಯಂ. ಅಪರಾಧಕ್ಕೆ ದಂಡ ಬೇರೆ, ಮೇಲಿಂದ ಎರಡು ವರ್ಷ ಹೆಚ್ಚಿದ ಇನ್ಶೂರೆನ್ಸ್ ಪ್ರೀಮಿಯಂ.

ನಾನು ಒಮ್ಮೆ ವೇಗದ ಮಿತಿ ಮೀರಿ ಪೊಲೀಸರ ಬಳಿ ಸಿಕ್ಕಿಹಾಕಿಕೊಂಡಿದ್ದೆ. ವೇಗದ ಮಿತಿಗಿಂತ ಹದಿನೈದು ಮೈಲಿ ಹೆಚ್ಚಿನ ವೇಗದಲ್ಲಿದ್ದೆ. ದಂಡ 350 ಡಾಲರ್. ನಂತರದಲ್ಲಿ ನನ್ನ ಇನ್ಶೂರೆನ್ಸ್ ಪ್ರೀಮಿಯಂ ತಿಂಗಳಿಗೆ ನೂರು ಡಾಲರ್ ಹೆಚ್ಚಿತು. ಎರಡು ವರ್ಷ. ಒಟ್ಟಾರೆ ಒಮ್ಮೆ ವೇಗ ಮೀರಿದ್ದಕ್ಕೆ ನಾನು ಕಳೆದುಕೊಂಡದ್ದು ಬರೋಬ್ಬರಿ 2750 ಡಾಲರ್. ಹತ್ತಿರತ್ತಿರ ಎರಡೂವರೆ ಲಕ್ಷ ರುಪಾಯಿಗೆ ಸಮ. ಟ್ರಾಫಿಕ್ ರೂಲ್ಸ್ ಪಾಲಿಸದೆ ಸಿಕ್ಕಿಬಿದ್ದಲ್ಲಿ 'ಈ ಕುಂಡೆ ಸುಟ್ಟುಕೊಂಡ' ಉರಿ ಎರಡು ವರ್ಷದವರೆಗೂ ಇರುತ್ತದೆ. ಹಾಗಾಗಿಯೇ ಹೆಚ್ಚಿನ ವರು ಎಲ್ಲಾ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸುತ್ತಾರೆ.

ಟ್ರಂಪ್, ಭಾರತ ಈಗ ಬಡರಾಷ್ಟ್ರವಲ್ಲ, ಯಾರಿಗೂ ಮಂಡಿಯೂರಲ್ಲ!

ಯುರೋಪಿನ ರಾಷ್ಟ್ರಗಳೆಲ್ಲ ಟ್ರಂಪ್ ಎದುರು ಕಮಕ್ ಕಿಮಕ್ ಎನ್ನುತ್ತಿಲ್ಲ. ಚೀನಾ ಕ್ಯಾರೇ ಎನ್ನುತ್ತಿಲ್ಲ. ಆದರೆ ಭಾರತವೂ ಮಂಡಿಯೂರಿಲ್ಲ. ಅದು ಸಾಧ್ಯವೂ ಇಲ್ಲ. ಇದೇ ವರ್ಷ ಫೆಬ್ರವರಿಯಲ್ಲಿ ವಾಷಿಂಗ್ಟನ್‌ನಲ್ಲಿ ನೀಡಿದ ಜಂಟಿ ಹೇಳಿಕೆಯಲ್ಲಿ, ಭಾರತ-ಅಮೆರಿಕ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆಯನ್ನು ಹೊಂದಿರುವ ರಾಷ್ಟ್ರವೆಂದು ಟ್ರಂಪ್ ಒಪ್ಪಿಕೊಂಡಿದ್ದರು. ಅವರೇ ಈಗ ಉಲ್ಟಾ ಹೊಡೆದಿದ್ದಾರೆ.

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.

vveditoped@gmail.com

"ಭಾರತವು ರಷ್ಯಾದಿಂದ ಡಿಸ್ಕೌಂಟ್ ದರದಲ್ಲಿ ಕಚ್ಚಾತೈಲವನ್ನು ಕೇವಲ ಖರೀದಿಸುತ್ತಿಲ್ಲ, ಅದನ್ನು ಪೆಟ್ರೋಲ್, ಡೀಸೆಲ್ ಆಗಿ ಸಂಸ್ಕರಿಸಿ, ಬೇರೆ ದೇಶಗಳಿಗೆ ಮಾರಾಟ ಮಾಡುವ ಮೂಲಕ ಭರ್ಜರಿ ಲಾಭ ಮಾಡಿಕೊಳ್ಳುತ್ತಿದೆ ಎಂಬ ಆರೋಪ ಇದೆ. ಇದಕ್ಕೆ ನೀವೇನು ಹೇಳುತ್ತೀರಿ?'' ಎಂದು ವಿದೇಶಾಂಗ ಸಚಿವ ಜೈ ಶಂಕರ್ ಅವರನ್ನು ಸಂದರ್ಶಕರೊಬ್ಬರು ಇತ್ತೀಚೆಗೆ ಪ್ರಶ್ನಿಸಿದರು. ಆಗ ಮುಗುಳ್ನಕ್ಕ ಸಚಿವ ಜೈ ಶಂಕರ್, ''ನೋಡಿ, ಅಮೆರಿಕದ ವ್ಯಾಪಾರ-ಸ್ನೇಹಿ ಸರಕಾರದ ಪರ ಮಾತನಾಡುವವರು, ಬೇರೆಯವರು ಮಾಡುವ ಬಿಸಿನೆಸ್ ಬಗ್ಗೆ ದೂಷಿಸುವುದು ಹಾಸ್ಯಾಸ್ಪದ. ನಿಜಕ್ಕೂ ವಿಚಿತ್ರ. ನೀವು ಭಾರತದಿಂದ ತೈಲ ಅಥವಾ ಸಂಸ್ಕರಿತ ತೈಲವನ್ನು ಖರೀದಿಸದಿದ್ದರೆ ಬೇಡ ಬಿಡಿ, ಯಾರೂ ಬಲವಂತ ಮಾಡುತ್ತಿಲ್ಲ. ಯುರೋಪ್ ಖರೀದಿಸುತ್ತಿದೆ, ಅಮೆರಿಕ ಪಡೆಯುತ್ತಿದೆ, ಬೇರೆ ದೇಶಗಳೂ ಕೊಳ್ಳುತ್ತಿವೆ, ನಿಮಗೆ ಬೇಡವಾಗಿದ್ದರೆ ಬಿಟ್ಟುಬಿಡಿ'' ಎಂದಿದ್ದರು!

ಅಮೆರಿಕಕ್ಕೂ ಭಾರತದಿಂದ ಪೆಟ್ರೋಲ್-ಡೀಸೆಲ್ ಮಾರಾಟವಾಗುತ್ತಿದೆಯಾ? ಅಂತ ನೀವು ಕೇಳಬಹುದು! ಅದು ನಿಜ. ಭಾರತದಿಂದ ರಿಲಯನ್ಸ್ ಇಂಡಸ್ಟ್ರೀಸ್, ಬಿಪಿ, ಎಕ್ಸೋನ್ ಮೊಬಿಲ್, ಗ್ಲೆನ್‌ಕೋರ್ ಮೊದಲಾದ ಕಂಪನಿಗಳು ಅಮೆರಿಕ ಸೇರಿದಂತೆ ಹಲವು ದೇಶಗಳಿಗೆ ಸಂಸ್ಕರಿತ ತೈಲವನ್ನು ಮಾರಾಟ ಮಾಡುತ್ತವೆ, ಇರಲಿ.

''ಭಾರತ-ಅಮೆರಿಕ ನಡುವಿನ ಸಂಬಂಧಗಳಲ್ಲಿ ಒಂದಷ್ಟು ವ್ಯತ್ಯಾಸವಾಗಿದೆ. ಮೊದಲಿನಿಂದಲೂ ಹಲವಾರು ಸಂದರ್ಭಗಳಲ್ಲಿ ವಿವಾದಗಳು ಉಂಟಾಗಿತ್ತು. ದೊಡ್ಡ ರಾಷ್ಟ್ರಗಳಿಗೆ ಹಲವಾರು ಸಂಬಂಧಗಳು ಇರುತ್ತವೆ. ಆಗ ವಿವಾದಗಳು ಉಂಟಾಗುವುದೂ ಸ್ವಾಭಾವಿಕ. ಟ್ರಂಪ್ ಅವರು ವಿದೇಶಗಳ ಜತೆಗೇ ಇರಬಹುದು, ತಮ್ಮದೇ ದೇಶದ ಜತೆಗೆ ಇರಬಹುದು, ನಡೆದುಕೊಳ್ಳುವ ರೀತಿಯೇ ಅಸಾಂಪ್ರದಾಯಿಕ, ವಿಲಕ್ಷಣ. ವ್ಯಾಪಾರದ ವಿಷಯದಲ್ಲಿ ಭಾರತ-ಅಮೆರಿಕದ ಮಧ್ಯೆ ಭಿನ್ನಾಭಿಪ್ರಾಯ ಇದೆ. ರೈತರು ಮತ್ತು ಸಣ್ಣ ಉತ್ಪಾದಕರ ಹಿತಾಸಕ್ತಿ ವಿಷಯದಲ್ಲಿ ನಮ್ಮದೇ ನಿಲುವು ನಮಗಿದೆ. ಎರಡನೇ ವಿವಾದ ತೈಲಕ್ಕೆ ಸಂಬಂಧಿಸಿದ್ದು. ಭಾರತವು ರಷ್ಯಾದ ತೈಲವನ್ನು ಖರೀದಿಸುವ ಮೂಲಕ ಉಕ್ರೇನ್ ವಿರುದ್ಧದ ಯುದ್ಧಕ್ಕೆ ಆರ್ಥಿಕ ಸಂಪನ್ಮೂಲವನ್ನು ಪುಟಿನ್ ಬೊಕ್ಕಸಕ್ಕೆ ನೀಡುತ್ತಿದೆ ಎಂಬ ವಾದವಿದೆ. ಆದರೆ ರಷ್ಯಾದಿಂದ ಭಾರತ ಒಂದೇ ತೈಲ ಖರೀದಿಸುತ್ತಿಲ್ಲ. ಚೀನಾ ಅತ್ಯಧಿಕ ಕಚ್ಚಾ ತೈಲವನ್ನು ರಷ್ಯಾದಿಂದ ಪಡೆಯುತ್ತಿದೆ. ಯುರೋಪ್ ಅತಿ ಹೆಚ್ಚು ಎಲ್‌ಎನ್‌ಜಿಯನ್ನು ಆಮದು ಮಾಡಿಕೊಳ್ಳುತ್ತಿದೆ. ರಷ್ಯಾ ಜತೆಗೆ ಯುರೋಪ್ ಮಾಡುತ್ತಿರುವ ವ್ಯವಹಾರವು ಭಾರತವು ರಷ್ಯಾದಿಂದ ಖರೀದಿಸುತ್ತಿರುವ ಕಚ್ಚಾ ತೈಲ ಬಿಸಿನೆಸ್‌ಗಿಂತ ದೊಡ್ಡದು. ಆದ್ದರಿಂದ ಭಾರತವನ್ನೇ ಟಾರ್ಗೆಟ್ ಮಾಡುತ್ತಿರುವುದೇಕೆ?'' ಎಂದು ಖಡಕ್ಕಾಗಿ ವಿವರಿಸುತ್ತಾರೆ ಜೈ ಶಂಕರ್. ಇದೇ ಕಾರಣಕ್ಕಾಗಿ ಟ್ರಂಪ್ ಅವರನ್ನು ಮೋದಿ ಕ್ಯಾರೇ ಎನ್ನುತ್ತಿಲ್ಲ.

''ಭಾರತ ತನ್ನ ಹಿತಾಸಕ್ತಿಗೆ ಪೂರಕವಾಗಿರುವ ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕನ್ನು ಹೊಂದಿದೆ. ಭಾರತ ಮತ್ತು ಅಮೆರಿಕ ಎರಡೂ ದೊಡ್ಡ ರಾಷ್ಟ್ರಗಳು. ಮಾತುಕತೆಯ ಬಾಗಿಲು ಇನ್ನೂ ಮುಚ್ಚಿಲ್ಲ. ಆದರೆ ಕೆಲವು ತೊಡಕುಗಳು ಇವೆ. ಅವುಗಳನ್ನು ಪರಿಹರಿಸಿಕೊಳ್ಳಬೇಕಿದೆ'' ಎಂದು ಜೈ ಶಂಕರ್ ಮತ್ತೊಂದು ಬದಿಯನ್ನೂ ತೋರಿಸಿದ್ದಾರೆ. ಇದೊಂಥರಾ ''ಸ್ನೇಹಕ್ಕೂ ಸೈ, ಸಮರಕ್ಕೂ ಸೈ'' ಎಂಬ ದಿಟ್ಟ ನಿಲುವು.

ಅಂದಹಾಗೆ, ಭಾರತದಿಂದ ಅಮೆರಿಕಕ್ಕೆ ರಫ್ತಾಗುವ ಬಹುತೇಕ ಉತ್ಪನ್ನಗಳಿಗೆ ಸುಂಕವನ್ನು 50 ಪರ್ಸೆಂಟಿಗೆ ಏರಿಸುವ ಮೂಲಕ, ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬಹುದು ಎಂಬ ಭ್ರಮೆಯಲ್ಲೇನಾದರೂ ಡೊನಾಲ್ಡ್ ಟ್ರಂಪ್ ಇದ್ದರೆ, ಭಾರತದ ಇತಿಹಾಸವನ್ನೊಮ್ಮೆ ತಕ್ಷಣ ಓದಿಕೊಳ್ಳುವುದು ಅಥವಾ ಬಲ್ಲವರಿಂದ ಟ್ಯೂಷನ್ ಪಡೆಯುವುದು ಉತ್ತಮ.

ಅಮೆರಿಕ ಹುಟ್ಟಿಕೊಳ್ಳುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಭಾರತವು ಹತ್ತಾರು ದೇಶಗಳ ಜತೆಗೆ ಒಂದಿಲ್ಲೊಂದು ಮಾರ್ಗದಲ್ಲಿ ವ್ಯವಹಾರಗಳನ್ನು ನಡೆಸುತ್ತಿತ್ತು! ಮೌರ್ಯ ಮತ್ತು ಗುಪ್ತ ವಂಶದ ಸಾಮ್ರಾಜ್ಯಗಳು ಕೂಡ ವಿದೇಶಗಳ ಜತೆಗೆ ವ್ಯಾಪಾರ, ವಾಣಿಜ್ಯ ಸಂಪರ್ಕಗಳನ್ನು ಯಶಸ್ವಿಯಾಗಿ ನಡೆಸಿದ್ದವು. ವಿಜ್ಞಾನ, ತಂತ್ರಜ್ಞಾನ, ಕಲೆ, ಸಂಸ್ಕೃತಿಯ ವಿಚಾರದಲ್ಲಿ ಇಲ್ಲಿ ಪವಾಡಸದೃಶ ಬೆಳವಣಿಗೆಗಳು ಹಿಂದೆಯೇ ನಡೆದಿದ್ದವು. 17ನೇ ಶತಮಾನದಲ್ಲಿ ಬ್ರಿಟಿಷರ ಆಕ್ರಮಣವಾಗುವ ತನಕವೂ ಭಾರತವು ವಿಶ್ವದ ಸಂಪದ್ಭರಿತ ರಾಷ್ಟ್ರವಾಗಿತ್ತು. ಮಧ್ಯ ಏಷ್ಯಾ, ಯುರೋಪ್ ಜತೆಗೆ ವ್ಯವಹಾರ ನಡೆಸುತ್ತಿತ್ತು. ಕಾಳುಮೆಣಸು, ಶುಂಠಿ, ಹತ್ತಿ, ರೇಷ್ಮೆ ಬಟ್ಟೆಗಳು, ಅಮೂಲ್ಯ ಶಿಲೆಗಳು ರಫ್ತಾಗುತ್ತಿದ್ದವು. ಈಜಿಪ್ಟ್, ಅರೇಬಿಯಾ, ಚೀನಾ, ಜಪಾನ್, ಪರ್ಷಿಯಾ (ಈಗಿನ ಇರಾನ್), ರೋಮ್ ಸಾಮ್ರಾಜ್ಯದ ಜತೆಗೆ ಭಾರತ ಮುಕ್ತ ವ್ಯಾಪಾರ ನಡೆಸುತ್ತಿತ್ತು. ಚೀನಾ ಮೂಲಕ ಸಿಲ್ಕ್ ರೂಟ್‌ನಲ್ಲಿ ಮೆಡಿಟರೇನಿಯನ್ ಜಗತ್ತಿನ ತನಕ ವ್ಯಾಪಾರದ ಲಿಂಕ್ ಏರ್ಪಟ್ಟಿತ್ತು. ಭಾರತವೂ ಈ ಪ್ರಾಚೀನ ನೆಟ್‌ವರ್ಕ್‌ನಲ್ಲಿ ಸಕ್ರಿಯವಾಗಿತ್ತು. ಈ ನೆಲದ ಶಕ್ತಿಯೇ ಅಂಥದ್ದು. ಇತಿಹಾಸ ಮರುಕಳಿಸುತ್ತದೆ ಎಂಬ ಮಾತು ಭಾರತದ ಮಟ್ಟಿಗೆ ಮತ್ತೆ ನಿಜವಾಗುವ ಸಮಯ ಬಂದಿದೆ. ಇದೆಲ್ಲ ಚರಿತ್ರೆಯ ಮಾತಾಯಿತು. ಈಗ 'ಬಡವನ ಸಿಟ್ಟು ದವಡೆಗೆ ಮೂಲ' ಎಂಬಂತೆ, ಅಮೆರಿಕ ಅಧ್ಯಕ್ಷ ಟ್ರಂಪ್ ಅವರು ಮುನಿಸಿಕೊಂಡರೆ, ಅದನ್ನು ಎದುರಿಸಲು ಭಾರತಕ್ಕೆ ಸಾಧ್ಯವೇ? ಎಂಬ ಪ್ರಶ್ನೆಯಿದೆ.

ಯುರೋಪಿನ ರಾಷ್ಟ್ರಗಳೆಲ್ಲ ಟ್ರಂಪ್ ಎದುರು ಕಮಕ್ ಕಿಮಕ್ ಎನ್ನುತ್ತಿಲ್ಲ. ಚೀನಾ ಕ್ಯಾರೇ ಎನ್ನುತ್ತಿಲ್ಲ. ಆದರೆ ಭಾರತವೂ ಮಂಡಿಯೂರಿಲ್ಲ. ಅದು ಸಾಧ್ಯವೂ ಇಲ್ಲ. ಇದೇ ವರ್ಷ ಫೆಬ್ರವರಿಯಲ್ಲಿ ವಾಷಿಂಗ್ಟನ್‌ನಲ್ಲಿ ನೀಡಿದ ಜಂಟಿ ಹೇಳಿಕೆಯಲ್ಲಿ, ಭಾರತ-ಅಮೆರಿಕ ಜಾಗತಿಕ ವ್ಯೂಹಾತ್ಮಕ ಪಾಲುದಾರಿಕೆಯನ್ನು ಹೊಂದಿರುವ ರಾಷ್ಟ್ರವೆಂದು ಟ್ರಂಪ್ ಒಪ್ಪಿಕೊಂಡಿದ್ದರು. ಅವರೇ ಈಗ ಉಲ್ಟಾ ಹೊಡೆದಿದ್ದಾರೆ. ಟ್ರಂಪ್ ಅವರು ಏಕಪಕ್ಷೀಯವಾಗಿ 50 ಪರ್ಸೆಂಟ್ ಸುಂಕ ಜಡಿದಿದ್ದಾರೆ. ಇದಕ್ಕೆ ಅವರು ಕೊಡುವ ಎರಡು ಪ್ರಮುಖ ಕಾರಣ ಯಾವುದು ಎಂದರೆ, ಭಾರತವು ಅಮೆರಿಕದ ಉತ್ಪನ್ನಗಳಿಗೆ ಭಾರಿ ಟ್ಯಾಕ್ಸ್ ಹಾಕುತ್ತಿದೆ. ಭಾರತದ ಮಾರುಕಟ್ಟೆಯನ್ನು ಪ್ರವೇಶಿಸಲು ಬಿಡುತ್ತಿಲ್ಲ ಎಂಬುದು. ಎರಡನೆಯ ಕಾರಣ ರಷ್ಯಾದಿಂದ ಹೆಚ್ಚು ತೈಲವನ್ನು ಖರೀದಿಸುತ್ತಿದ್ದು, ಇದರಿಂದಾಗಿ ಉಕ್ರೇನ್ ಯುದ್ಧದಲ್ಲಿ ರಷ್ಯಾಕ್ಕೆ ಹಣಕಾಸು ಪೂರೈಕೆಯಾಗುತ್ತಿದೆ ಎಂಬುದು. ಈ ಎರಡೂ ಆರೋಪಗಳು ಅತ್ಯಂತ ಬಾಲಿಶ. ಈ ವ್ಯಕ್ತಿ ಹೇಳಿದಂತೆ ಭಾರತವು ರಷ್ಯಾದಿಂದ ಕಚ್ಚಾ ತೈಲ ಆಮದನ್ನು ನಿಲ್ಲಿಸಬೇಕೆ? ದೇಶದ ಕೋಟ್ಯಂತರ ರೈತರು, ಗೋಪಾಲಕರಿಗೆ, ಡೇರಿ ಉದ್ದಿಮೆಗೆ, ಸಣ್ಣ ಕಸುಬುದಾರರಿಗೆ ಆಘಾತಕಾರಿಯಾಗುವಂತೆ, ಅಮೆರಿಕನ್ ಡೇರಿ ಕಂಪನಿಗಳಿಗೆ ಇಲ್ಲಿನ ಮಾರುಕಟ್ಟೆ ಪ್ರವೇಶಕ್ಕೆ ಬಾಗಿಲು ತೆರೆಯಬೇಕೆ? ಟ್ರಂಪ್‌ರ ಇಂಥ ಖತರ್ನಾಕ್ ಬೇಡಿಕೆಗಳನ್ನು ಒಪ್ಪಿಕೊಳ್ಳಬೇಕೆ? ಆದ್ದರಿಂದ ವ್ಯಕ್ತಿಗತವಾಗಿ ನನಗೆ ತೊಂದರೆಯಾದರೂ, ಟ್ರಂಪ್ ಬೇಡಿಕೆಯನ್ನು ಪರಿಗಣಿಸಲು ಸಾಧ್ಯವೇ ಇಲ್ಲ ಎಂದು ಪ್ರಧಾನಿ

ನರೇಂದ್ರ ಮೋದಿ ನಿರಾಕರಿಸಿದ್ದಾರೆ. ಟಾರಿಫ್ ಅಸ್ತ್ರದ ಮೂಲಕ ಭಾರತವನ್ನು ಮೆತ್ತಗಾಗಿಸಬಹುದು ಎಂಬ ಟ್ರಂಪ್ ಕನಸು ಈಗ ನುಚ್ಚು ನೂರಾಗಿದೆ. ಆದ್ದರಿಂದಲೇ ಮೋದಿಯನ್ನು ''ವೆರಿ ಟೆರಿಫಿಕ್ ಮ್ಯಾನ್'' ಎಂದೇ ಟ್ರಂಪ್ ಕರೆಯುತ್ತಿದ್ದಾರೆ. ''ಟ್ರಂಪ್ ಬೆದರಿಕೆಗೆ ಸೊಪ್ಪು ಹಾಕಲು ಇದೇನೂ 1757 ಅಲ್ಲ, 2025 (1757ರಲ್ಲಿ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿಯು ಪ್ಲಾಸಿ ಕದನದಲ್ಲಿ ಬಂಗಾಳದ ನವಾಬನನ್ನು ಸೋಲಿಸುವ ಮೂಲಕ ಭಾರತದ ನೆಲದ ಮೇಲೆ ಆಕ್ರಮಣವನ್ನು ಆರಂಭಿಸಿತ್ತು). ಭಾರತ ಈಗ ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿದೆ. ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ, ಮೂರನೇ ಅತಿ ದೊಡ್ಡ ಮಿಲಿಟರಿ ಪಡೆಯಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ ಭಾರತವು ಯಾರ ಹಂಗಿನಲ್ಲೂ ಇಲ್ಲ. ಇದು ಹೆಮ್ಮೆಯ ಪ್ರಾಚೀನ ನಾಗರಿಕತೆ. ಅಭಿವೃದ್ಧಿ ಹೊಂದಿದ ದೇಶವಾಗುವ ಮಹತ್ವಾಕಾಂಕ್ಷೆಯನ್ನು ಎದುರು ನೋಡುತ್ತಿದೆ. ಭಾರತವು ಸಾಮ್ರಾಜ್ಯಶಾಹಿ ವಿಸ್ತರಣೆಯಲ್ಲಿ ನಂಬಿಕೆ ಹೊಂದಿಲ್ಲ. ಬೇರೆ ದೇಶದ ಪ್ರಜಾಸತ್ತೆಯಲ್ಲಾಗಲಿ, ಆಂತರಿಕ ವ್ಯವಹಾರಗಳಲ್ಲಾಗಲಿ ಮಧ್ಯಪ್ರವೇಶಿಸುವುದಿಲ್ಲ. ಟೆರರಿಸ್ಟ್ ಸಂಘಟನೆಗಳಿಗೆ ಫಂಡ್ ಕೊಡುವುದಿಲ್ಲ. ನಾವು ಘನತೆ, ಗೌರವ, ನೈತಿಕತೆ ಮತ್ತು ಉದಾತ್ತ ಮೌಲ್ಯಗಳನ್ನು ಒಳಗೊಂಡಿರುವ ದೇಶ'' ಎಂದು ಅರ್ನಬ್ ಗೋಸ್ವಾಮಿಯವರು ತಮ್ಮದೇ ಸ್ಟೈಲ್‌ನಲ್ಲಿ ವರ್ಣಿಸುವಾಗ ಯಾರಿಗಾದರೂ ರೋಮಾಂಚನವಾಗದಿರದು.

ಹಾಗಾದರೆ ಈಗ ಭಾರತವು ಟ್ರಂಪ್ ಅವರ 50 ಪರ್ಸೆಂಟ್ ಟಾರಿಫ್ ಅನ್ನು ಹೇಗೆ ಎದುರಿಸಲಿದೆ? ಮೊದಲಿಗೆ ಎಷ್ಟು ಮೌಲ್ಯದ ರಫ್ತಿಗೆ ತೊಂದರೆ ಆಗಲಿದೆ ಎಂಬುದನ್ನು ನೋಡೋಣ.

ಭಾರತವು ಅಮೆರಿಕಕ್ಕೆ ರಫ್ತು ಮಾಡುವ 48.2 ಶತಕೋಟಿ ಡಾಲರ್ ಉತ್ಪನ್ನಗಳಿಗೆ ಸವಾಲು ಎದುರಾಗಿದೆ. ರುಪಾಯಿ ಲೆಕ್ಕದಲ್ಲಿ ಅಂದಾಜು 4 ಲಕ್ಷದ 20 ಸಾವಿರ ಕೋಟಿ ರುಪಾಯಿಗಳು. ಇದೇನೂ ಜೀರ್ಣಿಸಿಕೊಳ್ಳಲಾಗದ ಮೊತ್ತವೇನಲ್ಲ. ಆದರೆ ಜವಳಿ, ಸೀಗಡಿ, ಚರ್ಮದ ಉತ್ಪನ್ನಗಳು, ಜ್ಯುವೆಲ್ಲರಿ, ಕೆಮಿಕಲ್ಸ್, ಆಟೋಮೊಬೈಲ್ ಬಿಡಿಭಾಗಗಳು, ಕಾರ್ಪೆಟ್‌ಗಳು, ಫುಟ್‌ವೇರ್, ಮಷಿನರಿ ಈ ಕ್ಷೇತ್ರಗಳಿಗೆ ಹೆಚ್ಚು ಹೊಡೆತ ಬೀಳುತ್ತವೆ. ಇವುಗಳಲ್ಲಿ ಹೆಚ್ಚಿನವುಗಳು ಕಾರ್ಮಿಕ ಕೇಂದ್ರಿತವಾಗಿವೆ. ಆದ್ದರಿಂದ ಈ ಸೆಕ್ಟರ್‌ಗಳಲ್ಲಿ ಲಕ್ಷಾಂತರ ಕಾರ್ಮಿಕರಿಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಸರಕಾರಗಳ ಮೇಲಿದೆ. ಉದಾಹರಣೆಗೆ ನಮ್ಮ ನೆರೆಯ ರಾಜ್ಯ ತಮಿಳುನಾಡಿನ ತಿರುಪ್ಪೂರ್ ಎಂದರೆ ಟೆಕ್ಸ್‌ಟೈಲ್ಸ್ ಉದ್ದಿಮೆಗೆ, ಗಾರ್ಮೆಂಟ್ ರಫ್ತಿಗೆ ಲೋಕವಿಖ್ಯಾತಿ ಪಡೆದಿದೆ. ಭಾರತದ ಸೀಗಡಿ ರಫ್ತಿನಲ್ಲಿ 40 ಪರ್ಸೆಂಟ್‌ನಷ್ಟು ಅಮೆರಿಕಕ್ಕೆ ಹೋಗುತ್ತಿದೆ. ಈ ರೀತಿಯ ಸವಾಲುಗಳಿದ್ದರೂ, ತಾತ್ಕಾಲಿಕವಷ್ಟೇ. ಇದಕ್ಕೆ ಪರ್ಯಾಯ ಮಾರ್ಗಗಳೂ ಇವೆ ಎನ್ನುತ್ತಾರೆ ತಜ್ಞರು.

ಏನದು ಪರ್ಯಾಯ? ಚೀನಾ, ಆಸ್ಟ್ರೇಲಿಯಾ, ರಷ್ಯಾ, ವಿಯೆಟ್ನಾಂ, ಯುರೋಪ್, ಯುಎಇ, ಬ್ರಿಟನ್ ಜತೆಗೆ ವ್ಯಾಪಾರಗಳನ್ನು ಹೆಚ್ಚಿಸಬಹುದು. ಭಾರತದ ರಫ್ತನ್ನು ವೈವಿಧ್ಯಗೊಳಿಸಲು, ಸ್ವದೇಶಿ ಉತ್ಪಾದನೆ ಮತ್ತು ಬಳಕೆಯನ್ನು ಹೆಚ್ಚಿಸಲು ಟ್ರಂಪ್ ಟಾರಿಫ್ ಅವಕಾಶ ಸೃಷ್ಟಿಸಿದೆ. ಒಂದು ಕಡೆ ರಫ್ತಿಗೆ ಹೊಸ ಮಾರುಕಟ್ಟೆಗಳನ್ನು ಕಂಡುಕೊಳ್ಳುವುದು ಒಂದು ಭಾಗ. ಭಾರತದಲ್ಲೇ ದೇಶೀಯ ಮಾರುಕಟ್ಟೆಯ ಗಾತ್ರ ಅಗಾಧ, ಅದನ್ನೇ ದೇಶೀಯ ಕಂಪನಿಗಳು ಬಳಸಿಕೊಳ್ಳುವುದು ನಿರ್ಣಾಯಕವಾಗಲಿದೆ. ಏಕೆಂದರೆ ದಿಢೀರ್ ಹೊಸ ವಿದೇಶಿ ಮಾರುಕಟ್ಟೆಗೆ ರಫ್ತು ಮಾಡುವುದು ಎಂದರೆ ಸುಲಭವಲ್ಲ. ಅಲ್ಲೂ ತೀವ್ರ ಸ್ಪರ್ಧೆ ಇರುತ್ತದೆ. ಆದ್ದರಿಂದ ದೇಶೀಯ ಮಾರುಕಟ್ಟೆಯಲ್ಲೂ ಕಂಪನಿಗಳು ತೊಡಗಿಸಿಕೊಳ್ಳಬೇಕು. ಇಲ್ಲಿ ಮತ್ತೊಂದು ಅಂಶವೂ ಇದೆ. ಟಾರಿಫ್ ವಾರ್‌ನಿಂದ ಅಮೆರಿಕದಲ್ಲೂ ಅನೇಕ ವಸ್ತುಗಳ ಬೆಲೆಗಳು ಏರಿಕೆಯಾಗಲಿವೆ. ಹಣದುಬ್ಬರ ಹೆಚ್ಚಲಿದೆ. ಅದನ್ನು ನಿಯಂತ್ರಿಸಲು ಅಲ್ಲಿಯೂ ಉತ್ಪಾದನೆಯನ್ನು ದಿಢೀರ್ ಹೆಚ್ಚಿಸುವುದು ಸುಲಭವೇನೂ ಅಲ್ಲ. ಆಗ ಟಾರಿಫ್ ಸುಂಕ ತೀವ್ರತೆಯನ್ನು ಕಳೆದುಕೊಳ್ಳಬಹುದು. ಆದರೆ ಒಂದಂತೂ ನಿಜ, ಭಾರತವು ರಫ್ತಿಗೆ ಅಮೆರಿಕವೊಂದನ್ನೇ ಹೆಚ್ಚು ಅವಲಂಬಿಸುವಂತಿಲ್ಲ.

ಭಟ್ಟರ್ ಸ್ಕಾಚ್

- **ಯುವರಾಜ ಮಠಪತಿ, ಧಾರವಾಡ**
  ಭಟ್ರೇ, ಹಿಂದುಗಳೆಲ್ಲರೂ ಕನಿಷ್ಠ ನಾಲ್ಕು ಮಕ್ಕಳಿಗಾದರೂ ಜನ್ಮ ನೀಡ ಬೇಕು ಅಂದ್ರೆ, ಹೇಗೆ?
  - **ಇದನ್ನು ಲಾಲೂ-ರಾಬ್ಡಿ ಎಂದೋ ಜಾರಿಗೆ ತಂದಿದ್ದಾರಲ್ಲ?!**
- **ವೆಂಕಟೇಶ ಹೆಗಡೆ, ಹುಬ್ಬಳ್ಳಿ**
  ಮೋದಿ ಪ್ರಣೀತ 'ಸ್ವಚ್ಛ ಭಾರತ' ಕಾರ್ಯಕ್ರಮ ಯಶಸ್ವಿಯಾಗಿದೆಯಾ?
  - **ಯಶಸ್ವಿ ಆಗಿದೆ ಅಂದುಕೊಳ್ಳುತ್ತಿರುವಾಗಲೇ, ಅವರು ತಮ್ಮ ಪಕ್ಷಕ್ಕೆ ಕಸಗಳನ್ನು ಸೇರಿಸಿಕೊಳ್ಳುತ್ತಾರೆ!**
- **ಸಂಪತ್ತೂರು ನಾಗಪತಿ,**
  ಭಟ್ರೇ, ಅದೃಷ್ಟವಂತ ಗಂಡಸು ಅಂದ್ರೆ ಯಾರು?
  - **ಮದುವೆಯಾದರೂ, ವಿಚ್ಛೇದನ ನೀಡದೇ, ಒಬ್ಬರೇ ಹಾಯಾಗಿ ಬದುಕುತ್ತಿರುವವರು!**
- **ರಾಘವೇಂದ್ರ ಜಾನಿ, ಹುಬ್ಬಳ್ಳಿ**
  ಭಟ್ರೇ, ಹಣದಿಂದ ಸಂತೋಷ ಖರೀದಿಸಲು ಸಾಧ್ಯವಿಲ್ಲ ಅಂತಾರಲ್ಲ?
  - **ಹೂಂ.. ಅಂಥವರ ಬಳಿ ಹಣವಿರುವುದಿಲ್ಲ, ಇಲ್ಲವೇ ಅವರು ಖರೀದಿಸುವ ವಸ್ತುಗಳು ಸರಿ ಇರುವುದಿಲ್ಲ!**
- **ಸಂತೋಷ ರಾವ್, (ಇಮೇಲ್ ಮೂಲಕ)**
  ಭಟ್ರೇ, ಕಾಂಗ್ರೆಸ್ಸಿಗೂ, ಆಮ್ ಆದ್ಮಿ ಪಕ್ಷಕ್ಕೂ ಏನಾದರೂ ಸಂಬಂಧವಿದೆಯಾ?
  - **ಹೂಂ.. ಕೈ ಇದ್ರೆ ಮಾತ್ರ ಪೊರಕೆ ಬಳಸಬಹುದು ತಾನೇ !**
- **ರವೀಂದ್ರ ಹೆಗಡೆ, (ಇಮೇಲ್ ಮೂಲಕ)**
  ಭಟ್ರೇ, ಹಣ ಕೇವಲ ಹಾಳೆಯೆಂದು ಕೆಲವರು ಹೇಳ್ತಾರಲ್ಲ?
  - **ಆದ್ರೆ ಯಾರೂ ಅದನ್ನು ಕಸದಬುಟ್ಟಿಗೆ ಎಸೆದ ಉದಾಹರಣೆ ಮಾತ್ರ ಸಿಗುವುದಿಲ್ಲ!**
- **ನಾಗೇಶ್ ಪೈ, ಯಲ್ಲಾಪುರ**
  ಸರ್, ಆಲ್ಕೋಹಾಲ್ ನೀರಿದ್ದಂತೆ ಅಂತ ಹೇಳ್ತಾರಲ್ಲ?
  - **ಹೌದು, ಆದರೆ ಅದಕ್ಕೆ ಭಾವನೆ-ಉನ್ಮಾದ ಸೇರಿರೋದು ಯಾರಿಗೂ ಕಾಣೊಲ್ಲ!**

ಬಿರುಬೇಸಗೆಯ ದಿನಗಳಲ್ಲಿ ಹೊಮ್ಮುತ್ತದೆ ತಾರಕ ಸ್ವರ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ನಮ್ಮ ಹಳ್ಳಿಯ ಸುತ್ತಮುತ್ತ ಕಾಣಸಿಗುವ ಹಕ್ಕಿಗಳು ಹಲವು. ಅವುಗಳ ಕೂಗನ್ನು ಅನುಸರಿಸಿ, ಅವುಗಳ ನಡವಳಿಕೆಯನ್ನು ಅನುಸರಿಸಿ ಕೆಲವು ಹಕ್ಕಿಗಳಿಗೆ ನಮ್ಮವರು ನಿರ್ದಿಷ್ಟ ಹೆಸರನ್ನು ಇಟ್ಟು ಕರೆದರೂ, ಇನ್ನು ಕೆಲವಕ್ಕೆ ಅಸ್ಪಷ್ಟ ಹೆಸರು. ಇನ್ನು ಕೆಲವಕ್ಕೆ ಇಲ್ಲವೇ ಇಲ್ಲ! ನಮ್ಮ ಹಳ್ಳಿಯಲ್ಲಿ 'ಪಿಕಳಾರ' ಎಂದು ನಾಲ್ಕಾರು ಪ್ರಭೇದದ ಹಕ್ಕಿಗಳನ್ನು ಕರೆದಿದ್ದನ್ನು ಕಂಡಿರುವೆ. 'ಇದೆಂಥ ಹಕ್ಕಿ' ಎಂದು ಕೇಳಿದರೆ, 'ನಂಗೊತ್ತಿಲ್ಲ, ಎಲ್ಲಾ ಹಕ್ಕಿಗಳಿಗೆ ಹೆಸರಿಡುವುದಕ್ಕೆ ಆಗುತ್ತಾ?' ಎನ್ನುತ್ತಿದ್ದರು ನಮ್ಮ ಅಮ್ಮಮ್ಮ. ಗೆರೆ ಹಕ್ಕಿ, ಕೊಕ್ಕಾನಕ್ಕಿ, ಗುಮ್ಮ ಎಂದು ಅವುಗಳ ನೋಟವನ್ನನುಸರಿಸಿ ಹೆಸರಿಸಿರುವುದೂ ಉಂಟು. ಇವುಗಳ ನಡುವೆ ಮಳೆಕೋಂಗಿಲ, ಚಪ್ಪು ಕೋಂಗಿಲ ಎಂಬ ತೀರಾ ಸ್ಪಷ್ಟವಾಗಿ ಅವುಗಳನ್ನು ವಿವರಿಸುವ ಹೆಸರುಗಳೂ ಇವೆ! ಇನ್ನು ಕೆಲವು ಹಕ್ಕಿಗಳ, ಪ್ರಾಣಿಗಳ ಹೆಸರು ಕ್ರಮೇಣ ಜನಮಾನಸದಿಂದ ಮರೆತೇ ಹೋಗಿರಬಹುದು. ಹಿಂದಿನ ತಲೆಮಾರಿನ ನೆನಪಿನಲ್ಲಿರುವಷ್ಟು ಹಕ್ಕಿಗಳ ಹೆಸರನ್ನು ಇಂದಿನವರು ಗುರುತಿಸಲಾರರು! ಬೇಕಾದರೆ, ನಿಮ್ಮ ಹಳ್ಳಿಯಲ್ಲಿ ಪರೀಕ್ಷೆ ಮಾಡಿ ನೋಡಿ. ಅದರಲ್ಲೂ, ವಿದ್ಯಾಭ್ಯಾಸ ಕಲಿತು, ನಗರದತ್ತ ವಲಸೆ ಬಂದಿರುವವರಿಗಂತೂ, ತಮ್ಮ ಹುಟ್ಟೂರಿನ ಹಕ್ಕಿ, ಕೀಟ, ಸಸ್ಯ, ಮರ, ಗಿಡಗಳ ಪರಿಚಯ ಬಹುಮಟ್ಟಿಗೆ ಮರೆತೇ ಹೋಗಿದೆ. ಇದೊಂದು ರೀತಿಯಲ್ಲಿ ನಮ್ಮದೇ ಪರಿಸರವನ್ನು ನಾವು ಮರೆತಂತೆ. ಇದು ಕಟುಸತ್ಯ!

ನಮ್ಮ ಹಳ್ಳಿಯ ಜನರು ಅದೊಂದು ಹಕ್ಕಿಗೆ ಹೆಸರಿಟ್ಟ ಪರಿ ಮಾತ್ರ ಬೆರಗು ಹುಟ್ಟಿಸುವಂಥದ್ದು! ಆ ಹಕ್ಕಿಯ ಹೆಸರಿನ ಹಿಂದೆ ಪುಟ್ಟ ಕಥೆಯಿದೆ, ಜತೆಗೆ ರೈತಾಪಿ ಜನರು ತಲೆತಲಾಂತರದಿಂದ ಅನುಭವಿಸುತ್ತಾ ಬಂದಿರುವ ಕಷ್ಟ, ವೇದನೆಗಳ ವ್ಯಥೆಯಿದೆ. ಸಾಮಾನ್ಯವಾಗಿ ಬೇಸಗೆಯ ದಿನಗಳಲ್ಲಿ ಮನೆಯ ಮುಂದಿನ ಹಾಡಿಯ ಮರಗಳ ಸಂದಿಯಲ್ಲಿ ಕುಳಿತ ಒಂದು ಹಕ್ಕಿ 'ಹೋರಿ ಸತ್ತುಹೋಯಿತೋ' ಎಂದು ಕೂಗುತ್ತದೆ. ಕೂ.. ಕೂ.. ಕೂ.. ಕೂ.. ಎಂದು ನಾಲ್ಕಾರು ಏರಿಳಿತ ಇರುವ ಆ ಹಕ್ಕಿಯ ಕೂಗನ್ನು 'ಹೋರಿ ಸತ್ ಹೋಯ್ತೋ, ಹಣ ಕೊಟ್ ಆಯ್ತೋ' ಎಂದು ಅರ್ಥೈಸುತ್ತಾರೆ ನಮ್ಮ ಹಳ್ಳಿಯವರು. ಬೇರಾವುದೇ ಸಮಯದಲ್ಲಿ ಕೇಳಿಬರದ ಆ ಹಕ್ಕಿಯ ಕೂಗು, ಬೇಸಗೆಯ ಸಮಯದಲ್ಲಿ ಮಾತ್ರ ಕೇಳಿಬರುತ್ತದೆ. ಅದು ಸ್ಥಳೀಯವಾಗಿ ವಲಸೆ ಹೋಗಿರುವುದರ ಜತೆಯಲ್ಲೆ, ಬೇಸಗೆಯಲ್ಲಿ ಮಾತ್ರ ಕೂಗುವುದರಿಂದ, ಈ ಬರಗು. ಬಿರುಬೇಸಗೆಯ ದಿನಗಳಲ್ಲಿ, ಮುಂದಿನ ಕೃಷಿಗಾಗಿ ಗದ್ದೆಗಳನ್ನು ಹಸನು ಮಾಡಬೇಕಾದ ಸಮಯದಲ್ಲಿ ಕೂಗಲು ಆರಂಭಿಸುವ ಈ ಹಕ್ಕಿಯ ಕೂಗನ್ನು ಕೇಳಿ ವಿಸ್ಮಿತರಾದ ನಮ್ಮ ಜನಪದರು, ಅದಕ್ಕೊಂದು ಕಾರಣ ಹುಡುಕಿ ಕಥೆ ಕಟ್ಟಿದ್ದಾರೆ.

ಬಡ ರೈತ, ಕೃಷಿ ಕಾರ್ಮಿಕನೂ ಹೌದು. ತನ್ನ ಗದ್ದೆಗಳನ್ನು ಹೂಟಿ ಮಾಡಲು ಒಂದು ಜತೆ ಹೋರಿಗಳನ್ನು ಖರೀದಿಸಲು ಹೊರಟ. ಕಾಡಿನ ದಾರಿ ದಾಟಿ ಪಕ್ಕದ ಹಳ್ಳಿಗೆ ಹೋದ. ಅಲ್ಲಿನ ಸ್ಥಿತಿವಂತ ರೈತನೊಬ್ಬನ ಬಳಿ ಒಂದು ಜತೆ ಉಳುಮೆ ಮಾಡುವ ಹೋರಿಗಳಿದ್ದವು. ತನ್ನ ಅಗತ್ಯಕ್ಕೆ ತಕ್ಕಂತೆ ಕಂಡಿತು. ಅದರ ಬೆಲೆ ತಿಳಿದು, ಇದು ತನಗೆ ಸೂಕ್ತ, ಈ ಹೋರಿಗಳನ್ನು ಬಳಸಿ, ಗದ್ದೆ ಉಳುಮೆ ಮಾಡಿ, ಮುಂದಿನ ಸಾಲಿನ ಭತ್ತದ ಬೆಳೆ ತೆಗೆಯಬಹುದು ಎಂದು ನಿರ್ಧರಿಸಿದ. ಆದರೆ, ಖರೀದಿಸಲು ಸಾಕಷ್ಟು ಹಣ ಬೇಕಲ್ಲ! ಮನೆಗೆ ವಾಪಸು ಬಂದ ರೈತ, ತನ್ನೂರಿನ ಕೆಲವರ ಬಳಿ ಸ್ವಲ್ಪ ಸಾಲ ಮಾಡಿ, ಕಷ್ಟಪಟ್ಟು ಹಣ ಹೊಂದಿಸಿ, ಪಕ್ಕದ ಹಳ್ಳಿಗೆ ಹೋದ; ಆ ಸ್ಥಿತಿವಂತ ರೈತನಿಗೆ ಹೋರಿಯ ಬೆಲೆಯನ್ನು ಪಾವತಿಸಿದ.

ಉಳುಮೆಯ ಕೆಲಸಕ್ಕೆ ಇನ್ನೂ ಕೆಲವು ವಾರಗಳಿವೆ. ಬೇಸಾಯ ಶುರುವಾಗುವ ಸಮಯಕ್ಕೆ ಸರಿಯಾಗಿ ಹೋರಿಗಳನ್ನು ಹೊಡೆದು ತಂದರಾಯಿತು, ಅಷ್ಟರಲ್ಲಿ ಅವಕ್ಕಾಗಿ ಒಂದು ಪುಟ್ಟ ಕೊಟ್ಟಿಗೆ ಕಟ್ಟುವ ಎಂದು ಒಂದೆರಡು ವಾರ ಹೋರಿಗಳನ್ನು ಅಲ್ಲೇ ಬಿಡುತ್ತಾನೆ. ಮನೆಗೆ ಬಂದು, ತಾನೇ ಒಂದು ಕೊಟ್ಟಿಗೆ ಕಟ್ಟಿದ. ಅಷ್ಟರಲ್ಲಿ ಕೆಲವು ವಾರ ಕಳೆದವು. ಬಿಸಿಲು ಏರತೊಡಗಿತು. ಗದ್ದೆಗಳನ್ನು ಉಳುಮೆ ಮಾಡಲು ಸಕಾಲ ಎಂದು ಯೋಚಿಸಿದ. ಇನ್ನೇನು ಹೂಟಿ ಶುರುಮಾಡಬೇಕು, ಹೋರಿಗಳನ್ನು ಹೊಡೆದುಕೊಂಡು ಬರೋಣ ಎಂದು ಪಕ್ಕದ ಹಳ್ಳಿಗೆ ಹೋಗಿ ನೋಡಿದರೆ, ಅಲ್ಲಿ ಎದೆ ಒಡೆಯುವಂಥ ಸುದ್ದಿ ಕೇಳಿಬಂತು.

''ನೀನು ಖರೀದಿಸಿದ ಹೋರಿಗಳು ಕಾಯಿಲೆ ಬಂದು ಸತ್ತುಹೋದವು'' ಎಂದು ಹೋರಿಗಳನ್ನು ಮಾರಿದಾತ ಹೇಳಿದ. ಆತನು ತುಸು ಸ್ಥಿತವಂತ, ಬಲಾಢ್ಯ, ಸಾಮಾಜಿಕ ಸ್ತರದಲ್ಲಿ ಉನ್ನತ ವರ್ಗದವನು. ಬಡ ರೈತನಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಬೇಸರವೂ ಆಯಿತು. ''ಆಯಿತು ಅಯ್ಯಾ, ಎಂತ ಮಾಡುವುದು. ನನ್ನ ಹಣ ವಾಪಸು ಕೊಡಿ'' ಎಂದು ಕೇಳಿದ.

ಅದಕ್ಕೆ ಆ ಬಲಾಢ್ಯ ರೈತನು ಸುಲಭದಲ್ಲಿ ಒಪ್ಪುವನೇ? ''ನೀನು ಕೊಟ್ಟ ಹಣ ಎಲ್ಲಾ ಖರ್ಚಾಯ್ತು, ಜತೆಗೆ ನೀನು ಖರೀದಿಸಿದ ಹೋರಿಗಳು ಸತ್ತು ಹೋದವು. ಅವಕ್ಕೆ ಕಾಯಿಲೆ ಬಂತು, ಸತ್ತವು. ಅದಕ್ಕೆ ನಾನೇನು ಮಾಡಲು ಸಾಧ್ಯ. ನಿನ್ನ ಮಾಲೀಕತ್ವದ ಹೋರಿಗಳು ಸತ್ತು ಹೋದ ನಂತರ, ಈಗ ಹಣ ವಾಪಸು ಕೊಡು ಎಂದರೆ ನಾನೆಲ್ಲಿಂದ ತರಲಿ?'' ಎಂದು ದಬಾಯಿಸಿದ ಆ ಸ್ಥಿತಿವಂತ, ಜಮೀನುದಾರ ರೈತ.

ತಾನು ಸಾಲ ಸೋಲ ಮಾಡಿ ಹಣ ಕೊಟ್ಟರೂ, ಖರೀದಿಸಿದ ಹೋರಿ ಸಿಗದೇ ರೈತ ಹತಾಶನಾದ. ಮನೆಯತ್ತ ಕಾಡುದಾರಿಯಲ್ಲಿ ಹೊರಟ ಆ ಬಡ ರೈತ, ಮನೆಗೆ ವಾಪಸಾಗಲು ಮನಸ್ಸಾಗದೇ, ಕಾಡಿನಲ್ಲೇ ಅಲೆದಾಡುತ್ತಾ ಕೆಲವು ದಿನ ಕಳೆದ. ನಂತರ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡ. ಆದರೆ, ಆತನ ಆತ್ಮಕ್ಕೆ ಶಾಂತಿ ದೊರಕಲಿಲ್ಲ, ಮರದ ತುದಿಯಲ್ಲಿ ಕುಳಿತು ''ಹೋರಿ ಸತ್ ಹೋಯ್ತೋ, ಹಣ ಕೊಟ್ ಆಯ್ತೋ'' ಎಂದು ಕೂಗುತ್ತಾ ಹಕ್ಕಿಯ ರೂಪ ತಾಳಿದ. ಪ್ರತಿ ವರ್ಷ ಬೇಸಗೆ ಬಂದ ಕೂಡಲೆ, ಆ ಬಡ ರೈತನ ಆತ್ಮವು ಹಕ್ಕಿಯ ರೂಪ ತಾಳಿ, ಮರದ ತುದಿಯಲ್ಲಿ ಕುಳಿತು 'ಕೂ ಕೂ ಕು ಕೂ' 'ಹೋರಿ ಸತ್‌ಹೋಯ್ತೋ, ಹಣ ಕೊಟ್ಟಾಯ್ತೋ' ಎಂದು ಕೂಗುತ್ತಾ ಇರುತ್ತದಂತೆ.

ಇದು ನಮ್ಮ ಹಳ್ಳಿಯ ಜನಪದರ ಕಥೆ. ವಿಚಿತ್ರ ಧ್ವನಿಯಲ್ಲಿ, ಮನುಷ್ಯನ ದನಿಯನ್ನು ಹೋಲುವಂತೆ ಕೂಗುವ ಆ ಹಕ್ಕಿಗೆ, ಕೃಷಿ ಕೆಲಸದ ಕಷ್ಟ, ವ್ಯಥೆಯ ಕಥೆಯನ್ನು ಜೋಡಿಸಿದ ಈ ಕಥನ ಕುತೂಹಲಕಾರಿ. ಪಕ್ಷಿಶಾಸ್ತ್ರೀಯವಾಗಿ ಗುರುತಿಸಿದರೆ, ಆ ಹಕ್ಕಿಯನ್ನು ಇಂಡಿಯನ್ ಕುಕೂ (ಕುಕುಲಸ್ ಮೈಕ್ರೋಪ್ಟೆರಸ್) ಎಂದು ತಜ್ಞರು ಕರೆದಿದ್ದಾರೆ. ಇದು ನಮ್ಮ ದೇಶದ ದಕ್ಷಿಣ ಭಾಗ, ಹಿಮಾಲಯದ ಶ್ರೇಣಿ ಮತ್ತು ಆಗ್ನೇಯ ಏಷ್ಯಾದಲ್ಲಿ ಕಾಣಸಿಗುತ್ತದೆ.

ಈ ಹಕ್ಕಿಯ ಕುರಿತು ನನಗೆ ಇನ್ನಷ್ಟು ಕೌತುಕವಾಗಿದ್ದು, ದೂರದ ಕೇದಾರನಾಥ ಶಿಖರದ ಬುಡದಲ್ಲಿರುವ ಗೌರಿಕುಂಡದಲ್ಲಿ ನಾವು ತಂಗಿದ್ದಾಗ (ಮೇ ತಿಂಗಳು), ಅಲ್ಲಿನ ಕಾಡಿನಲ್ಲೂ ''ಹೋರಿ ಸತ್ ಹೋಯ್ತೋ'' ಹಕ್ಕಿ ಕೂಗುತ್ತಿದ್ದುದನ್ನು ಕೇಳಿಸಿಕೊಂಡಾಗ.

ಹಕ್ಕಿಗಳಿಗೆ ಹೆಸರಿಡುವಾಗ ನಮ್ಮ ಹಳ್ಳಿಯವರು ತುಸು ಹೆದರಿಕೆ ಹುಟ್ಟಿಸುವ ಹೆಸರನ್ನು ಇಟ್ಟಿದ್ದೂ ಇದೆ. ಮಕ್ಕಳಿಗೆ ಮಾತ್ರವಲ್ಲ, ಅಳ್ಳೆದೆಯ ದೊಡ್ಡವರೂ ಭಯ ಪಡುವ ಹೆಸರಿನ ಹಕ್ಕಿಗಳು ನಮ್ಮ ಹಳ್ಳಿಯಲ್ಲಿವೆ! ಗುಮ್ಮ ಎಂಬುದು ಸಾಧಾರಣ ದಿಗಿಲು ಹುಟ್ಟಿಸುವ ಹೆಸರು. ಭೂತ ಹಕ್ಕಿ, ಜಕಣಿ ಹಕ್ಕಿ ಎಂಬೆರಡು ಪ್ರಭೇದದ ಹಕ್ಕಿಗಳು ನಮ್ಮೂರಿನ ಕಾಳರಾತ್ರಿಯಲ್ಲಿ ನಿಜಕ್ಕೂ ದಿಗಿಲು ಹುಟ್ಟಿಸುವಂತೆ ಕೂಗುವ ಗೂಬೆಗಳು. ವಿದ್ಯುತ್ ಸಂಪರ್ಕ ಇಲ್ಲದ ಆಗಿನ ದಿನಗಳಲ್ಲಿ, ಮನೆಯ ಮುಂಭಾಗದ ಮರದ ತುದಿಯಲ್ಲಿ ಕುಳಿತು 'ಭೂತ ಹಕ್ಕಿ' ಕೂಗಿತು ಎಂದರೆ, ಆ ಸುತ್ತಲಿನ ಯಾವುದಾದರೂ ಮನೆಯಲ್ಲಿ ಸದ್ಯದಲ್ಲೆ ಏನಾದರೂ ಕೆಟ್ಟ ಸುದ್ದಿ ಹುಟ್ಟುತ್ತದೆ ಎಂದೇ ನಂಬಿಕೆ. ಮಾಮೂಲಿ ಗುಮ್ಮ ಅಥವಾ ಮೀನು ಗೂಬೆ (ಬ್ರೌನ್ ಫಿಶ್ ಔಲ್), 'ಊಂ ಹೂಂ ಊಂ' ಎಂದು ಕೂಗುವುದು, ನಮ್ಮ ಹಳ್ಳಿಮನೆಯಲ್ಲಿ ಸಾಕಷ್ಟು ಪರಿಚಿತ. ಬೆಳದಿಂಗಳ ರಾತ್ರಿ ಬಂತೆಂದರೆ, ಎರಡು ಮೂರು ಗುಮ್ಮಗಳು 'ಊಂ ಹೂಂ ಊಂ' ಎಂದು ಆಗಾಗ ಕೂಗುತ್ತಾ, ಅತ್ತಿತ್ತ ಹಾರಾಡುತ್ತಾ ಇರುವುದನ್ನು ಹಲವು ಬಾರಿ ಕಂಡದ್ದುಂಟು.

ಆದರೆ ಭೂತಹಕ್ಕಿ ತುಸು ವಿಭಿನ್ನ, ನಿಗೂಢ. ಎತ್ತರ ಮರದ ತುದಿಯಲ್ಲಿ ಕುಳಿತು, ತಡರಾತ್ರಿ ಅಥವಾ ಬೆಳಗಿನ ಜಾವ 'ಊಂ ಹೂಂ' ಎಂದು ಎರಡೇ ಬಾರಿ ಆಳವಾದ ಧ್ವನಿಯಲ್ಲಿ ಅದು ಕೂಗಿತು ಎಂದರೆ, ಕೆಲವರ ಎದೆಯಲ್ಲಾದರೂ ಸಣ್ಣಗೆ ನಡುಕ ಹುಟ್ಟೀತು. ಇದು ಕೂಗುವುದು ಸ್ವಲ್ಪ ವಿರಳ. ಆದರೆ ಆ ದನಿಯ ಆಳ, ಏರು ಸ್ವರ, ತೀಕ್ಷ್ಣತೆಯು ಮಕ್ಕಳನ್ನು ಹೆದರಿಸಲು ಸಾಕು. ಮನುಷ್ಯರ ಧ್ವನಿಯನ್ನು ಹೋಲುವ ಅದರ ಕೂಗನ್ನು ಕೇಳಿದ ನಮ್ಮ ಹಿಂದಿನ ತಲೆಮಾರಿನವರು, ಭೂತವೇ ಹಕ್ಕಿಯ ರೂಪ ಪಡೆದಿರಬೇಕು ಎಂದು ಊಹಿಸಿ, ಆ ಹೆಸರಿಟ್ಟಿರಬಹುದು. ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಕಾಣಸಿಗುವ ಗ್ರೇಟ್ ಹಾರ್ನ್ಡ್ ಔಲ್ ಹಕ್ಕಿಯೇ, ಈ ಭೂತಹಕ್ಕಿ ಎಂದು ಸಲೀಂ ಅಲಿಯವರು, ತಮ್ಮ ಹಕ್ಕಿ ಪುಸ್ತಕದಲ್ಲಿ ಬರೆದಿದ್ದಾರೆ.

'ಜಕಣಿ ಹಕ್ಕಿ' ಎಂಬ ಹೆಸರಿನ, ನಮ್ಮ ಹಳ್ಳಿಯ ಸರಹದ್ದಿನ ಕಾಡುಗಳಲ್ಲಿರುವ ಹಕ್ಕಿಯ ವಿಚಾರ ಮಾತ್ರ ಇನ್ನಷ್ಟು ನಿಗೂಢ. ಕಾಡಿನ ಪಕ್ಕದಲ್ಲಿರುವ ಮನೆಗಳವರು ಈ ಹಕ್ಕಿಯ ಕೂಗನ್ನು ವರ್ಷಕ್ಕೆ ಒಂದು ಬಾರಿ ಕೇಳಿಸಿಕೊಂಡರೆ, ಅದೇ ವಿಶೇಷ. ಅಷ್ಟು ವಿರಳ ಈ ಹಕ್ಕಿ. ಆದರೆ ಕತ್ತಲೆಯ ರಾತ್ರಿಯಲ್ಲಿ ಅದರ ಕೂಗನ್ನು ಕೇಳಿಸಿಕೊಂಡರೆ, ಒಮ್ಮೆಗೇ ಬೆಚ್ಚಿ ಬೀಳದೇ ಇರುವವರೇ ಇಲ್ಲವೆನ್ನಬಹುದು. ನಮ್ಮ ಹಳ್ಳಿ ಮನೆಯಿಂದ ಒಂದು ಕಿ.ಮೀ. ದೂರದಲ್ಲಿರುವ ಹರನಗುಡ್ಡೆ ಎಂಬ ವಿಶಾಲ ಬಯಲು ಪ್ರದೇಶದ ಅಂಚಿನಲ್ಲಿ ದಟ್ಟವಾದ ಕಾಡು ಇದೆ; ಆ ಕಾಡಿನ ನಡುವೆ ಸಾಗಿಬರುವ ದಾರಿ ಇದೆ. ಸಂಜೆ 7 ಗಂಟೆಯ ಸಮಯದಲ್ಲಿ ಒಮ್ಮೆ ಅದರ ಕೂಗನ್ನು ನಾನು ಕೇಳಿಸಿಕೊಂಡಿದ್ದೆ. ''ರಾತ್ರಿಯ ಹೊತ್ತು ದಟ್ಟ ಕಾಡಿನ ನಡುವ ಅಲೆಯುವ ಮುದುಕಿಯೊಬ್ಬಳು, ತಾರಕ ಸ್ಥಾಯಿಯಲ್ಲಿ, ದೀರ್ಘವಾಗಿ, ಕರ್ಕಶವಾಗಿ ಕೂಗಿದಂತಿರುತ್ತದೆ, ಆ ಹಕ್ಕಿಯ ಕೂಗು!'' (ಈ ವರ್ಣನೆಯು ಸಲೀಂ ಅಲಿಯವರ ವಿವರಣೆಯನ್ನು ಅನುಸರಿಸಿದ್ದು). ಆ ಕರ್ಕಶ ದನಿಯನ್ನು ಕಾಡಿನ ನಡುವೆ ಕೇಳಿ ಬೆಚ್ಚಿಬಿದ್ದ ನಾನು, ಲಗುಬಗೆಯಿಂದ ಮನೆಗೆ ಬಂದು ಅಮ್ಮಮ್ಮನನ್ನು ಅದೇನೆಂದು ಕೇಳಿದೆ. ''ನಿನಗೆ ಹೆದರಿಕೆ ಆಯಿತಾ, ಹೆದರಬೇಡ. ಅದು ಜಕಣಿ ಹಕ್ಕಿ. ನಮ್ಮ ತವರುಮನೆ ಅಬ್ಬಿಕಟ್ಟೆಯಲ್ಲಿ ಒಂದೊಂದು ರಾತ್ರಿ ಅದು ಕೂಗಿದ್ದು ಕೇಳಿ, ಮಕ್ಕಳೆಲ್ಲಾ ಹೆದರಿಕೊಳ್ಳುತ್ತಿದ್ದರು'' ಎಂದು ಅಮ್ಮಮ್ಮ ತಮ್ಮ ಬಾಲ್ಯದ ನೆನಪಿನ ಸುರುಳಿ ಬಿಚ್ಚಿದರು. ಕಾಳರಾತ್ರಿಯಲ್ಲಿ ಮರದ ಮೇಲೆ ಕುಳಿತು, ಮುದುಕಿಯ ದನಿಯನ್ನು ಹೋಲುವಂಥ ಕರ್ಕಶ ದನಿಯಲ್ಲಿ ಕೂಗುವ ಈ ಹಕ್ಕಿ ಯಾವುದು ಎಂದು ಪತ್ತೆ ಮಾಡಲು ಸಲೀಂ ಅಲಿಯವರ 'ದ ಇಂಡಿಯನ್ ಹಿಲ್ ಬರ್ಡ್ಸ್' ಎಂಬ ಅಪರೂಪದ ಪುಸ್ತಕದ ಮೊರೆಹೋಗಬೇಕಾಯಿತು. ನಮ್ಮ ಸಹ್ಯಾದ್ರಿ ಕಾಡುಗಳಲ್ಲಿ ಮತ್ತು ಹಿಮಾಲಯದ ತಪ್ಪಲಿನ ಅರಣ್ಯದಲ್ಲಿ ವಾಸಿಸುವ, ಕೀರಲು ಕರ್ಕಶ ದನಿಯ ಈ ಹಕ್ಕಿಯನ್ನು ಅವರು 'ಫಾರೆಸ್ಟ್ ಈಗಲ್ ಔಲ್' ಎಂದು ಗುರುತಿಸಿದ್ದಾರೆ.

'ಹೋರಿ ಸತ್ತು ಹೋಯ್ತೋ' ಹಕ್ಕಿ, ಭೂತ ಹಕ್ಕಿ, ಜಕಣಿ ಹಕ್ಕಿಯ ಕುರಿತು ನಮ್ಮ ಜನಪದರು ಹೆಸರಿಸಿರುವ ಪ್ರಕ್ರಿಯೆಯನ್ನು ಮಾತ್ರ ಗಮನದಲ್ಲಿಟ್ಟುಕೊಂಡು ಇಷ್ಟು ಹೇಳಿದೆನೇ ಹೊರತು, ಈ ಹೆಸರುಗಳ ಹಿಂದೆ ಇರುವ ಮೂಢನಂಬಿಕೆಗಳನ್ನು ನಾನು ನಂಬುವುದಿಲ್ಲ. ಇಂಥ ಹಲವು ಹಕ್ಕಿ, ಕೀಟಗಳು ನಮ್ಮ ಹಳ್ಳಿಯ ಕಾಡು, ಬೆಟ್ಟ, ಹಕ್ಕಲು, ಹಾಡಿಗಳಲ್ಲಿವೆ. ಇಂಥ ಜೀವಿಗಳು ನಮ್ಮ ಇಕಾಲಜಿಯ ಸರಪಣಿಯ ವಿಶಿಷ್ಟ ಕೊಂಡಿಗಳು. ಹಕ್ಕಿಗಳ, ಇತರ ಜೀವಿಗಳ ಜೀವನ ಕ್ರಮವನ್ನು ಪರಿಚಯ ಮಾಡಿಕೊಳ್ಳುವುದರ ಮೂಲಕ, ನಮ್ಮ ಸುತ್ತಲಿನ ಪರಿಸರದ ವ್ಯಾಪಾರವನ್ನು ಅರ್ಥಮಾಡಿಕೊಳ್ಳಬಹುದು, ಆ ಮೂಲಕ ಪರಿಸರ ಕಾಳಜಿಯನ್ನೂ ಬೆಳೆಸಿಕೊಳ್ಳಬಹುದು.

ಹೆಗಡೆ: ರಾಜಕೀಯದ ಅನನ್ಯತೆ ದಾಖಲಾಗಲಿ

ಸಂಸ್ಮರಣೆ
ಪ್ರೊ. ಆರ್.ಜಿ.ಹೆಗಡೆ
vveditoped@gmail.com

ಕರ್ನಾಟಕದ ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರದ ಮಾಜಿ ಮಂತ್ರಿ ರಾಮಕೃಷ್ಣ ಹೆಗಡೆಯವರು ಬದುಕಿದ್ದಿದ್ದರೆ ಇಂದಿಗೆ (ಆಗಸ್ಟ್ 29) ಅವರಿಗೆ 100 ವರ್ಷಗಳು ತುಂಬಿರುತ್ತಿದ್ದವು. ಹೆಗಡೆಯವರಿಗಿದ್ದ ರಾಜಕೀಯ ಅಸ್ಮಿತೆ ಮತ್ತು ವಿಶಿಷ್ಟತೆಯನ್ನು ಗುರುತಿಸಿ ದಾಖಲಿಸುವ ಸಮಯ ಇದು. ಅಂಥ ಅನನ್ಯತೆಯೊಂದು ಹೆಗಡೆಯವರಲ್ಲಿತ್ತು. 'ರಾಜಕೀಯ ಬೇಳೆ' ಬೇಯಿಸಿಕೊಳ್ಳುವ ರೀತಿಯ ವಿಲಕ್ಷಣ ರಾಜಕಾರಣಿಯಾಗಿರಲಿಲ್ಲ ಹೆಗಡೆ; ಅಂಥ ವಿಲಕ್ಷಣ ನಾಯಕರನ್ನು ಜನಮಾನಸ ಮತ್ತು ಇತಿಹಾಸ ತಿರಸ್ಕರಿಸುತ್ತವೆ. ಚರಿತ್ರೆಯನ್ನು ಸೃಷ್ಟಿಸುವವರನ್ನು ಮಾತ್ರವೇ ಚರಿತ್ರೆ ನೆನಪಿಟ್ಟುಕೊಳ್ಳುತ್ತದೆ. ಹೀಗಾಗಿ ನೆನಪಿನಲ್ಲಿ ಉಳಿಯುವವರು ಕೆಲವೇ ಕೆಲವರು. ಬದಲಿ ರಾಜಕೀಯ ವ್ಯವಸ್ಥೆಯ ಯಶಸ್ವಿ ಮಾದರಿಯೊಂದನ್ನು ಕಟ್ಟಿದ ಹೆಗಡೆ ಅಂಥ ಮಹಾನುಭಾವರಲ್ಲಿ ಒಬ್ಬರು.

ಪ್ರಜಾಪ್ರಭುತ್ವ ಮಾದರಿಯ 'ಸತ್ತೆ'ಯ ಯಶಸ್ಸು ಇರುವುದು, ಜನರು ಮತ್ತು ರಾಜಕಾರಣಿಗಳ ನಡುವಿನ ಅಧಿಕಾರ ಹಂಚಿಕೆಯ ಸ್ವರೂಪದಲ್ಲಿ. ಈ ಸ್ವರೂಪವು ಹೆಚ್ಚಿನ ಪ್ರಜಾಪ್ರಭುತ್ವಗಳಲ್ಲಿ ಸ್ಪಷ್ಟವಾಗಿರುವುದಿಲ್ಲ. ಏಕೆಂದರೆ, ಆಚರಣೆಯಲ್ಲಿ ಅದು ರಾಜಕಾರಣಿಗಳ ಮನೋಧರ್ಮ ಮತ್ತು ಜನತೆಯ ಅರಿವಿನ ಮಟ್ಟವನ್ನು ಅವಲಂಬಿಸಿರುತ್ತದೆ. ರಾಜಕಾರಣಿಗಳ ಮನೋಧರ್ಮ ಮತ್ತು ಜನತೆಯ ಅರಿವಿನ ಮಟ್ಟದಲ್ಲಿ ದೋಷಗಳಿದ್ದರೆ ಪ್ರಜಾಪ್ರಭುತ್ವವು ಕೆಟ್ಟ ಸರ್ವಾಧಿಕಾರಿ ವ್ಯವಸ್ಥೆಗಿಂತಲೂ ದುಷ್ಟವಾದ ವ್ಯವಸ್ಥೆಯಾಗಿಬಿಡುತ್ತದೆ. ನಮ್ಮ ದೇಶದ ಮಟ್ಟಿಗಂತೂ ತುಂಬಾ ಅಸ್ಪಷ್ಟವಾಗಿದ್ದ ಇಂಥ ಅಧಿಕಾರ ಹಂಚಿಕೆಯ ವ್ಯವಸ್ಥೆಯನ್ನು ಪಾರದರ್ಶಕವಾಗಿಸಿ, ಜನಪರವಾಗಿಸಿ, ಶ್ರೇಷ್ಠ ಮಾದರಿಗಳನ್ನು ಒದಗಿಸಿದವರು ಹಾಗೂ ಹೆಚ್ಚಿನ ಅಧಿಕಾರಗಳನ್ನು ಜನರಿಗೆ ಬಿಟ್ಟುಕೊಟ್ಟು ವ್ಯವಸ್ಥೆಯ ಆಯಾಮಗಳನ್ನೇ ವಿಸ್ತರಿಸಿದವರು ಹೆಗಡೆ. ಅಷ್ಟೇ ಅಲ್ಲ, ಹಾಗೆ ಬಿಟ್ಟುಕೊಡಬಲ್ಲ ರಾಜಕೀಯ ಸಂಸ್ಕೃತಿಯೊಂದನ್ನು ನಿರೂಪಿಸಿ ಅದಕ್ಕೆ ರೂಪಕವಾಗಿ ನಿಂತವರು ಹೆಗಡೆ. ಭಾರತೀಯ ರಾಜಕೀಯ ಇತಿಹಾಸದಲ್ಲಿ ದಾಖಲಾರ್ಹವಾದ ಇಂಥ ರಾಜಕೀಯ ಶೈಲಿ/ಸಂಸ್ಕೃತಿ ಅಥವಾ 'ಘರಾನಾ'ವನ್ನೇ ಅವರು 'ಮೌಲ್ಯಾಧಾರಿತ ರಾಜಕೀಯ' ಎಂದು ಕರೆದದ್ದು. ಇಂಥ ರಾಜಕೀಯ ಸಂಸ್ಕೃತಿಗೆ ಹಲವು ಆಯಾಮಗಳಿದ್ದವು. ಅವುಗಳಲ್ಲಿ ಪ್ರಮುಖವಾದುದು 'ಜನಪರ ರಾಜಕೀಯ'.

ಬಾಜಾ-ಬಜಂತ್ರಿಗಳನ್ನೆಲ್ಲ ಬದಿಗೊತ್ತಿ ನಿಜಕ್ಕೂ ಜನರೆಡೆಗೆ ನಡೆದವರು, ಜನರೊಂದಿಗೆ ನಿಂತವರು, ಜನರ ಜತೆ ನೇರಸಂವಾದ ಆರಂಭಿಸಿ ಸರಕಾರವನ್ನು ಜನಸ್ಪಂದನದಲ್ಲಿ ಸಕ್ರಿಯವಾಗಿ ತೊಡಗಿಸಿದವರು ಹೆಗಡೆ. ಸರಕಾರವನ್ನು ಶಕ್ತಿಯುತವಾದ, ಜನರಿಗಾಗಿ ಇರುವ ವ್ಯವಸ್ಥೆಯನ್ನಾಗಿ ಮಾಡಿ ಸಾಮಾಜಿಕ ಅಭಿವೃದ್ಧಿಯ ಪರಿಕರವನ್ನಾಗಿ ಮರುರೂಪಿಸಿದ ಅವರು ಜಾರಿಗೆ ತಂದ ಅಧಿಕಾರ ವಿಕೇಂದ್ರೀಕರಣವು ಸರಕಾರವನ್ನು ಶಕ್ತಿಯುತ ಯಂತ್ರವನ್ನಾಗಿಸಿತು. ಅಧಿಕಾರದ ದೊಡ್ಡ ಭಾಗವನ್ನು ಜಿಲ್ಲೆ ಹಾಗೂ ಮಂಡಲಗಳಿಗೆ ನೀಡಿದ್ದ ಅವರ ಕ್ರಮದಿಂದಾಗಿಯೇ ಕರ್ನಾಟಕವು ಅಂದು ನಿಜವಾದ ಜನಪರ, ಅಭಿವೃದ್ಧಿಪರ ರಾಜ್ಯವಾಗಿ ಎದ್ದುನಿಂತಿದ್ದು. ಸರಕಾರಿ ಕೆಲಸಗಳು ತ್ವರಿತಗತಿಯಲ್ಲಿ ನಡೆದು ಜನಸಮುದಾಯವನ್ನು ನಿಜಕ್ಕೂ ತಲುಪಿದ್ದು. ಜನಪರ ಸರಕಾರವೆಂದರೇನು ಮತ್ತು ಹೇಗಿರುತ್ತದೆ ಎಂಬುದನ್ನು ಹೀಗೆ ದೇಶದಲ್ಲಿಯೇ ಮೊದಲ ಬಾರಿಗೆ ಸ್ಪಷ್ಟವಾಗಿ ಗುರುತಿಸಿ ತೋರಿಸಿಕೊಟ್ಟಿದ್ದು, ಭಾರತದ ರಾಜಕೀಯಕ್ಕೆ ಹೆಗಡೆಯವರು ನೀಡಿದ ಕೊಡುಗೆ ಎನ್ನಬೇಕು. 'ರಾಜಕಾರಣಿ ಕೇಂದ್ರಿತ' ಸ್ವಾರ್ಥಪರ ರಾಜಕೀಯಕ್ಕೆ ಬದಲಾಗಿ 'ಜನಕೇಂದ್ರಿತ' ರಾಜಕೀಯ ವ್ಯವಸ್ಥೆಯನ್ನು ತಂದಿಡಲು ಯತ್ನಿಸಿದವರು ಹೆಗಡೆ.

ರಾಜಕೀಯ ಅಧಿಕಾರವು ಜನರಿಂದ ಪಕ್ಷಗಳಿಗೆ, ಅದರ ನಾಯಕರುಗಳಿಗೆ ಯಾವ ಕಾರಣಗಳ ಹಿನ್ನೆಲೆಯಲ್ಲಿ ಸಿಗುತ್ತದೆ ಮತ್ತು ಅದನ್ನು ಅವರು ಹೇಗೆ ವಿನಿಯೋಗಿಸಬೇಕು? ಎಂಬ ಪ್ರಶ್ನೆಗೆ ಉತ್ತರವಾಗಿ ಕೆಲವು ವಿಷಯಗಳು ಅವರ ಗಮನಕ್ಕೆ ಬಂದಿದ್ದವು. ರಾಜಕೀಯ ಪಕ್ಷಗಳು ನಿಜಕ್ಕೂ ಸಮಾಜದೊಂದಿಗೆ ಸಂಪೂರ್ಣವಾಗಿ ಬೆರೆತು, ಅದರ ವಿಶ್ವಾಸ ಗಳಿಸಿ ನಿಂತಾಗ, ಜನತೆ ಮತ್ತು ರಾಜಕೀಯದ ನಡುವೆ ಒಂದು ಸಮರ್ಥ ಸಂವಹನ ಏರ್ಪಟ್ಟಾಗ ಅವಕ್ಕೆ ಬಲ ಬರುತ್ತದೆ ಎಂಬುದನ್ನು ಹೆಗಡೆ ಅರಿತಿದ್ದರು. ಮಾತ್ರವಲ್ಲ, ಜನರ ಮನೋರಥವನ್ನು ಅರಿತ ನಾಯಕರು ಎಲ್ಲಾ ಹಂತಗಳಲ್ಲಿಯೂ ಹುಟ್ಟಿಕೊಂಡು ಸರಕಾರವನ್ನು ಜನರ ಆಶೋತ್ತರಗಳ ಈಡೇರಿಕೆಯ ಪರಿಕರವನ್ನಾಗಿ ಪರಿವರ್ತಿಸಿದಾಗ ಮತ್ತು ವೈಯಕ್ತಿಕ ಮೌಲ್ಯಗಳನ್ನು ರಾಜಕೀಯದಲ್ಲೂ ಇಟ್ಟುಕೊಂಡು ಕೆಲಸ ಮಾಡಿದಾಗಲಷ್ಟೇ ಸಾರ್ಥಕ್ಯ ಎಂಬುದು ಹೆಗಡೆಯವರಿಗೆ ಗೊತ್ತಿತ್ತು.

ಜನಸಂಪರ್ಕವಿಲ್ಲದೆ ಕೇವಲ ಹಣ ಅಥವಾ ಜಾತಿಬಲದಿಂದ, ಕುಟುಂಬದ ಹೆಸರಿನಿಂದ ನಡೆಯುವ ನಾಯಕತ್ವವು ಸಮರ್ಥನೀಯವಲ್ಲ ಎಂಬುದನ್ನು ಅರಿತಿದ್ದ ಹೆಗಡೆಯವರು, 'ಅಧಿಕಾರವು ಬರುವುದು ಜನರಿಂದ, ಅದನ್ನು ಮತ್ತೆ ವಿನಿಯೋಗಿಸಬೇಕಾಗಿರುವುದು ಜನರಿಗೇ. ಆಗ ಹುಟ್ಟಿಕೊಳ್ಳುವುದು ಮೌಲ್ಯಧಾರಿತ, ಆರೋಗ್ಯವಂತ ರಾಜಕೀಯ. ಇಂಥ ವ್ಯವಸ್ಥೆಯು ರಾಜಕೀಯ ಪಕ್ಷಗಳಿಗೆ, ರಾಜಕಾರಣಿಗಳಿಗೆ ಮತ್ತು ಜನರಿಗೆ ಪರಸ್ಪರ ಪ್ರಯೋಜನಕಾರಿಯಾದ ಪರಿಸ್ಥಿತಿಯನ್ನು ಸೃಷ್ಟಿಸುತ್ತದೆ' ಎಂಬುದನ್ನು ಗ್ರಹಿಸಿದ್ದರು. ಜನರು ಮತ್ತು ರಾಜಕಾರಣಿಗಳ ನಡುವೆ ಭಾರಿ ಕಂದಕ ಸೃಷ್ಟಿಯಾದರೆ, ಚುನಾವಣೆಯನ್ನು ಗೆಲ್ಲಲು ಏನು ಮಾಡಬೇಕೆಂಬುದೇ ರಾಜಕಾರಣಿಗಳಿಗೆ ಹೊಳೆಯುವುದಿಲ್ಲ. ಆಗ ಅವರು ಹತಾಶೆಗೆ ಸಿಲುಕುವಂತಾಗುತ್ತದೆ, ಭಾರಿ ಭ್ರಷ್ಟಾಚಾರ ಮತ್ತು ಕ್ರಿಮಿನಲ್ ಸ್ವರೂಪದ ದುಷ್ಟ ರಾಜಕೀಯ ಹುಟ್ಟಿಕೊಳ್ಳುತ್ತದೆ. ನಂತರ ಅವು ಎಂಥ ಅಗಾಧ ಪ್ರಮಾಣದಲ್ಲಿ ಬೆಳೆಯುತ್ತವೆಂದರೆ, ಈ ಶಕ್ತಿಗಳ ಮುಂದೆ ಯಾರಿಗೂ ನಿಲ್ಲಲಾಗುವುದಿಲ್ಲ; ಜನರಷ್ಟೇ ಅಲ್ಲ, ರಾಜಕಾರಣಿಗಳು, ಸರಕಾರಗಳು ಕೂಡ ಅಸಹಾಯಕರಾಗಿ ನಿಲ್ಲಬೇಕಾಗುತ್ತದೆ ಮತ್ತು ಇಂದು ಆಗಿರುವ ಹಾಗೆ ಇಡೀ ರಾಜಕೀಯ ವ್ಯವಸ್ಥೆಯು ಕಲುಷಿತಗೊಳ್ಳುತ್ತದೆ.

ರಾಮಕೃಷ್ಣ ಹೆಗಡೆಯವರು 'ಮೌಲ್ಯಾಧಾರಿತ ರಾಜಕೀಯ'ದ ಪರಿಕಲ್ಪನೆಯನ್ನು ಪಕ್ಷ ಹಾಗೂ ಸರಕಾರ ಎರಡೂ ಹಂತಗಳಲ್ಲೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಿದ್ದು ದೇಶದ ಇತಿಹಾಸದಲ್ಲಿ ದಾಖಲಾಗಿದೆ. ಆಡಳಿತ ವ್ಯವಸ್ಥೆಯಲ್ಲಿನ ಮುಕ್ತ ಪ್ರವೇಶಕ್ಕೆ ಜನರಿಗೆ ಅವಕಾಶ ಕಲ್ಪಿಸಿದ ಅವರು, ಅಹವಾಲುಗಳನ್ನು ಆಲಿಸಲೆಂದು ಸರಕಾರಿ ವೇದಿಕೆಗಳನ್ನು ಸೃಷ್ಟಿಸಿದರು, ಅದಕ್ಕಾಗಿ ಒಂದು ಪ್ರತ್ಯೇಕ ಖಾತೆಯನ್ನೇ ಆರಂಭಿಸಿದರು. ವಿಷಯಜ್ಞಾನವುಳ್ಳವರಿಗೆ, ಅರ್ಹರಿಗೆ ಖಾತೆಗಳ ನಿರ್ವಹಣೆಯ ಹೊಣೆಯನ್ನು ನೀಡಿದರು, ಕೆಲಸ ಮಾಡಲು ಸಚಿವರಿಗೆ ಮುಕ್ತ ಸ್ವಾತಂತ್ರ್ಯ ನೀಡಿ ಪ್ರೋತ್ಸಾಹಿಸಿದರು, ದಕ್ಷ ಅಧಿಕಾರಿಗಳನ್ನು ಬೆಂಬಲಿಸಿ ಗೌರವದಿಂದ ನಡೆಸಿಕೊಂಡರು. ಕುತೂಹಲದ ವಿಷಯವೆಂದರೆ, ತಮ್ಮ ಸರಕಾರದ ವಿರುದ್ಧ ಪತ್ರಿಕೆಗಳಲ್ಲಿ ಬರುವ ಟೀಕೆಗಳನ್ನು ಗಮನಿಸಿ, ಅವು ಸರಿ ಎನಿಸಿದಾಗ ಆ ತಪ್ಪನ್ನು ತಿದ್ದಲು ಮುಂದಾದರು. ಸರಕಾರವು ಕಾರ್ಯನಿರ್ವಹಣೆಯಲ್ಲಿ ಶ್ರೇಷ್ಠತೆಯನ್ನು ಸಾಧಿಸುವಂತಾಗುವುದಕ್ಕೆ ಕಾಲಾನುಕಾಲಕ್ಕೆ ಸೂಚಿಸಲು 'ಥಿಂಕ್ ಟ್ಯಾಂಕ್'ಗಳನ್ನು ರೂಪಿಸಿದರು. ಹೀಗೆ ಸರಕಾರವನ್ನು ಒಂದು ಜನಪರ ವೇದಿಕೆಯಾಗಿ ರೂಪಿಸಿದ ಹೆಗ್ಗಳಿಕೆ ಹೆಗಡೆ ಅವರದ್ದು.

ಹೆಗಡೆಯವರು ಮತ್ತು ಅವರ ಸಹವರ್ತಿಗಳು ಪಕ್ಷವನ್ನು ಹೇಗೆ ಮುನ್ನಡೆಸಿದರು ಎಂಬುದನ್ನೂ ಗಮನಿಸಬೇಕು. ಮುಖ್ಯಮಂತ್ರಿಯಾದ ಬಳಿಕ ತಾವು ಸ್ವತಃ 'ಸ್ಟಾರ್' ಆಗಿದ್ದರೂ, ಪಕ್ಷವನ್ನು ಅವರು ಸಾಮೂಹಿಕ ನಾಯಕತ್ವದ ತಳಹದಿಯ ಮೇಲೆ ಕಟ್ಟಿದರು. ಕೈಶುದ್ಧಿ ಇರುವವರನ್ನು, ಜನಪ್ರಿಯ ಹೋರಾಟಗಳ ಹಿನ್ನೆಲೆಯಿದ್ದವರನ್ನು ಪಕ್ಷಕ್ಕೆ ಸ್ವಾಗತಿಸಿ ಚುನಾವಣೆಗಳಲ್ಲಿ ಸ್ಪರ್ಧಿಸಲು ಆದ್ಯತೆಯ ಮೇಲೆ ಟಿಕೆಟ್ ನೀಡಿದರು. ಹೀಗಾಗಿ ಪಕ್ಷದೊಳಗೆ ಒಂದು ಸ್ವಚ್ಛ ಸಂಸ್ಕೃತಿ ಬೆಳೆದುಬಂತು. ಸಮಾಜದ ವಿವಿಧ ಸ್ತರಗಳನ್ನು, ಕ್ಷೇತ್ರಗಳನ್ನು ಪ್ರತಿನಿಧಿಸುವ ವ್ಯಕ್ತಿಗಳೆಲ್ಲರೂ ಅಲ್ಲಿದ್ದರು; ಹೀಗಾಗಿ ಪಕ್ಷದೊಳಗೆ ಒಂದು ಬೌದ್ಧಿಕ ವಲಯ ನಿರ್ಮಾಣವಾಯಿತು, ಪ್ರತಿಭಾವಂತ ಮತ್ತು ಜವಾಬ್ದಾರಿಯುತ ನಾಯಕರು ಸೃಷ್ಟಿಯಾದರು. ಮುಂದಿನ ದಿನಗಳಲ್ಲಿ ಕರ್ನಾಟಕದ ಜನತೆಗೆ ಮಹತ್ತರ ಕೊಡುಗೆ ನೀಡಿದ ಹಲವು ರಾಜಕಾರಣಿಗಳು ಅಲ್ಲಿ ಹುಟ್ಟಿಕೊಂಡಿದ್ದು ಹೀಗೆ.

ಇಂಥ ರಾಜಕೀಯ ಸಂಸ್ಕೃತಿಯಿಂದಾಗಿ ಕರ್ನಾಟಕ ಮತ್ತು ದೇಶದ ಮೇಲೆ ಯಾವ ರೀತಿಯ ಪರಿಣಾಮವಾಯಿತು ಎಂಬುದನ್ನೂ ಗಮನಿಸಬೇಕು. ಅಲ್ಲಿಯವರೆಗೂ ವಿಲಕ್ಷಣ ರಾಜಕೀಯ ಸಂಸ್ಕೃತಿಯಿಂದ ಬೇಸರಗೊಂಡಿದ್ದ ಜನರಲ್ಲಿ, ಅದರಲ್ಲೂ ನಿರ್ದಿಷ್ಟವಾಗಿ ಮಧ್ಯಮ ವರ್ಗದವರಲ್ಲಿ ಭರವಸೆಯ ಆಶಾಕಿರಣ ಮೂಡಿತು. ಮಧ್ಯಮ ವರ್ಗದವರ ಸಬಲೀಕರಣ ಮತ್ತು ಅವರ ರಾಜಕೀಯ ಆಕಾಂಕ್ಷೆಗಳಿಗೆ ಬಲ ತುಂಬಿದ್ದು ಹೆಗಡೆಯವರು ನೀಡಿದ ದೊಡ್ಡ ಕೊಡುಗೆ. ಈ ವರ್ಗವು ಭವಿಷ್ಯದ ಭಾರತದ ರಾಜಕೀಯದಲ್ಲಿ ಮಹತ್ತರ ಪಾತ್ರವನ್ನು ವಹಿಸುವುದಕ್ಕೆ ಸಾಧ್ಯವಾಯಿತು. ಹಾಗೆಯೇ ರಾಜಕೀಯಕ್ಕೆ ಹೆಚ್ಚು ಸಂಖ್ಯೆಯಲ್ಲಿ ಯುವಕರನ್ನು ಕರೆತಂದವರು, ದೇಶದಲ್ಲಿಯೆ ಮೊದಲ ಬಾರಿಗೆ ಮತದಾನದ ವಯಸ್ಸನ್ನು 21ರಿಂದ 18ಕ್ಕೆ ಇಳಿಸಿದವರು (ಕ್ರಮೇಣ ಈ ಸಂಸ್ಕೃತಿ ಇಡೀ ದೇಶಕ್ಕೆ ಹಬ್ಬಿದ್ದು ಗೊತ್ತಿರುವಂಥದ್ದೇ) ಹೆಗಡೆಯವರು. ಬೇರೆಯದೇ ಪರಿಸ್ಥಿತಿ ತಾಂಡವವಾಡುತ್ತಿದ್ದ ಉತ್ತರ ಭಾರತದಲ್ಲಿ, ಈ ತೆರನಾದ ವಿಶಿಷ್ಟ ರಾಜಕೀಯವೇ 'ಭ್ರಷ್ಟಾಚಾರ-ವಿರೋಧಿ' ರಾಜಕೀಯವಾಗಿ ಪರಿವರ್ತನೆಗೊಂಡಿದ್ದು. ಗಮನಿಸಬೇಕಾದ ವಿಷಯವೆಂದರೆ, ಇವೆಲ್ಲ ಸೂಕ್ಷ್ಮವಾಗಿ ಆರಂಭವಾಗಿದ್ದು ಕರ್ನಾಟಕದಿಂದ ಮತ್ತು ಹೆಗಡೆಯವರು ಆರಂಭಿಸಿದ ರಾಜಕೀಯ ಪ್ರಯೋಗಶಾಲೆಯಿಂದ. ಹೆಗಡೆಯವರು ಮುಂದೆ ಸ್ವತಃ ಪ್ರಧಾನಮಂತ್ರಿಯಾಗದಿದ್ದರೂ, 'ಜನತಾ ಪರಿವಾರ'ದ ಮೂವರು ಆ ಗದ್ದುಗೆಯನ್ನೇರಿ ದೇಶವನ್ನು ಆಳಿದ್ದು ಇಂಥ ವಿಶಿಷ್ಟ ರಾಜಕೀಯದ ಫಲಶ್ರುತಿಯಿಂದಾಗಿಯೇ.



ಸಜ್ಜನಿಕೆ ಮತ್ತು ಸುಸಂಸ್ಕೃತ ವರ್ತನೆಯೇ 'ಹೆಗಡೆ-ಪ್ರಣೀತ' ರಾಜಕೀಯ ಸಂಸ್ಕೃತಿಯ ಆಧಾರಸ್ತಂಭ. ಅವರಿಗೆ ತಮ್ಮ ವೈಯಕ್ತಿಕ ಮತ್ತು ರಾಜಕೀಯ ಮರ್ಯಾದೆಯ ಕುರಿತು ಅಪಾರ ಸೂಕ್ಷ್ಮತೆ ಇತ್ತು. ಇಂದಿನ ದಿನಗಳಲ್ಲಿ 'ಚಿಲ್ಲರೆ' ಎನಿಸುವಂಥ ಘಟನೆಗಳಿಗೂ (ಉದಾಹರಣೆಗೆ, ಟೆಲಿಫೋನ್ ಕದ್ದಾಲಿಕೆ) ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿ ಹೊರನಡೆದುಬಿಟ್ಟವರು ಹೆಗಡೆ. ಮತ್ತು ಅದೇ ಕಾರಣಕ್ಕೆ ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷ ಸ್ಥಾನಕ್ಕೂ ಅವರು ತಿಲಾಂಜಲಿಯಿತ್ತರು. ರಾಜಕಾರಣಿಯು ಪರಿಶುದ್ಧನಾಗಿರಬೇಕು ಎಂಬುದು ಅವರ ನಂಬುಗೆಯಾಗಿತ್ತು. ಹಣದ ಮತ್ತು ಲೋಭದ ರಾಜಕೀಯದಿಂದ ಮೈಲುಗಟ್ಟಲೆ ದೂರವಿದ್ದ ಅವರು, ಭ್ರಷ್ಟಾಚಾರದ ನಿಯಂತ್ರಣಕ್ಕಾಗಿ ತಾವೇ ತಂದಿದ್ದ ಲೋಕಾಯುಕ್ತ ಮಸೂದೆಯಡಿ ಮುಖ್ಯಮಂತ್ರಿಗಳಾಗಿದ್ದ ತಮ್ಮ ಹುದ್ದೆಯನ್ನೂ ಸೇರಿಸಿ ಕಾನೂನು ರಚಿಸಿದರು.

ಹೆಗಡೆಯವರ ರಾಜಕೀಯ ಪರಿಭಾಷೆಯೂ ಮಹತ್ತರವಾದುದೇ ಆಗಿತ್ತು; ಅವರು ತಮ್ಮ ಪರಮವೈರಿಗಳ ವಿರುದ್ಧವೂ ಕೀಳುಭಾಷೆಯನ್ನು ಬಳಸಿದವರಲ್ಲ. ಚುನಾವಣಾ ಕಾವೇರಿದಾಗಲೂ 'ಹೊಡಿ-ಬಡಿ-ಕಡಿ' ಮಾತಾಡಿದವರಲ್ಲ. ಅಕಸ್ಮಾತ್ ತಮ್ಮ ಮಾತಿನಿಂದ ಬೇರೆಯವರಿಗೆ ನೋವಾಗಿದ್ದರೆ ಅದಕ್ಕಾಗಿ ಕ್ಷಮೆ ಕೇಳಿದವರು. ಪ್ರಸಕ್ತ ರಾಜಕೀಯ ವಾತಾವರಣದಿಂದ ರೋಸತ್ತ ಜನರು ಒಮ್ಮೆ ಹಿಂದಿರುಗಿ ನೋಡಿದರೆ, ಹೆಗಡೆಯವರು ಬೆಳೆಸಲು ಪ್ರಯತ್ನಿಸಿದ ರಾಜಕೀಯ ಸಂಸ್ಕೃತಿಯ ಮಹತ್ವದ ಅರಿವಾಗುತ್ತದೆ. ಹೆಗಡೆಯವರು 'ಎಡ' ಮತ್ತು 'ಬಲ' ಎಂಬ ಪಂಥಗಳ ನಡುವೆ ನಿಂತವರು; ಈ 'ಪಂಥಪ್ರಶ್ನೆ' ಅವರ ರಾಜಕೀಯ ಚಟುವಟಿಕೆಯಲ್ಲಿ ಉದ್ಭವಿಸುತ್ತಲೇ ಇರಲಿಲ್ಲ. ಬಡತನದ ಆಳ-ಅಗಲಗಳನ್ನು ಅರಿತಿದ್ದ ಅವರು ರೈತರಿಗೆ 'ಹಸಿರುಕಾರ್ಡ್', ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ನೀಡಿದರು. ರಾಜ್ಯದಲ್ಲಿ ದೊಡ್ಡ ಸಂಖ್ಯೆಯಲ್ಲಿ ಎಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗೆ ಒಮ್ಮೆಲೇ ಅನುಮತಿ ನೀಡಿದರು. 90ರ ದಶಕದಲ್ಲಿ ಬೆಂಗಳೂರಿನಲ್ಲಿ ನಡೆದ 'ಐಟಿ' ಕ್ರಾಂತಿಗೆ ಹೇರಳ ಮಾನವ ಸಂಪನ್ಮೂಲ ದೊರೆಯುವುದಕ್ಕೆ ಇದು ಅನುವು ಮಾಡಿಕೊಟ್ಟಿತು. ಹೆಗಡೆಯವರು ಕರ್ನಾಟಕದ ಉತ್ತರ ಮತ್ತು ದಕ್ಷಿಣ ಭಾಗಗಳೆರಡರಲ್ಲೂ ಏಕಕಾಲಕ್ಕೆ ಅಪಾರ ಜನಪ್ರಿಯತೆ ಹೊಂದಿದ್ದು, ಎಡ ಬಲಗಳ ನಡುವೆ ನಿಲ್ಲಬಲ್ಲ ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿತ್ತು. ರಾಜಕಾರಣಿಯು ವೈಯಕ್ತಿಕವಾಗಿ ಹೇಗಿರಬೇಕು ಎನ್ನುವ ವಿಷಯದಲ್ಲಿ ಹೆಗಡೆಯವರಿಗೆ ಒಂದಷ್ಟು ಆದರ್ಶಗಳಿದ್ದವು ಎನಿಸುತ್ತದೆ. 'ರಾಜಕಾರಣಿಯೊಬ್ಬನಿಗೆ ತನ್ನ ಬಟ್ಟೆ-ಬರೆಯ ಬಗ್ಗೆ, ಭಾಷಾಶೈಲಿಯ ಬಗ್ಗೆ ಅರಿವಿರಬೇಕು; ತನ್ನ ಸಾರ್ವಜನಿಕ ನಡವಳಿಕೆ ಮತ್ತು ಸಜ್ಜನಿಕೆಯ ವಿಷಯದಲ್ಲಿ ಆತ ಹೊಂದಾಣಿಕೆ ಮಾಡಿಕೊಳ್ಳ ಬಾರದು. ಆತ ರಾಜಕೀಯವನ್ನು ಸಮಾಜಸೇವೆ ಎಂದೇ ಪರಿಭಾವಿಸಬೇಕು, ಕ್ರಿಮಿನಲ್ ಚಟುವಟಿಕೆಯಿಂದ ದೂರವಿರಬೇಕು' ಎಂಬುದು ಹೆಗಡೆಯವರ ಸ್ಪಷ್ಟ ಗ್ರಹಿಕೆಯಾಗಿತ್ತು. ಅವರ 'ಮೌಲ್ಯಾಧಾರಿತ ರಾಜಕೀಯ'ದ ಚಾರಿತ್ರಿಕ ಮಹತ್ವವಿರುವುದು ಇಲ್ಲಿಯೇ.

(ಲೇಖಕರು ಮಾಜಿ ಪ್ರಾಂಶುಪಾಲರು ಮತ್ತು ಸಂವಹನಾ ಸಮಾಲೋಚಕರು)

ನಾಡು ಕಂಡ ಧೀಮಂತ ಸಿಎಂ

ಗುಣಗಾನ
ಚಂದ್ರಶೇಖರ್ ಸ್ಥಾವರಮಠ
vveditoped@gmail.com

ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಪ್ರಧಾನಮಂತ್ರಿ, ಮುಖ್ಯಮಂತ್ರಿ ಆಗಬಹುದು. ಸಂಖ್ಯಾಬಲದ ಮೇಲೆ ನಿರ್ಧಾರವಾಗುವ ರಾಜಕೀಯ ಗಾದಿ ಯಾರಿಗೆ ಬೇಕಾದರೂ ಲಭಿಸುತ್ತದೆ. ಆದರೆ ಇದೆಲ್ಲದರ ಆಧಾರ ಬಿಟ್ಟು ಕೇವಲ ಮೌಲ್ಯಗಳಿಂದ ರಾಜ್ಯದ ಅತ್ಯುನ್ನತ ಹುದ್ದೆಗೆ ಏರಿದವರು ರಾಮಕೃಷ್ಣ ಹೆಗಡೆ. ತಾವು ಸಿಎಂ ಆಗಿದ್ದಾಗ ಇಡೀ ದೇಶವೇ ಕರ್ನಾಟಕದ ಕಡೆ ನಿಬ್ಬೆರಗಾಗಿ ನೋಡುವಂತೆ ಆಡಳಿತ ನೀಡಿದ ಮಹಾನ್ ನಾಯಕ. ದಿಕ್ಕು-ದೆಸೆಯಿಲ್ಲದ ಇಂದಿನ ರಾಜಕಾರಣವನ್ನು ಕಂಡಾಗ ಮೌಲ್ಯಾಧಾರಿತ ರಾಜಕಾರಣ ನಡೆಸಿದ ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಕಣ್ಮುಂದೆ ಬರುತ್ತಾರೆ. ಹೆಗಡೆಯವರು ತಮ್ಮ ರಾಜಕೀಯ ಜೀವನದುದ್ದಕ್ಕೂ ನಂಬಿದ ಹಾಗೂ ತಾವೇ ಪ್ರತಿಪಾದಿಸಿದ ರಾಜಕೀಯ ಮೌಲ್ಯಗಳ ಉಳಿವಿಗಾಗಿ ಅಹರ್ನಿಶಿ ಶ್ರಮಿಸಿದ್ದಷ್ಟೇ ಅಲ್ಲ, ಆ ಮೌಲ್ಯಗಳಿಗಾಗಿ ಸಾಕಷ್ಟು ಬಾರಿ ಬೆಲೆಯನ್ನೂ ತೆತ್ತ ಆದರ್ಶ ನಾಯಕರೂ ಹೌದು.

1962ರಿಂದ 72ರ ನಡುವೆ ನಿಜಲಿಂಗಪ್ಪ, ವೀರೇಂದ್ರ ಪಾಟೀಲರ ಸರಕಾರದಲ್ಲಿ ಪ್ರಮುಖ ಖಾತೆ ಪಡೆದು ಜನಪ್ರಿಯತೆ ಹೆಚ್ಚಿಸಿಕೊಂಡ ರಾಮಕೃಷ್ಣ ಹೆಗಡೆ ಅವರು 1983ರಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡರು. 1985ರಲ್ಲಿ ನಡೆದ ರಾಜ್ಯದ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಪಕ್ಷವು ಹಿನ್ನಡೆ ಸಾಧಿಸಿದ್ದಕ್ಕೆ ನೈತಿಕ ಜವಾಬ್ದಾರಿ ಹೊತ್ತು ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು ಹಾಗೂ ಆ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪೂರ್ಣ ಬಹುಮತದೊಂದಿಗೆ ಆರಿಸಿ ಬರುವ ಮೂಲಕ ತಾವೊಬ್ಬ ಜನನಾಯಕ ಎನ್ನುವುದನ್ನು ಮತ್ತೆ ಸಾಬೀತುಪಡಿಸಿ ತೋರಿಸಿದರು. ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ ಅವರು ಮಾಡಿದ ಬದಲಾವಣೆ ಒಂದೆರಡಲ್ಲ. ಪಂಚಾಯತ್ ರಾಜ್ ಕಾನೂನಿನಲ್ಲಿ ಹೆಗಡೆಯವರ ಪಾತ್ರ ಅತ್ಯಂತ ಮಹತ್ವದ್ದು. ಇದರ ಮೂಲಕ ಅವರು ಹಿಂದುಳಿದವರು, ಬಡವರು ಹಾಗೂ ಸಣ್ಣ ಗುಂಪು, ಜಾತಿಯ ಜನರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯ ಗಳಿಸುವ ಶಕ್ತಿ ತುಂಬಿದರು. ಅಧಿಕಾರ ವಿಕೇಂದ್ರೀಕರಣ ಹಾಗೂ ಗ್ರಾಮ ಪಂಚಾಯಿತಿಗಳು ಇವರ ಅತ್ಯಂತ ಪ್ರಿಯ ವಿಚಾರವಾಗಿದ್ದವು. ಇವರ ಕಾಲದಲ್ಲಿ ಕರ್ನಾಟಕದಲ್ಲಿ ಪ್ರಬಲವಾಗಿ ಅನುಷ್ಠಾನಗೊಂಡ ಪಂಚಾಯತ್ ಕಾನೂನಿನಿಂದ ರಾಜೀವ್ ಗಾಂಧಿ ಪ್ರಭಾವಿತರಾಗಿದ್ದಂತೂ ವಿಶೇಷ. ಇವರ ಕೃಷಿ-ತೋಟಗಾರಿಕೆ ನೀತಿಯು ರಾಷ್ಟ್ರೀಯ ತೋಟಗಾರಿಕಾ ನಿಗಮದ ಸ್ಥಾಪನೆಗೆ ದಾರಿ ಮಾಡಿಕೊಟ್ಟಿದ್ದು ಇನ್ನೊಂದು ಮೈಲಿಗಲ್ಲು. ಹೆಗಡೆ ಅವರು ಒಂದೆರಡು ಸಾಧನೆಗೆ ತೃಪ್ತಿ ಪಟ್ಟವರಲ್ಲ. ಇವರ ಪ್ರಗತಿಪಥದಲ್ಲಿ ವಿಧವಾ ಪಿಂಚಣಿ, ರಾಜ್ಯ ಅಲ್ಪಸಂಖ್ಯಾತರ ಆಯೋಗ-ಅಭಿವೃದ್ಧಿ ನಿಗಮ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಅಭ್ಯುದಯಕ್ಕಾಗಿ ಆಯೋಗ ಹಾಗೂ ಅಭಿವೃದ್ಧಿ ನಿಗಮಗಳ ಸ್ಥಾಪನೆ, ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.25ರ ಮೀಸಲು, ಲೋಕಾಯುಕ್ತ ವ್ಯವಸ್ಥೆಯನ್ನು ರಾಜ್ಯಕ್ಕೆ ಒದಗಿಸಿದ ನಿಲುವು, ರೈತರ ಸಾಲ ಮನ್ನಾ, ಕಡಿಮೆ ಬಡ್ಡಿಗೆ ಸಾಲ ಮುಂತಾದವು ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತವೆ. ಇನ್ನು ಪಠ್ಯಪುಸ್ತಕ, ಬಸ್ ಪಾಸ್ ವಿತರಣೆ, ಸಮವಸ್ತ್ರ ವಿತರಣೆ ಸೇರಿದಂತೆ ಹಲವಾರು ಕ್ರಾಂತಿಕಾರಿ ಸಾಧನೆಗೆ ಇದೇ ಸಂದರ್ಭದಲ್ಲಿ ಮುನ್ನುಡಿ ಬರೆಯಲಾಯಿತು. ಲೋಕಾಯುಕ್ತ ವ್ಯವಸ್ಥೆ ವಿಷಯ ಬಂದಾಗ ಹೆಗಡೆಯವರ ಈ ಸಾಧನೆ ನೆನೆಸಿಕೊಳ್ಳದಿದ್ದರೆ ಅಪಚಾರವಾದೀತು. ಹೊರರಾಜ್ಯದ ನ್ಯಾಯಮೂರ್ತಿಗಳನ್ನು ಈ ಸ್ಥಾನಕ್ಕೆ ತಂದು ಕೂರಿಸಿದರು. ಜತೆಗೆ ಲೋಕಾಯುಕ್ತರಿಗೆ ಸ್ವ ಇಚ್ಛೆಯಿಂದ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳುವ ಉನ್ನತ ಅಧಿಕಾರವನ್ನು ಹೆಗಡೆ ನೀಡಿದ್ದರು. ಮುಖ್ಯಮಂತ್ರಿಯನ್ನೂ ಲೋಕಾಯುಕ್ತರು ಪ್ರಶ್ನಿಸ ಬಹುದಾಗಿತ್ತು. 'ಮೌಲ್ಯಾಧಾರಿತ ರಾಜಕಾರಣಿ' ಎಂಬ ಪದ ಹುಟ್ಟಿದ್ದೇ ಇವರಿಂದ ಅಂದರೆ ಅತಿಶಯೋಕ್ತಿ ಎನಿಸದು. ಇದಕ್ಕೆ ನೀಡಬಹುದಾದ ಕೆಲ ಉದಾಹರಣೆಗಳಿವೆ. ಅವುಗಳಲ್ಲಿ ಪ್ರಮುಖವಾದುದು ಬೆಂಡಿಗೇರಿಯಲ್ಲಿ ದಲಿತನಿಗೆ ಮಲ ತಿನ್ನಿಸಿದ ಪ್ರಕರಣ. ಇದನ್ನು ಹೆಗಡೆ ಎಷ್ಟು ಗಂಭೀರವಾಗಿ ಪರಿಗಣಿಸಿದರೆಂದರೆ 'ಇನ್ನು ಮುಂದೆ ಇಂಥ ಪ್ರಕರಣ ನಡೆದರೆ ತಪ್ಪಿತಸ್ಥರಿಗೆ ದಲಿತರಿಂದಲೇ ಮಲ ತಿನ್ನಿಸುತ್ತೇನೆ' ಅಂತ ಖಡಕ್ ಆಗಿ ಎಚ್ಚರಿಸಿದ್ದರು. ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಮುನ್ನಾದಿನ ಎಲ್ಲ ಸಂಬಂಧಿಗಳನ್ನು ಕರೆದು, ಊಟ ಹಾಕಿದ ನಂತರ, 'ನಾನು ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಯುವವರೆಗೂ ನಮ್ಮ ಸಂಬಂಧವು ನೆಂಟರಿಷ್ಟರು ಅನ್ನುವುದಷ್ಟಕ್ಕೇ ಸೀಮಿತವಾಗಿರಲಿ. ಅದು ಹಾಗೆಯೇ ಇದ್ದರೆ ಒಳಿತು. ಯಾರೂ ನನ್ನ ಭೇಟಿಗೆ ಕಚೇರಿಗೆ/ಮನೆಗೆ ಬರಬೇಡಿ' ಎಂದಿದ್ದರು. ಇವರ ಪ್ರಾಮಾಣಿಕತೆಗೊಂದು ನಿದರ್ಶನವೆಂದರೆ ವೈದ್ಯ ಸೀಟು ಕೊಡಿಸಿದ್ದಕ್ಕೆ ಪ್ರತಿಯಾಗಿ ಅವರ ಮಗ ಭರತ್ ಹೆಗಡೆ ಲಂಚ ಸ್ವೀಕರಿಸಿದ್ದಾರೆ ಎಂದು ಎ.ಕೆ.ಸುಬ್ಬಯ್ಯನವರು ಆರೋಪಿಸಿದಾಗ, ಹಿಂದೆ ಮುಂದೆ ಯೋಚಿಸದೇ ಮಗನ ವಿರುದ್ಧವೇ ನ್ಯಾಯಾಂಗ ತನಿಖೆಗೆ ಆದೇಶಿಸಿದ್ದರು. ಇನ್ನು ಸಹೋದರ ಗಣೇಶ್ ಹೆಗಡೆ ಅಂತಾರಾಜ್ಯ ಅಕ್ಕಿ ಸಾಗಣೆ ದಾಸ್ತಾನಿನಲ್ಲಿ ಭಾಗಿಯಾಗಿದ್ದಾರೆ ಎಂದು ಆರೋಪ ಕೇಳಿಬಂದಾಗಲೂ ತನಿಖೆಗೆ ಸೂಚಿಸಿದ್ದರು. ಭ್ರಷ್ಟಾಚಾರದ ಆರೋಪ ಕೇಳಿಬಂದಾಗ ಒಂದಲ್ಲಾ ಎರಡು ಸಲ ಖುದ್ದು ಸಿಎಂ ಪದವಿ ತ್ಯಜಿಸಿದ್ದರು.

ಹೆಗಡೆ ಅವರು ತಮ್ಮ ರಾಜಕೀಯ ಜೀವನದುದ್ದಕ್ಕೂ ಹಿತ-ಮಿತ ನಡೆ-ನುಡಿಯೊಂದಿಗೆ ನಾಡಿನ ಜನರ ಹೃದಯ ಗೆದ್ದಿದ್ದರು. ಅವರು ಭಾಗವಹಿಸುತ್ತಿದ್ದ ಸಭೆ-ಸಮಾರಂಭಗಳಲ್ಲಿ ಜನಸಾಗರವೇ ಸೇರುತ್ತಿತ್ತು. ಅಂಥ ಧೀಮಂತ ವ್ಯಕ್ತಿತ್ವ ಅವರಲ್ಲಿತ್ತು. ಇನ್ನು ಎಂಥ ಸಂದರ್ಭದಲ್ಲೂ ಹೆಗಡೆ ಅವರು ಅಸಾಂವಿಧಾನಿಕ ಭಾಷೆ ಪ್ರಯೋಗಿಸಿದ ಉದಾಹರಣೆಗಳೇ ಇಲ್ಲ. ಅವರನ್ನು ಜನತಾದಳದಿಂದ ಹೊರ ಹಾಕಿದಾಗಲೂ ತಮ್ಮ ಗರಡಿಯಲ್ಲೇ ಬೆಳೆದ, ಜತೆಗಿದ್ದ ಕೆಲ ನಾಯಕರು ತಮ್ಮಿಂದ ದೂರವಾಗುತ್ತಿದ್ದಾರೆ ಎಂಬ ಸುಳಿವು ದೊರೆತಾಗ ತೀರಾ ನೊಂದುಕೊಂಡಿದ್ದರು. ಆಗ ಮನನೊಂದು ತೀರಾ ಭಾವುಕರಾಗಿ ಸಾತ್ವಿಕ ಆಕ್ರೋಶ ಹೊರಹಾಕಿದ್ದರು. ಆದರೆ, ತಮ್ಮ ರಾಜಕೀಯ ಕಡುವೈರಿಯನ್ನೂ ಎಂದೂ ನಿಂದಿಸಿ ಮಾತನಾಡಿದವರಲ್ಲ. ಅಂಥ ರಾಜಕೀಯ ಸಂಸ್ಕಾರ ಅವರಲ್ಲಿತ್ತು.

ಇಂಥ ಆದರ್ಶ ರಾಜಕಾರಣಿಯಾಗಿದ್ದ ಹೆಗಡೆ ಅವರ ರಾಜಕೀಯ ಮೌಲ್ಯಗಳು, ಚಿಂತನೆಗಳನ್ನು ಯುವ ಜನತೆಗೆ ತಿಳಿಸಲು ರಾಜ್ಯದ ವಿ.ವಿ.ಯೊಂದರಲ್ಲಿ ಅಧ್ಯಯನ ಪೀಠ ಸ್ಥಾಪಿಸುವ ಭರವಸೆ ಇನ್ನೂ ಸಾಕಾರವಾಗಿಲ್ಲ ಎಂಬುದು ನೋವಿನ ಸಂಗತಿ. ಹೆಗಡೆಯವರ ರಾಜಕೀಯ ಗರಡಿಯಲ್ಲೇ ಬೆಳೆದ ಸಿದ್ದರಾಮಯ್ಯ ಈಗ ಮುಖ್ಯಮಂತ್ರಿ ಆಗಿದ್ದಾರೆ. ಅವರು ಈ ಬಗ್ಗೆ ವಿಶೇಷ ಮುತುವರ್ಜಿ ವಹಿಸಿ, ಅಧ್ಯಯನ ಪೀಠ ಸ್ಥಾಪಿಸಿದ್ದೇ ಆದಲ್ಲಿ, ಭವಿಷ್ಯದ ಪೀಳಿಗೆಗೆ ಹೆಗಡೆ ಅವರ ರಾಜಕೀಯ ವಿಚಾರಧಾರೆಗಳ ಪರಿಚಯವಾಗಿ, ರಾಜಕಾರಣದಲ್ಲಿ ಮೌಲ್ಯಗಳ ಸಂರಕ್ಷಣೆಗೆ ಅದು ಸಹಕಾರಿಯಾಗಬಲ್ಲದು.

(ಲೇಖಕರು ರಾಜ್ಯಾಧ್ಯಕ್ಷರು, ಲೋಕಶಕ್ತಿ ಪಕ್ಷ)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: **VISHWESHWAR BHAT**, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : **Vishweshwar Bhat.** ಪ್ರಧಾನ ಸಂಪಾದಕ: **ವಿಶ್ವೇಶ್ವರ ಭಟ್**
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 226

ಸಮಾಚಾರ ಸಣ್ಣದಲ್ಲ

ಟೋಲ್ ಫ್ರೀ ಸಂಖ್ಯೆ: 95 ಸಾವಿರ ರು. ನಷ್ಟ

ತಿರುವನಂತಪುರಂ: ಕೇರಳದ ಪತ್ತನಂತಿಟ್ಟ ನಗರದ 52 ವರ್ಷದ ವ್ಯಕ್ತಿಯೊಬ್ಬರು ಮನೆಯಲ್ಲಿನ ವಾಟರ್ ಪ್ಯೂರಿಫೈಯರ್ ದುರಸ್ತಿಗಾಗಿ ಟೋಲ್ ಫ್ರೀ ಸಂಖ್ಯೆ ಬಳಸಿ ಕರೆ ಮಾಡಿ 95 ಸಾವಿರ ರು. ಕಳೆದುಕೊಂಡಿದ್ದಾರೆ. ಏಕೆಂದರೆ ಅವರು ಕಂಪನಿಯ ಟೋಲ್‌ಫ್ರೀ ಸಂಖ್ಯೆಗೆ ಕರೆ ಮಾಡುವ ಬದಲು ಸೈಬರ್ ವಂಚಕರ ಸಂಖ್ಯೆಯನ್ನು ಡಯಲ್ ಮಾಡಿ ಸಂಕಷ್ಟಕ್ಕೆ ಸಿಲುಕಿದ್ದಾರೆ. ಟೋಲ್‌ಫ್ರೀ ಸಂಖ್ಯೆಗೆ ಕರೆ ಮಾಡಿದಾಗ ವಂಚಕರು 'ಆಪ್ ಡೌನ್‌ಲೋಡ್' ಮಾಡಿಕೊಳ್ಳಲು ಹೇಳಿ ಲಿಂಕ್ ವಾಟ್ಸಾಪ್ ಮಾಡಿದ್ದಾರೆ. ಲಿಂಕ್ ಕ್ಲಿಕ್ ಮಾಡುತ್ತಲೇ ವ್ಯಕ್ತಿಯ ಬ್ಯಾಂಕ್ ಖಾತೆಯಿಂದ 95 ಸಾವಿರ ರು. ವಂಚಕರ ಖಾತೆಗೆ ವರ್ಗವಾಗಿದೆ. ಮೋಸ ಹೋಗಿರುವುದು ತಿಳಿದ ಬಳಿಕ ವ್ಯಕ್ತಿ ಸೈಬರ್ ಠಾಣೆಗೆ ದೂರು ದಾಖಲಿಸಿದ್ದಾರೆ. ಪೊಲೀಸರು ತನಿಖೆ ನಡೆಸಿದ್ದಾರೆ.

ಭಿಕ್ಷಾಟನೆ ನಿಷೇಧಿಸಿದ ಮಿಜೋರಾಂ ರಾಜ್ಯ

ಐಜ್ವಾಲ್: ಮಿಜೋರಾಂನಲ್ಲಿ ಭಿಕ್ಷಾಟನೆ ನಿಷೇಧವಾಗಲಿದೆ. ಈ ಸಂಬಂಧ ರಾಜ್ಯ ಸರಕಾರದ ಸಮಾಜ ಕಲ್ಯಾಣ ಸಚಿವೆ ಲಾಲ್ರಿನ್ ಪುಯಿ ಅವರು ಮಂಡಿಸಿದ ವಿಧೇಯಕವನ್ನು ಮಿಜೋರಾಂ ರಾಜ್ಯ ವಿಧಾನಸಭೆ ಗುರುವಾರ ಅಂಗೀಕರಿಸಿದೆ. ರೈಲುಗಳ ಮೂಲಕ ಹೊರರಾಜ್ಯಗಳಿಂದ ಹೆಚ್ಚಿನ ಸಂಖ್ಯೆಯ ಭಿಕ್ಷುಕರು ರಾಜ್ಯವನ್ನು ಪ್ರವೇಶಿಸುತ್ತಿದ್ದಾರೆ. ಅವರನ್ನೆಲ್ಲಾ ವಶಕ್ಕೆ ಪಡೆದು ಆಶ್ರಯ ಕೇಂದ್ರ ಗಳಲ್ಲಿರಿಸಿ ಬಳಿಕ ಅವರ ರಾಜ್ಯಕ್ಕೆ ಗಡಿಪಾರು ಮಾಡಲಾಗುವುದು ಎಂದು ಸಚಿವೆ ಸದನಕ್ಕೆ ತಿಳಿಸಿದ್ದಾರೆ.

ಮಿದುಳು ತಿನ್ನುವ ವೈರಸ್ ಪ್ರಕರಣ 10

ತಿರುವನಂತಪುರಂ: ಕೇರಳದಲ್ಲಿ ಮಿದುಳು ತಿನ್ನುವ ಅಮೀಬಾ ಸೋಂಕು ದಿನೇ ದಿನೇ ನಿದಾನಗತಿಯಲ್ಲಿ ವಿಸ್ತರಿಸುತ್ತಿದ್ದು, ರಾಜ್ಯದಲ್ಲಿ ಗುರುವಾರ 10ನೇ



ಪ್ರಕರಣ ವರದಿಯಾಗಿದೆ. ಕೋಯಿಕ್ಕೋಡ್ ಜಿಲ್ಲೆಯ ಮಹಿಳೆ ಯೊಬ್ಬರು (43) ಅಮೀಬಿಕ್ ಮೆನಿಂಗೊ ಎನ್ ಸೆಫಲಿಟಿಸ್ ಸೋಂಕಿಗೆ ತುತ್ತಾಗಿರುವುದು ಪ್ರಯೋಗಾಲಯ ಪರೀಕ್ಷೆ ಮೂಲಕ ದೃಢಪಟ್ಟಿದೆ. ಕೋಯಿಕ್ಕೋಡ್, ವಯನಾಡು, ಮಲಪ್ಪುರಂ ಜಿಲ್ಲೆಗಳ ಒಟ್ಟು 10 ಸೋಂಕಿತರನ್ನೂ ಕೋಯಿಕ್ಕೋಡ್ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ದಾಖಲಿಸಿಕೊಂಡು ಚಿಕಿತ್ಸೆ ನೀಡಲಾಗುತ್ತಿದೆ. ಸೋಂಕಿತರಲ್ಲಿ ನಾಲ್ವರು ಮಕ್ಕಳೂ ಸೇರಿದ್ದಾರೆ. ಮಾಸಾರಂಭದಲ್ಲಿ 9 ವರ್ಷದ ಬಾಲಕಿ ಇದೇ ಸೋಂಕಿಗೆ ಬಲಿಯಾಗಿದ್ದಳು.

ಗಣೇಶ ಪ್ರತಿಮೆ ಮೇಲೆ ಮೊಟ್ಟೆ ಎಸೆತ: ಬಂಧನ

ವಡೋದರಾ: ಗುಜರಾತ್ ರಾಜ್ಯದ ವಡೋದರಾ ನಗರದಲ್ಲಿ ಗಣೇಶ ಮೂರ್ತಿಯನ್ನು ಪರಿಷ್ಠಾಪಿಸುವ ಸಲುವಾಗಿ ಭಕ್ತರ ದೊಡ್ಡ ಗುಂಪು ಪ್ರತಿಮೆಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯುತ್ತಿದ್ದಾಗ

ವಾಓವರಾ ಕಿಡಿಗೇಡಿಗಳು ಮೊಟ್ಟೆ ಎಸೆದಿದ್ದಾರೆ. ಒಂದು ಮೊಟ್ಟೆ ಗಣೇಶನ ಮೂರ್ತಿಗೆ ತಾಗಿದೆ. ಗಣೇಶ ಮೂರ್ತಿ ಅಪವಿತ್ರವಾಯಿತು ಎಂದು ಭಕ್ತರು ಸಿಟ್ಟಿಗೆದ್ದು ಗಲಾಟೆ ಆರಂಭಿಸಿದ್ದು, ಪ್ರದೇಶದಲ್ಲಿ ಉದ್ವಿಗ್ನತೆ ಉಂಟಾಗಿದೆ. ತಕ್ಷಣವೇ ಸ್ಥಳಕ್ಕೆ ಧಾವಿಸಿ ಕ್ರಮ ಕೈಗೊಂಡ ಪೊಲೀಸರು ಇಬ್ಬರು ಕಿಡಿಗೇಡಿಗಳನ್ನು ಬಂಧಿಸಿದ್ದಾರೆ. ಮತ್ತೊಬ್ಬ ಬಾಲಕನನ್ನೂ ವಶಕ್ಕೆ ಪಡೆದಿದ್ದಾರೆ. ಬಂಧಿತರನ್ನು ಷಾನವಾಜ್ ಖುರೇಷಿ(29) ಮತ್ತು ಸುಫಿಯಾನ್ ಮನ್ಸೂರಿ(20) ಹಾಗೂ ಮತ್ತೊಬ್ಬ ಅಪ್ರಾಪ್ತನಾಗಿದ್ದಾನೆ.

ಗ್ರನೇಡ್ ದಾಳಿಕೋರ 3 ತಿಂಗಳ ಬಳಿಕ ಸೆರೆ

ಶ್ರೀನಗರ: ಕಾಶ್ಮೀರದ ಪುಲ್ವಾಮಾದಲ್ಲಿ ಸಿಆರ್‌ಪಿಎಫ್ ಶಿಬಿರದ ಮೇಲೆ ಮೇ 20ರಂದು ಗ್ರನೇಡ್ ದಾಳಿ ನಡೆಸಿದ್ದ ಉಗ್ರನೊಬ್ಬನನ್ನು ಜಮ್ಮು-ಕಾಶ್ಮೀರ ಪೊಲೀಸರು ಗುರುವಾರ ಬಂಧಿಸಿದ್ದಾರೆ. ದಕ್ಷಿಣ ಕಾಶ್ಮೀರದ ಅವಂತಿಪೋರಾ ತಾಲೂಕಿನ ಹರಿಪರಿಗಮ್ ಎಂಬಲ್ಲಿ ಶೋಪಿಯಾನ್ ಜಿಲ್ಲೆ ನಿವಾಸಿಯಾದ ಉಗ್ರ ಸಾಕಿಬ್ ರೆಯಾಜ್ ಗನಿ ಎಂಬಾತನನ್ನು ಬಂಧಿಸಲಾಗಿದೆ. ಸಾಕಿಬ್ ಬಳಿಯಿದದ ಪಿಸ್ತೂಲ್, ಮ್ಯಾಗಜಿನ್, 9 ಎಂಎಂ ಗಾತ್ರದ 7 ಗುಂಡುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

{ **ಅರವಿಂದ್ ಕೇಜ್ರಿವಾಲ್** } ಎಎಪಿ ಸಂಚಾಲಕ

ಟ್ರಂಪ್ ಸುಂಕಾಸ್ತ್ರಕ್ಕೆ ಪ್ರತಿಯಾಗಿ ಬೇರೆ ದೇಶಗಳೂ ಅಮೆರಿಕ ಸರಕಿಗೆ ಹೆಚ್ಚಿನ ಸುಂಕ ವಿಧಿಸಿವೆ. ಭಾರತವೂ ಸುಂಕ ಹೆಚ್ಚಿಸಲಿ. ಇಂಥ ಕ್ರಮವನ್ನು ದೇಶ ಪೂರ್ಣ ಬೆಂಬಲಿಸುತ್ತದೆ. ಆದರೆ ಬಿಜೆಪಿ ಸರಕಾರ ಅಮೆರಿಕದಿಂದ ಆಮದಾಗುವ ಹತ್ತಿ ಮೇಲಿನ ಶೇ.11 ಸುಂಕ ಮನ್ನಾ ಮಾಡಲು ನಿರ್ಧರಿಸಿದೆ. ಇದು ದೇಶದ ರೈತರ ಮೇಲೆ ತೀವ್ರ ಪರಿಣಾಮ ಬೀರುತ್ತದೆ.

ವರುಣನ ಆರ್ಭಟಕ್ಕೆ ಉತ್ತರ ಭಾರತ ತತ್ತರ

ಜಮ್ಮು-ಕಾಶ್ಮೀರ, ಛತ್ತೀಸ್‌ಗಢ, ಒಡಿಶಾ, ಪಂಜಾಬ್‌ನಲ್ಲಿ ಮಳೆ | ಉಧಂಪುರದಲ್ಲಿ 24 ಗಂಟೆ ಅವಧಿಯಲ್ಲಿ 629 ಮಿ.ಮೀ. ಮಳೆ | ವರ್ಷಾಧಾರೆಗೆ ಜಮ್ಮು-ಕಾಶ್ಮೀರ ತತ್ತರ: ಮೃತರ ಸಂಖ್ಯೆ 43ಕ್ಕೆ | ವೈಷ್ಣೋದೇವಿ ಯಾತ್ರೆ ಮಾರ್ಗದಲ್ಲಿ ಭೂಕುಸಿತ 36 ಸಾವು | ಅಖ್ನೂರ್ ಸೆಕ್ಟರ್‌ನಲ್ಲಿ ಪ್ರವಾಹದಲ್ಲಿ ಕೊಚ್ಚಿಹೋದ ಯೋಧ

ದೆಹಲಿ: ಜಮ್ಮು-ಕಾಶ್ಮೀರದಲ್ಲಿ ಸರಣಿಯೋಪಾದಿ ಮೇಘಸ್ಫೋಟವಾದ ಕಾರಣ ಕಳೆದ 2-3 ದಿನಗಳಿಂದಲೂ ಧಾರಾಕಾರ ಮಳೆಯಾಗುತ್ತಿದ್ದು, ಎಲ್ಲೆಲ್ಲೂ ಪ್ರವಾಹ ಪರಿಸ್ಥಿತಿ ತಲೆದೋರಿದೆ, ಹತ್ತಾರು ಕಡೆ ಭೂಕುಸಿತವಾಗಿದೆ. ಪರಿಣಾಮ, ಶ್ರೀ ಮಾತಾ ವೈಷ್ಣೋದೇವಿ ಯಾತ್ರೆಯನ್ನು ಸ್ಥಗಿತಗೊಳಿಸಲಾಗಿದ್ದು, ಅದಾಗಲೇ ಯಾತ್ರೆಯಲ್ಲಿ ಭಾಗಿಯಾಗಿರುವ ನೂರಾರು ಭಕ್ತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಈವರೆಗೆ ಒಟ್ಟು 43 ಮಂದಿ ಸಾವಿಗೀಡಾಗಿದ್ದಾರೆ.

ಇನ್ನೊಂದೆಡೆ, ಛತ್ತೀಸ್‌ಗಢ, ಒಡಿಶಾ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿಯೂ ವರುಣನ ಆರ್ಭಟ ಜೋರಾಗಿದೆ. ಛತ್ತೀಸ್‌ಗಢದ ಬಸ್ತಾರ್ ಜಿಲ್ಲೆಯಲ್ಲಿಯೂ ನದಿಗಳು ಉಕ್ಕಿ ಹರಿಯುತ್ತಿದ್ದು, 9 ಜನರು ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಹಿಮಾಚಲ ಪ್ರದೇಶದ ಮಂಡಿ ಜಿಲ್ಲೆಯಲ್ಲಿ ಬಿಯಾಸ್ ನದಿಯ ಪ್ರವಾಹದ ಆತಂಕ ತರಿಸಿದೆ. ಹಿಮಾಚಲ ಪ್ರದೇಶದಲ್ಲಿ ಹಲವೆಡೆ ಭೂಕುಸಿತವಾಗಿದ್ದು, ಒಂದೆಡೆ ರಾಷ್ಟ್ರೀಯ ಹೆದ್ದಾರಿಯ ಒಂದು ಭಾಗವೇ ಕುಸಿದುಹೋಗಿದೆ. ಪರಿಣಾಮ, ಮನಾಲಿ-ಚಂಡೀಗಢ ಮಾರ್ಗದಲ್ಲಿನ ವಾಹನ ಸಂಚಾರ ಪೂರ್ಣ ಸ್ಥಗಿತವಾಗಿದೆ. ಉತ್ತರಾಖಂಡ್‌ನಲ್ಲಿ ಜೀವಗಂಗೆ, ಯಮುನಾ ನದಿಗಳು ಅಪಾಯದ ಮಟ್ಟ ಮೀರಿ ಹರಿಯುತ್ತಿವೆ.

ಆಂಧ್ರಪ್ರದೇಶದಲ್ಲಿಯೂ ಕೆಲ ದಿನಗಳಿಂದ ಧಾರಾಕಾರ ಮಳೆಯಾಗಿದ್ದು, ರಾಜ್ಯದ ಪ್ರಮುಖ ನದಿಗಳಾದ ಕೃಷ್ಣೆ ಮತ್ತು ಗೋಧಾವರಿ ಅಪಾಯಮಟ್ಟ ಮೀರಿ ಹರಿಯುತ್ತಿವೆ.

ಉಧಂಪುರದಲ್ಲಿ 629: ಗುರುವಾರ ಬೆಳಗ್ಗೆ 8 ಗಂಟೆಗೂ ಮುಂಚಿನ 24 ಗಂಟೆಗಳ ಅವಧಿಯಲ್ಲಿ ಉದಂಪುರದಲ್ಲಿ 629 ಮತ್ತು ಜಮ್ಮುವಿನಲ್ಲಿ 380 ಮಿ.ಮೀ ದಾಖಲೆ ಪ್ರಮಾಣದ ಮಳೆಯಾಗಿದೆ. 1988ರಲ್ಲಿ ಜಮ್ಮುವಿನಲ್ಲಿ 270 ಮಿ.ಮೀ ಮಳೆ ದಾಖಲಾಗಿದ್ದೇ ಈ ಹಿಂದಿನ ದಾಖಲೆ. ಕತ್ರಾದಲ್ಲಿ 284, ರಿಯಾಸಿಯಲ್ಲಿ 282, ಸಾಂಬಾ 170, ದಾದಾ 130, ಕಥುವಾ 116, ಬನಿಹಾಲ್ 83.8, ರಜೌರಿ 57.4 ಮತ್ತು ಕಿಶ್ತ್ವಾರ್‌ನಲ್ಲಿ 49 ಮಿ.ಮೀ ಮಳೆಯಾಗಿದೆ ಎಂದು ಎಂಇಟಿ ಕಾಶ್ಮೀರ ನಿರ್ದೇಶಕ ಮುಖ್ತಾರ್ ಅಹ್ಮದ್ ಸುದ್ದಿಸಂಸ್ಥೆಗೆ ಗುರುವಾರ ತಿಳಿಸಿದ್ದಾರೆ.

ಜಮ್ಮುವಿನಲ್ಲಿ ಈ ಪರಿಯ ಮಳೆ ಇದೇ ಮೊದಲು. ಜಮ್ಮು ನಗರದಲ್ಲಿ ಪ್ರವಾಹದಲ್ಲಿ ಮನೆಗಳು ಮುಳುಗಿರುವುದನ್ನು ಇದೇ ಮೊದಲು ಬಾರಿಗೆ ನೋಡುತ್ತಿರುವೆ ಎಂದು ಜಮ್ಮು ನಿವಾಸಿ ನವೀನ್ ಕುಮಾರ್ ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಸಂತ್ರಸ್ತ ಕುಟುಂಬಗಳಿಗೆ ತಲಾ 9 ಲಕ್ಷ ರು. ಪರಿಹಾರ ಧನವನ್ನು ಜಮ್ಮು-ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಪ್ರಕಟಿಸಿದ್ದಾರೆ. ವೈಷ್ಣೋದೇವಿ ಯಾತ್ರೆಯಲ್ಲಿ ಸಾವಿಗೀಡಾದ ಉತ್ತರ ಪ್ರದೇಶದ ಯಾತ್ರಿಕರ ಕುಟುಂಬಗಳಿಗೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ತಲಾ 4 ಲಕ್ಷ ರು. ಪರಿಹಾರ ಘೋಷಿಸಿದ್ದಾರೆ. ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ವೈಷ್ಣೋದೇವಿ ಯಾತ್ರೆಗೆ ಅಧಿಕಾರಿಗಳೇಕೆ ಅವಕಾಶ ನೀಡಿದರು? ಎಂದು ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಪ್ರಶ್ನಿಸಿದ್ದಾರೆ. ಯಾತ್ರಿಕರ ಸಾವಿನ ಸುದ್ದಿ ದುಃಖ ತಂದಿದೆ. ನೆರವಿನ ಭರವಸೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಧನ್ಯವಾದ ಹೇಳಿದ್ದಾರೆ.

ಜಮ್ಮು-ಕಾಶ್ಮೀರ ಭೂಕುಸಿತ. ಅಪಾಯದಲ್ಲಿ ಸಿಲುಕಿಕೊಂಡಿರುವ ಸರಕು ಸಾಗಣೆ ವಾಹನಗಳು.

ಚಂಡೀಗಢ-ಮನಾಲಿ ರಾಷ್ಟ್ರೀಯ ಹೆದ್ದಾರಿ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದೆ.

ಕಾಶ್ಮೀರ ಸಾವಿನ ಸಂಖ್ಯೆ 43ಕ್ಕೆ

ಶ್ರೀನಗರ: ಸರಣಿ ಮೇಘಸ್ಫೋಟ, ರಣಭೀಕರ ಮಳೆಯಿಂದಾಗಿ ಜಮ್ಮು-ಕಾಶ್ಮೀರ ಅಕ್ಷರಶಃ ತತ್ತರಿಸಿ ಹೋಗಿದೆ. ಮಾತಾ ವೈಷ್ಣೋದೇವಿ ಯಾತ್ರೆಯ ಮಾರ್ಗದಲ್ಲಿನ ಭೂಕುಸಿತದಲ್ಲಿ ಸಿಲುಕಿಕೊಂಡು ಭಕ್ತರಲ್ಲಿ 36 ಮಂದಿ ಜೀವ ಕಳೆದುಕೊಂಡಿದ್ದಾರೆ. ಹಲವರು ಗಾಯಗೊಂಡು ಚಿಕಿತ್ಸೆ ಪಡೆಯುತ್ತಿದ್ದಾರೆ. ಪ್ರವಾಹ ಪರಿಸ್ಥಿತಿಯ ಕಾರಣ ಜಮ್ಮು-ಕಾಶ್ಮೀರದ ಬಹಳಷ್ಟು ಕಡೆ ಭೂ ಕುಸಿತವಾಗಿದೆ. ಪ್ರವಾಹ-ಭೂಕುಸಿತ ಅವಘಡಗಳಲ್ಲಿ ಸಾವಿಗೀಡಾದವರು ಒಟ್ಟು ಸಂಖ್ಯೆ ಗುರುವಾರದ ವೇಳೆಗೆ 43ಕ್ಕೆ ಮುಟ್ಟಿದೆ. ವೈಷ್ಣೋದೇವಿ ಯಾತ್ರೆ ಮಾರ್ಗದಲ್ಲಿ ರೆಸಾಯಿಯ ಅರ್ಧ ಕುವರಿಯಲ್ಲಿ 6 ಸಾವಾಗಿದೆ. 20 ಮಂದಿ ಗಾಯಗೊಂಡಿದ್ದಾರೆ. ಇವರೆಲ್ಲರೂ ಉತ್ತರ ಪ್ರದೇಶ, ರಾಜಸ್ಥಾನ, ದೆಹಲಿ ಮತ್ತು ಪಂಜಾಬ್‌ನಿಂದ ಆಗಮಿಸಿದ್ದ ಯಾತ್ರಾರ್ಥಿಗಳು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮಳೆ ಅವಘಡ ಕಾರಣ ದೋಡಾದಲ್ಲಿ 4 ಸಾವು ವರದಿಯಾಗಿವೆ. ಸಾಂಬಾ ಮಾರ್ಗದಲ್ಲಿ ಪ್ರಯಾಣಿಕರ ವಾಹನಗಳು ಸ್ಥಗಿತಗೊಂಡಿವೆ. ಭದೇವಾರ್ ನಗರದಲ್ಲಿ ಗುಪ್ತ ಗಂಗಾ ದೇವಾಲಯ ಜಲಾವೃತವಾಗಿದೆ. ಲಖಿಂಪುರ ಟೋಲ್ ಪ್ಲಾಜಾ ಕಥುವಾ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದೆ. ಅನಂತನಾಗ್ ನಗರ ಪ್ರವಾಹದಲ್ಲಿ ಸಿಲುಕಿದೆ. ರಸ್ತೆಗಳೆಲ್ಲಾ ನದಿಗಳಂತಾಗಿದ್ದು, ಅದರಲ್ಲೇ ರಕ್ಷಣಾ ತಂಡದ ಸಿಬ್ಬಂದಿ ದೋಣಿ ಸಂಚಾರ ನಡೆಸಿದ್ದಾರೆ. ಮನೆಗಳಲ್ಲಿ ಸಿಲುಕಿರುವ ಜನರನ್ನ ರಕ್ಷಿಸಲು ರಾಷ್ಟ್ರೀಯ ವಿಪತ್ತು ಪರಿಹಾರ ಪಡೆ(ಎನ್‌ಡಿಆರ್‌ಎಫ್) ಮತ್ತು ರಾಜ್ಯ ವಿಪತ್ತು ಪರಿಹಾರ ಪಡೆ(ಎಸ್‌ಡಿಆರ್‌ಎಫ್)ತಂಡಗಳ ರಕ್ಷಣೆ ಕಾರ್ಯ ಮುಂದುವರೆದಿದೆ.

ಪಂಜಾಬ್‌ನಲ್ಲಿ 29 ಮಂದಿ ರಕ್ಷಣೆ

ಗುರುದಾಸ್‌ಪುರದ ಕರ್ತಾರಪುರ ಕಾರಿಡಾರ್ ಮುಳುಗಡೆಯಾಗಿದೆ. ಪಂಜಾಬ್‌ನ ಪ್ರವಾಹ ಪೀಡಿತ ಗ್ರಾಮದಿಂದ ಸಿಆರ್‌ಪಿಎಫ್‌ನ 26 ಪೊಲೀಸ್ ಸಿಬ್ಬಂದಿ ಮತ್ತು ಮೂವರು ನಾಗರಿಕರನ್ನು ಸೇನಾಪಡೆಯ ಹೆಲಿಕಾಪ್ಟರ್‌ನಲ್ಲಿ ರಕ್ಷಿಸಲಾಗಿದೆ. 29 ಮಂದಿಯೂ ಆಶ್ರಯ ಪಡೆದಿದ್ದ ಕಟ್ಟಡ, ಅವರನ್ನೆಲ್ಲಾ ಕರೆದುಕೊಂಡು ಹೆಲಿಕಾಪ್ಟರ್ ಹೊರಡುತ್ತಿದ್ದಂತೆಯೇ ಕೆಲ ಕ್ಷಣಗಳಲ್ಲಿಯೇ ಕುಸಿದು ಬಿದ್ದಿದೆ. ಸ್ವಲ್ಪ ತಡವಾಗಿದ್ದರೂ ದೊಡ್ಡ ಸಂಖ್ಯೆಯ ಜೀವಹಾನಿಯಾಗುತ್ತಿತ್ತು ಎನ್ನಲಾಗಿದೆ.

ನೇಪಾಳ ಮಾರ್ಗ ಬಿಹಾರಕ್ಕೆ ನುಸುಳಿದ ಜೆಇಎಂ ಉಗ್ರರು

ಪಟನಾ: ಪಾಕಿಸ್ತಾನ ಮೂಲದ ನಿಷೇಧಿತ ಉಗ್ರ ಸಂಘಟನೆ 'ಜೈಶ್-ಎ-ಮೊಹಮ್ಮದ್'(ಜೆಇಎಂ)ಗೆ ಸೇರಿದ ಮೂರು ಉಗ್ರರು ನೇಪಾಳ ಗಡಿಯ ಮೂಲಕ ಭಾರತಕ್ಕೆ ನುಸುಳಿದ್ದು, ಮುಂಬರುವ ಬಿಹಾರ ವಿಧಾನಸಭೆ ಚುನಾವಣೆ ವೇಳೆ ವಿಧ್ವಂಸಕ ಕೃತ್ಯ ನಡೆಸಲು ಸಂಚು ರೂಪಿಸಿದ್ದಾರೆ ಎಂಬ ಆತಂಕಕಾರಿ ಮಾಹಿತಿ ಲಭ್ಯವಾಗಿದೆ.

ಗುಪ್ತಚರ ಇಲಾಖೆಯ ಖಚಿತ ಮಾಹಿತಿ ಮೇರೆಗೆ ಬಿಹಾರ ಪೊಲೀಸ್ ಪ್ರಧಾನ ಕಚೇರಿಯು ಬಿಹಾರ ರಾಜ್ಯಾದ್ಯಂತ ಹೈ ಅಲರ್ಟ್ ಘೋಷಿಸಿ ಗುರುವಾರ ಪ್ರಕಟಣೆ ಹೊರಡಿಸಿದೆ.

ರಾವಲ್ಪಿಂಡಿ ನಿವಾಸಿ ಹಸ್ನಾನಿನ್ ಅಲಿ, ಉಮರ್ ಕೋಟ್‌ನ ಆದಿಲ್ ಹುಸೇನ್ ಮತ್ತು ಭವಾಲ್‌ಪುರದ ಮೊಹಮ್ಮದ್ ಉಸ್ಮಾನ್ ಬಿಹಾರಕ್ಕೆ ನುಸುಳಿದ್ದಾರೆ. ಮೂವರೂ ಆಗಸ್ಟ್ 2ನೇ ವಾರ ನೇಪಾಳದ ಕಠ್ಮಂಡುವಿಗೆ ಬಂದು ಬಳಿಕ ಕಳೆದ ವಾರ ಗಡಿ ನುಸುಳಿ ಬಿಹಾರ ತಲುಪಿದ್ದಾರೆ. ಸ್ಥಳೀಯ ನೇಪಾಳಿ ನಿವಾಸಿಯೊಬ್ಬ ಮೂವರಿಗೂ ನೆರವಾಗಿದ್ದಾನೆ ಎಂದು ಗುಪ್ತಚರ ಮೂಲಗಳು ತಿಳಿಸಿರುವುದಾಗಿ ರಾಜ್ಯ ಪೊಲೀಸ್ ಇಲಾಖೆ ಸುದ್ದಿಸಂಸ್ಥೆ ಜತೆ ಮಾಹಿತಿ ಹಂಚಿಕೊಂಡಿದೆ.

ಶಂಕಾಸ್ಪದ ವ್ಯಕ್ತಿಗಳು, ಚಟುವಟಿಕೆಗಳ ಬಗ್ಗೆ ಸಾರ್ವಜನಿಕರು ಜಾಗರೂಕರಾಗಿರಬೇಕು, ಪೊಲೀಸರಿಗೆ ಮಾಹಿತಿ ನೀಡಬೇಕು ಎಂದು ಪೊಲೀಸರು ಮನವಿ ಮಾಡಿದ್ದಾರೆ.

ರಾಜ್ಯಾದ್ಯಂತ ಭದ್ರತೆ ಹೆಚ್ಚಿಸಲಾಗಿದೆ. ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ರಾಜ್ಯ ನುಸುಳಿರುವ ಮೂವರು ಜೆಇಎಂ ಉಗ್ರರ ಭಾವಿಚಿತ್ರ, ಪಾಸ್‌ಪೋರ್ಟ್ ವಿವರ ಪ್ರಕಟಿಸಿರುವ ಬಿಹಾರ ರಾಜ್ಯ ಪೊಲೀಸರು, ಮೂವರ ಬಗ್ಗೆ ಸುಳಿವು ಕೊಟ್ಟರೆ ತಲಾ 50 ಸಾವಿರದಂತೆ ಒಟ್ಟು 1.50 ಲಕ್ಷ ರು. ಬಹುಮಾನ ನೀಡುವುದಾಗಿ ಗುರುವಾರ ಸಾರ್ವಜನಿಕ ಪ್ರಕಟಣೆ ಹೊರಡಿಸಿದೆ.

ಬಂಡಿಪೋರಾ: ಇಬ್ಬರು ಉಗ್ರರ ಅಂತ್ಯ

ಜಮ್ಮು-ಕಾಶ್ಮೀರದ ಬಂಡಿಪೋರಾ ಜಿಲ್ಲೆಯ ಗುರೆಜ್ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆಯುದ್ದಕ್ಕೂ ಉಗ್ರರ ಒಳನುಸುಳುವಿಕೆ ಪ್ರಯತ್ನಗಳು ಮತ್ತೆ ಆರಂಭಗೊಂಡಿದ್ದು, ಜಂಟಿ ಭದ್ರತಾ ಪಡೆಗಳ ಯೋಧರು ಗುರುವಾರ ನಸುಕಿನಲ್ಲಿ ಇಬ್ಬರು ಉಗ್ರರನ್ನು ಹೊಡೆದುರುಳಿಸಿದ್ದಾರೆ. ಉಗ್ರರ ಒಳನುಸುಳಲು ಪ್ರಯತ್ನ ನಡೆಸುತ್ತಿರುವ ಬಗ್ಗೆ ಜಮ್ಮು-ಕಾಶ್ಮೀರ ಪೊಲೀಸ್ ಗುಪ್ತಚರ ಮಾಹಿತಿ ನೀಡಿದ್ದರಿಂದ ಭಾರತೀಯ ಸೇನೆ ಮತ್ತು ಜಮ್ಮು- ಕಾಶ್ಮೀರ ಪೊಲೀಸ್ ಗುರೆಜ್ ಸೆಕ್ಟರ್‌ನಲ್ಲಿ ಗುರುವಾರ ನಸುಕಿನಲ್ಲೇ ಜಂಟಿ ಕಾರ್ಯಾಚರಣೆ ಆರಂಭಿಸಿದರು. ಎಲ್‌ಒಸಿ ಬಳಿ ಶಂಕಾಸ್ಪದ ಚಲನವಲನ ಗಮನಿಸಿದ ಭದ್ರತಾ ಪಡೆ ಯೋಧರು ಗುಂಡು ಹಾರಿಸಿ ಇಬ್ಬರು ಉಗ್ರರಿಗೂ ಗುಂಡಿಕ್ಕಿದರು ಎಂದು ಶ್ರೀನಗರದ 'ಚಿನಾರ್ ಕಾರ್ಪ್ಸ್' ಎಕ್ಸ್ ಖಾತೆ ತಿಳಿಸಿದೆ.

ಯುವತಿ ಅಪಹರಿಸಿ 6 ತಿಂಗಳು ಅತ್ಯಾಚಾರ

ಭುವನೇಶ್ವರ: ಒಡಿಶಾದ ಬಾಲಸೋರ್ ಜಿಲ್ಲೆಯ 23 ವರ್ಷದ ಯುವತಿಯನ್ನು ಅಪಹರಿಸಿ 6 ತಿಂಗಳು ಕೂಡಿಹಾಕಿ ಹಲವಾರು ವ್ಯಕ್ತಿಗಳು ಸಾಮೂಹಿಕ ಅತ್ಯಾಚಾರ ನಡೆಸುತ್ತಾ ಇದ್ದ ದುಷ್ಕೃತ್ಯ ವರದಿಯಾಗಿದೆ.

ಮಯೂರ್ಭಂಜ್ ಜಿಲ್ಲೆಯ ಬರಿಪಾದದಲ್ಲಿ ಮನೆಯೊಂದರಲ್ಲಿ ಕೂಡಿಹಾಕಿ ಸಾಮೂಹಿಕ ಅತ್ಯಾಚಾರ ನಡೆಸಿ ದೈಹಿಕವಾಗಿಯೂ ಹಿಂಸೆ ನೀಡಲಾಗಿದೆ ಎಂದು ಆರೋಪಿಗಳಿಂದ ತಪ್ಪಿಸಿಕೊಂಡು ಬಂದ ಸಂತ್ರಸ್ತೆ ಭೋಗ್ರೈ ಪೊಲೀಸ್ ಠಾಣೆಗೆ ದೂರು ನೀಡಿದ್ದಾಳೆ.

ಆದರೆ, ಸಂತ್ರಸ್ತೆಯ ತಾಯಿ ಹೇಳಿರುವುದೇನೆಂದರೆ, ಮಗಳು ಮನೆಯಿಂದ 3 ಲಕ್ಷ ರು. ಚಿನ್ನಾಭರಣ ಹೊತ್ತೊಯ್ದು, ಆರೋಪಿತನೊಂದಿಗೆ ಓಡಿ ಹೋಗಿದ್ದಳು. ಈ ಬಗ್ಗೆ ಮಾ.3ರಂದು ಬಾಲಸೋರ್ ಪೊಲೀಸರಿಗೆ ದೂರು ದಾಖಲಿಸಿದ್ದೇವೆ ಎಂದಿದ್ದಾರೆ. ಯುವತಿ ನೀಡಿದ ದೂರಿನಂತೆ ಪ್ರಕರಣ ದಾಖಲಿಸಿ ಆರೋಪಿಗಳ ಬಂಧನಕ್ಕೆ ಪ್ರಯತ್ನ ನಡೆದಿದೆ. ಸಂತ್ರಸ್ಥೆಯನ್ನು ವೈದ್ಯಕೀಯ ಪರೀಕ್ಷೆ ನಡೆಸಿದ ಬಳಿಕ ಬಾಲಸೋರ್ ಪುನರ್ವಸತಿ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ಭೋಗ್ರೈ ಪೊಲೀಸ್ ಇನ್ಸ್ಪೆಕ್ಟರ್ ರೋಹಿತ್ ಕುಮಾರ್ ಬಾಲ್ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ಈಗಲೇ ಟ್ರಂಪ್ ಕೊಲ್ಲಿ, ಇಸ್ರೇಲ್ ಸರ್ವನಾಶ'

ಮಿನ್ನಿಯಾಪೊಲೀಸ್ ದಾಳಿ-ಬಂದೂಕಿನಲ್ಲಿ ಬರಹ!

ವಾಷಿಂಗ್ಟನ್: ಅಮೆರಿಕದ ಮಿನ್ನಿಯಾಪೋಲಿಸ್ ನಗರದಲ್ಲಿ ಚರ್ಚ್‌ನಲ್ಲಿದ್ದ ಶಾಲಾ ಮಕ್ಕಳ ಮೇಲೆ ಬುಧವಾರ ಬಂದೂಕುದಾರಿಯೊಬ್ಬ ಗುಂಡು ಹಾರಿಸಿ ಇಬ್ಬರು ವಿದ್ಯಾರ್ಥಿಗಳನ್ನು ಕೊಂದಿದ್ದಾನೆ.



23 ವರ್ಷದ ರಾಬಿನ್ ವೆಸ್ಟ್‌ಮನ್ ಎಂಬಾತ ರೈಫಲ್, ಶಾಟ್‌ಗನ್ ಮತ್ತು ಪಿಸ್ತೂಲ್ ಅನ್ನು ಮಕ್ಕಳ ಮೇಲಿನ ದಾಳಿಗೆ ಬಳಸಿದ್ದಾನೆ. ಅನನ್ಸಿಯೇಷನ್ ಕ್ಯಾಥೋಲಿಕ್ ಶಾಲೆಯ ಚರ್ಚ್ ಮೇಲೆ ಹತ್ತಾರು ಗುಂಡು ಹಾರಿಸಿ ಇಬ್ಬರನ್ನು ಕೊಂದಿದ್ದಾನೆ. ನಂತರ ವಾಹನ ನಿಲುಗಡೆ ಸ್ಥಳದಲ್ಲಿ ತನಗೂ ಗುಂಡು ಹಾರಿಸಿಕೊಂಡಿದ್ದಾನೆ ಎಂದು ವರದಿಯಾಗಿದೆ.

ಮತ್ತೊಂದು ಆಘಾತಕಾರಿ ಸಂಗತಿಯೆಂದರೆ ದಾಳಿಕೋರನ ಶಸ್ತ್ರಾಸ್ತ್ರಗಳ ಮೇಲೆ ಬರಹ. 'ಈಗಲೇ ಟ್ರಂಪ್ ಕೊಲ್ಲಿ, ಇಸ್ರೇಲ್ ಸರ್ವನಾಶವಾಗಲಿ, ಭಾರತದ ಮೇಲೆ ಅಣ್ವಸ್ತ್ರ ದಾಳಿಯಾಗಲಿ, ನಿಮ್ಮ ದೇವರು ಎಲ್ಲಿ?' ಎಂಬ ಬರಹ ವ್ಯಾಪಕ ಚರ್ಚೆ ಮತ್ತು ಆತಂಕಕ್ಕೆ ಕಾರಣವಾಗಿದೆ.

ಭಾರತ ಭಾಗವಾಗಿದ್ದ ನೆರೆಯ ದೇಶಗಳ ಸಂಬಂಧ ವೃದ್ಧಿಸಲಿ

ದೆಹಲಿ: ಈಗಿನ ನೆರೆಯ ದೇಶಗಳು ಈ ಹಿಂದೆ ಭಾರತದ ಭಾಗವೇ ಆಗಿದ್ದವು. ಭೌಗೋಳಿಕತೆ, ಕಾಡು, ನದಿ, ಬೆಟ್ಟ-ಪರ್ವತ, ಜನರು ಎಲ್ಲವೂ ಒಂದೇ ಆಗಿದ್ದು, ನಕ್ಷೆಗಳಲ್ಲಿ ಮಾತ್ರ ಗೆರೆ ಎಳೆದು ಬೇರೆ ಮಾಡಲಾಗಿದೆ. ಈಗಲಾದರೂ ನೆರೆ ದೇಶಗಳೊಂದಿಗಿನ ಭಾರತದ ಸಂಬಂಧ ಸುಧಾರಿಸಲಿ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ(ಆರ್‌ಎಸ್‌ಎಸ್) ಮುಖ್ಯಸ್ಥ ಮೋಹನ್ ಭಾಗವತ್ ಆಶಿಸಿದ್ದಾರೆ.

ಆರ್‌ಎಸ್‌ಎಸ್ ಶತಮಾನೋತ್ಸವ ಕಾರ್ಯಕ್ರಮದಲ್ಲಿ ಬುಧವಾರ ಮಾತನಾಡಿದ ಅವರು ಹಲವು ಭಾಗವಾಗಿರುವ ಮೂಲತಃ ಭಾರತೀಯರೇ ಆಗಿರುವ ಈ ಜನರಲ್ಲಿ 'ನಾವು ಒಂದಾಗಬೇಕು' ಎಂಬ ಭಾವ ಬೆಳೆಸುವುದು ನಮ್ಮ ಮೊದಲ ಕರ್ತವ್ಯವಾಗಲಿದೆ ಎಂದರು.

ಭಾರತದ ಧರ್ಮ 'ವಿಶ್ವ ಧರ್ಮ'ವಾಗಿದೆ ಎಂದು ಬಣ್ಣಿಸಿದ ಭಾಗವತ್, ಜಗತ್ತಿಗೆ ಶಾಂತಿ ತರುವ ಸಾಮರ್ಥ್ಯ ಭಾರತಕ್ಕಿದೆ. ಬೇರೆ ಬೇರೆ ಭಾಗದ ಜನರು ನಂಬಿಕೆಗಳು ಬೇರೆ ಆಗಿರಬಹುದು, ಸಮುದಾಯಗಳಲ್ಲಿ ವ್ಯತ್ಯಾಸವಿರಬಹುದು. ಆದರೆ 'ಸಂಸ್ಕಾರ'ದಲ್ಲಿ ಯಾವುದೇ ವ್ಯತ್ಯಾಸ ಇಲ್ಲ ಎಂದರು. ಆದರ್ಶ ಸಮಾಜ ರೂಪಿಸುವುದರಲ್ಲಿ ಪ್ರತಿಯೊಬ್ಬರ ಪಾತ್ರವೂ ಇದೆ. ಅದಕ್ಕಾಗಿ ಎಲ್ಲರೂ ಒಗ್ಗೂಡಬೇಕು ಎಂದು ಕರೆ ನೀಡಿದರು.

ಆತ್ಮನಿರ್ಭರತೆ ಎಂಬುದು ಸ್ವದೇಶಿ ಪರಿಕಲ್ಪನೆ. ಅದು ಮುಖ್ಯವಾಗಿದೆ. ಜನರು ನಿತ್ಯ ಬದುಕಿನಲ್ಲಿ ಸ್ವದೇಶಿ ಉತ್ಪನ್ನಗಳನ್ನೇ ಬಳಸಬೇಕಿದೆ. 'ಸ್ವದೇಶಿ'ಗೆ ಆದ್ಯತೆ ನೀಡಬೇಕೆಂದರೆ ಬೇರೆ ದೇಶಗಳೊಂದಿಗಿನ ವಾಣಿಜ್ಯ ಸಂಬಂಧ ಕೊನೆಗೊಳಿಸಬೇಕು ಎಂಬ ಅರ್ಥವಲ್ಲ. ಕೆಲವು ವಸ್ತು, ಸರಕುಗಳ ಆಮದು ಅಗತ್ಯವೂ ಇರುತ್ತದೆ. ಜಗತ್ತು ಪರಸ್ಪರ ಅವಲಂಬಿತವಾಗಿರುತ್ತದೆ. ರಫ್ತು-ಆಮದು ಮುಂದುವರಿಯಬೇಕು ಎಂದರು. ಆದರೆ, ಕೊಡುವ-ಕೊಳ್ಳುವ ವ್ಯಾಪಾರ ಬಲವಂತದಿಂದ ಅಥವಾ ಬಾಹ್ಯ ಒತ್ತಡದಡಿ ನಡೆಯಬಾರದು ಎಂದು ಭಾಗವತ್ ಪ್ರತಿಪಾದಿಸಿದರು. ಸೂಚ್ಯವಾಗಿ ಅಮೆರಿಕ ಪ್ರತಿಸುಂಕ ಕ್ರಮವನ್ನು ಉಲ್ಲೇಖಿಸಿದರು.

ಕರ್ನಾಟಕ-ತೆಲಂಗಾಣ ಮಧ್ಯೆ ಹೆಚ್ಚುವರಿ 2 ರೈಲು ಹಳಿ
ಗುಜರಾತ್, ಬಿಹಾರ, ಅಸ್ಸಾಂನಲ್ಲೂ ರೈಲ್ವೆ ಯೋಜನೆ

₹12,300 ಕೋಟಿ ರೈಲ್ವೆ ಯೋಜನೆಗೆ ಸಂಪುಟ ಅಸ್ತು

ದೆಹಲಿ: ಕರ್ನಾಟಕ, ತೆಲಂಗಾಣ, ಗುಜರಾತ್, ಬಿಹಾರ, ಅಸ್ಸಾಂ ರಾಜ್ಯಗಳಿಗೆ ಅನುಕೂಲವಾಗುವಂತೆ 12,300 ಕೋಟಿ ರು. ಮೊತ್ತದ 3 ಬೃಹತ್ ರೈಲ್ವೆ ಯೋಜನೆಗಳ ಬಹು-ಟ್ರ್ಯಾಕಿಂಗ್ ಮತ್ತು ಗುಜರಾತ್‌ನ ಕಚ್ ಪ್ರದೇಶ ಸಂಪರ್ಕಿಸಲು ಹೊಸ ರೈಲು ಮಾರ್ಗ ನಿರ್ಮಾಣಕ್ಕೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.



5,012 ಕೋಟಿ ರು. ವೆಚ್ಚದಲ್ಲಿ 173 ಕಿ.ಮೀ. ಉದ್ದದ ರೈಲು ಮಾರ್ಗ ನಿರ್ಮಾಣದಿಂದ ತೆಲಂಗಾಣದ ಸಿಕಂದರಾಬಾದ್(ಸನತ್ ನಗರ)-ಕರ್ನಾಟಕದ ಕಲಬುರಗಿ ಜಿಲ್ಲೆಯ ವಾಡಿ ರೈಲು ನಿಲ್ದಾಣಗಳ ನಡುವೆ 3 ಮತ್ತು 4ನೇ ಮಾರ್ಗಗಳ ಹೆಚ್ಚುವರಿ ಪ್ರಯೋಜನ ಸಿಗಲಿದೆ. ಈ ಯೋಜನೆಯಿಂದ ಕರ್ನಾಟಕ ಮತ್ತು ತೆಲಂಗಾಣ ರಾಜ್ಯಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ.

2,526 ಕೋಟಿ ರು. ವೆಚ್ಚದ ಹೊಸ 145 ಕಿ.ಮೀ ರೈಲ್ವೆ ಮಾರ್ಗ ಕಚ್‌ನ ರಣ್, ಧೋಲಾವಿ, ಹರಪ್ಪನ್ ತಾಣ, ಕೋಟೇಶ್ವರ ದೇವಸ್ಥಾನ, ನಾರಾಯಣ ಸರೋವರ ಮತ್ತು ಲಖಪತ್ ಕೋಟೆ ನಗರಗಳಲ್ಲಿ

ಜೋಡಿಸುತ್ತದೆ. ಈ ಯೋಜನೆ 3 ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಈ ರೈಲ್ವೆ ಯೋಜನೆ 164 ಕಿಮೀಗಳಷ್ಟು ದೂರದ ಟ್ರ್ಯಾಕ್ ಮತ್ತು 13 ನಿಲ್ದಾಣಗಳನ್ನು ಜೋಡಿಸುತ್ತದೆ. 866 ಹಳ್ಳಿಗಳ 16 ಲಕ್ಷ ಜನರಿಗೆ ಪ್ರಯೋಜನವಾಗಲಿದೆ. ಈ ಯೋಜನೆ ಜಾರಿ ಯಿಂದ ಪ್ರವಾಸೋದ್ಯಮ, ಉಪ್ಪು, ಸಿಮೆಂಟ್, ಕಲ್ಲಿದ್ದಲು, ಕ್ಲಿಂಕರ್ ಮತ್ತು ಬೆಂಟೋನೈಟ್ ಅದಿರು ಸಾಗಣೆಗೆ ಅನುಕೂಲ ಮಾಡಿಕೊಡುತ್ತದೆ.

3,108 ಹಳ್ಳಿಗಳ 47.34 ಲಕ್ಷ ಜನರಿಗೆ ನುಕೂಲ ಮಾಡಿಕೊಡಲಿದೆ. 1,156 ಕೋಟಿ ರು. ವೆಚ್ಚದ 53 ಕಿ.ಮೀ. ಉದ್ದದ ಭಾಗಲ್‌ಪುರ್-ಜಮಾಲ್‌ಪುರ್ 3ನೇ ಮಾರ್ಗದಿಂದ ಬಿಹಾರಕ್ಕೆ ಪ್ರಯೋಜನವಾಗಲಿದೆ. ಒಟ್ಟಾರೆ 5 ಉಪಕ್ರಮಗಳಿಂದ ತೈಲ ಆಮದು ಅವಲಂಬನೆ ತಗ್ಗುತ್ತದೆ. ಇಂಗಾಲ ಹೊರಸೂಸು ವಿಕೆ ಕಡಿಮೆಯಾಗಲಿದೆ. ಜತೆಗೆ ಪ್ರವಾಸೋದ್ಯಮಕ್ಕೆ ಉತ್ತೇಜನ, ಪರಿಸರ ಸುಧಾರಣೆ ಆಗಲಿದೆ.

ವಾಡಿ-ಸಿಕಂದರಾಬಾದ್ ಮಾರ್ಗ

- **5,012 ಕೋಟಿ ರು. ವೆಚ್ಚದಲ್ಲಿ 173 ಕಿ.ಮೀ. ಗಳಷ್ಟು ದೂರ ಹೊಸದಾಗಿ 3 ಮತ್ತು 4ನೇ ರೈಲು ಹಳಿಗಳ ನಿರ್ಮಾಣ**
- **ಕರ್ನಾಟಕದ ಕಲಬುರಗಿ ಜಿಲ್ಲೆಯ ವಾಡಿ ರೈಲು ನಿಲ್ದಾಣದಿಂದ ತೆಲಂಗಾಣದ ಸಿಕಂದರಾಬಾದ್ (ಸನತ್‌ನಗರ) ರೈಲು ನಿಲ್ದಾಣದವರೆಗೆ ಹೆಚ್ಚುವರಿ 2 ಹಳಿ ಮಾರ್ಗ ಜೋಡಣೆ**
- **ಯೋಜನೆ ಜಾರಿಯಿಂದ ಪ್ರಯಾಣಿಕ ರೈಲುಗಳು, ಸರಕು ಸಾಗಣೆ ರೈಲುಗಳ ಸಂಚಾರಕ್ಕೆ ಭಾರೀ ಅನುಕೂಲ.**
- **ಕರ್ನಾಟಕದ ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ ಜಿಲ್ಲೆಗಳಿಗೆ ಹೆಚ್ಚುವರಿ ಪ್ರಯೋಜನ.**
- **ಪ್ರಸಕ್ತ ವರ್ಷದಲ್ಲಿ ಉಳಿದ 4 ತಿಂಗಳಲ್ಲಿ ಲಿಂಗಾಬಂದಿ ಮತ್ತು ಕುಷ್ಟಗಿ ನಡುವೆ 3 ಮತ್ತು 4ನೇ ಹಳಿ ಮಾರ್ಗ ನಿರ್ಮಾಣ.**

ಅಮೆರಿಕ ಸುಂಕದಿಂದ ದೇಶ ರಕ್ಷಿಸದ ಪ್ರಧಾನಿ ಮೋದಿ

ದೆಹಲಿ: ಭಾರತದ ಉತ್ಪನ್ನಗಳ ರಫ್ತು ವಹಿವಾಟು ಮೇಲೆ ಹೆಚ್ಚುವರಿಯಾಗಿ ಶೇ.50ರಷ್ಟು ಪ್ರತಿಸುಂಕ ವಿಧಿಸಿರುವ ಅಮೆರಿಕ ಸರಕಾರದ ಕ್ರಮವನ್ನು ಖಂಡಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಈ ತೆರಿಗೆ ಸಂಕಷ್ಟದಿಂದ ದೇಶವನ್ನು ರಕ್ಷಿಸುವಲ್ಲಿ ಪ್ರಧಾನಿ ನರೇಂದ್ರ ಮೋದಿ ಪೂರ್ಣ ವಿಫಲರಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಮೋದಿ ಅವರು ಘೋಷಣೆ ಮಾಡಿದ್ದ 'ಅಬ್ಕಿ ಬಾರ್, ಟ್ರಂಪ್ ಸರ್ಕಾರ್' ಭಾರತದ ಮೇಲೆ ಶೇ.50ರಷ್ಟು ಹೆಚ್ಚುವರಿ ಸುಂಕ ವಿಧಿಸಿರುವುದರಿಂದ ಮೊದಲ ಆಘಾತವಾಗಿ ನಾವು 10 ರಫ್ತು ವಹಿವಾಟು ವಲಯಗಳಲ್ಲಿ ಅಂದಾಜು 2.17 ಲಕ್ಷ ಕೋಟಿ ರು. ನಷ್ಟ ಅನುಭವಿಸಬೇಕಾಗಿ ಬಂದಿದೆ ಎಂದು ಆತಂಕ ವ್ಯಕ್ತಪಡಿಸಿರುವ ಖರ್ಗೆ, ಪ್ರಧಾನಿ ಮೋದಿ ಇನ್ನಾದರೂ ನಗು, ಅಪ್ಪುಗೆ ಮತ್ತು ಸೆಲ್ಫಿಗಳ ಬದಲು ಪರಿಣಾಮಕಾರಿ ವಿದೇಶಾಂಗ ನೀತಿಗಳತ್ತ ಗಮನಹರಿಸಬೇಕು ಎಂದು ಸಲಹೆ ನೀಡಿದ್ದಾರೆ.

ಅಮೆರಿಕದ ಈಗಿನ ಪ್ರತಿಸುಂಕದಿಂದ ಹೆಚ್ಚು ದುಷ್ಪರಿಣಾಮ ಎದುರಿಸುತ್ತಿರುವುದು ರೈತರಾಗಿದ್ದಾರೆ. ರೈತರ ಹಿತಾಸಕ್ತಿ ಕಾಪಾಡುವ ಭರವಸೆ ನೀಡಿದ್ದ ಮೋದಿ, ಅದರಲ್ಲಿ ವಿಫಲರಾಗಿದ್ದಾರೆ ಎಂದು ಟೀಕಿಸಿದ್ದಾರೆ.

ಅಮೆರಿಕ ಸುಂಕಾಸ್ತ್ರದಿಂದ ಭಾರತದ ಜವಳಿ ಉದ್ಯಮ ಅತ್ಯಂತ ಕಠಿಣ ಪರಿಸ್ಥಿತಿ ಎದುರಿಸುವಂತಾಗಿದೆ. ಅಂದಾಜು 5 ಲಕ್ಷ ಉದ್ಯೋಗಿಗಳ ಬದುಕು ಅತಂತ್ರವಾಗಲಿದೆ. ರತ್ನ ಮತ್ತು ವಜ್ರಾಭರಣ ಉದ್ಯಮಕ್ಕೂ ಹೊಡೆತ ಬಿದ್ದಿದೆ. ಶೇ.50 ಸುಂಕ ಇದೇ ರೀತಿ ಮುಂದುವರಿದರೆ ರತ-ವಜ್ರಾಭರಣ ಉದ್ಯಮದಲ್ಲೂ 2 ಲಕ್ಷ ನೌಕರಿ ಅಪಾಯಕ್ಕೆ ಸಿಲುಕಲಿದೆ ಎಂದು ಖರ್ಗೆ ಆತಂಕ ವ್ಯಕ್ತಪಡಿಸಿದ್ದಾರೆ.

ಧರ್ಮಸ್ಥಳ ವಿಚಾರದಲ್ಲಿ ಸರಕಾರದ ನಡವಳಿಕೆ ಸರಿಯಿಲ್ಲ | ತನಿಖೆಯ ನಾಟಕವಾಡಿ ಅಪಚಾರ ಎಸಗುತ್ತಿದೆ

ಧರ್ಮಸ್ಥಳ ಪ್ರಕರಣ ಎಡಪಂಥೀಯರ ಹುನ್ನಾರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಧರ್ಮಸ್ಥಳ ವಿಷಯದಲ್ಲಿ ಷಡ್ಯಂತ್ರ್ಯ, ಪಿತೂರಿ ನಡೆಸಿದವರಿಗೆ ಆ ಮಂಜುನಾಥ ಸ್ವಾಮಿಯೇ ತಕ್ಕ ಶಾಸ್ತಿ ಮಾಡುತ್ತಾನೆ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರ ಸ್ವಾಮಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಧರ್ಮಸ್ಥಳದ ವಿಚಾರದಲ್ಲಿ ಕೆಲವು ಶಕ್ತಿಗಳ ಒತ್ತಡಕ್ಕೆ ಮಣಿದು ಎಸ್‌ಐಟಿ ರಚನೆ ಮಾಡಲಾಗಿದೆ. ಸರಕಾರ ನಡೆದುಕೊಂಡಿದ್ದು ಸರಿಯಲ್ಲ, ಅದಕ್ಕೆ ಮುಂದಿನ ದಿನಗಳಲ್ಲಿ ಮಂಜುನಾಥ ಸ್ವಾಮಿ ಶಿಕ್ಷೆ ನೀಡುವುದು ಖಚಿತ. ಸಿ.ಎಸ್. ದ್ವಾರಕಾನಾಥ್ ದೂರು ನೀಡಿರುತ್ತಾರೆ. ಅವರು ದೂರು ನೀಡಿದ ತಕ್ಷಣ ಮುಖ್ಯಮಂತ್ರಿಗಳು ಅತ್ಯಂತ ವೇಗವಾಗಿ ಕ್ರಮ ಕೈಗೊಂಡು ಎಸ್‌ಐಟಿ ರಚನೆಗೆ ಆದೇಶ ಮಾಡುತ್ತಾರೆ. ಇದರ ಹಿಂದೆ ಕೆಲ ಎಡಪಂಥೀಯ ಶಕ್ತಿಗಳ ಹುನ್ನಾರದ ಜತೆಗೆ ಕಾಣದ ಶಕ್ತಿಗಳ ಬಹುದೊಡ್ಡ ಕುತಂತ್ರ ಅಡಗಿದೆ ಎಂದರು.

ಜೆಡಿಎಸ್‌ನಿಂದ ಆ.31ರಂದು ಧರ್ಮಸ್ಥಳ ಸತ್ಯ ಯಾತ್ರೆ

ಧರ್ಮಸ್ಥಳ ವಿರುದ್ಧ ನಡೆಯುತ್ತಿರುವ ಅಪ ಪ್ರಚಾರ, ಷಡ್ಯಂತ್ರ ಹಾಗೂ ಸುಳ್ಳು ಆರೋಪಗಳ ವಿರುದ್ಧ ಆ.31 ರಂದು ಪಕ್ಷದ ವತಿಯಿಂದ ಧರ್ಮಸ್ಥಳ ಸತ್ಯ ಯಾತ್ರೆ ಕೈಗೊಳ್ಳಲಾಗಿದೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷರಾದ ನಿಖಿಲ್ ಕುಮಾರಸ್ವಾಮಿ ತಿಳಿಸಿದರು. ಬೆಂಗಳೂರಿನ ಪಕ್ಷದ ಕಚೇರಿ ಜೆಪಿ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಧರ್ಮಸ್ಥಳಕ್ಕೆ ಅಪಮಾನ ಆಗುವಂತೆ ಕಾಂಗ್ರೆಸ್ ಹೆಜ್ಜೆ ಇಟ್ಟಿದೆ. ನಾನು ಒಬ್ಬ ಭಕ್ತನಾಗಿ ಹಾಗೂ ನಮ್ಮ ಪಕ್ಷ ಶಾಸ ಕರು, ಮಾಜಿ ಶಾಸಕರು, ಮುಖಂಡರು, ಕಾರ್ಯ ಕರ್ತರು ಧರ್ಮಸ್ಥಳ ಸತ್ಯ ಯಾತ್ರೆ ಮಾಡಿ, ವೀರೇಂದ್ರ ಹೆಗ್ಗಡೆ ಭೇಟಿ ಮಾಡಿ ಅವರಿಗೆ ಬೆಂಬಲ ನೀಡುತ್ತೇವೆ ಎಂದರು. ಧರ್ಮಸ್ಥಳ ಪ್ರಕರಣದಲ್ಲಿ ರಾಜ್ಯ ಸರಕಾರ ತನಿಖೆ ಯಾವ ರೀತಿ ಮಾಡಿದ್ದಾರೆ. ಪಾರದರ್ಶಕವಾಗಿ ತನಿಖೆ ನಡೆಯಿದೀಯಾ? ಇದರ ಹಿಂದೆ ಯಾರಿದ್ದಾರೆ. ಇದರ ಹಿಂದೆ ಇರುವ ಕಥೆ, ಚಿತ್ರಕಥೆ, ನಿರ್ಮಾಪಕ ಯಾರು ಅಂತ ಪತ್ತೆ ಮಾಡಬೇಕು. ಇದನ್ನ ಪತ್ತೆ ಮಾಡಬೇಕಾದರೆ ಎನ್‌ಐಎ ತನಿಖೆ ನಡೆಯಬೇಕು. ಧರ್ಮಸ್ಥಳ ಮಂಜುನಾಥನಿಗೆ ಕೋಟ್ಯಾಂತರ ಭಕ್ತರು ಇದ್ದಾರೆ. ನಾವು ಅವರ ಜತೆ ಇದ್ದೇವೆ. ಧರ್ಮಸ್ಥಳ ಯಾತ್ರೆಯಲ್ಲಿ ಯಾವುದೇ ರಾಜಕೀಯ ಇಲ್ಲ, ಪಕ್ಷಾತೀತವಾಗಿ ಈ ಯಾತ್ರೆ ಕೈಗೊಂಡಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯವಿಲ್ಲ ಎಂದರು.

ಧರ್ಮ ರಕ್ಷಣೆ ಮಾಡಲು ಸೆಪ್ಟೆಂಬರ್ 1 ರಂದು ಬಿಜೆಪಿಯಿಂದ ಸಮಾವೇಶ: ಆರ್ ಅಶೋಕ್

ಧರ್ಮಸ್ಥಳ ಪ್ರಕರಣ: ಸರಕಾರದ ವಿರುದ್ಧ ಬಿಜೆಪಿ ಕಿಡಿ

ಬೆಂಗಳೂರು: ಸಿಎಂ ಸಿದ್ದರಾಮಯ್ಯ ಸುತ್ತ ಇರುವ ಪ್ರಗತಿಪರರು ಧರ್ಮಸ್ಥಳ ದೇವಾಲಯ ಕಿತ್ತುಕೊಂಡು ಲೂಟಿ ಹೊಡೆಯಲು ಯೋಜನೆ ರೂಪಿಸಿದ್ದಾರೆ ಎಂದು ಬಿಜೆಪಿ ಕಿಡಿಕಾರಿದೆ.

ಈ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿರುವ ಪ್ರತಿಪಕ್ಷ ನಾಯಕ ಆರ್.ಅಶೋಕ, ಹಿಂದೆ ಘಜನಿ ಮಾಡಿದಂತೆಯೇ ಕಾಂಗ್ರೆಸ್ ಸರ್ಕಾರ ಲೂಟಿ ಮಾಡಲು ಮುಂದಾಗಿದೆ. ಮಂಜುನಾಥ ಸ್ವಾಮಿಗೆ ಕೆಟ್ಟ ಹೆಸರು ತರಲು ಎರಡು ವರ್ಷ ತಯಾರಿ ನಡೆಸಲಾಗಿದೆ. ಎಸ್‌ಐಟಿಗೆ 3-5 ಕೋಟಿ ರೂ. ಖರ್ಚಾಗಿದೆ. ಧರ್ಮವನ್ನು ರಕ್ಷಣೆ ಮಾಡಲು ಸೆಪ್ಟೆಂಬರ್ 1 ರಂದು ಸಮಾವೇಶ ಮಾಡಲಿದ್ದೇವೆ ಎಂದರು.

ಧರ್ಮಸ್ಥಳದ ವಿಷಯದಲ್ಲಿ ಅಷ್ಟೆಲ್ಲ ಅಪಪ್ರಚಾರ ನಡೆಯುತ್ತಿದ್ದರೂ ಬಾಯಿ ಮುಚ್ಚಿಸುವ ಕೆಲಸ ಕಾಂಗ್ರೆಸ್ ಸರಕಾರ ಮಾಡಿಲ್ಲ. ಕಾಂಗ್ರೆಸ್ ಪಕ್ಷದ ನಾಯಕರ ನಡವಳಿಕೆಗಳು, ಹಿಂದೂಗಳ ಭಾವನೆಗೆ ಧಕ್ಕೆ ತರುವುದು, ಹಿಂದೂ ಧರ್ಮದ ಕುರಿತ ಅವರ ಹೇಳಿಕೆ ಬಿಜೆಪಿ ಬಲವಾಗಿ ಖಂಡಿಸುತ್ತದೆ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ ಹಿಂದೂಗಳ ವಿರುದ್ಧ ಕೇಸ್ ದಾಖಲಿಸಿ, 24 ಗಂಟೆಗಳಲ್ಲಿ ಬಂಧಿಸುತ್ತಾರೆ. ಆದರೆ, ಧರ್ಮಸ್ಥಳದ ವಿಷಯದಲ್ಲಿ ಹಿಂದೂ ಭಾವನೆಗೆ ಧಕ್ಕೆ ತರುವಂತೆ ಸಾಮಾಜಿಕ ಜಾಲತಾಣದಲ್ಲಿ ಅಪಪ್ರಚಾರ ನಡೆದರೂ ಅವರ ವಿರುದ್ಧ ಕೇಸ್ ಹಾಕಿ ಬಂಧಿಸಬೇಕೆಂದು ಯಾಕೆ ಕಾಂಗ್ರೆಸ್ ಸರಕಾರಕ್ಕೆ ಅನಿಸಿಲ್ಲ. ಎಸ್‌ಐಟಿ ತನಿಖೆ ಮಾಡಿಕೊಳ್ಳಲಿ. ದುಷ್ಟ ಶಕ್ತಿಗಳ ಹಿಂದಿರುವ ರಾಷ್ಟ್ರ- ಅಂತಾರಾಷ್ಟ್ರೀಯ ಮಟ್ಟದ ದುಷ್ಟ ಶಕ್ತಿಗಳ ಬಗ್ಗೆ ತಿಳಿಯಲು ಮತ್ತು ಅವರನ್ನು ಹೊರಕ್ಕೆ ತರಲು ಎನ್‌ಐಎ, ಸಿಬಿಐ ತನಿಖೆ ಆಗಬೇಕೆಂಬ ಆಗ್ರಹ ಭಕ್ತರದ್ದೂ ಆಗಿದೆ ಎಂದರು. ಕಾಂಗ್ರೆಸ್ ಸರಕಾರ ಹಾಗೂ ಮುಖ್ಯಮಂತ್ರಿಗೆ ಕಿಂಚಿತ್ತಾದರೂ ಕಾಳಜಿ, ಪ್ರಾಮಾಣಿಕತೆ ಇದ್ದಲ್ಲಿ, ಹಿಂದೂಗಳ ಧಾರ್ಮಿಕ ಶ್ರದ್ಧೆ ಬಗ್ಗೆ ಕಿಂಚಿತ್ತಾದರೂ ನಂಬಿಕೆ ಇದ್ದರೆ, ಎಸ್‌ಐಟಿ ತನಿಖೆ ಆಗಲಿ. ಆದರೆ, ಅದಕ್ಕೊಂದು ಕಾಲಮಿತಿ ಬೇಕು. ಧರ್ಮಸ್ಥಳ ಕುರಿತ ಈ ಹುಚ್ಚಾಟ ಇನ್ನೆಷ್ಟು ದಿನ ಮುಂದುವರೆಸುತ್ತೀರಿ ಎಂದು ಪ್ರಶ್ನಿಸಿದರು.

ನಗರದಲ್ಲಿ ಮಳೆ: ಸವಾರರ ಪರದಾಟ

ಬೆಂಗಳೂರು: ರಾಜಧಾನಿ ಬೆಂಗಳೂರಿನಲ್ಲಿ ಕಳೆದ ಕೆಲ ದಿನಗಳಿಂದ ಬಿಡುವು ನೀಡಿದ್ದ ಮಳೆಯು ಗುರುವಾರ ಸಂಜೆ ಇದ್ದಕ್ಕಿದ್ದಂತೆಯೇ ಸುರಿದಿದೆ. ದಿಢೀರನೆ ಸುರಿದ ಮಳೆಯಿಂದ ನಗರದ ಹಲವೆಡೆಗಳಲ್ಲಿ ಭಾರಿ ಅವಾಂತರಗಳೇ ಸೃಷ್ಟಿಯಾಗಿದ್ದು, ರಸ್ತೆಗಳೆಲ್ಲಾ ಚರಂಡಿಯಂತಾಗಿ ವಾಹನ ಸವಾರರು ಪರದಾಡು ವಂತಾಗಿದೆ.

ಬೆಂಗಳೂರಿನ ಮಲ್ಲೇಶ್ವರ, ರಾಜಾಜಿ ನಗರ, ಲಾಲ್‌ಬಾಗ್, ಶಾಂತಿನಗರ, ಜಯನಗರ, ವಿಜಯ ನಗರ, ಜೆ.ಪಿ.ನಗರ, ಮೆಜೆಸ್ಟಿಕ್, ಸಿಟಿ ಮಾರ್ಕೆಟ್, ಸದಾಶಿವನಗರ, ಹೆಬ್ಬಾಳ, ಬಸವನ ಗುಡಿ, ಬನಶಂಕರಿ, ಚಂದ್ರಲೇಔಟ್, ಕೋರ ಮಂಗಲ, ಕೋಣನಕುಂಟೆ, ಪದ್ಮನಾಭ ನಗರ, ಆರ್‌ಆರ್ ನಗರ ಸೇರಿದಂತೆ ಹಲವು ಭಾಗದಲ್ಲಿ ಭಾರೀ ಮಳೆಯಾಗಿದೆ. ದಿಢೀರನೆ ಮಳೆ ಬಂದಿದ್ದರಿಂದ ಜನರು ಬಸ್‌ನಿಲ್ದಾಣ, ಅಂಗಡಿಗಳ ಎದುರು ನಿಲ್ಲುವಂತಾಯಿತು. ವಿವಿಧ ಪ್ರದೇಶಗಳಲ್ಲಿ ಮಳೆಯಾಗಿರುವುದರಿಂದ ರಸ್ತೆ ಮೇಲೆ ನೀರು ನಿಂತಿದ್ದು, ವಾಹನ ಸವಾರರು ಪರದಾಡು ವಂತಾಯಿತು.

ನಗರದಲ್ಲಿ ಸುರಿದ ಭಾರೀ ಮಳೆಯಿಂದ ರಾಜಭವನ ರಸ್ತೆಯಲ್ಲಿ ವಾಹನ ಸವಾರರು ಪರದಾಡಿದರು.

ಆ.30ರವರೆಗೆ ಮಳೆ: ಬಂಗಾಳ ಕೊಲ್ಲಿಯಲ್ಲಿ ವಾಯುಭಾರ ಕುಸಿತದ ಹಿನ್ನೆಲೆ ಆಗಸ್ಟ್ 30ರ ವರೆಗೆ ರಾಜ್ಯಾದ್ಯಂತ ಭಾರೀ ಮಳೆಯಾಗುವ ಮುನ್ಸೂಚನೆಯಿದ್ದು, ರಾಜ್ಯದ ಕರಾವಳಿ, ಮಲೆನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಒಳನಾಡು ಜಿಲ್ಲೆಗಳಲ್ಲಿ ಇನ್ನೂ ಗುಡುಗು, ಗಾಳಿ ಸಹಿತ ಸಾಧಾರಣ ಮಳೆಯಾಗಲಿದೆ. ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಗೆ ಮುಂದಿನ ಮೂರು ಗಂಟೆಗಳ ಕಾಲ ಭಾರೀ ಮಳೆಯ ಎಚ್ಚರಿಕೆಯನ್ನು ಹವಾಮಾನ ಇಲಾಖೆ ನೀಡಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ವಾಸ್ತುಶಿಲ್ಪ ರಾಷ್ಟ್ರೀಯ ಕಲಾ ಶಿಬಿರಕ್ಕೆ ತೆರೆ

ಬೆಂಗಳೂರು: ನಗರದ ಪ್ರತಿಷ್ಠಿತ ಸಿಎಂಆರ್ ವಿಶ್ವವಿದ್ಯಾಲಯ ವಾಸ್ತುಶಿಲ್ಪ ಶಾಸ್ತ್ರ ವಿಭಾಗದ ವತಿಯಿಂದ 10 ದಿನಗಳ ನಡೆದ ರಾಷ್ಟ್ರೀಯ ವಾಸ್ತುಶಿಲ್ಪ ಕಲಾ ಶಿಬಿರವು ಗುರುವಾರ ಮುಕ್ತಾಯವಾಯಿತು.

ನಗರದ ಬಾಗಲೂರಿನಲ್ಲಿರುವ ಲೇಕ್ ಸೈಡ್ ಕ್ಯಾಂಪಸ್ ಸಭಾಂಗಣದಲ್ಲಿ ನಡೆದ ಸಮಾರೋಪ ಕಾರ್ಯಕ್ರಮದಲ್ಲಿ ಸ್ಕೂಲ್ ಆಫ್ ಆರ್ಕಿಟೆಕ್ಚರ್ ನಿರ್ದೇಶಕರಾದ ಪ್ರೊ.ಮುರಳೀಧರ್ ಅವರು ಮುಖ್ಯ ಅತಿಥಿಗಳಾದ ಖ್ಯಾತ ಕಲಾವಿದೆ ಮತ್ತು ಕರ್ನಾಟಕ ಲಲಿತ ಕಲಾ ಅಕಾಡೆಮಿ ಅಧ್ಯಕ್ಷ ಪಾ.ಸಾ. ಕುಮಾರ್ ಉಪಸ್ಥಿತರಿದ್ದರು. ವಾಸ್ತುಶಿಲ್ಪ ರಾಷ್ಟ್ರೀಯ ಕಲಾ ಶಿಬಿರ ಕುರಿತು ಮಾತನಾಡಿದ ಖ್ಯಾತ ಕಲಾವಿದ ಪಾ.ಸಾ.ಕುಮಾರ್, ಕಲೆ ಇಲ್ಲದಿದ್ದರೆ, ಜೀವನವು ತನ್ನ ಸೌಂದರ್ಯವನ್ನು ಕಳೆದುಕೊಳ್ಳುತ್ತದೆ. ಕಲೆ ಅನುಕರಣೆಯಲ್ಲ ಅದು ಕಲ್ಪನೆಯನ್ನು ಪೋಷಿಸಬೇಕು. ಕಲೆಯ ಮೇಲಿನ ಭರವಸೆ ಮತ್ತು ಪ್ರೀತಿಯನ್ನು ಜೀವಂತವಾಗಿಡುವಂತೆ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು. ಮಾಜಿ ರಾಜ್ಯಸಭಾ ಸದಸ್ಯ ಡಾ.ಕೆ.ಸಿ.ರಾಮ ಮೂರ್ತಿ ಮಾತನಾಡಿ, ರಾಷ್ಟ್ರೀಯ ಕಲಾ ಶಿಬಿರವು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದಲ್ಲದೆ, ರಾಜ್ಯ ಮತ್ತು ದೇಶಾದ್ಯಂತ ಕಲಾವಿದರ ನಡುವೆ ಸಂಪರ್ಕ ನಿರ್ಮಿಸಿಕೊಟ್ಟಿದೆ ಎಂದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HLLABGM00481049 1. ಗೋಪಾಲ್ ಕಣ್ಣನ್ ಅಲಿಯಾಸ್ ಜಿ ಕಣ್ಣನ್ ಮಾಲೀಕರು ಮಿರಾಕಲ್ ಡಿಸೈನರ್ ಟೈಲ್ಸ್ 2. ಪ್ರವೀಣ್ ಕುಮಾರ್ ಕೆ	ಫ್ಲಾಟ್ ನಂ.204, ಎಸ್‌ಎಫ್, ಶ್ರೀ ಕೃಷ್ಣ ಪ್ಲಾಜಾ, ಆಸ್ತಿ ಸಂಖ್ಯೆ. 96, 97, 98, ಖಾತಾ ನಂ. 145, ವಿನಾಯಕ ನಗರ, ಕಟ್ಟಿಗೇನಹಳ್ಳಿ ಗ್ರಾಮ, ಜಾಲ ಹೋಬಳಿ ಬೆಂಗಳೂರು ಉತ್ತರ ತಾಲೂಕು ಬೆಂಗಳೂರು-560064 ಕರ್ನಾಟಕ.	03.08.2025	ದಿನಾಂಕ 06.08.2025 ರಂತೆ ರೂ. 30,29,978.10/- (ರೂಪಾಯಿ ಮೂವತ್ತು ಲಕ್ಷ ಇಪ್ಪತ್ತ ಒಂಬತ್ತು ಸಾವಿರದ ಒಂಬೈನೂರ ಎಪ್ಪತ್ತ ಎಂಟು ಮತ್ತು ಪೈಸೆ ಹತ್ತು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರ ಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಎಆರ್‌ಎಫ್‌ಎಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನುಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಫಿನ್‌ಸರ್ವ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಕಮರ್ಷಿಯಲ್ ಕ್ರೆಡಿಟ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು
ಅಧಿಕೃತ ಅಧಿಕಾರಿ

Arcil

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್)
ವಿವಿಧ ಆರ್ಸಿಲ್ ಟ್ರಸ್ಟ್‌ಗಳ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ
ಆರ್ಸಿಲ್ ಕಚೇರಿ: ರೂಬಿ, 10ನೇ ಮಹಡಿ, 29, ಸೇನಾಪತಿ ಬಾಪಟ್ ಮಾರ್ಗ, ದಾದರ್ (ಪಶ್ಚಿಮ) ಮುಂಬೈ-400 028.
ಜಾಲತಾಣ : https://auction.arcil.co.in; CIN-U65999MH2002PLC134884

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಅಧಿಕಾರಗಳ ಚಲಾವಣೆ ಮತ್ತು ಭದ್ರತಾ ಆಸಕ್ತಿಯ ಕಾಯ್ದೆ, 2002 (ಸರ್ಫೇಸಿ ಆಕ್ಟ್) ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 6, 8 ಮತ್ತು 9 ರೊಂದಿಗೆ ಆನ್‌ಲೈನ್ ಇ-ಹರಾಜು ಮೂಲಕ ಮಾರಾಟಕ್ಕೆ ಸಾರ್ವಜನಿಕ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಸಾಲಗಾರ (ರು) / ಖಾತರಿದಾರರು (ಗಳು) / ಅಡಮಾನದಾರರಿಗೆ (ಗಳು), ನಿರ್ದಿಷ್ಟವಾಗಿ, ಕೆಳಗೆ ವಿವರಿಸಿದ ಸ್ಥಿರ ಆಸ್ತಿ/ಗಳು ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಗೆ ವಿವಿಧ ಆರ್ಸಿಲ್ ಟ್ರಸ್ಟ್‌ಗಳ (''ಆರ್ಸಿಲ್'') ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತದೆ (ನೋಂದಾಯಿತ ನಿಯೋಜನೆ ಒಪ್ಪಂದಗಳ ಮೂಲಕ ಹಣಕಾಸಿನ ಆಸ್ತಿಯ ನಿಯೋಜನೆಗೆ ಅನುಗುಣವಾಗಿ) ಅಡಮಾನವಾಗಿ / ವಿಧಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ, ಆನ್‌ಲೈನ್ ಇ-ಹರಾಜಿನ ಮೂಲಕ ''ಎಲ್ಲಿ ಇದ್ದಂತೆ'', ''ಇರುವಂತೆ'', ''ಏನೇ ಇದ್ದರೂ'' ಮತ್ತು ''ಅವಶ್ಯಕತೆಯ ಆಧಾರವಿಲ್ಲದೆ'' ಮಾರಾಟ ಮಾಡಲಾಗುವುದು, ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ಬಾಕಿ ಇರುವ ಬಾಕಿಗಳು ವೆಚ್ಚಗಳು ಇತ್ಯಾದಿಗಳನ್ನು ಮರುಪಡೆಯಲು, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 (''ನಿಯಮಗಳು'') ನ ನಿಯಮಗಳು 6, 8 ಮತ್ತು 9 ರೊಂದಿಗೆ ಓದಿದ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (''ಕಾಯಿದೆ'') ಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಲಾಗಿದೆ.

ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು	ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್	ನಂಬಿಕೆಯ ಹೆಸರು	ಕ್ರಮವಾಗಿ 22.12.2021ರ ಸರಫೇಸಿ (SARFAESI) ಸೂಚನೆ ಪ್ರಕಾರ ಬಾಕಿ ಮೊತ್ತ	ಸ್ವಾಧೀನದ ಪ್ರಕಾರ ಮತ್ತು ದಿನಾಂಕ	ತಪಾಸಣೆಯ ದಿನಾಂಕ	ಆಸ್ತಿಯ ಪ್ರಕಾರ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ)	ಮೀಸಲು ಬೆಲೆ	ಇ-ಹರಾಜಿನ ದಿನಾಂಕ ಮತ್ತು ಸಮಯ
ಸಾಲಗಾರ: 1. ಪಿ. ಕೆ. ವೆಂಕಟರಮಣೇಗೌಡ 2. ಮಮತಾ ಜಿ ಸಿ	ಸಾಲದ ಖಾತೆ ಸಂಖ್ಯೆ. HHLMYS00466102 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (''ಇ.ಎ.ಆರ್.ಸಿ'')	ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್	20.12.2021 ರಂತೆ ರೂ. 9,08,797.98/- (ರೂಪಾಯಿ ಒಂಬತ್ತು ಲಕ್ಷ ಎಂಟು ಸಾವಿರದ ಏಳು ನೂರ ತೊಂಬತ್ತ ಏಳು ಮತ್ತು ಪೈಸೆ ತೊಂಬತ್ತ ಎಂಟು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು	08.04.2025 ರಂದು ಭೌತಿಕ ಸ್ವಾಧೀನ	ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು	ಹಿಡಿತ - 1162.50 ಚದರ ಅಡಿ (ಭೂ ಪ್ರದೇಶ)	ರೂ. 2,50,000/- (ರೂಪಾಯಿ ಎರಡು ಲಕ್ಷ ಐವತ್ತು ಸಾವಿರ ಮಾತ್ರ)	ರೂ. 25,00,000/- (ರೂಪಾಯಿ ಇಪ್ಪತ್ತ ಐದು ಲಕ್ಷ ಮಾತ್ರ)	29.09.2025 ರಂದು ಸಂಜೆ 06:00 ಕ್ಕೆ

ಹರಾಜು ಮಾಡಲಾಗುತ್ತಿರುವ ಸುರಕ್ಷಿತ ಆಸ್ತಿ ವಿವರಣೆ : ಶ್ರೀ ಪಿ. ಕೆ. ವೆಂಕಟರಮಣೇಗೌಡ ಅವರ ಒಡೆತನದ ಆಸ್ತಿ :
ಸ್ಥಿರ ಆಸ್ತಿಯ ಅಳತೆ ಮತ್ತು ಈ ಕೆಳಗಿನಂತೆ ಚಕ್ಕುಬಂದಿಯನ್ನು ಹೊಂದಿದೆ : ಸೈಟ್ ನಂ. 517, ಸದಾಶಿವನಗರ ಲೇಔಟ್, 108 ಚ. ಮೀ. ಅಥವಾ 1162.50 ಚದರ ಅಡಿ ವಿಸ್ತೀರ್ಣ (ಭೂ ವಿಸ್ತೀರ್ಣ) ಸರ್ವೇ ನಂ. 140/2 ಚಿಕ್ಕಕೊಂಡಗೊಳ ಗ್ರಾಮ, ಕಸಬ ಹೋಬಳಿ, ಹಾಸನ ತಾಲ್ಲೂಕು ಮತ್ತು ಜಿಲ್ಲೆ ಹಾಸನ, ಕರ್ನಾಟಕ - 573201 ಹಾಗೂ ಈ ಭೂಮಿಯ ಎಲ್ಲಾ ಭಾಗಗಳು.
ಗಡಿರೇಖೆಗಳು : ಪೂರ್ವ : ಸೈಟ್ ಸಂಖ್ಯೆ 518, ಪಶ್ಚಿಮ : ಸೈಟ್ ಸಂಖ್ಯೆ 516, ಉತ್ತರ : ಸೈಟ್ ಸಂಖ್ಯೆ 514, ದಕ್ಷಿಣ : 9 ಮೀಟರ್ ಅಗಲ ರಸ್ತೆ.

ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು	ನಿಲ್ (ಶೂನ್ಯ)	ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು	ನಿಲ್ (ಶೂನ್ಯ)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಹರಾಜಿಗೆ 2 ಗಂಟೆಗಳ ಮೊದಲು ಅದೇ ದಿನ	ಬಿಡ್ ಹೆಚ್ಚಳ ಮೊತ್ತ :	ಬಿಡ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ
ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಹೆಸರಿನಲ್ಲಿ ಮಾಡಬೇಕು:	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್	ಪಾರ್ ನಲ್ಲಿ ಪಾವತಿಸಬೇಕು	
ಆರ್‌ಟಿಜಿಎಸ್ ವಿವರಗಳು	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್, ಟ್ರಸ್ಟ್ ಖಾತೆ ಸಂಖ್ಯೆ - 57500001353101, ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್, ಶಾಖೆ: ಕಮಲಾ ಮಿಲ್, ಮುಂಬೈ, ಐಎಫ್‌ಎಸ್‌ಸಿ ಕೋಡ್: HDFC0000542		
ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ	ಹರಿ ಪ್ರಸಾದ್ - 0124-6910910; +91 70654 51024 (auctionhelpline@sammaancapital.com), ಮೋನಿಕಾ ರುದ್ರ ದಾಸ್ - 022 6658 1327.		

ನಿಯಮಗಳು ಮತ್ತು ಷರತ್ತುಗಳು:
1. ಹರಾಜು ಮಾರಾಟವನ್ನು ವೆಬ್‌ಸೈಟ್ https://auction.arcil.co.in ಮೂಲಕ ಇ-ಹರಾಜು ಮೂಲಕ ಮತ್ತು ಬಿಡ್ ದಾಖಲೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತಿದೆ.
2. ಅಧಿಕೃತ ಅಧಿಕಾರಿ (''ಎಒ'') / ಆರ್ಸಿಲ್ ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಜವಾಬ್ದಾರರಾಗಿರುವುದಿಲ್ಲ.
3. ಹರಾಜಿನ ಯಾವುದೇ ಹಂತದಲ್ಲಿ, ಎಒ ಬಿಡ್ / ಆಫರ್ ಅನ್ನು ಸ್ವೀಕರಿಸಬಹುದು / ತಿರಸ್ಕರಿಸಬಹುದು / ಮಾರ್ಪಡಿಸಬಹುದು / ರದ್ದು ಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.
4. ಯಶಸ್ವಿ ಖರೀದಿದಾರರು / ಬಿಡ್ದಾರರು ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಪಾವತಿಸಬೇಕಾದ ಶುಲ್ಕಗಳು, ಖರೀದಿಯ ಪರಿಗಣನೆಯ ಮೇಲೆ ಅನ್ವಯವಾಗುವ ಜಿಎಸ್ಟಿ, ಸ್ಟಾಂಪ್ ಸುಂಕ, ನೋಂದಣಿ ಶುಲ್ಕಗಳು ಇತ್ಯಾದಿಗಳನ್ನು ಸುರಕ್ಷಿತ ಆಸ್ತಿಯನ್ನು ರವಾನಿಸಲು / ತಲುಪಿಸಲು ಅನ್ವಯವಾಗುವ ಕಾನೂನಿನ ಪ್ರಕಾರ ಅವನ / ಅವಳ / ಅದರ ಪರವಾಗಿ ಪಾವತಿಸಬೇಕಾಗುತ್ತದೆ.
5. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು ಸೂಕ್ಷ್ಮ ಶ್ರದ್ಧೆ, ಸುರಕ್ಷಿತ ಆಸ್ತಿಯ ಶೀರ್ಷಿಕೆ ಮತ್ತು ಸುರಕ್ಷಿತ ಆಸ್ತಿಗಳ ಮೇಲೆ ಪರಿಣಾಮ ಬೀರುವ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳು, ಶಾಸನಬದ್ಧ ಬಾಕಿಗಳು, ಇತ್ಯಾದಿಗಳ ಬಗ್ಗೆ ತಮ್ಮ ಸ್ವಂತ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಹರಾಜು ಜಾಹೀರಾತು ಮತ್ತು ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಆರ್ಸಿಲ್ ರೂಪಿಸುವುದಿಲ್ಲ, ಆರ್ಸಿಲ್ ನ ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.
6. ಪತ್ರಿಕೆಯಲ್ಲಿ ಪ್ರಕಟವಾದ ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ, ಕೆಳಗೆ ಸಹಿ ಮಾಡಿದವರು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.
7. ಹೇಳಲಾದ ಬಾಕಿಗಳಿಗೆ ಜವಾಬ್ದಾರರಾಗಿರುವ ಸಾಲಗಾರ / ಖಾತರಿದಾರರು / ಅಡಮಾನದಾರರು, ಈ ಮಾರಾಟದ ನೋಟಿಸ್ ನನ್ನು ಭದ್ರತಾ ಆಸಕ್ತಿ (ಜಾರಿ) ನಿಯಮಗಳ 8 ಮತ್ತು 9 ರ ಅಡಿಯಲ್ಲಿ, ಮೇಲೆ ತಿಳಿಸಿದ ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ನೋಟಿಸ್ ಆಗಿ ಪರಿಗಣಿಸಬೇಕು.
8. ಈ ಸಂದರ್ಭದಲ್ಲಿ, ಇಲ್ಲಿ ನಿಗದಿಪಡಿಸಲಾದ ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ನಿಯಮಗಳು ಮತ್ತು ಕಾಯಿದೆಯ ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಆರ್ಸಿಲ್ ಹೊಂದಿದೆ.

ಎಸ್.ಡಿ/-
ಅಧಿಕೃತ ಅಧಿಕಾರಿ
ಸ್ಥಳ : ಹಾಸನ
ದಿನಾಂಕ : 20.08.2025
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)

Arcil

ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್)
ವಿವಿಧ ಆರ್ಸಿಲ್ ಟ್ರಸ್ಟ್‌ಗಳ ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದೆ
ಆರ್ಸಿಲ್ ಕಚೇರಿ: ರೂಬಿ, 10ನೇ ಮಹಡಿ, 29, ಸೇನಾಪತಿ ಬಾಪಟ್ ಮಾರ್ಗ, ದಾದರ್ (ಪಶ್ಚಿಮ) ಮುಂಬೈ-400 028.
ಜಾಲತಾಣ : https://auction.arcil.co.in; CIN-U65999MH2002PLC134884

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಅಧಿಕಾರಗಳ ಚಲಾವಣೆ ಮತ್ತು ಭದ್ರತಾ ಆಸಕ್ತಿಯ ಕಾಯ್ದೆ, 2002 (ಸರ್ಫೇಸಿ ಆಕ್ಟ್) ಜಾರಿ, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮಗಳು 6, 8 ಮತ್ತು 9 ರೊಂದಿಗೆ ಆನ್‌ಲೈನ್ ಇ-ಹರಾಜು ಮೂಲಕ ಮಾರಾಟಕ್ಕೆ ಸಾರ್ವಜನಿಕ ಸೂಚನೆ

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ಸಾಲಗಾರ (ರು) / ಖಾತರಿದಾರರು (ಗಳು) / ಅಡಮಾನದಾರರಿಗೆ (ಗಳು), ನಿರ್ದಿಷ್ಟವಾಗಿ, ಕೆಳಗೆ ವಿವರಿಸಿದ ಸ್ಥಿರ ಆಸ್ತಿ/ಗಳು ಆಸ್ತಿ ಪುನರ್ನಿರ್ಮಾಣ ಕಂಪನಿ (ಇಂಡಿಯಾ) ಲಿಮಿಟೆಡ್‌ಗೆ ವಿವಿಧ ಆರ್ಸಿಲ್ ಟ್ರಸ್ಟ್‌ಗಳ (''ಆರ್ಸಿಲ್'') ಟ್ರಸ್ಟಿಯಾಗಿ ಅದರ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತದೆ (ನೋಂದಾಯಿತ ನಿಯೋಜನೆ ಒಪ್ಪಂದಗಳ ಮೂಲಕ ಹಣಕಾಸಿನ ಆಸ್ತಿಯ ನಿಯೋಜನೆಗೆ ಅನುಗುಣವಾಗಿ) ಅಡಮಾನವಾಗಿ / ವಿಧಿಸಲಾಗಿದೆ ಎಂದು ಸೂಚನೆ ನೀಡಲಾಗಿದೆ, ಆನ್‌ಲೈನ್ ಇ-ಹರಾಜಿನ ಮೂಲಕ ''ಎಲ್ಲಿ ಇದ್ದಂತೆ'', ''ಇರುವಂತೆ'', ''ಏನೇ ಇದ್ದರೂ'' ಮತ್ತು ''ಅವಶ್ಯಕತೆಯ ಆಧಾರವಿಲ್ಲದೆ'' ಮಾರಾಟ ಮಾಡಲಾಗುವುದು, ಹೆಚ್ಚಿನ ಬಡ್ಡಿ, ಶುಲ್ಕಗಳು ಮತ್ತು ಬಾಕಿ ಇರುವ ಬಾಕಿಗಳು ವೆಚ್ಚಗಳು ಇತ್ಯಾದಿಗಳನ್ನು ಮರುಪಡೆಯಲು, ಭದ್ರತಾ ಆಸಕ್ತಿ (ಜಾರಿ) ನಿಯಮಗಳು, 2002 (''ನಿಯಮಗಳು'') ನ ನಿಯಮಗಳು 6, 8 ಮತ್ತು 9 ರೊಂದಿಗೆ ಓದಿದ ಹಣಕಾಸು ಸ್ವತ್ತುಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 (''ಕಾಯಿದೆ'') ಯ ನಿಬಂಧನೆಗಳ ಪ್ರಕಾರ ಕೆಳಗೆ ವಿವರಿಸಲಾಗಿದೆ.

ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು	ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್	ನಂಬಿಕೆಯ ಹೆಸರು	ಕ್ರಮವಾಗಿ 25.11.2021 ಮತ್ತು 20.12.2021ರ ಸರಫೇಸಿ (SARFAESI) ನೋಟಿಸ್ ಪ್ರಕಾರ ಬಾಕಿ ಮೊತ್ತ	ಸ್ವಾಧೀನದ ಪ್ರಕಾರ ಮತ್ತು ದಿನಾಂಕ	ತಪಾಸಣೆಯ ದಿನಾಂಕ	ಆಸ್ತಿಯ ಪ್ರಕಾರ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ)	ಮೀಸಲು ಬೆಲೆ	ಇ-ಹರಾಜಿನ ದಿನಾಂಕ ಮತ್ತು ಸಮಯ
ಸಾಲಗಾರ: 1. ಎಂ. ಎನ್. ಚಂದ್ರಶೇಖರ 2. ಬಿ. ನಾರಾಯಣ ರಾವ್	ಸಾಲದ ಖಾತೆ ಸಂಖ್ಯೆ. HHLBAG00234920 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (''ಇ.ಎ.ಆರ್.ಸಿ'')	ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್	24.11.2021 ರಂತೆ ರೂ.11,73,396.07/- (ರೂಪಾಯಿ ಹನ್ನೊಂದು ಲಕ್ಷ ಎಪ್ಪತ್ತ ಮೂರು ಸಾವಿರದ ಮುನ್ನೂರ ತೊಂಬತ್ತ ಆರು ಮತ್ತು ಪೈಸೆ ಏಳು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು	01.04.2025 ರಂದು ಭೌತಿಕ ಸ್ವಾಧೀನ	ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು	ಹಿಡಿತ - 1200 ಚದರ ಅಡಿ (ಭೂ ಪ್ರದೇಶ)	ರೂ. 1,25,000/- (ರೂಪಾಯಿ ಒಂದು ಲಕ್ಷ ಇಪ್ಪತ್ತ ಐದು ಸಾವಿರ ಮಾತ್ರ)	ರೂ. 12,50,000/- (ರೂಪಾಯಿ ಹನ್ನೆರಡು ಲಕ್ಷ ಐವತ್ತು ಸಾವಿರ ಮಾತ್ರ)	29.09.2025 ರಂದು ಸಂಜೆ 05:15 ಕ್ಕೆ

ಹರಾಜು ಮಾಡಲಾಗುತ್ತಿರುವ ಸುರಕ್ಷಿತ ಆಸ್ತಿ ವಿವರಣೆ : ಶ್ರೀ ಎಂ.ಎನ್. ಚಂದ್ರಶೇಖರ ಅವರ ಒಡೆತನದ ಆಸ್ತಿ :
ಸ್ಥಿರ ಆಸ್ತಿಯ ಅಳತೆ ಮತ್ತು ಈ ಕೆಳಗಿನಂತೆ ಮಿತಿಗೊಳಿಸಲಾಗಿದೆ : ಸೈಟ್ ನಂ. 29, ಖಾತಾ ನಂ. 151900802400620033, ಸರ್ವೆ ನಂ. 21/5, ಲಕ್ಕೇನಹಳ್ಳಿ ಗ್ರಾಮ, ಕಸಬಾ ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ ಕೋಲಾರ, ಕರ್ನಾಟಕ - 563130.
ಪೂರ್ವದಿಂದ ಪಶ್ಚಿಮದವರೆಗೆ 30 ಅಡಿ ಮತ್ತು ಉತ್ತರದಿಂದ ದಕ್ಷಿಣದವರೆಗೆ 40 ಅಡಿ ಅಳತೆ ಹೊಂದಿದ್ದು, ಒಟ್ಟು 1200 ಚದರ ಅಡಿ ವಿಸ್ತೀರ್ಣವಿದೆ.
ಗಡಿರೇಖೆಗಳು : ಪೂರ್ವ : ಸೈಟ್ ನಂ. 28, ಪಶ್ಚಿಮ : ಸೈಟ್ ನಂ. 30, ಉತ್ತರ : ರಸ್ತೆ, ದಕ್ಷಿಣ : ಖಾಸಗಿ ಆಸ್ತಿ ನಂ. 21/6.

ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು	ನಿಲ್ (ಶೂನ್ಯ)	ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು	ನಿಲ್ (ಶೂನ್ಯ)

ಸಾಲಗಾರ/ ಸಹ-ಸಾಲಗಾರ/ರು/ ಖಾತೆದಾರರು/ ಅಡಮಾನದಾರರ ಹೆಸರು	ಎಲ್.ಎ.ಎನ್ (ಲ್ಯಾನ್) ಸಂಖ್ಯೆ ಮತ್ತು ಮಾರಾಟದ ಬ್ಯಾಂಕ್	ನಂಬಿಕೆಯ ಹೆಸರು	ಬಾಕಿ ಮೊತ್ತ	ಸ್ವಾಧೀನದ ಪ್ರಕಾರ ಮತ್ತು ದಿನಾಂಕ	ತಪಾಸಣೆಯ ದಿನಾಂಕ	ಆಸ್ತಿಯ ಪ್ರಕಾರ	ಅರ್ನೆಸ್ಟ್ ಮನಿ ಡೆಪಾಸಿಟ್ (ಇಎಂಡಿ)	ಮೀಸಲು ಬೆಲೆ	ಇ-ಹರಾಜಿನ ದಿನಾಂಕ ಮತ್ತು ಸಮಯ
ಸಾಲಗಾರ: 1. ಕೆ. ಆರ್. ಶಾಜೀ ನಂಬಿಯಾರ್ 2. ಲಿಶಾ ನಂಬಿಯಾರ್	ಸಾಲದ ಖಾತೆ ಸಂಖ್ಯೆ. HHLBAN00193637 ಎಡೆಲ್ವೀಸ್ ಅಸೆಟ್ ರೀಕನ್ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ (''ಇ.ಎ.ಆರ್.ಸಿ'')	ಆರ್ಸಿಲ್ -ಸಿಪಿಎಸ್ -IV- ಟ್ರಸ್ಟ್	17.12.2021 ರಂತೆ ರೂ.10,19,166.59/- (ರೂಪಾಯಿ ಹತ್ತು ಲಕ್ಷ ಹತ್ತೊಂಬತ್ತು ಸಾವಿರದ ನೂರ ಅರವತ್ತ ಆರು ಮತ್ತು ಪೈಸೆ ಐವತ್ತ ಒಂಬತ್ತು ಮಾತ್ರ) + ಅದರ ಮೇಲಿನ ಬಡ್ಡಿ + ಕಾನೂನು ವೆಚ್ಚಗಳು	05.04.2025 ರಂದು ಭೌತಿಕ ಸ್ವಾಧೀನ	ಕೋರಿಕೆಯ ಮೇರೆಗೆ ವ್ಯವಸ್ಥೆ ಮಾಡಲಾಗುವುದು	ಹಿಡಿತ - 1605 ಚದರ ಅಡಿ (ಭೂ ಪ್ರದೇಶ)	ರೂ. 1,40,000/- (ರೂಪಾಯಿ ಒಂದು ಲಕ್ಷ ನಲವತ್ತು ಸಾವಿರ ಮಾತ್ರ)	ರೂ. 14,00,000/- (ರೂಪಾಯಿ ಹದಿನಾಲ್ಕು ಲಕ್ಷ ಮಾತ್ರ)	29.09.2025 ರಂದು ಸಂಜೆ 05:30 ಕ್ಕೆ

ಹರಾಜು ಮಾಡಲಾಗುತ್ತಿರುವ ಸುರಕ್ಷಿತ ಆಸ್ತಿ ವಿವರಣೆ : ಶ್ರೀ ಕೆ.ಆರ್. ಶಾಜಿ ನಂಬಿಯಾರ್ ಅವರ ಒಡೆತನದ ಆಸ್ತಿ :
ಸ್ಥಿರ ಆಸ್ತಿಯ ಅಳತೆ ಮತ್ತು ಈ ಕೆಳಗಿನಂತೆ ಮಿತಿಗೊಳಿಸಲಾಗಿದೆ: ಸೈಟ್ ನಂ. 53, 1605 ಚದರ ಅಡಿ ವಿಸ್ತೀರ್ಣ (ಭೂ ವಿಸ್ತೀರ್ಣ), ಅನಿಶ್ ಸ್ಮಾರ್ಟ್ ಸಿಟಿ, ಸರ್ವೆ ನಂ. 25/2, ತಿಮ್ಮಾಪುರ ಗ್ರಾಮ, ಕಸಬಾ ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ, ಕರ್ನಾಟಕ - 563214. ಗಡಿರೇಖೆಗಳು : ಪೂರ್ವ : 30 ಅಡಿ ರಸ್ತೆ, ಪಶ್ಚಿಮ : ಸರ್ವೆ ನಂ. 24, ಉತ್ತರ : ಪ್ಲಾಟ್ ನಂ. 52, ದಕ್ಷಿಣ : ಸರ್ವೆ ನಂ. 25/1.

ಆರ್ಸಿಲ್ ಗೆ ತಿಳಿದಿರುವ ಬಾಕಿ ಇರುವ ದಾವೆಗಳು	ನಿಲ್ (ಶೂನ್ಯ)	ಆರ್ಸಿಲ್ ಗೆ ತಿಳಿದಿರುವ ಹೊರೆಗಳು/ಬಾಕಿಗಳು	ನಿಲ್ (ಶೂನ್ಯ)
ಬಿಡ್ ಸಲ್ಲಿಸಲು ಕೊನೆಯ ದಿನಾಂಕ	ಹರಾಜಿಗೆ 2 ಗಂಟೆಗಳ ಮೊದಲು ಅದೇ ದಿನ	ಬಿಡ್ ಹೆಚ್ಚಳ ಮೊತ್ತ :	ಬಿಡ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ
ಡಿಮ್ಯಾಂಡ್ ಡ್ರಾಫ್ಟ್ ಅನ್ನು ಈ ಹೆಸರಿನಲ್ಲಿ ಮಾಡಬೇಕು:	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್	ಪಾರ್ ನಲ್ಲಿ ಪಾವತಿಸಬೇಕು	
ಆರ್‌ಟಿಜಿಎಸ್ ವಿವರಗಳು	ಆರ್ಸಿಲ್-ಸಿಪಿಎಸ್-IV-ಟ್ರಸ್ಟ್, ಟ್ರಸ್ಟ್ ಖಾತೆ ಸಂಖ್ಯೆ - 57500001353101, ಹೆಚ್.ಡಿ.ಎಫ್.ಸಿ ಬ್ಯಾಂಕ್ ಲಿಮಿಟೆಡ್, ಶಾಖೆ: ಕಮಲಾ ಮಿಲ್, ಮುಂಬೈ, ಐಎಫ್‌ಎಸ್‌ಸಿ ಕೋಡ್: HDFC0000542		
ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಸಂಖ್ಯೆ	ಹರಿ ಪ್ರಸಾದ್ - 0124-6910910; +91 70654 51024 (auctionhelpline@sammaancapital.com), ಮೋನಿಕಾ ರುದ್ರ ದಾಸ್ - 022 6658 1327.		

ನಿಯಮಗಳು ಮತ್ತು ಷರತ್ತುಗಳು:
1. ಹರಾಜು ಮಾರಾಟವನ್ನು ವೆಬ್‌ಸೈಟ್ https://auction.arcil.co.in ಮೂಲಕ ಇ-ಹರಾಜು ಮೂಲಕ ಮತ್ತು ಬಿಡ್ ದಾಖಲೆಯ ನಿಯಮಗಳು ಮತ್ತು ಷರತ್ತುಗಳ ಪ್ರಕಾರ ಮತ್ತು ಅದರಲ್ಲಿ ಸೂಚಿಸಲಾದ ಕಾರ್ಯವಿಧಾನದ ಪ್ರಕಾರ ನಡೆಸಲಾಗುತ್ತಿದೆ.
2. ಅಧಿಕೃತ ಅಧಿಕಾರಿ (''ಎಒ'') / ಆರ್ಸಿಲ್ ಇಂಟರ್ನೆಟ್ ಸಂಪರ್ಕ, ನೆಟ್‌ವರ್ಕ್ ಸಮಸ್ಯೆಗಳು, ಸಿಸ್ಟಮ್ ಕ್ರ್ಯಾಶ್ ಡೌನ್, ವಿದ್ಯುತ್ ವೈಫಲ್ಯ ಇತ್ಯಾದಿಗಳಿಗೆ ಜವಾಬ್ದಾರರಾಗಿರುವುದಿಲ್ಲ.
3. ಹರಾಜಿನ ಯಾವುದೇ ಹಂತದಲ್ಲಿ, ಎಒ ಬಿಡ್ / ಆಫರ್ ಅನ್ನು ಸ್ವೀಕರಿಸಬಹುದು / ತಿರಸ್ಕರಿಸಬಹುದು / ಮಾರ್ಪಡಿಸಬಹುದು / ರದ್ದು ಮಾಡಬಹುದು ಅಥವಾ ಯಾವುದೇ ಕಾರಣವನ್ನು ನೀಡದೆ ಮತ್ತು ಯಾವುದೇ ಪೂರ್ವ ಸೂಚನೆ ಇಲ್ಲದೆ ಹರಾಜನ್ನು ಮುಂದೂಡಬಹುದು.
4. ಯಶಸ್ವಿ ಖರೀದಿದಾರರು / ಬಿಡ್ದಾರರು ಯಾವುದೇ ಶಾಸನಬದ್ಧ ಬಾಕಿಗಳು, ತೆರಿಗೆಗಳು, ಪಾವತಿಸಬೇಕಾದ ಶುಲ್ಕಗಳು, ಖರೀದಿಯ ಪರಿಗಣನೆಯ ಮೇಲೆ ಅನ್ವಯವಾಗುವ ಜಿಎಸ್ಟಿ, ಸ್ಟಾಂಪ್ ಸುಂಕ, ನೋಂದಣಿ ಶುಲ್ಕಗಳು ಇತ್ಯಾದಿಗಳನ್ನು ಸುರಕ್ಷಿತ ಆಸ್ತಿಯನ್ನು ರವಾನಿಸಲು / ತಲುಪಿಸಲು ಅನ್ವಯವಾಗುವ ಕಾನೂನಿನ ಪ್ರಕಾರ ಅವನ / ಅವಳ / ಅದರ ಪರವಾಗಿ ಪಾವತಿಸಬೇಕಾಗುತ್ತದೆ.
5. ಉದ್ದೇಶಿತ ಬಿಡ್ದಾರರು ತಮ್ಮ ಬಿಡ್ ಸಲ್ಲಿಸುವ ಮೊದಲು ಸೂಕ್ಷ್ಮ ಶ್ರದ್ಧೆ, ಸುರಕ್ಷಿತ ಆಸ್ತಿಯ ಶೀರ್ಷಿಕೆ ಮತ್ತು ಸುರಕ್ಷಿತ ಆಸ್ತಿಗಳ ಮೇಲೆ ಪರಿಣಾಮ ಬೀರುವ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳು, ಶಾಸನಬದ್ಧ ಬಾಕಿಗಳು, ಇತ್ಯಾದಿಗಳ ಬಗ್ಗೆ ತಮ್ಮ ಸ್ವಂತ ಸ್ವತಂತ್ರ ವಿಚಾರಣೆಗಳನ್ನು ಮಾಡಬೇಕು. ಹರಾಜು ಜಾಹೀರಾತು ಮತ್ತು ಯಾವುದೇ ಬದ್ಧತೆ ಅಥವಾ ಯಾವುದೇ ಪ್ರಾತಿನಿಧ್ಯವನ್ನು ಆರ್ಸಿಲ್ ರೂಪಿಸುವುದಿಲ್ಲ, ಆರ್ಸಿಲ್ ನ ಅಧಿಕೃತ ಅಧಿಕಾರಿಯು ಯಾವುದೇ ಮೂರನೇ ವ್ಯಕ್ತಿಯ ಕ್ಲೇಮ್ ಗಳು / ಹಕ್ಕುಗಳು / ಬಾಕಿಗಳಿಗೆ ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ.
6. ಪತ್ರಿಕೆಯಲ್ಲಿ ಪ್ರಕಟವಾದ ಹರಾಜು ಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಅತ್ಯುತ್ತಮ ಮಾಹಿತಿಗೆ ಹೇಳಲಾಗಿದೆ; ಆದಾಗ್ಯೂ, ಕೆಳಗೆ ಸಹಿ ಮಾಡಿದವರು ಯಾವುದೇ ದೋಷ, ತಪ್ಪು ಹೇಳಿಕೆ ಅಥವಾ ಲೋಪಕ್ಕೆ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ.
7. ಹೇಳಲಾದ ಬಾಕಿಗಳಿಗೆ ಜವಾಬ್ದಾರರಾಗಿರುವ ಸಾಲಗಾರ / ಖಾತರಿದಾರರು / ಅಡಮಾನದಾರರು, ಈ ಮಾರಾಟದ ನೋಟಿಸ್ ನನ್ನು ಭದ್ರತಾ ಆಸಕ್ತಿ (ಜಾರಿ) ನಿಯಮಗಳ 8 ಮತ್ತು 9 ರ ಅಡಿಯಲ್ಲಿ, ಮೇಲೆ ತಿಳಿಸಿದ ಹರಾಜು ಮಾರಾಟವನ್ನು ಹಿಡಿದಿಟ್ಟುಕೊಳ್ಳುವ ಬಗ್ಗೆ ನೋಟಿಸ್ ಆಗಿ ಪರಿಗಣಿಸಬೇಕು.
8. ಈ ಸಂದರ್ಭದಲ್ಲಿ, ಇಲ್ಲಿ ನಿಗದಿಪಡಿಸಲಾದ ಹರಾಜು ಯಾವುದೇ ಕಾರಣಕ್ಕಾಗಿ ವಿಫಲವಾದರೆ, ನಿಯಮಗಳು ಮತ್ತು ಕಾಯಿದೆಯ ನಿಯಮ 8(5) ರ ನಿಬಂಧನೆಗಳ ಅಡಿಯಲ್ಲಿ ಯಾವುದೇ ಇತರ ವಿಧಾನಗಳ ಮೂಲಕ ಸುರಕ್ಷಿತ ಆಸ್ತಿಯನ್ನು ಮಾರಾಟ ಮಾಡುವ ಹಕ್ಕನ್ನು ಆರ್ಸಿಲ್ ಹೊಂದಿದೆ.

ಎಸ್.ಡಿ/-
ಅಧಿಕೃತ ಅಧಿಕಾರಿ
ಸ್ಥಳ : ಕೋಲಾರ
ದಿನಾಂಕ : 20.08.2025
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯಾ) ಲಿಮಿಟೆಡ್. (ಆರ್ಸಿಲ್ ಸಿಪಿಎಸ್-IV-ಟ್ರಸ್ಟಿನ ಟ್ರಸ್ಟಿ)

ಬ್ಯಾಂಕ್ ಆಫ್ ಮಹಾರಾಷ್ಟ್ರ: ಸ್ಪೆಷಲಿಸ್ಟ್ ಆಫೀಸರ್ಸ್ ನೇಮಕಾತಿ

ಸಾರ್ವಜನಿಕ ವಲಯದ ಬ್ಯಾಂಕ್ ಆಫ್ ಮಹಾರಾಷ್ಟ್ರದಲ್ಲಿ ಖಾಲಿ ಇರುವ 500 ಸ್ಪೆಷಲಿಸ್ಟ್ ಸ್ಕೇಲ್-2ರ ಹುದ್ದೆಗಳ ನೇಮಕಾತಿಗಾಗಿ ಅಧಿಸೂಚನೆ ಹೊರಡಿಸಿದೆ. ಒಟ್ಟು ಹುದ್ದೆಗಳ ಪೈಕಿ ಎಸ್.ಸಿ. ಅಭ್ಯರ್ಥಿಗಳಿಗೆ-75, ಎಸ್.ಟಿ ವರ್ಗದವರಿಗೆ-37, ಒ.ಬಿ.ಸಿ ಅಭ್ಯರ್ಥಿಗಳಿಗೆ 135, ಆರ್ಥಿಕ ದುರ್ಬಲ ವರ್ಗದವರಿಗೆ 50 ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 203 ಹುದ್ದೆಗಳನ್ನು ಮೀಸಲಿಡಲಾಗಿದೆ.

ಒಟ್ಟು ಹುದ್ದೆಗಳ ಸಂಖ್ಯೆ: 500

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 30, 2025

ವಿದ್ಯಾರ್ಹತೆಗಳು: ಅಭ್ಯರ್ಥಿಗಳು ಪದವೀಧರರಾಗಿದ್ದು, ಇಂಟಿಗ್ರೇಟೆಡ್ ಡ್ಯುಯಲ್ ಪದವಿ ಪಡೆದವರೂ ಅರ್ಜಿ ಸಲ್ಲಿಸಬಹುದಾಗಿದೆ, ಶೇ.60 ಅಥವಾ ಅದಕ್ಕಿಂತ ಹೆಚ್ಚು ಅಂಕ ಪಡೆದವರು ಮಾತ್ರ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಎಸ್ ಸಿ/ಎಸ್.ಟಿ/ ಒ.ಬಿ.ಸಿ ಮತ್ತು ವಿಶೇಷಚೇತನ ಅಭ್ಯರ್ಥಿಗಳಾಗಿದ್ದಲ್ಲಿ ಕನಿಷ್ಠ ಶೇ.55 ಅಂಕಗಳೊಂದಿಗೆ ತೇರ್ಗಡೆ ಕಡ್ಡಾಯವಾಗಿದೆ, ಯಾವುದೇ ಬ್ಯಾಂಕ್‌ನಲ್ಲಿ ಕನಿಷ್ಠ 3 ವರ್ಷಗಳ ಸೇವಾನುಭವ ಇದ್ದಲ್ಲಿ ನೇಮಕಾತಿಗೆ ಮೊದಲ ಆದ್ಯತೆ ನೀಡಲಾಗುತ್ತದೆ.

ವಯೋಮಿತಿ: ಅಭ್ಯರ್ಥಿಗಳ ಕನಿಷ್ಠ ವಯಸ್ಸು 22 ವರ್ಷ ಹಾಗೂ ಗರಿಷ್ಠ 35 ವರ್ಷ. ಮೀಸಲಾತಿ ವರ್ಗಗಳಿಗೆ ಸರಕಾರಿ ಮಾರ್ಗಸೂಚಿಗಳ ಪ್ರಕಾರ ಸಡಿಲಿಕೆ ಅನ್ವಯಿಸುತ್ತದೆ.

ಅರ್ಜಿ ಶುಲ್ಕ ಮಾಹಿತಿ: ಸಾಮಾನ್ಯ, ಆರ್ಥಿಕ ದುರ್ಬಲ ವರ್ಗ ಮತ್ತು ಇತರೆ ಹಿಂದುಳಿದ ವರ್ಗದದವರಿಗೆ 1180 ರು. ಹಾಗೂ ಉಳಿದೆಲ್ಲಾ ವರ್ಗದ ಅಭ್ಯರ್ಥಿಗಳು ರು. 118 (ಇಂಟಿಮೇಷನ್ ಫೀ ಮಾತ್ರ) ಪಾವತಿಸಬೇಕು.

ಸಿಬಿಲ್ ಸ್ಕೋರ್ ಅಗತ್ಯ: ಸಾಲ ಮರುಪಾವತಿಯಲ್ಲಿ ಡೀಫಾಲ್ಟ್ ದಾಖಲೆ ಹೊಂದಿರುವ/ಕ್ರೆಡಿಟ್ ಕಾರ್ಡ್ ಬಾಕಿ ಹೊಂದಿರುವ ಮತ್ತು/CIBIL ಅಥವಾ ಇತರ ಬಾಹ್ಯ ರೇಟಿಂಗ್ ಏಜೆನ್ಸಿಗಳಿಂದ ವ್ಯತಿರಿಕ್ತ ವರದಿ ಲಭ್ಯವಿರುವ ಅಭ್ಯರ್ಥಿಗಳು ನೇಮಕಾತಿಗೆ ಅರ್ಹರಲ್ಲ.

ನಿರೀಕ್ಷಣಾ ಅವಧಿ: ನೇಮಕಗೊಂಡವರಿಗೆ ಆರು ತಿಂಗಳ ನಿರೀಕ್ಷಣಾ ಅವಧಿ ಇರುತ್ತದೆ ಹಾಗೂ ಆಯ್ಕೆಯಾದ ಅಭ್ಯರ್ಥಿಗಳು 2 ಲಕ್ಷ ರೂಪಾಯಿಗಳ ಸೇವಾ ಬಾಂಡ್ ಅನ್ನು ಎರಡು ವರ್ಷಗಳಿಗೆ ಕಡ್ಡಾಯವಾಗಿ ನೀಡಬೇಕು.

ಆಯ್ಕೆಯಾದ ಅಭ್ಯರ್ಥಿಗಳನ್ನು ಬ್ಯಾಂಕಿನ ಅವಶ್ಯಕತೆಗೆ ಅನುಗುಣವಾಗಿ ದೇಶದ ಯಾವುದೇ ಸ್ಥಳಕ್ಕೆ ನಿಯೋಜಿಸಲಾಗುತ್ತದೆ.

बैंक ऑफ महाराष्ट्र
Bank of Maharashtra
भारत सरकार का उद्यम

ಆಯ್ಕೆ ಪ್ರಕ್ರಿಯೆ

ಆನ್‌ಲೈನ್ ಪರೀಕ್ಷೆ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ. ಇಂಗ್ಲಿಷ್ ಭಾಷೆ (20), ಕ್ವಾಂಟಿಟೇಟಿವ್ ಆ್ಯಪ್ಟಿಟ್ಯೂಡ್ (20) ರೀಸನಿಂಗ್ ಎಬಿಲಿಟಿ (20) ಮತ್ತು ಪ್ರೊಫೆಶನಲ್ ನಾಲೇಜ್‌ಗೆ (90) ಪ್ರಶ್ನೆಗಳಿರಲಿದ್ದು, ಒಟ್ಟು 150 ಅಂಕಗಳ ಪ್ರಶ್ನೆಗಳು. ಪರೀಕ್ಷೆ ಬರೆಯಲು ಎರಡು ಗಂಟೆ ಸಮಯಾವಕಾಶ ನೀಡಲಾಗುತ್ತದೆ. ಪ್ರತಿಯೊಂದು ತಪ್ಪು ಉತ್ತರಗಳಿಗೆ 0.25 ಅಂಕಗಳನ್ನು ಕಡಿತ ಮಾಡಲಾಗುತ್ತದೆ. ಅಭ್ಯರ್ಥಿಗಳು ನೇಮಕಾತಿ ಸಂಸ್ಥೆಯ ಮೂಲಕ ನಡೆಸುವ ಆನ್‌ಲೈನ್ ಪರೀಕ್ಷೆಗೆ ಹಾಜರಾಗಬೇಕಾ ಗುತ್ತದೆ. ಯಶಸ್ವಿ ಅಭ್ಯರ್ಥಿಗಳನ್ನು ಅವರ ಶ್ರೇಯಾಂಕದ ಆಧಾರದ ಮೇಲೆ 1:3 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಆನ್‌ಲೈನ್ ಪರೀಕ್ಷೆ ಮತ್ತು ಸಂದರ್ಶನಕ್ಕೆ ಕ್ರಮವಾಗಿ 150 ಮತ್ತು 100 ಅಂಕಗಳ ಹಂಚಿಕೆಯಾಗಿದ್ದು, ಅದನ್ನು 75:25 (ಆನ್‌ಲೈನ್ ಪರೀಕ್ಷೆ: ಸಂದರ್ಶನ) ಗೆ ಪರಿವರ್ತಿಸಲಾಗುತ್ತದೆ.

ರಾಜ್ಯದಲ್ಲಿ ಆನ್‌ಲೈನ್ ಪರೀಕ್ಷಾ ಕೇಂದ್ರಗಳು: ಬೆಂಗಳೂರು ಮತ್ತು ಹುಬ್ಬಳ್ಳಿ-ಧಾರವಾಡ

ವೇತನ ಶ್ರೇಣಿ: 64,820-93,960 ರು. ಆರಂಭಿಕ ವೇತನ ಇರಲಿದ್ದು ಹಾಗೂ ಇತರ ಭತ್ಯೆಗಳನ್ನು ನಿಯಮಾನುಸಾರ ನೀಡಲಾಗುತ್ತದೆ.

ನೆನಪಿಡಿ: ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಸಲ್ಲಿಸುವ ಸಮಯದಲ್ಲಿ ಪಟ್ಟಿ ಮಾಡಲಾದ ಪ್ರತಿಯೊಂದು ದಾಖಲೆಯನ್ನು ಅಪ್‌ಲೋಡ್ ಮಾಡಬೇಕು. ಪ್ರತಿಯೊಂದು ದಾಖಲೆಯನ್ನು ಅಪ್‌ಲೋಡ್ ಮಾಡಲು ಪ್ರತ್ಯೇಕ ಲಿಂಕ್‌ಗಳು ಇರುತ್ತವೆ.

ಹೆಚ್ಚಿನ ಮಾಹಿತಿಗೆ ಜಾಲತಾಣ: https://bankofmaharashtra.in

ನೇಮಕಾತಿಗೆ ಅರ್ಜಿ ಆಹ್ವಾನ

ಕರ್ನಾಟಕ ರಾಜ್ಯ ಸಹಕಾರ ಗ್ರಾಹಕರ ಮಹಾಮಂಡಳ ನಿಯಮಿತವು ಖಾಲಿ ಇರುವ ವಿವಿಧ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಿದೆ.

ಒಟ್ಟು ಹುದ್ದೆಗಳ ಸಂಖ್ಯೆ: 34 ಹುದ್ದೆಗಳು

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆಪ್ಟೆಂಬರ್-14

ವಿದ್ಯಾರ್ಹತೆಗಳು: ಫಾರ್ಮಸಿಸ್ಟ್ ಹುದ್ದೆಗಳಿಗೆ ಫಾರ್ಮಸಿಯಲ್ಲಿ ಡಿಪ್ಲೊಮಾ ಅರ್ಹತೆ ನಿಗದಿಪಡಿಸಲಾಗಿದೆ. ಪ್ರಥಮ ದರ್ಜೆ ಸಹಾಯಕರ ಹುದ್ದೆಗೆ ಪದವೀಧರರು ಪ್ರಯತ್ನಿಸ ಬಹುದು. ಪಿಯುಸಿ ತೇರ್ಗಡೆಯಾದ ವರು ಸೇಲ್ಸ್ ಸಹಾಯಕರ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಕಡ್ಡಾಯವೇನು: ಈ ಎಲ್ಲಾ ಹುದ್ದೆ ಗಳಿಗೂ ಕಂಪ್ಯೂಟರ್ ಜ್ಞಾನ ಕಡ್ಡಾಯ.

ವಯೋಮಿತಿ: 18ರಿಂದ 35 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದಾಗಿದೆ. ಮೀಸಲಾತಿ ವ್ಯಾಪ್ತಿಗೆ ಒಳಪಡುವ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯಲ್ಲಿ ಸಡಿಲಿಕೆ ನೀಡಲಾಗುತ್ತದೆ.

ಅರ್ಜಿ ಶುಲ್ಕ: ಎಸ್‌ಸಿ, ಎಸ್‌ಟಿ, ಪ್ರವರ್ಗ-1ಮತ್ತು ವಿಶೇಷಚೇತನ ಅಭ್ಯರ್ಥಿಗಳಿಗೆ 500 ರು. ಹಾಗೂ ಇತರ ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ 1000 ರು.ಶುಲ್ಕ ನಿಗದಿಪಡಿಸಲಾಗಿದೆ.

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆಯ ಮೂಲಕ ಆಯ್ಕೆ.

ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://ksccsf.org

ಸಿಟಿ ಕೋ ಆಪರೇಟಿವ್ ಬ್ಯಾಂಕ್‌ನಲ್ಲಿ ಉದ್ಯೋಗಾವಕಾಶ

ಬೆಂಗಳೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಕಿರಿಯ ಸಹಾಯಕರು ಮತ್ತು ಆಟೆಂಡರ್ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಿದೆ.

ಒಟ್ಟು ಹುದ್ದೆಗೆ ಸಂಖ್ಯೆ: 74

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-10.

ವಿದ್ಯಾರ್ಹತೆಗಳು: ಕಿರಿಯ ಸಹಾಯಕರ ಹುದ್ದೆಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪದವೀಧರರಾಗಿರಬೇಕು. ಯಾವುದೇ ವಿಷಯದಲ್ಲಿ ಪದವಿ ಪಡೆದಿದ್ದರೂ ಅರ್ಜಿ ಸಲ್ಲಿಸಲು ಅವಕಾಶವಿದೆ. ಆಟೆಂಡರ್ ಹುದ್ದೆಗೆ ಎಸ್ಸೆಸ್ಸೆಲ್ಸಿ ತೇರ್ಗಡೆಯಾಗಿದ್ದು, ಕನ್ನಡವನ್ನು ಒಂದು ಭಾಷೆಯನ್ನಾಗಿ ಓದಿರಬೇಕು.

ವಯೋಮಿತಿ ವಿವರ: 18ರಿಂದ 35ವರ್ಷ ವಯಸ್ಸು.

ಅರ್ಜಿ ಶುಲ್ಕ ವಿವರ: ಅರ್ಜಿ ಸಲ್ಲಿಸುವ ಎಸ್.ಸಿ, ಎಸ್.ಟಿ ಪ್ರವರ್ಗ-1 ಮತ್ತು ವಿಶೇಷಚೇತನ ಅಭ್ಯರ್ಥಿಗಳು ಆಟೆಂಡರ್ ಹುದ್ದೆಗೆ 600 ರು. ಮತ್ತು ಕಿರಿಯ ಸಹಾಯಕ ಹುದ್ದೆಗೆ 750 ರು. ಹಾಗೂ ಇತರ ಎಲ್ಲಾ ವರ್ಗದ ಅಭ್ಯರ್ಥಿಗಳು ಆಟೆಂಡರ್ ಹುದ್ದೆಗೆ 800 ರು. ಹಾಗೂ ಕಿರಿಯ ಸಹಾಯಕ ಹುದ್ದೆಗೆ 1,000 ರು. ಶುಲ್ಕ ಪಾವತಿಸಬೇಕು.

ಆಯ್ಕೆ ಪ್ರಕ್ರಿಯೆ: ಲಿಖಿತ ಪರೀಕ್ಷೆ ಯ ಮೂಲಕ ಆಯ್ಕೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ: https://becbi.co.in

ಬಿಇಎಲ್: ಎಂಜಿನಿಯರ್ ಹುದ್ದೆಗಳು

ಬೆಂಗಳೂರು ಸೇರಿ ವಿವಿಧ ಕಡೆಗಳಲ್ಲಿ ಇರುವ ಸುಮಾರು 20 ಪ್ರಾಜೆಕ್ಟ್ ಎಂಜಿನಿಯರ್ ಹುದ್ದೆ ಬಿಇಎಲ್ ಭರ್ತಿ ಮಾಡಲಿದೆ.

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಸೆಪ್ಟೆಂಬರ್-13.

ವಿದ್ಯಾರ್ಹತೆ ಗಳು: ನಾಲ್ಕು ವರ್ಷಗಳ ಬಿ.ಇ/ಬಿ.ಟೆಕ್ ಪೂರ್ಣಗೊಳಿಸಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್, ಎಲೆಕ್ಟ್ರಾನಿಕ್ಸ್, ಟೆಲಿಕಮ್ಯುನಿಕೇಷನ್, ಕಮ್ಯುನಿಕೇಷನ್, ಎಲೆಕ್ಟ್ರಾನಿಕ್ಸ್ ಮತ್ತು ಟೆಲಿಕಮ್ಯುನಿಕೇಷನ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಇನ್‌ಸ್ಟ್ರುಮೆಂಟೇಶನ್ ವಿಭಾಗದಲ್ಲಿ ಅಭ್ಯರ್ಥಿಗಳು ನಿಗದಿತ ವಿದ್ಯಾರ್ಹತೆ ಹೊಂದಿರಬೇಕು.

ವಯೋಮಿತಿ: 32 ವರ್ಷ ದೊಳಗಿನವರು ಅರ್ಜಿ ಸಲ್ಲಿಸಬಹುದು.

ಅರ್ಜಿ ಶುಲ್ಕ: ಎಸ್‌ಸಿ/ಎಸ್‌ಟಿ ಮತ್ತು ವಿಶೇಷ ಚೇತನ ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದವರು 472 ರು. ಪಾವತಿಸಬೇಕು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ಜಾಲತಾಣ ವಿಳಾಸ: https://bel-india.in

ಅಸ್ಸಾಂ ರೈಫಲ್ಸ್‌ನಲ್ಲಿ ಕ್ರೀಡಾ ಕೋಟಾದಲ್ಲಿ ನೇಮಕಾತಿ

ದೇಶದ ಪ್ರಮುಖ ಅರಸೇನಾ ಪಡೆಯಾಗಿರುವ 'ಅಸ್ಸಾಂ ರೈಫಲ್ಸ್' ಕ್ರೀಡಾ ಕೋಟಾದಡಿ ನೇಮಕಾತಿಗೆ ಅರ್ಜಿ ಅಹ್ವಾನಿಸಲಾಗಿದೆ.

ಹುದ್ದೆಗಳ ವಿವರ: ರೈಫಲ್‌ಮನ್ ಮತ್ತು ಅಸ್ಸಾಂ ರೈಫಲ್‌ವುಮನ್ ಸೇರಿದಂತೆ ಖಾಲಿ ಇರುವ 69 ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದೆ.

ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ: ಸೆಪ್ಟೆಂಬರ್-5.

ಅರ್ಹತೆಗಳು: ರೈಫಲ್‌ಮನ್/ರೈಫಲ್ ವುಮನ್ ಹುದ್ದೆಗಳಿಗೆ ಎಸ್ಸೆಸ್ಸೆಲ್ಸಿ ವಿದ್ಯಾರ್ಹತೆ ನಿಗದಿಪಡಿಸಲಾಗಿದೆ. ಡಿಪ್ಲೊಮಾ/ಐಟಿಐ ಪೂರ್ಣಗೊಳಿಸಿದವರು ರೈಫಲ್ ಮನ್ ವೆಹಿಕಲ್ ಮೆಕಾನಿಕ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಅಂತಾರಾಷ್ಟ್ರೀಯ ಕ್ರೀಡಾ ಸ್ಪರ್ಧೆಗಳು, ರಾಷ್ಟ್ರೀಯ ಸ್ಪರ್ಧೆಗಳು, ಅಂತರ್ ಕಾಲೇಜು ಟೂರ್ನಮೆಂಟ್, ವಿವಿಧ ನ್ಯಾಷನಲ್ ಗೇಮ್ಸ್, ಖೇಲೋ ಇಂಡಿಯಾ ಯೂನಿವರ್ಸಿಟಿ ಗೇಮ್ಸ್, ಖೇಲೋ ಇಂಡಿಯಾ ಯೂತ್ ಗೇಮ್ಸ್ ಅಥವಾ ಖೇಲೋ ಇಂಡಿಯಾ ಪ್ಯಾರಾಗೇಮ್ಸ್‌ಗಳಲ್ಲಿ ದೇಶವನ್ನು ಪ್ರತಿನಿಧಿಸಿದವರಿಗೆ ಇಲ್ಲಿ ಅವಕಾಶವಿರುತ್ತದೆ.

ಕ್ರೀಡಾ ಆದ್ಯತೆ: ಅಥ್ಲೆಟಿಕ್ಸ್, ಫೆನ್ಸಿಂಗ್, ಫುಟ್ಬಾಲ್, ಆರ್ಚರಿ, ಬ್ಯಾಡ್ಮಿಂಟನ್, ಶೂಟಿಂಗ್, ಜೂಡೋ ಮತ್ತು ಕರಾಟೆ ಕ್ರೀಡಾಪಟುಗಳಿಗೆ ಅವಕಾಶ.

ಅರ್ಜಿ ಶುಲ್ಕ: ಸಾಮಾನ್ಯ ಮತ್ತು ಒಬಿಸಿ ಅಭ್ಯರ್ಥಿಗಳು 100 ರು., ಉಳಿದೆಲ್ಲಾ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡಲಾಗಿದೆ.

ಆಯ್ಕೆ ವಿವರ: ಲಿಖಿತ ಪರೀಕ್ಷೆ ಮತ್ತು ದೈಹಿಕ ಸಾಮರ್ಥ್ಯ ಪರೀಕ್ಷೆ ಮೂಲಕ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಬೇಕಾದ ವೆಬ್‌ಸೈಟ್ ವಿಳಾಸ: https://assamrifles.gov.in

ಗಮನಕ್ಕೆ

ಈ ಅಂಕಣದಲ್ಲಿ ಪ್ರಸ್ತುತಪಡಿಸಿದ ಮಾಹಿತಿಯ ನಿಖರತೆಯನ್ನು ಖಚಿತಪಡಿಸಿಕೊಳ್ಳಲು ಲೇಖಕರು ಎಲ್ಲ ಪ್ರಯತ್ನಗಳನ್ನು ಮಾಡಿದ್ದಾರೆ. ಆದಾಗ್ಯೂ, ವಿಷಯದ ಸಂಪೂರ್ಣತೆ, ನಿಖರತೆ ಅಥವಾ ಸಮಯೋಚಿತತೆ ಯನ್ನು ಖಾತರಿಪಡಿಸು ವುದಿಲ್ಲ. ಹಾಗಾಗಿ ಅರ್ಜಿ ಸಲ್ಲಿಸುವ ಮೊದಲು ಆಯಾಯ ವೈಬ್‌ಸೈಟ್ ನೋಡಿ ಖಚಿತಪಡಿಸು ವುದು ಉತ್ತಮ. ಯಾವುದೇ ಲೋಪದೋಷಗಳಿಗೆ ಪತ್ರಿಕೆ ಇಲ್ಲವೇ ಲೇಖಕರು ಜವಾಬ್ದಾರರಲ್ಲ.

ಆರ್. ಕೆ. ಬಾಲಚಂದ್ರ
ಲೇಖಕರು, ಬ್ಯಾಂಕಿಂಗ್ ತರಬೇತುದಾರರು ಹಾಗೂ ವೃತ್ತಿ ಮಾರ್ಗದರ್ಶಕರು, ಬೆಂಗಳೂರು.

3 ತಿಂಗಳಲ್ಲಿ 45 ವರದಕ್ಷಿಣೆ ಕಿರುಕುಳ

ಜಿಲ್ಲೆಯಲ್ಲಿ ಹೆಚ್ಚುತ್ತಿವೆ ಡೌರಿ ಕೇಸ್ | ವಿದ್ಯಾವಂತರಲ್ಲೇ ಅಧಿಕ

ರಂಗನಾಥ ಕೆ. ಹೊನ್ನಮರಡಿ, ತುಮಕೂರು

'ಶೈಕ್ಷಣಿಕ ಹಬ್ ' ಜಿಲ್ಲೆಯಾಗಿ ಬೆಳೆಯುತ್ತಿರುವ ಕಲ್ಪತರು ನಾಡಿನ ತುಮಕೂರು ಜಿಲ್ಲೆಯಲ್ಲಿ ವರದಕ್ಷಿಣೆ ಕಿರುಕುಳ ಹಾಗೂ ಮಹಿಳೆಯರ ಮೇಲೆ ಕೌಟುಂಬಿಕ ದೌರ್ಜನ್ಯ, ಬಾಲ್ಯ ವಿವಾಹದಂಥ ಪ್ರಕರಣಗಳು ಹೆಚ್ಚುತ್ತಿವೆ. ಇದು ಜಿಲ್ಲೆಯ ಪ್ರಜ್ಞಾವಂತರಲ್ಲಿ ಆತಂಕ ಮೂಡಿಸಿದೆ.

ವಿದ್ಯಾವಂತ ದಂಪತಿಗಳ ನಡುವೆ ಹೆಚ್ಚಾಗಿ ವರದಕ್ಷಿಣೆ ದೌರ್ಜನ್ಯ, ಕಿರುಕುಳ ಪ್ರಕರಣ ಸಂಭವಿಸುತ್ತಿರುವುದು ಚರ್ಚೆಗೆ ಗ್ರಾಸವಾಗಿದೆ.

ಅಧಿಕ ಶಿಕ್ಷಣ ಪಡೆದ ವಿದ್ಯಾವಂತರು, ಉದ್ಯೋಗನಿರತ ದಂಪತಿಗಳು ವರದಕ್ಷಿಣೆ ಕಿರುಕುಳಕ್ಕೆ ಬೇಸತ್ತು ವಿಚ್ಛೇದನದ ಮೊರೆ ಹೋಗುತ್ತಿರುವುದು ದುರಂತದ ಸಂಗತಿ.

ಜಿಲ್ಲೆಯಲ್ಲಿ 2025 ಏ. 1 ರಿಂದ ಜೂನ್ 30ರ ವರೆಗೆ ಮೂರು ತಿಂಗಳಲ್ಲಿ ಒಟ್ಟು 45 ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ. ಇದರಲ್ಲಿ ಎಂಟು ಪ್ರಕರಣ ವಿಲೇವಾರಿಯಾಗಿದ್ದು, 37 ಬಾಕಿ ಉಳಿದಿವೆ. 2025ರ ಜನವರಿಯಿಂದ ಮಾರ್ಚ್ ಅಂತ್ಯಕ್ಕೆ 14 ಪ್ರಕರಣಗಳು ವರದಿಯಾಗಿದ್ದವು. ನಂತರದ ಮೂರೇ ತಿಂಗಳಲ್ಲಿ ಮೂರು ಪಟ್ಟು ಅಧಿಕಗೊಂಡಿವೆ.

ಕೌಟುಂಬಿಕ ದೌರ್ಜನ್ಯ

ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ದಾಖಲಾಗುತ್ತಿರುವ ಪ್ರಕರಣಗಳ ಸಂಖ್ಯೆಯೂ ದಿನೇ ದಿನೇ ಹೆಚ್ಚುತ್ತಿವೆ. 2025 ಪ್ರಾರಂಭದ ಮೂರು ತಿಂಗಳಲ್ಲಿ 57 ಮಂದಿ ದೂರು ಸಲ್ಲಿಸಿದ್ದರು. ನಂತರದ ಮೂರು ತಿಂಗಳಲ್ಲಿ 66 ಮಹಿಳೆಯರು ಕೌಟುಂಬಿಕ ದೌರ್ಜನ್ಯದಿಂದ ರಕ್ಷಣೆ ನೀಡುವಂತೆ ಇಲಾಖೆಯ ಹೋಗಿದ್ದಾರೆ. ಆರು ತಿಂಗಳಲ್ಲಿ ಒಟ್ಟು 123 ಪ್ರಕರಣಗಳು ದಾಖಲಾಗಿವೆ. ಈ ಸಂಬಂಧ ದಂಪತಿಗಳಿಗೆ ಆಪ್ತ ಸಮಾಲೋಚನೆ ನಡೆಸಿ 71 ಪ್ರಕರಣ ಇತ್ಯರ್ಥ ಪಡಿಸಲಾಗಿದೆ.

ಹಲವು ಕಾರಣಗಳು

ಮಹಿಳೆಯರ ಮೇಲೆ ದೌರ್ಜನ್ಯದಂತಹ ಪ್ರಕರಣಗಳು ಹೆಚ್ಚಾಗಲು ಅನೇಕ ಕಾರಣಗಳಿವೆ. ಬಡತನ, ಅನಕ್ಷರತೆ, ವಿದ್ಯಾವಂತ ದಂಪತಿಗಳ ನಡುವೆ ಹೊಂದಾಣಿಕೆ ಸಮಸ್ಯೆ, ಕಾನೂನಿನ ವಿಚಾರವಾಗಿ ಸರಿಯಾದ ಮಾಹಿತಿ ಇಲ್ಲದಿರುವ ಕಾರಣದಿಂದ ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ ಅಧಿಕವಾಗುತ್ತಿದೆ. ದೌರ್ಜನ್ಯ ಅನುಭವಿಸಿದ ಮಹಿಳೆಯರಿಗೆ ಮಹಿಳಾ ಆಯೋಗ ಸೂಕ್ತ ರಕ್ಷಣೆ ಒದಗಿಸಲು ಕ್ರಮ ಕೈಗೊಂಡು ಅವರ ಸಮಸ್ಯೆಗಳಿಗೆ ಪರಿಹಾರ ನೀಡುತ್ತಿದೆ. ಅತ್ಯಾಚಾರ, ಪೋಕ್ಸೋ ಪ್ರಕರಣಗಳಲ್ಲಿ ಶೀಘ್ರವೇ ವಿಚಾರಣೆ ಮಾಡಿ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಬೇಕಾಗಿದೆ.



24 ಗಂಟೆ ಸಹಾಯವಾಣಿ

ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರಿಗೆ ನೆರವಾಗುವ ದೃಷ್ಟಿಯಿಂದ ದಿನದ 24 ಗಂಟೆ ಸಹಾಯವಾಣಿ ಕಾರ್ಯ ನಿರ್ವಹಿಸಲಿದೆ. ವಿವಿಧ ರೀತಿಯಿಂದ ಕಿರುಕುಳಕ್ಕೆ ಒಳಗಾಗುವ ಮಹಿಳೆಯರು ಸಹಾಯವಾಣಿ ಸಂಖ್ಯೆ- 181ಕ್ಕೆ ಕರೆ ಮಾಡಿ ಸಹಾಯ ಪಡೆಯಬಹುದು.

ಬಾಲ್ಯ ವಿವಾಹ ಹಾವಳಿ

ಜಿಲ್ಲೆಯಲ್ಲಿ ಜ. 1ರಿಂದ ಜೂನ್ 30ರ ವರೆಗೆ ಬಾಲ್ಯ ವಿವಾಹದ ಬಗ್ಗೆ ಇಲಾಖೆಗೆ ಒಟ್ಟು 64 ದೂರುಗಳು ಸಲ್ಲಿಕೆಯಾಗಿದ್ದು, 54 ಬಾಲ್ಯ ವಿವಾಹ ತಡೆಯಲಾಗಿದೆ. ಇದರಲ್ಲಿ 7 ಪ್ರಕರಣದಲ್ಲಿ ವಿವಾಹ ಜರುಗಿದೆ. ಈ ಬಗ್ಗೆ ಸಂಬಂಧಪಟ್ಟ ಠಾಣೆಗಳಲ್ಲಿ ದೂರು ಸಲ್ಲಿಸಿದ್ದು, ಪ್ರಕರಣ ದಾಖಲಿಸಲಾಗಿದೆ.

ನಗರ ಪ್ರದೇಶದಲ್ಲೇ ಹೆಚ್ಚು

ಗ್ರಾಮಾಂತರ ಪ್ರದೇಶಕ್ಕೆ ಹೋಲಿಸಿದರೆ ನಗರ ಪ್ರದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿವೆ. ಸಹಾಯವಾಣಿಯ ಮೂಲಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ದೂರು ಸಲ್ಲಿಸಿದ ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಪಂದಿಸುವ ಕೆಲಸ ಮಾಡುತ್ತಿದ್ದಾರೆ. ಕಿರುಕುಳಕ್ಕೆ ಒಳಗಾದ ಮಹಿಳೆಯರಿಗೆ ಸಾಂತ್ವನ ಕೇಂದ್ರಗಳು ನೆರವಾಗುವ ಮೂಲಕ ಸಹಾಯ ಮಾಡುತ್ತಿವೆ.

ಕೌಟುಂಬಿಕ ದೌರ್ಜನ್ಯ

ವರದಕ್ಷಿಣೆ ಕಿರುಕುಳಗಳು ಸೇರಿದಂತೆ ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುವ ಮಹಿಳೆಯರು ಆತ್ಮಹತ್ಯೆಗೆ ಶರಣಾಗುತ್ತಿರುವ ಘಟನೆಗಳು ಸಹ ಜಿಲ್ಲೆಯಲ್ಲಿ ಸಂಭವಿಸುತ್ತಿವೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಕೊನೆಗಾಣಿಸಲು ಮಹಿಳಾ ಇಲಾಖೆ, ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಜಂಟಿಯಾಗಿ ಕಾರ್ಯನಿರ್ವಹಿಸುವ ಮೂಲಕ ಸಹಾಯವಾಣಿಯ ಬಗ್ಗೆ ಇನ್ನೂ ಹೆಚ್ಚಿನ ಅರಿವನ್ನು ಮೂಡಿಸಿ ದೌರ್ಜನ್ಯ, ಬಾಲ್ಯ ವಿವಾಹದಂತಹ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಇನ್ನೂ ಹೆಚ್ಚಿನ ರೀತಿ ಸಮನ್ವಯತೆಯಿಂದ ಪರಸ್ಪರ ಕಾರ್ಯನಿರ್ವಹಿಸಬೇಕಾಗಿದೆ.

ಪಿಒಪಿ ಗಣಪತಿ, ಕ್ಯಾರೆ ಎನ್ನದ ಸಂಘಟನೆ

ಯುವಜನತೆಗೆ ಗಣೇಶೋತ್ಸವ ಭರ್ಜರಿ ವೇದಿಕೆ | ಚಿಕ್ಕಬಳ್ಳಾಪುರ ಕ್ಷೇತ್ರವೊಂದರಲ್ಲೇ 650 ಮೂರ್ತಿಗಳು | ಭಕ್ತಿ ಶ್ರದ್ದೆಗಳ ಗುಂಗಿನಲ್ಲಿ ಎಚ್ಚರ ತಪ್ಪಿದರೂ ಅಪಾಯ | ಜಿಲ್ಲಾಡಳಿತಕ್ಕೆ ಗಣಪತಿಯ ವಿಸರ್ಜನೆಯೇ ಸವಾಲು

ಜಿಲ್ಲಾ ನೋಟ

ಮುನಿರಾಜು ಎಂ ಅರಿಕೆರೆ,ಚಿಕ್ಕಬಳ್ಳಾಪುರ

ದೇಶಾದ್ಯಂತ ಗಣೇಶ ಚತುರ್ಥಿಯನ್ನು ಭಕ್ತಿಭಾವ ಮತು ಸಂಭ್ರಮದಿಂದ ಆಚರಿಸಲಾಗುತ್ತಿದೆ. ಮನೆ, ಗಲ್ಲಿ, ಓಣಿ, ಮಠ ಮಂದಿರಗಳಲ್ಲಿ, ಸಾರ್ವನಿಕ ಸ್ಥಳಗಳಲ್ಲಿ ಗಣಪತಿ ಮೂರ್ತಿ ಪ್ರತಿಷ್ಠಾಪಿಸಿ ವಿಶೇಷ ಪೂಜೆ,ಅರ್ಚನೆಯೊಂದಿಗೆ ಗಣೇಶೋತ್ಸವ ಅದ್ದೂರಿಯಾಗಿ ನಡೆಯುತ್ತಿದೆ.

ಭರ್ಜರಿ ಉತ್ಸವ

ಜಿಲ್ಲೆಯಲ್ಲಿ ಕೂಡ ಈ ಬಾರಿ ಹಿಂದೆಂದಿಗಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಗಣಪತಿಯನ್ನು ಪ್ರತಿಷ್ಠಾಪಿಸಿ ಪೂಜಿಸುತ್ತಿರುವುದು ಸಂತೋಷದ ಸಂಗತಿ. ಆದರೆ ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರವೊಂದರಲ್ಲಿಯೇ ಸುಮಾರು 650 ಕ್ಕೂ ಹೆಚ್ಚು ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದು ಇವುಗಳನ್ನು ವೈಜ್ಞಾನಿಕವಾಗಿ ವಿಸರ್ಜನೆ ಮಾಡುವುದು ಜಿಲ್ಲಾಡಳಿತಕ್ಕೆ ಸವಾಲಿನ ಕೆಲಸವಾಗಿದೆ.

ಪಿಒಪಿ ಗಣಪತಿ ಹಾವಳಿ

ಜಿಲ್ಲಾಡಳಿತ ಮತ್ತು ಪರಿಸರ ಇಲಾಖೆ ಪಿಒಪಿ ಗಣಪತಿ ಪ್ರತಿಷ್ಠಾಪನೆ ಬೇಡವೆಂದು ಪರಿಪರಿಯಾಗಿ ಎಚ್ಚರಿಕೆ ನೀಡಿದರೂ, ಕ್ಯಾರೆ ಎನ್ನದ ಹಲವಾರು ಗಣಪತಿ ಸೇವಾ ಸಂಸ್ಥೆಗಳು 10-15 ಅಡಿಯಷ್ಟು ಬೃಹತ್ ಗಾತ್ರದ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಿ ಪೂಜಿಸುತ್ತಿರುವುದು ಪರಿಸರ ಮಾಲಿನ್ಯ ಮತ್ತು ಜಲಮೂಲಗಳ ದೃಷ್ಟಿಯಲ್ಲಿ ನೋಡಿದರೆ ಆತಂಕ ಪಡುವ ಸಂಗತಿಯೇ ಸರಿ.

ಕೆರೆಗಳ ಹೂಳು ಗೋಳು

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಸಾವಿರಾರು ಕೆರೆಕುಂಟೆಗಳಿದ್ದರೂ ನದಿ ನಾಲೆಯ ಆಶ್ರಯವಿಲ್ಲದ ಬರಡು ಜಿಲ್ಲೆ ಎಂಬ ಅಪಖ್ಯಾತಿಗೆ ದಶಕಗಳ ಕಾಲದಿಂದ ಒಳಗಾದ ಜಿಲ್ಲೆ, ಅಂತರ್ಜಲವೇ ಇಲ್ಲಿನ ಜನತೆ ಜೀವನಾಡಿ. ಇಂತಲ್ಲಿ ಇರುವ ಕೆರೆಗಳು ಹೂಳು ತುಂಬಿಕೊಂಡು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡಿವೆ. ಸಣ್ಣ ಮಳೆಯಾದರೂ ಕೆರೆಗಳು ಕೋಡಿಬೀಳುತ್ತವೆ. ಒಮ್ಮೆ ಕೋಡಿ ಬಿದ್ದರೆ ಆರು ತಿಂಗಳಾದರೂ ಇಲ್ಲಿನ ನೀರು ಪಶು ಪಕ್ಷಿ ಜನಜಾನುವಾರುಗಳಿಗೆ ದಾಹ ನೀಗಿಸುತ್ತಿದ್ದ ಕಾಲ ಮರೆಯಾಗಿ ಒಂದೆರಡು ತಿಂಗಳಿಗೆ ಕೆರೆಯ ಒಡಲು ಬರಿದಾಗುತ್ತಿರುವುದು ಸುಳ್ಳಲ್ಲ.

ವಿಸರ್ಜನೆಯೇ ಸವಾಲು

ಜಿಲ್ಲೆಯಲ್ಲಿ ಶುದ್ದ ಕುಡಿಯುವ ನೀರಿಗೆ ಹಾಹಾಕಾರವಿದ್ದು ಅಂತರ್ಜಲದ ಮೇಲೆ ಆಧಾರವಾಗಿರುವ ಪರಿಸ್ಥಿತಿ ಇದ್ದರೂ ಸಾವಿರಾರು ಸಂಖ್ಯೆಯಲ್ಲಿ ಗಣಪತಿ ಮೂರ್ತಿಗಳನ್ನು ಭಕ್ತಿಗಿಂತ ಹೆಚ್ಚಾಗಿ ಪ್ರತಿಷ್ಠಾಪಿಸಿರುವುದು ಪೂಜಾಧಿ ಧಾರ್ಮಿಕ ಕಾರ್ಯಕ್ರಮಗಳ ನಂತರ ಅವುಗಳನ್ನು ಜೀವಜಲದ ಅಕ್ಷಯ ಪಾತ್ರೆಗಳಂತಿರುವ ಕೆರೆಕುಂಟೆಗಳಿಗೆ ಕೊಂಡೊಯ್ದು ವಿಸರ್ಜಿಸಿದರೆ ಅದರ ಒಡಲು ಏನಾಗುತ್ತದೆ? ಎಂಬುದನ್ನು ಯುವಜನತೆಗೆ ಅರ್ಥ ಮಾಡಿಸುವ ಅವಶ್ಯಕತೆಯಿದೆ.

ಗಣಪನ ಆರಾಧನೆ

ಯುವಜನತೆ ತಾವೇ ಮುಂದೆ ನಿಂತು ಗಣಪನ ಆರಾಧನೆಗೆ ತೊಡಗಿರುವುದನ್ನು ಕಾಣಬಹುದು.ಸಂತೋಷ ಸಂಭ್ರಮದಂತೆ ಸ್ನೇಹ ಸೌಹಾರ್ದತೆ, ಏಕತೆಗೆ ಕಾರಣವಾಗುವ ಗೌರಿಗಣೇಶ ಹಬ್ಬವು ಅಲ್ಲಲ್ಲಿ ಕೋಮುಗಲಭೆಗೂ ಕಾರಣವಾಗುವುದನ್ನು ಅಲ್ಲಗಳೆಯುವಂತಿಲ್ಲ.ಇಂತಲ್ಲಿ ಕಾನೂನು ಸುವ್ಯವಸ್ಥೆಯ ಪರಿಪಾಠವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸಲಿಲ್ಲ ಎಂದರೆ ಸಾಕು ಅಪಾಯಕ್ಕೆ ಆಹ್ವಾನ ನೀಡಿದಂತೆ ಆಗಿರುವ ಸಾಕಷ್ಟು ಉದಾಹರಣೆಗಳು ಕಣ್ಣಮುಂದಿವೆ.

ನಗರದಲ್ಲಿ ಪ್ರತಿಷ್ಠಾಪಿಸಿರುವ ಆಳೆತ್ತರ ಗಣಪತಿ ಮೂರ್ತಿಗಳ ಚಿತ್ರ.

> ಪ್ರತಿ ವರ್ಷದಂತೆ ಈ ಬಾರಿಯು ಸ್ವರ್ಣಗೌರಿ ಹಾಗೂ ವರಸಿದ್ದಿ ವಿನಾಯಕ ಚತುರ್ಥಿ ಸಂದರ್ಭದಲ್ಲಿ ಸಾರ್ವಜನಿಕರು ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿ.ಒ.ಪಿ) ಮತ್ತು ಬಣ್ಣದ ವಿಗ್ರಹಗಳನ್ನು ಸ್ಥಾಪಿಸಿ, ಪೂಜಿಸಿದ ನಂತರ ಕೆರೆ/ಬಾವಿ ಹಾಗೂ ಇನ್ನಿತರೆ ನೈಸರ್ಗಿಕ ಜಲಮೂಲಗಳಿಗೆ ವಿಸರ್ಜಿಸುವುದು ವಾಡಿಕೆ. ಇದರಿಂದಾಗಿ ನೈಸರ್ಗಿಕ ಜಲಮೂಲಗಳು ಕಲುಷಿತಗೊಂಡು ರಾಸಾಯನಿಕ ಗುಣಗಳು ಮಾರ್ಪಟ್ಟು ಪರಿಸರದ ಮೇಲೆ ಪರಿಣಾಮ ಉಂಟಾಗುವುದಲ್ಲದ ಜಲಚರಗಳ ಜೀವಕ್ಕೆ ಅಪಾಯವಾಗುತ್ತದೆ. ಅಲ್ಲದೆ ಸಾರ್ವಜನಿಕ ಆರೋಗ್ಯಕ್ಕೂ ದಕ್ಕೆ ಉಂಟಾಗುತ್ತದೆ. ಆದ್ದರಿಂದ ಸಾರ್ವಜನಿಕರು ಕೆಲವು ಉಪ ಕ್ರಮಗಳನ್ನು ಅನುಸರಿಸಿ ಪರಿಸರ ಸ್ನೇಹಿ ಗೌರಿಗಣೇಶ ಹಬ್ಬ ಆಚರಿಸಿ ನೈಸರ್ಗಿಕ ಜಲ ಸಂಪನ್ಮೂಲಗಳನ್ನು ಸಂರಕ್ಷಿಸಲು ಸಹಕರಿಸಬೇಕಾಗಿ ಕೋರಿದೆ.

ಪ್ಲಾಸ್ಟಿಕ್ ಮಂಟಪ

ಈ ಬಾರಿ ನಗರವೂವ ಸೇರಿ ಜಿಲ್ಲೆಯಾದ್ಯಂತ ಬಹುತೇಕ ಗಣಪತಿ ಸೇವಾ ಸಂಘಟನೆಗಳು ಗಣಪತಿ ಮಂಟಪಗಳನ್ನು ಪ್ಲಾಸ್ಟಿಕ್ ಟಾರ್ಪಲ್ ಬಳಸಿ ನಿರ್ಮಿಸಲಾಗಿದೆ. ಮಟಪ ಚೆನ್ನಾಗಿರಲೆಂದು ಬಟ್ಟೆ ಪೇಪರ್ ಬಳಸಿ ಅಲಂಕಾರ ಮಾಡಿದಂತೆ ಇದಕ್ಕೆ ಪ್ರಖರ ಬೆಳಕು ಚೆಲ್ಲುವ ಲೈಟ್‌ಗಳನ್ನೂ ಜೋಡಿಸಲಾಗಿದೆ.ಇದಕ್ಕೆ ಬೇಕಾದ ವಿದ್ಯುತ್ತನ್ನು ನೇರವಾಗಿ ವಿದ್ಯುತ್ ಕಂಬಗಳಿಂದಲೇ ಬಳಸಿಕೊಳ್ಳುತ್ತಿರುವುದರಿಂದ ಅಪಾಯವನ್ನು ಅಲ್ಲಗಳೆಯುವಂತಿಲ್ಲ.ಮೇಲಾಗಿ ನಗರದ ಉದ್ದಗಲಕ್ಕೂ ಬೀದಿ ಬೀದಿಗಳಲ್ಲಿ,ರಸ್ತೆಯ ಇಕ್ಕೆಲಗಳಲ್ಲಿ ಮಾಡಿರುವ ವಿದ್ಯುತ್ ದೀಪಾಲಂಕಾರವೂ ಆಪಾಯಕ್ಕೆ ಆಹ್ವಾನ ನೀಡಿದಂತಿದೆ. ಬೆಸ್ಕಾಂ ಅಧಿಕಾರಿಗಳು ಇವುಗಳ ಮೇಲೆ ಹದ್ದಿನ ಕಣ್ಣಿಡದಿದ್ದರೆ ಅಪಾಯದ ಸಂಭವ ಅಲ್ಲಗಳೆಯುವಂತಿಲ್ಲ.

> ಪ್ಲಾಸ್ಟರ್ ಆಫ್ ಪ್ಯಾರಿಸ್ ಮತ್ತು ಬಣ್ಣ ಲೇಪಿತವಾದ ಗಣಪತಿಗಳನ್ನು ತಯಾರಿಸಬಾರದು, ಮಾರಾಟ ಮಾಡಬಾರದು. ಬಣ್ಣ ಲೇಪಿತ ಗಣಪನ ವಿಸರ್ಜನೆ ಕೂಡ ನಿಷೇಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸಿದ್ದಲ್ಲಿ ಐ.ಪಿ.ಎಸ್ ಸೆಕ್ಷನ್ 1860 ರ ಪ್ರಕಾರ ಕ್ರಮ ತೆಗೆದುಕೊಳ್ಳಲಾಗುವುದು.
>
> -ಪಿ.ಎನ್.ರವೀಂದ್ರ, ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ

ಉಚಿತ ವಿತರಣೆಯ ಗತ್ತು

ಚಿಕ್ಕಬಳ್ಳಾಪುರ ನಗರದ 31 ವಾರ್ಡುಗಳಲ್ಲಿ ಗಲ್ಲಿಗಲ್ಲಿಗೊಂದರಂತೆ ಗಣಪತಿ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಪೂಜಿಸಲಾಗುತ್ತಿದೆ. ಒಂದೆಡೆ ಭಗತ್ಸಿಂಗ್ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಸಂದೀಪ್‌ರೆಡ್ಡಿ, ನಗರ ಸೇರಿದಂತೆ ತಾಲೂಕಿನ ಹಳ್ಳಿಗಳಿಗೆ ಗಣಪತಿ ಮೂರ್ತಿಗಳನ್ನು ಉಚಿತವಾಗಿ ವಿತರಣೆ ಮಾಡಿದರೆ,ನಾವೇನು ಕಮ್ಮಿ ಎಂಬಂತೆ ಸಂಸದ ಸುಧಾಕರ್, ಶಾಸಕ ಪ್ರದೀಪ್ ಈಶ್ವರ್ ಕೂಡ ಮೂರ್ತಿಗಳನ್ನು ಯುವಕ ಸಂಘಗಳಿಗೆ ಉಚಿತವಾಗಿ ವಿತರಣೆ ಮಾಡಿರುವುದೇ ಈಬಾರಿ ಸಾವಿರಾರು ಮೂರ್ತಿಗಳು ಪ್ರತಿಷ್ಠಾಪನೆ ಮಾಡಲು ಕಾರಣವಾಗಿದೆ ಎನ್ನಲಾಗುತ್ತಿದೆ.

ಎತ್ತರದ ಮೂರ್ತಿಗಳು

ಇದೇ ಮೊದಲ ಬಾರಿಗೆ ನಗರದ ಹತ್ತಾರು ಕಡೆ 15 ಅಡಿಗೂ ಹೆಚ್ಚಿನ ಎತ್ತರ ಮೂರ್ತಿಗಳನ್ನು ಪ್ರತಿಷ್ಠಾಪನೆ ಮಾಡಲಾಗಿದೆ. ವಾಪಸಂದ್ರ, ಮುನ್ಸಿಪಲ್ ಬಡಾವಣೆ,ಮಹಾಕಾಳಿ ದೇವಾಲಯ, ರೈಲ್ವೇಸ್ಟೇಷನ್ ರಸ್ತೆ, ತರಕಾರಿ ಮಾರುಕಟ್ಟೆ,ಪ್ರಶಾಂತ್ ನಗರ ಸೇರಿ ಹಲವೆಡೆ ಆಳೆತ್ತರದ ಬೃಹತ್ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವುಗಳ ಎತ್ತರದಷ್ಟು ಆಳದ ಕೆರೆಗಳೇ ಜಿಲ್ಲೆಯಲ್ಲಿ ಇಲ್ಲವಾಗಿದೆ. ಇರುವ ಕೆರೆಗಳಲ್ಲಿ ಈ ಮೂರ್ತಿಗಳನ್ನು ಹಾಗೆಯೇ ಮುಳುಗಿಸಲಾಗದು,ಬದಲಿಗೆ ಮಲಗಿಸಿ ವಿಸರ್ಜನೆ ಮಾಡಬೇಕಾದ ಪರಿಸ್ಥಿತಿಯಿದ್ದು ಇವು ನೀರಿನಲ್ಲಿ ಕರಗಲು ಕನಿಷ್ಟ ವಾರವಾದರೂ ಬೇಕಾಗುತ್ತದೆ.ಇದನ್ನು ಸ್ಥಳೀಯ ನಗರಾಡಳಿತ ಯಾವ ರೀತಿ ನಿಭಾಯಿಸುತ್ತದೆಯೋ ಎಂಬುದನ್ನು ಕಾದು ನೋಡಬೇಕಿದೆ.

ಎಚ್ಚರ ಅಗತ್ಯ

ನೆರೆಯ ಹೈದರಾಬಾದಿನಲ್ಲಿ ಬುಧವಾರ ಗಣಪತಿ ಮೂರ್ತಿಗೆ ವಿದ್ಯುತ್‌ತಂತಿಗೆ ತಾಗಿ 15 ಮಂದಿ ಏಕಕಾಲಕ್ಕೆ ಜೀವ ಚೆಲ್ಲಿದ ಪ್ರಸಂಗ ದೇಶವನ್ನು ಬೆಚ್ಚಿಬೀಳಿಸಿದೆ. ಹಾಗೇ ಗಣೇಶೋತ್ಸವಕ್ಕೆ ಮುಂದಾಗಿರುವ ಯುವಜನತೆಗೆ ತಕ್ಕ ಪಾಠದಂತಿದೆ.

ಕಾಳಜಿಯಿರಲಿ

ಇತ್ತೀಚಿನ ದಿನಗಳಲ್ಲಿ ಗಣೇಶೋತ್ಸವ ಆಚರಣೆಗಳು ಧಾರ್ಮಿಕ ಆವರಣದಿಂದ ದೂರ ಸರಿದು, ವೈಭವದ ಆಚರಣೆಗೆ ಮತ್ತು ಪ್ರದರ್ಶನಕ್ಕೆ ಒತ್ತು ನೀಡುತ್ತಿರುವುದು ಒಳ್ಳೆಯ ಬೆಳವಣಿಗೆಯಲ್ಲ ಎಂಬ ಮಾತುಗಳಿಗೆ ಬರವಿಲ್ಲ.ಪರಿಸರಕ್ಕೆ ಹಾನಿಯಾಗದಂತೆ,ಸಾರ್ವಜನಿಕರಿಗೆ ತೊಂದರೆಯಾಗದಂತೆ ಆಚರಣೆಗೆ ಒತ್ತು ನೀಡುವುದು ಎಲ್ಲರ ಕರ್ತವ್ಯವಾಗಬೇಕಿದೆ.ಅಬ್ಬರದ ಸಂಗೀತ, ಕಿವಿಗಡಚಿಕ್ಕುವ ಪಟಾಕಿಗಳ ಸಿಡಿತ,ಬಾಣ ಬಿರುಸುಗಳ ಹಾರಾಟ,ಹಾಡು ಕುಣಿತಗಳ ಮೇಲಾಟವೇ ಮೇಳೈಸಿ, ಜನತೆಗೆ ಕಿರಿಕಿರಿಯಾಗದಂತೆ ನೋಡಿಕೊಳ್ಳುವ ಕಾಳಜಿ ತೋರುವುದು ಅಗತ್ಯ.

ವಿಶ್ವವಾಣಿ @vishwavaninews
ಆರಾಮ
ಅನುದಿನವೂ ವಿರಾಮಕ್ಕೆ ಒಂದು ನೆಪ
ಬೆಂಗಳೂರು 29-08-2025 ಶುಕ್ರವಾರ

ಚಿತ್ತವಿಹಾರ

ಮಹಾಕಾಯನ ಸೂಕ್ಷ್ಮ ದರ್ಶನ

• ಮಾಯಾ ಬಾಲಚಂದ್ರ

ದೀಪದಂತಹ ಸಣ್ಣ ಬೆಂಕಿಯು, ಉಷ್ಣವನ್ನು, ಶಾಖವನ್ನು ನೀಡಲಾರದು. ಕ್ಷೀಣವಾಗಿರುವ ಹಂಬಲ, ದೊಡ್ಡ ಪ್ರಮಾಣದ ಯಶಸ್ಸನ್ನು ದೊರಕಿಸಿಕೊಡಲಾರದು. ನಮ್ಮ ವಿಶಾಲ ಚಿಂತನೆ ಹಾಗೂ ಶ್ರದ್ಧಾಪೂರ್ವಕ ಪ್ರಯತ್ನದಿಂದ ಮಾತ್ರ ಉನ್ನತಿ ಪಡೆಯಲು ಸಾಧ್ಯ. ಇಂತಹ ಪ್ರಯತ್ನಕ್ಕೆ ಗಣೇಶನ ಸಾಕಾರ ರೂಪ ಪ್ರೇರಣೆಯಾಗಬಲ್ಲದು.

ಆನೆಯು, ಬುದ್ಧಿ, ವಿಚಕ್ಷಣೆ, ಘನತೆ - ಗಾಂಭೀರ್ಯಕ್ಕೆ ಸುಪ್ರಸಿದ್ಧ. ಆನೆಯ ಮುಖವನ್ನೇ ತನ್ನ ಶರೀರದ ಶಿಖರ ಪ್ರಾಯ ಭಾಗವಾಗಿ ಹೊಂದಿದ ಗಣೇಶ ನೀಡುವ ಸೂಚನೆಗಳು ಹಲವು. ವ್ಯಾವಹಾರಿಕ ಜಗತ್ತಿನೊಂದಿಗೆ, ಅಂತರಾತ್ಮವನ್ನು ತಿಳಿಯುವ ವಿವೇಚನೆ ಹೊಂದಿರುವವರು ವಿಶಾಲ ಬುದ್ಧಿಯುಳ್ಳವರು ಎನಿಸಿಕೊಳ್ಳುತ್ತಾರೆ. ಇಂತಹ ಪ್ರಜ್ಞೆಯನ್ನು ಸದಾ ಜಾಗೃತವಾಗಿಟ್ಟುಕೊಳ್ಳಲು ಗಣೇಶ ಎಚ್ಚರಿಸುತ್ತಾನೆ. ಜಾಗೃತ ಸ್ಥಿತಿಯಲ್ಲಿ ಸತ್ಯಾಸತ್ಯಗಳನ್ನು ಅರಿಯುತ್ತಾ, ಪರಮ ತತ್ವವನ್ನು ದರ್ಶಿಸಲು ದೃಢ ನಿರ್ಧಾರದೊಂದಿಗೆ ಉಪಕ್ರಮಿಸುವ ಪರಿಯನ್ನು ತನ್ನ ತೂಕದ ನಡಿಗೆಯ ಮೂಲಕ ತಿಳಿಸುತ್ತಾನೆ; ಗಜಾನನ

ನದ್ದು ಗಜ ಮಾರ್ಗ. ಎದುರಾಗುವ ಸಣ್ಣಪುಟ್ಟ ಪ್ರಾಣಿಗಳಿಗೆ ಪ್ರತಿಕ್ರಿಯೆ ನೀಡದೆ, ಗಾಂಭೀರ್ಯದಿಂದ ನಡೆವ ಆನೆ ನಮಗೆ ಮಾದರಿ. ಯಾರು ಉತ್ತೇಜಿಸಿದರೂ ಕೆರಳದೆ, ಬೆದರದೆ, ಗುರಿಯಡೆಗೆ ಸಾಗುವ ಆನೆಯ ರೀತಿಯನ್ನು ಅಳವಡಿಸಿಕೊಂಡರೆ, ಬಾಹ್ಯಾಂತರಂಗಗಳೆಲ್ಲವೂ ನೆಮ್ಮದಿಯ ನೆಲೆಯಾಗುತ್ತವೆ. ಗಣೇಶನ ಚಿಕ್ಕ ಕಣ್ಣುಗಳು ತೀಕ್ಷ್ಣ ನೋಟದಿಂದ ಗ್ರಹಿಸುವಂತೆಯೇ, ಮಾನವರು ಸೂಕ್ಷ್ಮ ಗ್ರಾಹಿಗಳಾದರೆ ಅಧ್ಯಾತ್ಮ ಪಥದಲ್ಲಿನ ಚಲನಾ ಸಾಮರ್ಥ್ಯ ವರ್ಧಿಸುತ್ತದೆ. ಮೊರದಗಲದ ಕಿವಿಯಿಂದ, ಶ್ರವಣ ಮಾತ್ರದಿಂದಲೇ ಜ್ಞಾನಪಡೆಯುವುದನ್ನು ಸಂಕೇತಿಸುತ್ತಾನೆ; ಹೀಗೆ, ನೋಡಿ, ಕೇಳಿ ಪಡೆದ ಜ್ಞಾನವನ್ನು, ದೊಡ್ಡ ತಲೆ ಸಂಕೇತಿಸುವ ವಿಶಾಲ ಬುದ್ಧಿಯಿಂದ ವಿವೇಚನೆಗೊಳಪಡಿಸಿ, ದಿಟ್ಟ ನಿಲುವನ್ನು ತಳೆಯುವುದು ಉದಾತ್ತತೆಯ ಚಿನ್ಹೆ. ತಳೆದ ನಿಲುವನ್ನು ಕಾರ್ಯರೂಪಕ್ಕೆ ಇಳಿಸಲು ಗಣೇಶನ ಸಶಕ್ತ ಸೊಂಡಿಲು ಸಹಕಾರಿ. ಬೃಹತ್ ವೃಕ್ಷಗಳನ್ನು ಕಿತ್ತೆಸೆಯಬಲ್ಲ ಸೊಂಡಿಲಿನಿಂದಲೇ, ಪ್ರೇಮದಿಂದ ಪುಷ್ಪವನ್ನು ಸಹ ನೀಡಬಲ್ಲದು!

ಅಂತೆಯೇ ಜ್ಞಾನಿಯ ಮನಸ್ಸಿನ ಶಕ್ತಿ. ದುರ್ವರ್ತನೆ ದುರ್ಬುದ್ಧಿಗಳನ್ನು ಬೇರು ಸಹಿತ ಕಿತ್ತೊಗೆದು, ಎಲ್ಲರನ್ನೂ ಸಪ್ರೇಮ ಗೌರವದಿಂದ ಕಾಣುತ್ತಾ, ಸೂಕ್ಷ್ಮ ವಿಷಯಗಳನ್ನು ಗ್ರಹಿಸುವುದು ಜ್ಞಾನಿಗೆ ಸಾಧ್ಯ; ಇಷ್ಟೆಲ್ಲಾ ವಿವೇಕದಿಂದ ವರ್ತಿಸಿದ ನಂತರವೂ, ಸಮಸ್ಯೆಗಳ ಸಾಧ್ಯತೆ ಇದೆ. ಆಗ ಸ್ವಯಂ ರಕ್ಷಣೆಗೆ ಏಕದಂತದಂತೆ ಸ್ವಶಕ್ತಿ ದೃಢವಾಗಿ ನಿಲ್ಲುತ್ತದೆ. ಅದಕ್ಕೆ ಪೂರಕವಾಗಿ ದಿವ್ಯ ಜ್ಞಾನವನ್ನು ಪಾಶದಂತೆ ಬಳಸಿ, ಅಜ್ಞಾನವನ್ನು ಬಂಧಿಸಿದರೆ, ಗೆಲುವು ನಿಶ್ಚಿತ.

ತನ್ನದೇ ದಂತವನ್ನು ಮುರಿದು, ಅದನ್ನೇ ಲೇಖನಿಯಾಗಿಸಿ, ಮಹಾ ಕಾವ್ಯವನ್ನು ಲೋಕಕ್ಕೆ ನೀಡಿದಂತೆ, ಸ್ವ ಪ್ರತಿಭೆಯಿಂದ ಸೃಜನಾತ್ಮಕ ಸೃಷ್ಟಿಗೆ ಕಾರಣವಾಗಬಹುದು. ಎಲ್ಲವನ್ನು ಹೊಟ್ಟೆಯಲ್ಲಿ ತುಂಬಿಕೊಳ್ಳುವ ಲಂಬೋದರನಂತೆ, ಎದುರಾಗುವ ಸುಖ - ದುಃಖಗಳೆಲ್ಲವನ್ನು ಉದರವಾಗಿ ಸ್ವೀಕರಿಸುವುದು ಜಾಣ್ಮೆ. ಮನಸ್ಸು ಎಂಬ ಮೂಷಿಕವನ್ನು, ವಿವೇಕ ಎಂಬ ಅಂಕುಶದಿಂದ ಹದ್ದು ಬಸ್ತಿನಲ್ಲಿಟ್ಟು, ಅದರ ಮೇಲೆಯೇ ಸವಾರಿ ಮಾಡುತ್ತಾ, ಸಾಧನೆಯ ಮಾರ್ಗದಲ್ಲಿ ಸಾಗಿದರೆ, ಕೈಯಲ್ಲಿರುವ ಮೋದಕದಂತೆ ಮೋದವನ್ನು ಕಾಣಲು ಸಾಧ್ಯ.

ಮರೆಯಾಗುತ್ತಿರುವ ಸಂಸ್ಕೃತಿ!

ಕೈ ಬರಹವು ಕೇವಲ ಒಂದು ಕೌಶಲವಲ್ಲ, ಬದಲಾಗಿ ಅದು ಒಂದು ಸಂಸ್ಕೃತಿ. ಭಾರತದಲ್ಲಿ ಉತ್ತಮ ಕೈ ಬರಹವು ಶೈಕ್ಷಣಿಕ ಯಶಸ್ಸಿನೊಂದಿಗೆ ಸಂಬಂಧ ಹೊಂದಿತ್ತು. ಕಾಗುಣಿತಕ್ಕೆ ಪ್ರತ್ಯೇಕ ಅಂಕಗಳನ್ನು ನೀಡಲಾಗುತ್ತಿತ್ತು. ಕೈ ಬರಹ ಸ್ಪರ್ಧೆಗಳು ಇರುತ್ತಿದ್ದವು.

• ಉಮೇಶ ವಾಮನ ಪ್ರಭು ಬೆಂಗಳೂರು

ಡಿಜಿಟಲ್ ಯುಗವು ಮಾನವ ಜೀವನದ ಪ್ರತಿಯೊಂದು ಅಂಶವನ್ನೂ ಆಳವಾಗಿ ಪರಿವರ್ತಿಸಿದೆ. ತಂತ್ರ ಜ್ಞಾನದ ಈ ಕ್ರಾಂತಿಯು ಸಂವಹನ, ಶಿಕ್ಷಣ, ಕೆಲಸದ ವಿಧಾನಗಳು ಮತ್ತು ದೈನಂದಿನ ಚಟುವಟಿಕೆಗಳನ್ನು ಸಂಪೂರ್ಣವಾಗಿ ಬದಲಾಯಿಸಿದೆ.

ಈ ಯುಗದಲ್ಲಿ ಕೈ ಬರಹದ ಪ್ರಾಮುಖ್ಯತೆಯೂ ಗಮನಾರ್ಹವಾಗಿ ಕಡಿಮೆಯಾಗಿದೆ. ಕೈ ಬರಹ ಒಂದು ಕಾಲದಲ್ಲಿ ಸಂವಹನದ ಪ್ರಮುಖ ಸಾಧನವಾಗಿತ್ತು; ಇಂದು ಮರೆಯಾಗುವ ಹಂತದಲ್ಲಿದೆ. ಮೊದಲು ಮಕ್ಕಳ ಕೈಬರಹ ಉತ್ತಮಗೊಳಿಸಲು ಸಾಕಷ್ಟು ಪ್ರಾಮುಖ್ಯತೆ ನೀಡಲಾಗುತ್ತಿತ್ತು; ಇಂದು ಆ ಆಯಾಮದ ತರಬೇತಿ ಮರೆಯಾಗಿದೆ.

ಶಾಲೆಗಳು ಮತ್ತು ಕಾಲೇಜ್‌ಗಳು ಇಂದು ಡಿಜಿಟಲ್ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಡುತ್ತಿವೆ. ವಿದ್ಯಾರ್ಥಿಗಳು ಟೈಪಿಂಗ್, ಆನ್‌ಲೈನ್ ಗಮನಿಸುವಿಕೆ ಮತ್ತು ಡಿಜಿಟಲ್ ಸಾಧನಗಳ ಮೂಲಕ ಕಲಿಕೆಗೆ ಒಗ್ಗಿಕೊಂಡಿದ್ದಾರೆ. ಕೈ ಬರಹದ ತರಬೇತಿಗೆ ನೀಡಲಾಗುವ ಸಮಯವು ಕಡಿಮೆಯಾಗಿದೆ. ಕೆಲವು ಶಾಲೆಗಳು ಕೈ ಬರಹವನ್ನು ಕಡ್ಡಾಯವಾಗಿ ಕಲಿಸುವುದನ್ನೇ ಕೈಬಿಟ್ಟಿವೆ.

ಇಂತಿನ ವ್ಯಾವಹಾರಿಕ ಜಗತ್ತಿನಲ್ಲಿ ಇಮೇಲ್‌ಗಳು, ಡಿಜಿಟಲ್ ದಾಖಲೆಗಳು, ಮತ್ತು ಆನ್ಲೈನ್ ಸಂವಹನ ಸಾಧನಗಳು ಕೈಬರಹದ ಅಗತ್ಯವನ್ನು ತಗ್ಗಿಸಿವೆ. ಒಂದು ಕಾಲದಲ್ಲಿ ನೋಟ್ಸ್, ಪತ್ರಗಳು, ಮತ್ತು ದಾಖಲೆಗಳಿಗೆ ಕೈ



ಬರಹವನ್ನು ಅವಲಂಬಿಸಲಾಗಿತ್ತು. ಈಗ ಡಿಜಿಟಲ್ ಸಾಧನಗಳು ಈ ಕಾರ್ಯವನ್ನು ಸುಲಭಗೊಳಿಸಿವೆ. ವೃತ್ತ ಪತ್ರಿಕೆಗಳು ಮತ್ತು ಇತರ ನಿಯತಕಾಲಿಕ ಪತ್ರಿಕೆಗಳು ಕೂಡ ವರದಿಗಳನ್ನು, ಲೇಖನ ಗಳನ್ನು ಡಿಜಿಟಲ್ ರೂಪದಲ್ಲೇ ಬಯಸುತ್ತಿವೆ.

ಕೈ ಬರಹವು ಕೇವಲ ಒಂದು ಕೌಶಲ್ಯವಲ್ಲ. ಬದಲಾಗಿ ಅದು ಒಂದು ಸಂಸ್ಕೃತಿ. ಭಾರತದಲ್ಲಿ ಉತ್ತಮ ಕೈ ಬರಹವು ಶೈಕ್ಷಣಿಕ ಯಶಸ್ಸಿನೊಂದಿಗೆ ಸಂಬಂಧ ಹೊಂದಿತ್ತು. ಕಾಗುಣಿತಕ್ಕೆ ಪ್ರತ್ಯೇಕ ಅಂಕಗಳನ್ನು ನೀಡಲಾಗುತ್ತಿತ್ತು. ಕೈ ಬರಹ ಸ್ಪರ್ಧೆಗಳು ಇರುತ್ತಿದ್ದವು. ಕೈ ಬರಹವು ನಮ್ಮ ಮೆದುಳಿನ ಬೆಳವಣಿಗೆ, ಸ್ಮರಣ ಶಕ್ತಿ, ಮತ್ತು ಸೃಜನಶೀಲತೆಗೆ ಮುಖ್ಯವಾಗಿದೆ. ಕೈ ಬರಹವು ಮಿದುಳಿನ ಸಂಜ್ಞಾತ್ಮಕ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ. ಬರವಣಿಗೆಯ ಸಮಯದಲ್ಲಿ ಕೈ ಮತ್ತು ಮೆದುಳಿನ ಸಂಯೋಜನೆಯು ಸ್ಮರಣೆ, ಏಕಾಗ್ರತೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುತ್ತದೆ.

ನಮ್ಮ ಭಾವನೆಗಳು, ಆಲೋಚನೆಗಳು, ಕನಸುಗಳಿಗೆ ಆಧಾರವಾಗಿದ್ದ ಸರಳ ವಸ್ತುಗಳಾದ ಪೆನ್ನುಗಳು ಮತ್ತು ಕಾಗದ, ಪುಸ್ತಕಗಳು ಈಗ ಕಾಲದ ಪ್ರಭಾವದಿಂದಾಗಿ ಕಣ್ಮರೆಯಾಗುತ್ತಿವೆ. ಈ ನಷ್ಟದಲ್ಲಿ ಒಂದು ವ್ಯಥೆ ಇದೆ. ಅದು ಪೆನ್ನಿನ ಮೂಲಕ ತಮ್ಮ ಆಲೋಚನೆ ಗಳನ್ನು ಮೂಡಿಸಿದವರಿಗೆ ಮಾತ್ರ ಅರ್ಥವಾಗುತ್ತದೆ.

ಕೈ ಬರಹವು ಭಾವನೆಗಳಿಗೆ, ಅಭಿಪ್ರಾಯಗಳಿಗೆ ವೈಯುಕ್ತಿಕ ಸ್ಪರ್ಶವನ್ನು ನೀಡುತ್ತದೆ. ಕೈಯಿಂದ ಬರೆದ ಪತ್ರ ಭಾವನಾತ್ಮಕ ಮೌಲ್ಯವನ್ನು ಹೊಂದಿರುತ್ತದೆ. ಕೈಯಿಂದ ಬರೆಯುವಾಗ ನಮ್ಮ ಆಲೋಚನೆಗಳು ವಿಭಿನ್ನ ಲಯವನ್ನು ಪಡೆದುಕೊಳ್ಳುತ್ತವೆ. ಕೈಯಿಂದ ಬರೆದ ಪ್ರತಿಯೊಂದು ಪದ, ಪ್ರತಿಯೊಂದು ಸಾಲು ನಮ್ಮ ಭಾವನೆಗಳ ಪ್ರಯಾಣ. ಕೈಬರಹವು ವ್ಯಕ್ತಿಯ ವಿಶಿಷ್ಟ ಶೈಲಿಯನ್ನುಪ್ರತಿಬಿಂಬಿಸುತ್ತದೆ. ಒಬ್ಬರ ಕೈಬರಹವು ಅವರ ಆಲೋಚನೆ, ಭಾವನೆ ಮತ್ತು ವ್ಯಕ್ತಿತ್ವದ ಛಾಯೆಯಾಗಿರುತ್ತದೆ. ಆ ಶಾಯಿಯ ಪರಿಮಳದಲ್ಲಿ, ಕಾಗದದ ನಯವಾದ ಸ್ಪರ್ಶದಲ್ಲಿ ಏನೋ ಮಾಂತ್ರಿಕತೆ ಇದೆ. ಆದರೆ ಈಗ ನಾವು ಟೈಪ್ ಮಾಡುವ ಅಥವಾ ಗುಂಡಿ ಒತ್ತುವ ವೇಗದಲ್ಲಿ ಈ ಮ್ಯಾಜಿಕ್‌ನ ರೋಮಾಂಚನ ಹೇಗೋ ಕಳೆದುಕೊಳ್ಳುತ್ತಿದ್ದೇವೆ.

ಇತ್ತೀಚಿನ ದಿನಗಳಲ್ಲಿ ಬರೆಯುವುದೆಂದರೆ ಕೆಲವೇ ಗುಂಡಿಗಳನ್ನು ಒತ್ತುವುದಷ್ಟೇ. ಮೊಬೈಲ್‌ಗಳು, ಟ್ಯಾಬ್ಲೆಟ್ ಗಳು, ಲ್ಯಾಪ್ಟಾಪ್ ಗಳೂ ಎಲ್ಲವೂ ಸುಲಭ, ವೇಗವಾಗಿ ಮಾರ್ಪಟ್ಟಿವೆ. ಆದರೆ ಈ ವೇಗದಲ್ಲಿ ಏನನ್ನೋ ಕಳೆದು ಕೊಳ್ಳುತ್ತಿದ್ದೇವೆ ಎಂದು ಅನಿಸುತ್ತಿದೆ.

ಕೈ ಬರಹ ಸಂಪೂರ್ಣವಾಗಿ ನಶಿಸಿಲ್ಲವಾದರೂ ಕಣ್ಮರೆಯಾಗುವ ಅಂಚಿನಲ್ಲಿದೆ. ನೀವೇ ಯೋಚಿಸಿ ನೋಡಿ. ನೀವು ಕೊನೆಯ ಸಲ ಪೆನ್ನಿನಿಂದ ತುಸು ದೀರ್ಘವಾದ ಏನನ್ನಾದರೂ ಬರೆದದ್ದು ಯಾವಾಗ? ವಾರಗಳು?ತಿಂಗಳುಗಳು? ವರ್ಷಗಳು? ಡಿಜಿಟಲ್ ಯುಗವು ನಮಗೆ ವೇಗ, ಅನುಕೂಲತೆಗಳನ್ನು ನೀಡಿರುವುದೇನೋ ನಿಜ. ಆದರೆ ಅದೇ ಸಮಯದಲ್ಲಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸುವ ಸರಳ ಆದರೆ ಉಯುಕ್ತ ವಾದ ಮಾರ್ಗವನ್ನು ಅದು ಕಸಿದುಕೊಂಡಿದೆ.

ಬಹುಷಃ ನಾವೆಲ್ಲ ಸ್ವಲ್ಪ ಸಮಯ ಮಾಡಿಕೊಂಡು ನಮ್ಮ ಮನಸ್ಸನ್ನು ಮತ್ತೆ ಕೈ ಬರಹಕ್ಕೆ ಹಾಕಬೇಕು. ಆ ಶಾಯಿಯ ಪ್ರತಿಯೊಂದು ಹನಿಯಲ್ಲೂ ನಮ್ಮ ಒಂದು ತುಣುಕು ಜೀವಂತವಾಗಿರುತ್ತದೆ. ಏಕೆಂದರೆ ಕೈ ಬರಹ ಕೇವಲ ಪದಗಳಲ್ಲ. ಅವು ನಮ್ಮ ಅಸ್ತಿತ್ವದ ಒಂದು ರೂಪ. ಇಲ್ಲದೇ ಹೋದರೆ ಮುಂದೊಂದು ದಿನ ಕೈ ಬರಹವು ಕಲೆ, ವೈಯುಕ್ತಿಕ ಅಭಿವ್ಯಕ್ತಿ, ಅಥವಾ ಐತಿಹಾಸಿಕ ಕೌತುಕ ವಾಗಿ ಉಳಿದರೆ ಆಶ್ಚರ್ಯವೇನಿಲ್ಲ. ಮಕ್ಕಳು ಕೈ ಬರಹ ಎಂದರೆ ಏನು ಎಂದು ಪ್ರಶ್ನಿಸಲೂಬಹುದು!

ಭಾವನಾತ್ಮಕ ಸ್ಪರ್ಶ

ನೀವು ಪೆನ್ನಿನಿಂದ ಬರೆಯುವಾಗ ಪ್ರತಿಯೊಂದು ಅಕ್ಷರವೂ ನಿಮ್ಮ ಹೃದಯದ ಭಾವನೆಗಳನ್ನು ರೂಪಿಸುತ್ತದೆ. ನಿಮ್ಮ ವ್ಯಕ್ತಿತ್ವವು ಆ ಅಕ್ಷರಗಳಲ್ಲಿ ಅಡಗಿರುತ್ತದೆ. ಆದರೆ ಟೈಪಿಂಗ್ ನಲ್ಲಿ ಆ ವೈಯುಕ್ತಿಕ ಸ್ಪರ್ಶ ಎಲ್ಲಿದೆ? ಎಲ್ಲವೂ ಒಂದೇ ಫಾಂಟಿನಲ್ಲಿ ಅಡಕ ವಾಗಿರುತ್ತದೆ. ಅಲ್ಲಿ ನಿಮ್ಮ ಕೈ ಬರಹದ ವಿಶಿಷ್ಟ ಶೈಲಿ, ಆ ಲಯ, ಆ ಬಿಸಿ ಕಳೆದುಹೋಗುತ್ತದೆ. ಆ ಭಾವನಾತ್ಮಕತೆ, ಆ ಆತ್ಮ ಹೇಗೋ ಕಳೆದು ಹೋಗುತ್ತದೆ.

ಮರೆಯಾಗುತ್ತಿರುವ ದಾಸಯ್ಯ

• ಎಂ ಪರಮೇಶ್ವರ ಮದ್ದಿಹಳ್ಳಿ

ದಾಸಯ್ಯ ಎಂದರೆ ಹಳ್ಳಿಯ ಜನರಿಗೆ ಸಾಕಷ್ಟು ಗೌರವ. ಇವರು ಸೂತಕ ಪಾತಕಗಳನ್ನು ಕಳೆಯುವ, ಮನೆಮಠಗಳನ್ನು ಶುದ್ಧಿ ಮಾಡುವ ಹಾಗೂ ನಾಮಕರಣದ ವಿಧಿ ನೆರವೇರಿಸುವ ಕೆಲಸಗಳನ್ನು ನಿರ್ವಹಿಸುತ್ತಾರೆ. ಗರುಡಗಂಬ, ಶಂಖ, ಜಾಗಟೆ, ಹಾಗೂ ಆಂಜನೇಯನ ಮೂರ್ತಿಯಿರುವ ಹಿತ್ತಾಳೆಯ ವಿಗ್ರಹಗಳನ್ನು ಇಟ್ಟುಕೊಂಡು ವಾಸಿಸುವ ಇವರು, ಮನೆಮನೆಗೆ ಬರುವುದುಂಟು. ದಾಸಯ್ಯನವರು ನಮ್ಮ ಗ್ರಾಮೀಣ ಜನಪದ ಸಮಾಜದಲ್ಲಿ ಪುರೋಹಿತನ ರೀತಿ ಇರುವವರು. ನೀವ್ಯಾವೂರು ದಾಸಯ್ಯ ಅನ್ನೋರಿಲ್ಲ ಎನ್ನುವ ಆಡು ನುಡಿ ಪ್ರಚಲಿತದಲ್ಲಿದೆ. ಹಣೆಗೆ ನಾಮ, ತಲೆಗೆ ಒಂದು ಮುಂಡಾಸು ಕೈಯಲ್ಲೊಂದು ಜಾಗಟೆ, ಬನವಾಸಿ, ಶಂಕು ಇನ್ನೊಂದು ಕೈಯಲ್ಲಿ ಗರುಡಗಂಬ, ಅಲ್ಲಿ ದೀಪ ಉರಿಯುತ್ತಿರುತ್ತದೆ.

ಗರುಡಗಂಬ ಎಂದರೆ, ಅದು ಸಾಕ್ಷಾತ್ ತಿರುಪತಿ ತಿಮ್ಮಪ್ಪನ ಪ್ರತಿರೂಪ ಎನ್ನುವಂತೆ ಪೂಜೆ ಮಾಡುತ್ತಾರೆ. ದಾಸಯ್ಯ ಬಂದನೆಂದರೆ ನಮ್ಮ ಹಳ್ಳಿಯಲ್ಲಿ ಸಂತಸ. ಶನಿವಾರ, ಸೋಮವಾರ ಬಂತೆಂದರೆ ಕರಿದಾಸರಹಳ್ಳಿ ಖಂಡೇನಹಳ್ಳಿ, ಬೆಜ್ಜಿಹಳ್ಳಿಯಿಂದ ಒಮ್ಮೊಮ್ಮೆ ಬರುತ್ತಿದ್ದರು ಮತ್ತು ದಾಸಯ್ಯ ಆಶೀರ್ವಾದ ಕೊಡುತ್ತಿದ್ದರು. ದಾಸಯ್ಯನ ಆಗಮನ ಎಲ್ಲಾರ್ಗಿಗೂ ಸಂತೋಷ ಕೊಡ್ತಾ ಇತ್ತು. ಜಾಗಟೆ ಬಾರಿಸಿ ಜೋಳಿಗೆ ಬನಾಸಿಯಲ್ಲಿ ಗ್ರಾಮದ ಜನರು ಕೊಟ್ಟ ಕಾಳು ಕಡಿ ಸ್ವೀಕಾರ ಯಾರಾದರೂ ಕೊಟ್ರೆ ತೆಗೆದುಕೊಳ್ಳೋದು ಮತ್ತು ಜನರಿಗೆ ಆಶೀರ್ವದಿಸಿ ರಾಮ ರಾಮ ಗೋವಿಂದ, ತಿರುಪತಿ ವಾಸ ಗೋವಿಂದ, ಎಂದು ಮನೆ ಮನೆಗೂ ಭೇಟಿ ನೀಡಿ ಹೋಗುವುದು ಅವರ ಸಂಪ್ರದಾಯ. ಯಾರು ನೀಡಲಿ, ನೀಡದಿರಲಿ ಗೋವಿಂದನ ಸ್ಮರಣೆ ಮಾಡಿ ಹೋಗುವುದು ಇವರ ಕಾಯಕ. ಇಂದು ಕೆಲವು ಕಡೆ, ದಾಸಯ್ಯನೆಂದರೆ ಅಸಡ್ಡೆ ಮನೆ ಮಾಡಿ ದಾಸಯ್ಯ ವೃತ್ತಿ ಮಾಡಲು ಹಿಂಜರಿಯುವಂತಾಗಿದೆ. ಅಲ್ಲೊಬ್ಬ ಇಲ್ಲೊಬ್ಬ ದಾಸಯ್ಯ ಮಾತ್ರ ಇಂದು ಕಾಣ ಸಿಗುತ್ತಾರೆ.

ಅದರಲ್ಲಿ ಮೊನ್ನೆ ಬೆಜ್ಜಿಹಳ್ಳಿಯ ರುದ್ರಪ್ಪ ಸಿಕ್ಕಿದ್ದರು. ಅವರ ಈ ದಾಸಯ್ಯನಾಗಿ ಹೋಗಿ ಹರಸುವುದು ಇಂದಿಗೂ ಬಿಟ್ಟಿಲ್ಲ. ಅವರು 'ಈ ಪುಣ್ಯ ಕಾರ್ಯ ನನಗೆ ಭಗವಂತನ ಸೇವೆ ಎಂದು ಮಾಡುತ್ತಿರುತ್ತೇನೆ' ಎಂದು ಹೆಮ್ಮೆಯಿಂದ ಹೇಳುತ್ತಾರೆ. ಸದಾ ನಗುಮುಖ, ಸದಾ ಎಲ್ಲರಿಗೂ ಒಳಿತನ್ನೇ ಬಯಸುವ ದಾಸಯ್ಯ ಬಾಲಕರಿಂದ ವೃದ್ಧರವರೆಗೂ ಅಚ್ಚುಮೆಚ್ಚು. ಬೇರೆಯವರು ಚೆನ್ನಾಗಿರಲಿ ಎಂದು ಬಾಯ್ತುಂಬಾ ಹರಸುವ ದಾಸಯ್ಯಗಳು ನಮ್ಮ ಹಳ್ಳಿಗಳ ಸ್ವಾಸ್ಥ್ಯ ಕಾಪಾಡುತ್ತಾರೆ ಎಂದರೆ ತಪ್ಪಿಲ್ಲ.

ಸಮನ್ವಯವೇ ಬದುಕು

ಹಟವಾದಕೆಡೆಯೆಲ್ಲಿ ಮನುಜಪ್ರಪಂಚದಲಿ
ಸಟೆಯೆಷ್ಟೋ ದಿಟವೆಷ್ಟೋ ಬೆರೆತಿರುವುವಿಲ್ಲಿ ॥
ಪಟುವಾಗಿ ನಿಲಲಹುದೆ ಮಣಲೊಳೆಸಗಿದ ಗೋಡೆ
ಕಟುತೆ ಸಲ್ಲದು ಜಗಕೆ - ಮಂಕುತಿಮ್ಮ

ಈ ಮನುಜ ಪ್ರಪಂಚದಲ್ಲಿ ಹಟವಾದಕ್ಕೆ ಕೊನೆಯೆಲ್ಲಾದರೂ ಇದೆಯೇ? ಸತ್ಯ ಹಾಗೂ ಸುಳ್ಳುಗಳು ಈ ಮನುಜ ಪ್ರಪಂಚದಲ್ಲಿ ಸಮಾನವಾಗಿ ಬೆಳೆದಿದ್ದು, ಸತ್ಯ ಹಾಗೂ ಮಿಥ್ಯಗಳೆಂಬ ಸಮ್ಮಿಶ್ರಣದ ಮರಳಿನ ಗೋಡೆಯಡಿಯಲ್ಲಿ ನಾವುಗಳು ಇದ್ದೇವೆ. ಈ ಸತ್ಯ ಹಾಗೂ ಮಿಥ್ಯಗಳ ಮರಳಿನ ಗೋಡೆಯು ಶಾಶ್ವತವಾಗಿ ಈ ಜಗತ್ತಿನಲ್ಲಿ ಉಳಿಯುತ್ತದೆಯೇ? ಅದು ಎಂದಿಗೂ ಸಾಧ್ಯವಿಲ್ಲ. ಹಾಗಾಗಿ ಈ ಜೀವನ ಮಾಡಲು ಕಂಡಿತವಾದಕ್ಕೂ, ಕಠೋರ ನಿಲುವುಗಳ ಅವಶ್ಯಕತೆ ಇರುವುದಿಲ್ಲ ಎಂಬ ಸೂಕ್ತಿಯನ್ನು ಈ ಪದ್ಯದಲ್ಲಿ ಹೇಳಿದ್ದಾರೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಮುಂದಾಗುವ ಭವಿಷ್ಯವು ನಮ್ಮ ನರಮಾನವರ ಕೈಯ್ಯಲ್ಲಿ ಇರುವುದೇ ಇಲ್ಲ. ಇದೆಲ್ಲವೂ ಸಮಯ ಎಂಬ ವಿಧಿಯ ಕೈನಲ್ಲಿ ಅಡಗಿದೆ. ಮುಂದೇನಾಗುವುದೋ, ಮತ್ತೇನಾಗುವುದೋ ಎಂದು ಈ ಮನುಷ್ಯ ಪ್ರಾಣಿಗೆ ಅರಿವಿಗೆ ಬಂದಿದ್ದರೆ ಈ ಮನುಷ್ಯನೇ ದೇವರಾಗಿಯೂ ಬಿಡುತ್ತಿದ್ದನೇನೋ? ಆದರೆ ಈತನು ಬದುಕಿರುವ ತನಕ ಅರಿವು ಇದ್ದೋ, ಇಲ್ಲದೆಯೋ ಈತನಲ್ಲಿ ಅಹಂಕಾರ ಎಂಬುದು ಪುಟಿದೇಳುತ್ತಲೇ ಇರುತ್ತದೆ. ಈತನ ಎದೆಯಲ್ಲಿ ಅಹಂಕಾರ ಬೀಡು ಬಿಟ್ಟಿರುವ ತನಕವೂ ತಾನೇ ಸರಿ, ತಾನು ಮಾಡಿದ್ದೆಲ್ಲವೂ ಸರಿಯೇ ಆಗಿರುತ್ತದೆ ಎಂದುಕೊಂಡು ಬೇರೆಯವರ ಬಗ್ಗೆ, ಬೇರೆಯವರ ಕೆಲಸಕಾರ್ಯದ ಬಗ್ಗೆ ಟೀಕಿಸುತ್ತಾ, ಎಲ್ಲದರಲ್ಲೂ ನಾನೇ ಸರಿಯಿದ್ದೇನೆ ಎಂಬ ಮೊಂಡು ಹಠವಾದಕ್ಕೆ ಈ ಮನುಷ್ಯನು ಬೀಳುತ್ತಾನೆ. ಕೆಲವು ಸಮಯದಲ್ಲಿ ಇವನ ಹಠವಾದವು ಸತ್ಯವೂ ಆಗಿದ್ದು, ಆ ಹಠವಾದವೇ ಸರಿ ಎಂದು ಕಂಡುಬಂದರೆ ಕೆಲವೊಮ್ಮೆ ಈ ಹಠವಾದದ ಅವಶ್ಯಕತೆಯು ಇದೆಯೇ ಇಷ್ಟೆಲ್ಲಾ ಬೇಕಿತ್ತಾ? ಎಂಬ ಪ್ರಶ್ನೆಗಳು ಮನದಲ್ಲಿ ಮೂಡುತ್ತವೆ. ಕೆಲವು ಹಠಗಳು ಕೆಲವು ಸಮಯದಲ್ಲಿ ಸೂಕ್ತ ಎಂದೆನಿಸಿದರೆ ಕೆಲವು

ಸಮಯದಲ್ಲಿ ಅದೇ ಹಠವಾದ ನಮಗೆ ತಿರುಗುಬಾಣವೂ ಆಗಬಹುದು. ಇದಕ್ಕೆಲ್ಲಾ ಕಾರಣವೇನೆಂದರೆ ಜಗತ್ತಿನಲ್ಲಿ ಸತ್ಯ ಹಾಗೂ ಮಿಥ್ಯಗಳೆರಡೂ ಸಮಾನವಾಗಿಯೇ ಇವೆ. ನಮ್ಮಯ ಹಠವಾದ ಸತ್ಯದ ಪಾಲಿಗೆ ಸರಿ ಎಂದೆನಿಸಿದರೆ ಮಿಥ್ಯದ ಪಾಲಿಗೆ ಸರಿ ಎಂದೆನಿಸುವುದಿಲ್ಲ. ಆದುದರಿಂದ ಈ ಜಗವು ಸತ್ಯ ಹಾಗೂ ಮಿಥ್ಯಗಳ ನಡುವಿನಲ್ಲಿ ಇರುವುದರಿಂದ ನಮ್ಮಯ ಜೀವನ ಒಂದು ರೀತಿಯ ಮರಳಿನಲ್ಲಿ ಕಟ್ಟಿದ ಗೋಡೆಯಂತೆಯೇ ಇರುತ್ತದೆ. ಮರಳಿನ ಗೋಡೆಯು ಹೇಗೆ ಶಾಶ್ವತವಲ್ಲವೋ ಹಾಗೆಯೇ ನಮ್ಮ ಹಠವಾದ, ಕಠೋರತ್ವಗಳೂ ಸಹ ಶಾಶ್ವತವಲ್ಲ.

'ಈ ಜಗದಲ್ಲಿ ಯಾವುದೂ ಶಾಶ್ವತವಲ್ಲ, ಇಲ್ಲಿ ನಾವೇ ಶಾಶ್ವತವಾಗಿ ಇರುವುದಿಲ್ಲ ಎಂದ ಮೇಲೆ ನಮ್ಮಲ್ಲಿರುವ ಹಠವಾದಕ್ಕಾದರೂ ಶಾಶ್ವತ್ವವಿದೆಯೇ ?' ಎಂದು ಪ್ರಶ್ನೆ ಮಾಡಿಕೊಂಡರೆ ನಮಗೆ ವಾಸ್ತವದ ಅರಿವು ಉಂಟಾಗುತ್ತದೆ. ಆದುದರಿಂದ ಆಯಾ ಸಮಯ, ಆಯಾ ಘಳಿಗೆಗೆ ತಕ್ಕಂತೆ, ಬಂದುದನ್ನು ಸ್ವೀಕರಿಸುತ್ತಾ, ಜೀವನದಲ್ಲಿ ಸಮನ್ವಯತೆಯನ್ನು ಜಾರಿ ಮಾಡಿಕೊಂಡು, ಬದುಕುವುದೂ ಸಹ ಒಂದು ಕಲೆಯೇ ಆಗಿದೆ ಎಂದು ಈ ಪದ್ಯದಲ್ಲಿ ಡಿವಿಜಿಯವರು ಹೇಳಿದ್ದಾರೆ.

ಈ ಕಾಲಘಟ್ಟದಲ್ಲೂ ಮನಷ್ಯನು ತನ್ನದೇ ಆದಂತಹ ಸಿದ್ಧಾಂತಗಳಿಗೆ ಕಟ್ಟು ಬಿದ್ದು, ಒಳ್ಳೆಯದನ್ನೂ ಸಹ ತನ್ನ ಹಠದ ಮನಸ್ಥಿತಿಯಿಂದ ತಿರಸ್ಕರಿಸುವ ಸಂಪ್ರದಾಯವನ್ನು ನೋಡುತ್ತಲಿದ್ದೇವೆ. ಆದರೆ ನಾವುಗಳು ಸತ್ಯವಾದುದನ್ನು, ಸರಿಯಾದುದನ್ನು ಸ್ವೀಕರಿಸುವ, ಸ್ವಾಗತಿಸುವ, ಬೆಳೆಸಿಕೊಳ್ಳುವ ಮನೋಭಾವವನ್ನು ರೂಢಿಸಿಕೊಂಡು ನಮ್ಮ ಮೊಂಡುತನ, ಹಠವಾದ, ಕಠೋರತ್ವಗಳನ್ನು ತ್ಯಜಿಸಿ, ಈ ಸಮಾಜಕ್ಕೆ ಉತ್ತಮ ಕೊಡುಗೆಗಳನ್ನು ಕೊಡುವುದು ಸೂಕ್ತ ಎಂದೆನಿಸುತ್ತದೆ. ಈ ಜಗತ್ತಿನಲ್ಲಿ ಪ್ರೀತಿ, ಪ್ರೇಮ, ವಿಶ್ವಾಸಗಳಿಗೆ ಎಂದಿಗೂ ಬೆಲೆ ಇರುತ್ತದೆ. ಆದುದರಿಂದ ನಮ್ಮಲ್ಲಿಯ ಅಹಂಕಾರವನ್ನು ತ್ಯಜಿಸಿ, ಸಮಯ ಸಂಧರ್ಭಗಳು ಬಂದ ಹಾಗೆ ಜೀವನಮಾಡುವುದು ಒಳಿತು ಎಂದು ಈ ಪದ್ಯದ ಸಾರಾಂಶವಾಗಿದೆ.

ಕಲೆ: ರೋಹಿತ್ ಎನ್.
5ನೆಯ ತರಗತಿ
ಮೈಸೂರು

ಹನಿ ಮಳೆ

ಮಣ್ಣಿನಿಂದ ಜನನ

ಇಟ್ಟಿದ್ದಾನೆ
ಒಂದು ಕೋರಿಕೆ
ಪ್ರೀತಿಯ ಗಜಾನನ
ಆಗಬೇಕಂತೆ ಮಣ್ಣಿನಿಂದಲೇ
ಅವನ ಜನನ!

• ಮಹಾಂತೇಶ ಮಾಗನೂರ

ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ

1	2		■	3	■	4		5
■		■	6				■	
7				■	■	8	9	
	■	■	10	11		■		■
12	13		■		■	14		15
■		■	16		17	■	■	
18		19	■	■	20		21	
	■	22		23		■		■
24			■		■	25		

ಎಡದಿಂದ ಬಲಕ್ಕೆ

1. ಪ್ರಶ್ನೆಗೆ ತಕ್ಕುದಾದ ಉತ್ತರ (3)
4. ಲೇಖನ (3)
6. ಬಟ್ಟೆಯನ್ನು ಒಗೆದು ಶುಚಿಮಾಡಿ ಕೊಡುವವನು (4)
7. ಸಂದರ್ಭ (4)
8. ಮುಸುಕು (3)
10. ಗಲ್ಲ, ಕೆನ್ನೆ (3)
12. ಹಣವಿದ್ದರೂ ನಗುವಿಲ್ಲ! (3)
14. ಡೋಲು ಅಥವಾ ತಮಟೆ (3)
16. ಮೇರೆ, ಗಡು (3)
18. ದೋಸೆ ಮಾಡುವ ಹೆಂಚು (3)
20. ಅಳೆಯುವ ಸಾಧನ (4)
22. ಪಲ್ಟಿ ಮಾಡು (4)
24. ವಾಯಿದೆ (3)
25. ಶಿಶು (3)

ಮೇಲಿಂದ ಕೆಳಕ್ಕೆ

2. ನಿಜ ಸಂಗತಿ (3)
3. ದೇಶದ ಮೇರೆ (2)
4. ಪರಿವಾರ (3)
5. ಆಶೀರ್ವದಿಸು (3)
6. ಸೊಳ್ಳೆ (3)
7. ಮಧ್ಯಮ ಪಾಂಡವ (3)
9. ವನದ ನಡುವೆ ಸಿಲುಕಿದ ಮಾತು (3)
11. ಅಸ್ತವ್ಯಸ್ತವಾಗಿ ಬಂದಿರುವ ಮುಖ (3)
13. ಗಂಡುಕೋತಿ ಅಥವಾ ಬೆಕ್ಕು (3)
15. ನಮ್ಮ ಜೇನಿನಿಂತಹ ಭಾಷೆ (3)
17. ಮೂರಕ್ಷರದ ಸೊಕ್ಕು (3)
18. ಯುದ್ಧಕ್ಕೆ ಮತ್ತೊಂದು ಹೆಸರು (3)
19. ಹರಾಜು (3)
21. ಶಿಕ್ಷಿಸು (3)
23. ಇನ್ನೊಂದು ಮಾಲೆ (2)

ಕೃಷ್ಣನನ್ನೂ ಕಾಡಿದ ಚೌತಿ ಚಂದ್ರ ದರ್ಶನದ ಶಾಪ

ಚೌತಿಯ ಚಂದ್ರ ದರ್ಶನ ದೇವಾನು ದೇವತೆಗಳನ್ನೂ ಬಿಟ್ಟಿಲ್ಲ ಎನ್ನುತ್ತದೆ ಕತೆ. ಅಕಸ್ಮಾತ್ ಚೌತಿಯ ಚಂದ್ರ ದರ್ಶನವಾಗಿದ್ದರೂ, ಈ ಕತೆ ಕೇಳಿದರೆ ಅಥವಾ ಓದಿದರೆ, ಜನರಿಗೆ ದೋಷಕ್ಕೆ ಪರಿಹಾರ ಸಿಗುತ್ತದೆ ಎನ್ನುತ್ತದೆ ಪುರಾಣ. ಆ ದೋಷ ಪರಿಹಾರಾರ್ಥವಾಗಿ "ಸಿಂಹಃ ಪ್ರಸೇನ್ನಂ ಅವಧೀ, ಸಿಂಹೌ ಜಾಂಬವತಾ ಹತಃ, ಸುಕುಮಾರಕ ಮಾರೋದ, ತವಶ್ಯೇಷ ಶಮಂತಕಃ" ಎಂಬ ಶ್ಲೋಕವನ್ನು ಪಠಿಸಬೇಕು ಎನ್ನುತ್ತಾರೆ ಹಿರಿಯರು.

ಒಮ್ಮೆ ದ್ವಾಪರಯುಗದಲ್ಲಿ ಶ್ರೀಕೃಷ್ಣ ಚೌತಿಯ ದಿನ ಅರಮನೆಯ ಉಪ್ಪರಿಗೆಯಲ್ಲಿ ಕುಳಿತಿದ್ದ. ರುಕ್ಮಿಣಿ ಆತನಿಗೆ ಹಾಲು ತಂದುಕೊಟ್ಟಳು. ಹಾಲು ಕುಡಿಯಲು ಲೋಟ ಎತ್ತಿದಾಗ ಹಾಲಿನಲ್ಲಿ ಕೃಷ್ಣನಿಗೆ ಚೌತಿಯ ಚಂದ್ರನ ದರ್ಶನವಾಯಿತು. ಚೌತಿ ಚಂದ್ರ ದರ್ಶನದ ಶಾಪ ಕೃಷ್ಣನನ್ನೂ ಬಿಡಲಿಲ್ಲ.

ಕೃಷ್ಣನ ಬಂಧುಗಳಲ್ಲಿ ಒಬ್ಬನಾದ ಸತ್ರಾರ್ಜಿತನಲ್ಲಿ ಸೂರ್ಯ ದಯಪಾಲಿಸಿದ ಶಮಂತಕ ಎಂಬ ಒಂದು ಅಮೂಲ್ಯ ರತ್ನ ಇತ್ತು. ಅದು ದಿನವೂ 8 ಸೇರು ಬಂಗಾರವನ್ನು ನೀಡುತ್ತಿತ್ತು. ಅದನ್ನು ಧರಿಸಿ ಹೊರಟರೆ ಅದರ ಪ್ರಕಾಶದಿಂದ ಸೂರ್ಯನೇ ಧರೆಗಿಳಿದಂತೆ ಭಾಸವಾಗುತ್ತಿತ್ತು. ಕೃಷ್ಣ ಒಮ್ಮೆ ಇಂತಹ ಮಣಿ ಚಕ್ರವರ್ತಿಯ ಬಳಿ ಇರುವುದು ಕ್ಷೇಮ ಬಲರಾಮನಿಗೆ ಕೊಟ್ಟು ಬಿಡು ಎಂದು ಕೇಳಿದ. ಆದರೆ ಸತ್ರಾರ್ಜಿತ ಒಪ್ಪಲಿಲ್ಲ. ಆ ಮಣಿಯನ್ನು ಬೇಟೆಗೆ ಹಾಕಿಕೊಂಡು ಹೋಗುವಂತಿರಲಿಲ್ಲ. ಆದರೂ ಸತ್ರಾರ್ಜಿತ ಸೋದರ ಪ್ರಸೇನನು ಶಮಂತಕ ಮಣಿ ಧರಿಸಿ ಶ್ರೀಕೃಷ್ಣನ ಜತೆಗೂಡಿ ಬೇಟೆಗೆ ಹೋದನಂತೆ. ಬೇಟೆಯ ಸಂದರ್ಭದಲ್ಲಿ ಎಲ್ಲರೂ ದಾರಿ ತಪ್ಪಿದರು. ಪ್ರಸೇನ ಎಲ್ಲೋ ಕಾಡಿನಲ್ಲಿ ಕಾಣೆಯಾದ. ಪ್ರಸೇನನನ್ನು ಸಿಂಹವೊಂದು ಕೊಂದು ಶಮಂತಕ ಮಣಿಯನ್ನು ಅಪಹರಿಸಿತು. ಆ ಸಿಂಹವನ್ನು ಜಾಂಬವಂತನೆಂಬ ಕರಡಿಯು ಕೊಂದು ಮಣಿಯನ್ನು ತನ್ನ ಸ್ವಾಧೀನ ಮಾಡಿಕೊಂಡು ಅದನ್ನು ಮಗುವಿನ ತೊಟ್ಟಿಲಿಗೆ ಆಡಲು ಕಟ್ಟಿತು.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಇತ್ತ ಕಾಡಿನಲ್ಲಿ ಪ್ರಸೇನನಿಗಾಗಿ ಹುಡುಕಿದ ಯಾದವರು, ಆತ ಸಿಗದಿದ್ದಾಗ ಕೃಷ್ಣ ಸಮೇತನಾಗಿ ಅರಮನೆಗೆ ಮರಳಿದರು. ಆದರೆ, ಸತ್ರಾರ್ಜಿತ ಹಾಗೂ ಪುರಜನರು ಮಣಿಗಾಗಿ ಕೃಷ್ಣನೇ ತನ್ನ ಸೋದರ ಪ್ರಸೇನನನ್ನು ಕೊಂದಿರಬೇಕು ಎಂದು ಅನುಮಾನಿಸಿದರು. ಚೌತಿಯ ಚಂದ್ರನ ದರ್ಶನದಿಂದ ತನಗೆ ಈ ಅಪವಾದ ಬಂದಿದೆ ಎಂಬುದನ್ನು ಗ್ರಹಿಸಿದ ಕೃಷ್ಣ, ಗಣಪನನ್ನು ಪೂಜಿಸಿ, ಪ್ರಸಾದ ಸ್ವೀಕರಿಸಿ, ಮಣಿಯನ್ನು ಹುಡುಕುತ್ತಾ ಕಾಡಿಗೆ ಹೊರಟ. ಆಗ ಅವನಿಗೆ ಸಿಂಹ ಪ್ರಸೇನನನ್ನು ಕೊಂದದ್ದು, ಸಿಂಹವನ್ನು ಜಾಂಬವಂತ ಕೊಂದಿದ್ದು ಹೆಜ್ಜೆ ಗುರುತುಗಳಿಂದ ತಿಳಿಯಿತು. ಮಣಿ ಹುಡುಕುತ್ತಾ ಅವನು ತನ್ನ ಸಹಚರರೊಂದಿಗೆ ಕರಡಿಯ ಗುಹೆಗೂ ಬಂದ. ಎಲ್ಲರನ್ನೂ ಹೊರಗೆ ನಿಲ್ಲಿಸಿ ತಾನೊಬ್ಬನೇ ಕರಡಿಯ ಗುಹೆ ಹೊಕ್ಕ. ಕ್ಷತ್ರಿಯನಾದ ತಾನು ಹೋರಾಡಿಯೇ ಈ ಮಣಿಯನ್ನು ಪಡೆಯುತ್ತೇನೆ ಎಂದು ಹೇಳಿ ಪಂಚಜನ್ಯವನ್ನು ಊದಿದ. ಹೊರಗೆ ಹೋಗಿದ್ದ ಜಾಂಬವಂತ ಗುಹೆಗೆ ಮರಳಿ, ದ್ವಾರಕ್ಕೆ ದಪ್ಪ ಕಲ್ಲ ಬಂಡೆಯನ್ನು ಅಡ್ಡ ಇಟ್ಟು, ಕೃಷ್ಣನೊಂದಿಗೆ ಕಾಳಗಕ್ಕೆ ನಿಂತ.

ಹೊರಗೆ ನಿಂತಿದ್ದವರು 7 ದಿನ ಕಾದರೂ ಕೃಷ್ಣ ಬಾರದಿದ್ದಾಗ ಕೃಷ್ಣ ಸತ್ತಿರಬೇಕು ಎಂದು ತಿಳಿದು ಹಿಂತಿರುಗಿದರು. ಸತತವಾಗಿ 15 ದಿನ ಯುದ್ಧ ನಡೆಯಿತು. ತ್ರೇತಾಯುಗದ ರಾಮನ ಭಂಟನಾಗಿದ್ದ ಜಾಂಬವಂತನೂ ಸೋಲಲಿಲ್ಲ. ದ್ವಾಪರದಲ್ಲಿ ಕೃಷ್ಣಾವತಾರದಲ್ಲಿದ್ದ ನಾರಾಯಣನೂ ಸೋಲಲಿಲ್ಲ. ಕಡೆಗೆ ಕೃಷ್ಣ ಪರಮಾತ್ಮ ಶ್ರೀರಾಮನಾಗಿ ಜಂಬವಂತನಿಗೆ ದರ್ಶನ ನೀಡಿದ. ತನ್ನ ತಪ್ಪನ್ನು ಅರಿತ ಜಾಂಬವಂತ ತನ್ನ ಮಗಳು ಹಾಗೂ ಕನ್ಯಾಮಣಿಯಾದ ಜಾಂಬವತಿಯನ್ನು ಕೃಷ್ಣನಿಗೆ ಕೊಟ್ಟು ಮದುವೆ ಮಾಡಿ, ಶಮಂತಕ ಮಣಿ ಕೊಟ್ಟು, ಆನಂದದಿಂದ ಕಳುಹಿಸಿಕೊಟ್ಟ. ಕೃಷ್ಣ ಶಮಂತಕ ಮಣಿಯೊಂದಿಗೆ ಮರಳಿದಾಗ ಜನರು ತಮ್ಮ ತಪ್ಪನ್ನು ಮನ್ನಿಸುವಂತೆ ಕೃಷ್ಣನನ್ನು ಕೋರಿದರು.

ನಮ್ಮ ಸುತ್ತಲೂ ಯಾರಿಗಾದರೂ ನೋವಾದಾಗ, ಅವಮಾನವಾದಾಗ ಅದನ್ನು ನಾವು ಮಾಡದಿದ್ದರೂ ಮಾಡಿದವರಿಗೆ ಪ್ರತ್ಯಕ್ಷ, ಪರೋಕ್ಷವಾಗಿ ಸಹಕರಿಸಿದರೆ ಆ ಪಾಪ ನಮ್ಮನ್ನು ಕಾಡದೇ ಬಿಡದು.

ತರಕಾರಿ ಮೂಲಕ ಆರೋಗ್ಯ

ಪೌಷ್ಟಿಕಾಂಶಗಳನ್ನು ನೀಡುವ ನಿಟ್ಟಿನಲ್ಲಿ ಅತ್ಯುತ್ತಮ ತರಕಾರಿ ಯಾವುದು ಎಂಬ ಪ್ರಶ್ನೆಗೆ ಉತ್ತರ ಸುಲಭವಲ್ಲ; ಆದರೆ, ಅಂತಹ ಹಲವು ತರಕಾರಿ ಮತ್ತು ಸೊಪ್ಪುಗಳು ಇರುವುದಂತೂ ಸತ್ಯ.

• ಅಜಯ್

- ಹೆಚ್ಚಿನ ಕಬ್ಬಿಣ ಮತ್ತು ಕ್ಯಾಲ್ಸಿಯಂ ಅಂಶ ಹೊಂದಿರುವ ಬಸಳೆಯು ಅಂತಹ ಅತ್ಯುತ್ತಮ ತರಕಾರಿಗಳಲ್ಲಿ ಒಂದು. ಸಸ್ಯಾಹಾರಿಗಳಿಗಂತೂ ಈ ಸೊಪ್ಪು ಖನಿಜಗಳ ಆಗರವೇ ಸರಿ. ಕಬ್ಬಿಣದ ಅಂಶದ ಜತೆ ವಿಟಮಿನ್ ಕೆ, ವಿಟಮಿನ ಎ, ಸಿ, ಮ್ಯಾಗನೇಶಿಯಂ, ಕ್ಯಾಲ್ಸಿಯಂ ಮತ್ತು ಹಲವು ಆ್ಯಂಟಿ ಆಕ್ಸಿಡೆಂಟ್‌ಗಳನ್ನು ಇದು ಹೊಂದಿದೆ. ಬಸಳೆಯನ್ನು ಸಾಂಬಾರು ಮತ್ತು ಪಲ್ಯ ಮಾಡಿ ಸೇವಿಸಬಹುದು.

- ಹೆಚ್ಚಿನ ಖನಿಜಾಂಶ ಹೊಂದಿರುವ ಇನ್ನೊಂದು ತರಕಾರಿ ಎಂದರೆ ಎಲೆಕೋಸು. ವಿಟಮಿನ್ ಎ, ಸಿ ಮತ್ತು ಕೆ ಹೊಂದಿರುವ ಇದು, ಕೊಲೆಸ್ಟ್ರಾಲ್ ನಿಯಂತ್ರಣಕ್ಕೂ ಸಹಕಾರಿ. ಇದನ್ನು ಸಾಂಬಾರು ಮತ್ತು ಪಲ್ಯದ ರೂಪದಲ್ಲಿ ಸೇವಿಸಬಹುದು.
- ಬ್ರಾಕೋಲಿಯು ಸಹ ಎಲೆಕೋಸಿನ ಸಂಬಂಧಿ ತರಕಾರಿ. ಇದರಲ್ಲಿ ಅಧಿಕ ವಿಟಮಿನ್ ಮತ್ತು ಖನಿಜಾಂಶವಿದ್ದು, ದೇಹದಲ್ಲಿ ಪ್ರತಿರೋಧ ಶಕ್ತಿಯನ್ನು ಹೆಚ್ಚಿಸಲು ಇದು ಸಹಾಯ ಮಾಡುತ್ತದೆ.

- ಬೀಟ್‌ರೂಟ್ ಮತ್ತು ಕ್ಯಾರೆಟ್‌ಗಳನ್ನು ಸೇವಿಸುವದರಿಂದ ಹಲವು ಲಾಭಗಳಿವೆ. ಅಧಿಕ ನಾರಿನ ಅಂಶದ ಜತೆಯಲ್ಲೇ ಪೊಟಾಶಿಯಂ, ಕ್ಯಾಲ್ಸಿಯಂ, ಕಬ್ಬಿಣದ ಅಂಶ, ಬೆಟಾ ಕ್ಯಾರೊಟಿನ್, ಹಲವು ವಿಟಮಿನ್‌ಗಳನ್ನು ಇವು ಹೊಂದಿವೆ. ಸಾಂಬಾರು, ಪಲ್ಯ ಮತ್ತು ಸಲಾಡ್ ರೂಪದಲ್ಲಿ ಇದನ್ನು ಸೇವಿಸಬಹುದು. ಇದರ ರಸವನ್ನು ಸಹ ಸೇವಿಸಬಹುದು.
- ಮೊಳಕೆ ಬರಿಸಿದ ಕಾಳುಗಳಲ್ಲಿ ಹಲವು ವಿಟಮಿನ್‌ಗಳು ಅಡಕಗೊಂಡಿರುತ್ತವೆ. ಮೊಳಕೆ ಕಾಳುಗಳನ್ನು ಸಲಾಡ್ ರೂಪದಲ್ಲಿ ಮತ್ತು ಬೇಯಿಸಿಯೂ ತಿನ್ನಬಹುದು.
- ಸಸ್ಯಮೂಲದಿಂದ ಹೆಚ್ಚು ಔಷಧೀಯ ಅಂಶಗಳನ್ನು ಪಡೆಯಲು ಬೆಳ್ಳುಳ್ಳಿ ಮತ್ತು ಈರುಳ್ಳಿಗಳನ್ನು ಸೇವಿಸಬಹುದು. ಬೆಳ್ಳುಳ್ಳಿಯು ಹಲವು ಔಷಧೀಯ ಅಂಶಗಳನ್ನು ಹೊಂದಿದೆ. ಬೆಳ್ಳುಳ್ಳಿಯಲ್ಲಿ ಬ್ಯಾಕ್ಟೀರಿಯಾ ನಿರೋಧಕ ಮತ್ತು ವೈರಸ್ ನಿರೋಧಕ ಗುಣಗಳಿವೆ. ಹೊಟ್ಟೆಯಲ್ಲಿನ ವಾಯುಪ್ರಕೋಪ ತಡೆಯಲು ಬೆಳ್ಳುಳ್ಳಿಯ ಉಪಯೋಗವಿದೆ. ಈರುಳ್ಳಿಯಲ್ಲಿ ವಿಟಮಿನ್ ಸಿ, ಬಿ 6 ಜತೆಗೆ, ಗಂಧಕದ ಕೆಲವು ರಸಾಯನಿಕ ರೂಪಗಳಿದ್ದು ಆರೋಗ್ಯ ಕಾಪಾಡುವಲ್ಲಿ ಸಹಕಾರಿ.

ಸಮಾಚಾರ ಸಣ್ಣದಲ್ಲ

ಮೂರನೇ ಸುತ್ತಿಗೆ ನೊವಾಕ್ ಜೊಕೊವಿಕ್

ನ್ಯೂಯಾರ್ಕ್: ಯುಎಸ್ ಓಪನ್ ಪುರುಷರ ಸಿಂಗಲ್ಸ್‌ನ 2ನೇ ಸುತ್ತಿನ ಆರಂಭಿಕ ಹಿನ್ನಡೆಯನ್ನು ಮೆಟ್ಟಿನಿಂತು ನೊವಾಕ್ ಜೊಕೊವಿಕ್ ಮೂರನೇ ಸುತ್ತಿಗೇರಿದರು. ನಾಲ್ಕು ಸೆಟ್‌ಗಳ ಕಠಿಣ ಹೋರಾಟದಲ್ಲಿ 6-7(7-5), 6-3,6-3, 6-1

ಅಂತರದಿಂದ ಜಚಾರಿ ಸ್ವಜ್ಡಾ ವಿರುದ್ಧ ಗೆಲುವು ಸಾಧಿಸಿದರು. ಈ ಗೆಲುವಿನೊಂದಿಗೆ, ಜೊಕೊವಿಕ್ ಗ್ರ್ಯಾಂಡ್ ಸ್ಲ್ಯಾಮ್ ಸಿಂಗಲ್ಸ್ ಸ್ಪರ್ಧೆಗಳಲ್ಲಿ ಹಾರ್ಡ್ ಕೋರ್ಟ್‌ನಲ್ಲಿ ಅತಿ ಹೆಚ್ಚು ಗೆಲುವು ಸಾಧಿಸಿದ ರೋಜರ್ ಫೆಡರರ್ ಅವರ ದಾಖಲೆಯನ್ನು ಸರಿಗಟ್ಟಿದರು. ಪಂದ್ಯದ ಬಳಿಕ ಮಾತನಾಡಿದ ಜೊಕೋ, 'ಪ್ರಾಮಾಣಿಕವಾಗಿ ಹೇಳಬೇಕೆಂದರೆ ಈ ಪ್ರದರ್ಶನದ ಬಗ್ಗೆ ನನಗೆ ಅಷ್ಟು ಸಂತಸವಿಲ್ಲ, ಆದರೆ ನಿಜವಾಗಿಯೂ ಉತ್ತಮ ಗುಣಮಟ್ಟದ ಟೆನಿಸ್ ಆಡಿದ್ದಕ್ಕಾಗಿ ಸ್ವಜ್ಡಾಗೆ ಧನ್ಯವಾದಗಳು' ಎಂದು ಹೇಳಿದ್ದಾರೆ. 'ಎರಡನೇ ಸೆಟ್‌ನ ಅಂತ್ಯದ ವೇಳೆಗೆ ಅವರು(ಸ್ವಜ್ಡಾ) ಗಾಯದಿಂದ ಬಳಲಿದ್ದು ದುರದೃಷ್ಟಕರ, ಆದರೆ ಅವರು ಕೋರ್ಟ್‌ನಲ್ಲಿ ಉಳಿದಿದ್ದಕ್ಕಾಗಿ ಅವರಿಗೆ ಅಭಿನಂದನೆಗಳು. ನಿಜವಾಗಿಯೂ ಚೆನ್ನಾಗಿ ಆಡುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ, ಆದ್ದರಿಂದ ನಾನು ಅವರಿಗೆ ಶುಭ ಹಾರೈಸುತ್ತೇನೆ' ಎಂದರು.

ಅಭಿಮಾನಿಗಳಿಗೆ ಆರ್‌ಸಿಬಿ ಪ್ರಕಟಣೆ

ಬೆಂಗಳೂರು: ಈ ಸಲದ ಐಪಿಎಲ್‌ನಲ್ಲಿ ಆರ್‌ಸಿಬಿ ತಂಡ ಮೊದಲ ಬಾರಿಗೆ ಕಪ್ ಗೆದ್ದು ಸಂಭ್ರಮಾಚರಣೆ ನಡೆಸಿದ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಕಾಲ್ತುಳಿತ ಸಂಭವಿಸಿ 11 ಮಂದಿ ಮೃತಪಟ್ಟ ಘಟನೆಯ ಬಳಿಕ ಅದು ಸಂತಾಪ ಪೋಸ್ಟ್ ಹಂಚಿಕೊಂಡಿತ್ತು. ಈಗ ಮೂರು ತಿಂಗಳ (84 ದಿನ) ಬಳಿಕ ಅಧಿಕೃತ ಸಾಮಾಜಿಕ ಮಾಧ್ಯಮದಲ್ಲಿ ಅದು ಇನ್ನೊಂದು ಪೋಸ್ಟ್ ಹಂಚಿಕೊಂಡಿದೆ. 'ನಮ್ಮದು ಗೈರಲ್ಲ, ಆಳವಾದ ದುಃಖದ ಮೌನ. ಶ್ರದ್ಧೆಯಿಂದ ತುಂಬಿದ ಶಾಂತ ಶ್ರದ್ಧಾಂಜಲಿ. ಈ ಮೌನದೊಳಗೆ ನೋವನ್ನು ಅನುಭವಿಸುತ್ತಾ ಅನೇಕ ವಿಷಯಗಳನ್ನು ಕಲಿತೆವು, ನೋವನ್ನೇ ಶ್ರದ್ಧೆಯಾಗಿ, ನಂಬಿಕೆಯಾಗಿ ರೂಪಿಸಬೇಕೆಂದು ತೀರ್ಮಾನಿಸಿದ್ದೆವು. ಅದರ ಫಲವೇ ಆರ್‌ಸಿಬಿ ಕೇರ್ಸ್' ಎಂದಿದೆ. 'ನಮ್ಮ ಅಭಿಮಾನಿಗಳು ಮತ್ತು ಸಮುದಾಯಕ್ಕಾಗಿ ನಿಷ್ಠೆಯಿಂದ ರೂಪಿಸಿದ ಒಂದು ಯೋಜನೆ ಅದಾಗಿದ್ದು, ನಿಮ್ಮೊಂದಿಗೆ ನಿಲ್ಲುವ ಭರವಸೆಯನ್ನು ನೀಡುತ್ತಾ, ಕರ್ನಾಟಕದ ಹೆಮ್ಮೆಯಾಗಿ ಮುಂದೆ ಸಾಗುತ್ತೇವೆ. ಅದು ನಮ್ಮ ಕಾಳಜಿ, ನಮ್ಮ ಪ್ರತಿಜ್ಞೆ. ಆರ್‌ಸಿಬಿ ಕೇರ್ಸ್: ನಾವು ಸದಾ ನಿಮ್ಮೊಂದಿಗಿದ್ದೇವೆ' ಎಂದು ಬರೆದುಕೊಂಡಿದೆ. ಹೆಚ್ಚಿನ ಮಾಹಿತಿಯನ್ನು ಶೀಘ್ರದಲ್ಲೇ ಹಂಚಿಕೊಳ್ಳುತ್ತೇವೆ ಎಂದೂ ಹೇಳಿದೆ.

ಕೆಎಸ್‌ಸಿಎ ಟಿ20 ಕ್ರಿಕೆಟ್ ಫೈನಲ್ ಪಂದ್ಯ | ಹುಬ್ಬಳ್ಳಿ ಟೈಗರ್ಸ್‌ಗೆ ಸೋಲು

ಮಂಗಳೂರಿಗೆ ಮಹಾರಾಜ ಟ್ರೋಫಿ

ಸಚಿನ್ ಶಿಂಧೆ: ಮಂಗ್ಳೂರು ಪರ ಉತ್ತಮ ಬೌಲಿಂಗ್.

ಮೈಸೂರು: ಇಲ್ಲಿ ಗುರುವಾರ ನಡೆದ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡವು ಹುಬ್ಬಳ್ಳಿ ಟೈಗರ್ಸ್ ವಿರುದ್ಧ ಜಯ ಗಳಿಸಿ, ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿತು.

ಮೊದಲು ಬ್ಯಾಟ್ ಮಾಡಿದ ಹುಬ್ಬಳ್ಳಿ ಟೈಗರ್ಸ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 154 ರನ್ ಗಳಿಸಿತು. ಗುರಿಯನ್ನು ಬೆಂಬತ್ತಿದ ಮಂಗಳೂರು ಡ್ರ್ಯಾಗನ್ಸ್ ತಂಡ ಬ್ಯಾಟಿಂಗ್ ಮಾಡುತ್ತಿದ್ದ ವೇಳೆ ಮಳೆ ಸುರಿಯಲಾರಂಭಿಸಿತು. ಹಾಗಾಗಿ 10.3 ಓವರ್‌ಗಳಿಗೆ ಮಂಗಳೂರು ತಂಡ 72 ರನ್ ಗಳಿಸಬೇಕಿತ್ತು. ಆದರೆ ಆಗಲೇ ತಂಡವು ಕೇವಲ 2 ವಿಕೆಟ್ ನಷ್ಟಕ್ಕೆ 85 ರನ್ ಗಳಿಸಿದ್ದ ಕಾರಣಕ್ಕಾಗಿ ವಿ.ಜೆ.ಡಿ (ವಿ.ಜಯದೇವನ್) ನಿಯಮ ಪ್ರಕಾರ ಮಂಗಳೂರು ತಂಡವನ್ನು ವಿಜೇತ ತಂಡವೆಂದು ಘೋಷಿಸಲಾಯಿತು.

ಮಂಗಳೂರು ತಂಡದ ಪರ ಶರತ್.ಬಿ.ಆರ್ 35 ಬಾಲ್‌ಗಳಲ್ಲಿ 49 ರನ್ ಗಳಿಸುವ ಮೂಲಕ ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದರು. ಲೋಚನ್ ಗೌಡ 18 ರನ್ ಗಳಿಸಿದರೆ, ಪಲ್ಲವ್ ಕುಮಾರ್ 7 ರನ್ ಹಾಗೂ ಅನೀಶ್ 5 ರನ್ ಗಳಿಸಿ ಅಜೇಯರಾಗಿ ಉಳಿದರು.

ಟಾಸ್ ಗೆದ್ದ ಹುಬ್ಬಳ್ಳಿ ಟೈಗರ್ಸ್ ತಂಡವು ಮೊದಲು ಬ್ಯಾಟಿಂಗ್ ಆಯ್ದುಕೊಂಡಿತು. ಆರಂಭಿಕ ಆಟಗಾರರು ತಮ್ಮ ತಂಡದ ಪರವಾಗಿ ಬಿರುಸಿನ ಬ್ಯಾಟಿಂಗ್ ಮತ್ತು ತಕ್ಕ ಮಟ್ಟಿಗೆ ಸ್ಥಿರತೆಯ ಪ್ರದರ್ಶನ ತೋರಿದರು. ಆರಂಭಿಕರಾದ ದೇವದತ್ ಪಡಿಕ್ಕಲ್ ಮತ್ತು ಮೊಹಮ್ಮದ್ ತಾಹ ಮೊದಲ ವಿಕೆಟ್‌ಗೆ 2.3 ಓವರ್‌ಗಳಲ್ಲಿ 38 ರನ್ ಪೇರಿಸಿದರು. 7 ಬಾಲ್‌ಗಳಲ್ಲಿ 10 ರನ್ ಗಳಿಸಿ ಪಡಿಕ್ಕಲ್ ಔಟ್ ಆದರೆ, 15 ಬಾಲ್‌ಗಳನ್ನು ಎದುರಿಸಿದ ಮೊಹಮ್ಮದ್ ತಾಹ ಅವರು ಮ್ಯಾಕ್ನೆಲ್ ನರ್ಹೋನ್ಹಾಗೆ ವಿಕೆಟ್ ಒಪ್ಪಿಸಿದರು.

ಆದರೆ ಆ ಬಳಿಕ ಕ್ರೀಸ್‌ಗೆ ಬಂದ ಕೆ. ಶ್ರೀಜಿತ್ ಹುಬ್ಬಳ್ಳಿ ಟೈಗರ್ಸ್ ಪರವಾಗಿ ಸೊಗಸಾದ ಮತ್ತು ತಾಳ್ಮೆಯ ಆಟವನ್ನು ಪ್ರದರ್ಶಿಸುವತ್ತ ಗಮನ ಹರಿಸಿದರು. ಅವರ ಜೊತೆ ಬ್ಯಾಟ್ ಮಾಡುತ್ತಿದ್ದ ಕಾರ್ತಿಕೇಯನ್ 8 ರನ್ ಗಳಿಸಿದ್ದ ಕಾರ್ತಿಕೇಯನ್ ವೇಳೆ ತಮ್ಮ ವಿಕೆಟ್ ಕಳೆದುಕೊಂಡರು. ಆ ಬಳಿಕ ಕ್ರೀಸ್‌ಗೆ ಬಂದ ರಿತೇಶ್ ಭಟ್ಕಳ್ 10 ಬಾಲ್ ಎದುರಿಸಿ 13 ರನ್ ಗಳಿಸಿದರು. ನಂತರ ಬಂದ ಅಭಿನವ್ ಮನೋಹರ್ 17 ಬಾಲ್‌ಗಳಲ್ಲಿ 17 ರನ್ ಬಾರಿಸುವಲ್ಲಿ ಯಶಸ್ವಿಯಾದರೆ, ಎಸ್. ರಕ್ಷಿತ್ 3 ಬಾಲ್ ಎದುರಿಸಿ ಕೇವಲ 2 ರನ್ ಗಳಿಸಿ ಪೆವಿಲಿಯನ್ ಸೇರಿದರು.

ಮೂರನೇ ಕ್ರಮಾಂಕದಲ್ಲಿ ಬಂದ ಕೆ. ಶ್ರೀಜಿತ್ ತಾಳ್ಮೆಯ ಆಟ ಪ್ರದರ್ಶಿಸಿ, ತಮ್ಮ ಅರ್ಧ ಶತಕವನ್ನು ಪೂರೈಸಿದರು. 45 ಬಾಲ್ ಎದುರಿಸಿದ ಅವರು 52 ರನ್ ಗಳಿಸಿ, ಸಚಿನ್ ಶಿಂಧೆ ಬೌಲಿಂಗ್‌ನಲ್ಲಿ ಶ್ರೇಯಸ್ ಗೋಪಾಲ್‌ಗೆ ಕ್ಯಾಚ್ ನೀಡುವ ಮೂಲಕ ಔಟ್ ಆದರು. ಕೊನೆಯಲ್ಲಿ ಮನ್ವಂತ್ ಕುಮಾರ್ 9 ಬಾಲ್‌ಗಳಲ್ಲಿ 15 ರನ್ (ಅಜೇಯ) ಗಳಿಸಿ ಮಿಂಚಿದರು. ಕರಿಯಪ್ಪ 4 ಬಾಲ್ ಎದುರಿಸಿ 5 ರನ್ ಗಳಿಸಿದರೆ, ಶ್ರೀಶಾ ಆಚಾರ್ 1 ಬಾಲ್ ಎದುರಿಸಿ 1 ರನ್ ಗಳಿಸಿ ಅಜೇಯರಾಗುಳಿದರು. ಮಂಗಳೂರು ತಂಡದ ಪರವಾಗಿ ಸಚಿನ್ ಶಿಂಧೆ 28 ರನ್ ನೀಡಿ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರೆ, ಮ್ಯಾಕ್ನೆಲ್ ನರ್ಹೋನ್ಹಾ, ಶ್ರೀವತ್ಸ ಆಚಾರ್ಯ ತಲಾ 2 ವಿಕೆಟ್ ಗಳಿಸಿದರು.

ಏಕದಿನ ರ್‍ಯಾಂಕಿಂಗ್: ರೋಹಿತ್, ಕೊಹ್ಲಿಗೂ ಸ್ಥಾನ

ಅಗ್ರ 5ರಲ್ಲಿ ಗಿಲ್‌ಗೆ ಮೊದಲ ಶ್ರೇಯಾಂಕ

ದುಬೈ: ಐಸಿಸಿ ನೂತನ ಏಕದಿನ ಬ್ಯಾಟಿಂಗ್ ಶ್ರೇಯಾಂಕದಲ್ಲಿ ಭಾರತದ ಶುಭಮನ್ ಗಿಲ್, ರೋಹಿತ್ ಶರ್ಮಾ ಹಾಗೂ ವಿರಾಟ್ ಕೊಹ್ಲಿ ಅವರು ಅಗ್ರ ಐದರೊಳಗೆ ಸ್ಥಾನ ಉಳಿಸಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಶುಭಮನ್ ಗಿಲ್ ಮೊದಲ ಸ್ಥಾನದಲ್ಲಿದ್ದರೆ, ರೋಹಿತ್ ಶರ್ಮ ಎರಡನೇ ವಿರಾಟ್ 4ನೇ

ಸ್ಥಾನದಲ್ಲಿದ್ದಾರೆ. ಪಾಕಿಸ್ತಾನ ಪ್ರಮುಖ ಬ್ಯಾಟರ್ ಬಾಬರ್ ಅಜಂ ಮೂರನೇ ಸ್ಥಾನ ಪಡೆದಿದ್ದಾರೆ.

ಬೌಲರ್‌ಗಳ ವಿಭಾಗದಲ್ಲಿ ಭಾರತದ ಕುಲದೀಪ್ ಯಾದವ್ 650 ಅಂಕದೊಂದಿಗೆ 3ನೇ ಸ್ಥಾನದಲ್ಲಿದ್ದರೆ, ಜಡೇಜ 616 ಅಂಕ ಪಡೆದು 9ನೇ ಕ್ರಮಾಂಕದಲ್ಲಿದ್ದಾರೆ. ದಕ್ಷಿಣ ಆಫ್ರಿಕಾದ ಕೇಶವ ಮಹರಾಜ್ ಮತ್ತು ಶ್ರೀಲಂಕಾದ ಮಹೀಶ ತೀಕ್ಷಣ ತಲಾ 671 ಪಾಯಿಂಟ್‌ಗಳನ್ನು ಹೊಂದಿದ್ದು, ಕ್ರಮವಾಗಿ ಮೊದಲೆರಡು ಸ್ಥಾನಗಳಲ್ಲಿದ್ದಾರೆ.

ಕಳೆದ ವಾರ ಐಸಿಸಿ ಏಕದಿನ ರ್‍ಯಾಂಕಿಂಗ್ ಪರಿಷ್ಕೃತಗೊಂಡಾಗ ಕೊಹ್ಲಿ ಹಾಗೂ ರೋಹಿತ್ ಹೆಸರು ಕೂಡ ಇಲ್ಲವಾಗಿತ್ತು, ಆ ಸುದ್ದಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುವ ಜತೆಗೆ ಅಭಿಮಾನಿಗಳ ಆತಂಕಕ್ಕೂ ಕಾರಣವಾಗಿತ್ತು. ಬಳಿಕ ವೆಬ್‌ಸೈಟ್‌ನಲ್ಲಿ ಆದ ತಾಂತ್ರಿಕ ದೋಷದಿಂದ ಹೀಗಾಗಿದೆ ಎಂದು ಐಸಿಸಿ ಸ್ಪಷ್ಟನೆ ನೀಡಿತ್ತು. ರೋಹಿತ್ ಮತ್ತು ಕೊಹ್ಲಿ ಕಳೆದ ಐಸಿಸಿ ಚಾಂಪಿಯನ್ಸ್ ಟ್ರೋಫಿ ಬಳಿಕ ಭಾರತದ ಪರ ಯಾವುದೇ ಪಂದ್ಯ ಆಡಿಲ್ಲ. ಉಭಯ ಆಟಗಾರರು ಟಿ20 ಮತ್ತು ಟೆಸ್ಟ್‌ಗೆ ನಿವೃತ್ತಿ ಹೇಳಿರುವ ಕಾರಣ ಏಕದಿನದಲ್ಲಿ ಮಾತ್ರ ಆಡುತ್ತಿದ್ದಾರೆ.

ಟಾಪ್ 5 ಬ್ಯಾಟರ್‌ಗಳು
- ಶುಭಮನ್ ಗಿಲ್: 784 ಪಾಯಿಂಟ್
- ರೋಹಿತ್ ಶರ್ಮಾ: 756 ಪಾಯಿಂಟ್
- ಬಾಬರ್ ಅಜಂ: 739 ಪಾಯಿಂಟ್
- ವಿರಾಟ್ ಕೊಹ್ಲಿ: 736 ಪಾಯಿಂಟ್
- ಡೆರಿಲ್ ಮಿಚೆಲ್: 720 ಪಾಯಿಂಟ್

ಟಾಪ್-5 ಬೌಲರ್‌ಗಳು
- ಕೇಶವ ಮಹರಾಜ್: 671 ಪಾಯಿಂಟ್
- ಮಹೀಶ ತೀಕ್ಷಣ: 671 ಪಾಯಿಂಟ್
- ಕುಲದೀಪ್ ಯಾದವ್: 650 ಪಾಯಿಂಟ್
- ಬರ್ನಾರ್ಡ್ ಸ್ಕಾಲ್ಟ್ಜ: 644 ಪಾಯಿಂಟ್
- ರಶೀದ್ ಖಾನ್: 640 ಪಾಯಿಂಟ್

ಪ್ರಿ-ಕ್ವಾರ್ಟರ್ ಫೈನಲ್‌ಗೇರಿದ ಸಿಂಧು

ಪ್ಯಾರಿಸ್: ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ ಸಿಂಧು ಅವರು ಬಿಡಬ್ಲ್ಯುಎಫ್ ವಿಶ್ವ ಚಾಂಪಿಯನ್‌ಶಿಪ್ ಬ್ಯಾಡ್ಮಿಂಟನ್‌ನಲ್ಲಿ ಪ್ರಿ-ಕ್ವಾರ್ಟರ್ ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ, ಆ ಮೂಲಕ ಸುಮಾರು ನಾಲ್ಕು ವರ್ಷಗಳ ಬಳಿಕ, ಟೂರ್ನಿಯಲ್ಲಿ ಪ್ರಿ-ಕ್ವಾರ್ಟರ್ ಫೈನಲ್‌ಗೇರಿದ ಸಾಧನೆ ಮಾಡಿದರು. 15ನೇ ಶ್ರೇಯಾಂಕಿತ ಸಿಂಧು, ಅಡಿಡಾಸ್ ಅರೆನಾದಲ್ಲಿ ನಡೆದ 43 ನಿಮಿಷಗಳ ಹೋರಾಟದಲ್ಲಿ ವಿಶ್ವದ 40ನೇ ಶ್ರೇಯಾಂಕಿತ ಮಲೇಷ್ಯಾದ ಕರುಪತೇವನ್ ಲೆತ್ಸಾನಾ ಅವರನ್ನು 21-19, 21-15 ಗೇಮ್‌ಗಳಿಂದ ಸೋಲಿಸಿದರು.

ಈ ಗೆಲುವಿನೊಂದಿಗೆ ಸಿಂಧು 2021ರಲ್ಲಿ ಕ್ವಾರ್ಟರ್ ಫೈನಲ್ ತಲುಪಿದ ನಂತರ ಮೊದಲ ಬಾರಿಗೆ ವಿಶ್ವ ಚಾಂಪಿಯನ್‌ಶಿಪ್‌ನ ಮೂರನೇ ಸುತ್ತನ್ನು ತಲುಪಿದರು. 2019ರ ಚಾಂಪಿಯನ್ ಆಗಿದ್ದ ಅವರು, 2022 ಮತ್ತು 2023ನೇ ಇಸವಿಯಲ್ಲಿ ಎರಡನೇ ಸುತ್ತಿನಲ್ಲೇ ಹೊರ

ನಡೆದಿದ್ದರು.

ಮುಂದಿನ ಸುತ್ತಿನಲ್ಲಿ ಸಿಂಧು ಕಠಿಣ ಪರೀಕ್ಷೆಯನ್ನು ಎದುರಿಸಲಿದ್ದಾರೆ. ವಿಶ್ವದ 2ನೇ ಶ್ರೇಯಾಂಕಿತ ಮತ್ತು ಚೀನಾ ಓಪನ್ ಚಾಂಪಿಯನ್ ವಾಂಗ್ ಝಿ ಯಿ ಅವರನ್ನು ಎದುರಿಸಲಿದ್ದಾರೆ. ಕೊನೆಯ ಬಾರಿಗೆ ಸಿಂಧು 2022ರಲ್ಲಿ ವಾಂಗ್ ಅನ್ನು ಸೋಲಿಸಿದ್ದರು, ಆದರೆ ಇತ್ತೀಚಿನ ಎರಡು ಮುಖಾಮುಖಿಗಳಲ್ಲಿ ಅವರೆದುರು ಸೋತಿದ್ದಾರೆ.

ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್: ಚೋಪ್ರಾ ಸಾರಥ್ಯ

ದೆಹಲಿ: ಸೆಪ್ಟೆಂಬರ್ 13ರಿಂದ 21ರ ವರೆಗೆ ಟೋಕಿಯೊದಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ಗಾಗಿ ಭಾರತದ 19 ಸದಸ್ಯರ ತಂಡವನ್ನು ಹಾಲಿ ವಿಶ್ವ ಚಾಂಪಿಯನ್ ಜಾವೆಲಿನ್ ಎಸೆತಗಾರ ನೀರಜ್ ಚೋಪ್ರಾ ಮುನ್ನಡೆಸಲಿದ್ದಾರೆ.

ಭಾರತ ಅಥ್ಲೆಟಿಕ್ಸ್ ಫೆಡರೇಶನ್ (ಎಎಫ್‌ಐ) ಘೋಷಿಸಿದ ತಂಡದಲ್ಲಿ 13 ಪುರುಷರು ಮತ್ತು ಆರು ಮಹಿಳೆಯರನ್ನು ಒಳಗೊಂಡಿದೆ. ಈ ಕೂಟದಲ್ಲಿ ವಿಶ್ವದ ಅಗ್ರ ಟ್ರ್ಯಾಕ್ ಮತ್ತು ಫೀಲ್ಡ್ ಸ್ಪರ್ಧಿಗಳು ಕಣಕ್ಕಿಳಿಯಲಿದ್ದಾರೆ. ಪ್ರತಿ ಎರಡು ವರ್ಷಗಳಿಗೊಮ್ಮೆ ವಿಶ್ವ ಅಥ್ಲೆಟಿಕ್ಸ್ ಆಯೋಜಿಸಲಾಗುತ್ತದೆ.

2023ರಲ್ಲಿ ಬುಡಾಪೆಸ್ಟ್‌ನಲ್ಲಿ ತಮ್ಮ ವಿಶ್ವ ಪ್ರಶಸ್ತಿಯನ್ನು ಯಶಸ್ವಿಯಾಗಿ ಉಳಿಸಿಕೊಂಡ ಚೋಪ್ರಾ, ಪುರುಷರ ಜಾವೆಲಿನ್ ಥ್ರೋನಲ್ಲಿ ಈ

ಸಲವೂ ಭಾರತದ ಪದಕ ಭರವಸೆಯಾಗಿ ಉಳಿದಿದ್ದಾರೆ. 26 ವರ್ಷದ ಹಾಲಿ ಚಾಂಪಿಯನ್ ನೀರಜ್, ಈ ಬಾರಿ ವೈಲ್ಡ್ ಕಾರ್ಡ್ ಮೂಲಕ ಅರ್ಹತೆ ಪಡೆದಿದ್ದಾರೆ. ನೀರಜ್ ಜತೆಗೆ ಜಾವೆಲಿನ್ ಸ್ಪರ್ಧೆಯಲ್ಲಿ ಸಚಿನ್ ಯಾದವ್ ಮತ್ತು ಯಶ್ವೀರ್ ಸಿಂಗ್ ಸ್ಥಾನ ಪಡೆದಿದ್ದಾರೆ. ಇಬ್ಬರೂ ವಿಶ್ವ ಶ್ರೇಯಾಂಕದ ಮೂಲಕ ತಮ್ಮ ಸ್ಥಾನವನ್ನು ಖಚಿತಪಡಿಸಿಕೊಂಡಿದ್ದಾರೆ.

ರಾಷ್ಟ್ರೀಯ ದಾಖಲೆ ಹೊಂದಿರುವ ಒಡಿಶಾದ ಅನಿಮೇಶ್ ಕುಜುರ್, ವಿಶ್ವ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದ ಮೊದಲ ಭಾರತೀಯ ಪುರುಷ ಓಟಗಾರ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದು, ಈ ಪಂದ್ಯಾವಳಿಯ ಮೂಲಕ ಇತಿಹಾಸ ಸೃಷ್ಟಿಸುವ ಕಾತರದಲ್ಲಿದ್ದಾರೆ. ಭಾರತದ 13 ಕ್ರೀಡಾಪಟುಗಳು ವಿಶ್ವ ಶ್ರೇಯಾಂಕದ ಮೂಲಕ ಟೂರ್ನಿಯಲ್ಲಿ ಪ್ರವೇಶ ಪಡೆದಿದ್ದಾರೆ, ಅವರಲ್ಲಿ ಲಾಂಗ್ ಜಂಪರ್ ಮುರಳಿ ಶ್ರೀಶಂಕರ್ ಕೂಡ ಇದ್ದಾರೆ. ಭಾರತವು ಪ್ರವೇಶ ಮಾನದಂಡಗಳ ಮೂಲಕ ನಾಲ್ಕು ನೇರ ಅರ್ಹತೆಗಳನ್ನು ಗಳಿಸಿದೆ.

ವಿಟಾಕೀಸ್

ರಿಪ್ಪನ್ ಸ್ವಾಮಿಯ ವಿಜಯ ಯಾತ್ರೆ

ಮಾಲ್ಗುಡಿ ಡೇಸ್ ಚಿತ್ರದಲ್ಲಿಯೂ ಮಲೆನಾಡಿನ ಸೊಬಗಿನಲ್ಲಿ ಮಿಂದೆದ್ದೆ. ಈಗ ರಿಪ್ಪನ್ ಸ್ವಾಮಿಯಾಗಿ ಮತ್ತೆ ಮಲೆನಾಡಿನಲಿ ನಲಿದೆ. ನಿಜವಾಗಿಯೂ ಅದು ಖುಷಿಕೊಟ್ಟಿದೆ.

ಈ ಹಿಂದೆ ಹಲವು ಸಿನಿಮಾಗಳಲ್ಲಿ ಲವ್ವರ್ ಬಾಯ್ ಆಗಿ ಗಮನಸೆಳೆದ ವಿಜಯ್ ರಾಘವೇಂದ್ರ ಈಗ ರಿಪ್ಪನ್ ಸ್ವಾಮಿಯ ಅವತಾರ ತಾಳಿದ್ದು ರಗಡ್ ಆಗಿ ಕಾಣಿಸಿಕೊಂಡಿದ್ದಾರೆ. ತೆರೆಯಲ್ಲಿ ರಿಪ್ಪನ್ ಸ್ವಾಮಿಯಾಗಿ ಅಬ್ಬರಿಸಲು ಸಿದ್ಧವಾಗಿದ್ದು ತಮ್ಮ ಪಾತ್ರದ ಬಗ್ಗೆ ವಿ.ಸಿನಿಮಾಸ್ ನೊಂದಿಗೆ ಮಾತನಾಡಿದ್ದಾರೆ.

ವಿ.ಸಿನಿಮಾಸ್ : ಲವ್ವರ್ ಬಾಯ್‌ಯಿಂದ ರಗಡ್ ಅವತಾರ ತಾಳಿದ್ದು?

ವಿಜಯ್ ರಾಘವೇಂದ್ರ : ಈ ಹಿಂದೆ ಇದೇ ತಂಡದ ಜತೆಗೆ ಮಾಲ್ಗುಡಿ ಡೇಸ್ ಸಿನಿಮಾದಲ್ಲಿ ನಟಿಸಿದ್ದೆ. ಅದೇ ವೇಳೆ, ಒಂದು ವಿಭಿನ್ನ ಕಥೆಯಲ್ಲಿ ಭಿನ್ನ ಅವತಾರದಲ್ಲಿ ಕಾಣಿಸಿಕೊಳ್ಳಬೇಕು ಎಂಬ ಆಸೆಯಿತ್ತು. ಹಾಗಾಗಿ ನಿರ್ದೇಶಕರಿಗೆ ಅಂತಹ ಕಥೆ ಬರೆಯುವಂತೆ ಹೇಳಿದ್ದೆ. ಅಂತೆಯೇ ನಿರ್ದೇಶಕರು ರಿಪ್ಪನ್ ಸ್ವಾಮಿ ಕಥೆ ಹೆಣೆದರು. ನಾನು ಈ ಹಿಂದೆ ಅಭಿನಯಿಸಿದ್ದ ಕೇಸ್ ಆಫ್ ಕೊಂಡಾಣ, ರಾಘು.. ಸಿನಿಮಾಗಳಿಗಿಂತಲೂ ಇದು ಡಿಫರೆಂಟ್ ಸ್ಟೋರಿ ಮತ್ತು ಪಾತ್ರವಾಗಿದೆ.

ವಿ.ಸಿ : ರಿಪ್ಪನ್ ಸ್ವಾಮಿ ಶೀರ್ಷಿಕೆಯೇ ವಿಭಿನ್ನವಾಗಿದೆಯಲ್ಲ?

ವಿಜಯ್ : ನಿರ್ದೇಶಕರು ಬಂದು ಕಥೆ ಹೇಳಿದಾಗ ಇದರಲ್ಲಿ ಹೊಸತನ ಇದೆ ಎಂಬುದು ತಿಳಿಯಿತು. ಕಥೆ ಕೇಳುತ್ತಾ, ಅದೇ ಗುಂಗಿನಲ್ಲಿದ್ದೆ. ಚಿತ್ರದಲ್ಲೊಂದು ಫ್ಲಾಷ್ ಬ್ಯಾಕ್ ಸ್ಟೋರಿ ಇದೆ. ಅದರಲ್ಲಿ ನಾಯಕ ಯಾಕೆ ರಿಪ್ಪನ್ ಆದ ಎನ್ನುವುದೇ ಸಸ್ಪೆನ್ಸ್, ಹಾಗಾಗಿ ಚಿತ್ರಕ್ಕೆ ರಿಪ್ಪನ್ ಸ್ವಾಮಿ ಎಂಬ ಶೀರ್ಷಿಕೆಯನ್ನು ಅಂತಿಮಗೊಳಿಸಿದೆವು. ಕಥೆಗೆ ತಕ್ಕಂತೆ ನನ್ನ ಲುಕ್ ಕೂಡ ಬದಲಾಗಿದೆ.

ವಿ.ಸಿ : ಸಿನಿಮಾಗೆ ನಿಮ್ಮ ತಯಾರಿ ಹೇಗಿತ್ತು?

ವಿಜಯ್ : ಈ ಚಿತ್ರ ಆರಂಭಕ್ಕೂ ಮುನ್ನ ನನ್ನ ಜೀವನದಲ್ಲಿ ದುರ್ಘಟನೆ ನಡೆಯಿತು. ಆಗ ತುಂಬಾ ನೋವಿನಲ್ಲಿದ್ದೆ. ಈ ಕಥೆಗೆ ಬೇರೆಯದ್ದೇ ಲುಕ್ ಬೇಕಿತ್ತು, ಅದಕ್ಕೆ ತಯಾರಿಯೂ ಅಗತ್ಯವಿತ್ತು. ಅದಕ್ಕೆ ತಕ್ಕಂತೆ ಮನಸ್ಥಿತಿಯೂ ಬದಲಾಗಬೇಕಿತ್ತು. ಆದರೆ ನೋವಿನಿಂದ ಹೊರಬರಲಾಗದೆ ಚಡಪಡಿಸುತ್ತಿದ್ದೆ. ಈ ಸಮಯದಲ್ಲಿ ನಿರ್ದೇಶಕರು ತುಂಬಾ ಪೇಷನ್ಸ್ ಇಟ್ಟುಕೊಂಡು ನನಗಾಗಿ ಕಾಯ್ದರು. ನಿಜವಾಗಿಯೂ ಅವರ ತಾಳ್ಮೆಯನ್ನು ಮೆಚ್ಚಲೇಬೇಕು. ಹಲವು ದಿನಗಳ ಬಳಿಕ ನನ್ನ ಪಾತ್ರಕ್ಕೆ ತಯಾರಿ ಆರಂಭಿಸಿದೆ. ರಿಪ್ಪನ್ ಆಗಿ ಕಾಣಿಸಿಕೊಂಡೆ.

ಸಿನಿಮಾದಲ್ಲಿ ಪ್ರತಿ ಪಾತ್ರಗಳೂ ಪ್ರಮುಖವಾಗಿದ್ದು, ಪ್ರತಿಯೊಬ್ಬ ಕಲಾವಿದರು ತಮ್ಮ ಪಾತ್ರಗಳಿಗೆ ಜೀವತುಂಬಿ ನಟಿಸಿದ್ದಾರೆ. ಸಿನಿಮಾ ಅದ್ಭುತವಾಗಿ ಮೂಡಿಬಂದಿದೆ.

ನಿರ್ದೇಶನಕ್ಕೆ ಮರಳಿದ ರೂಪೇಶ್ ಶೆಟ್ಟಿ

ಬಿಗ್‌ಬಾಸ್ ಖ್ಯಾತಿಯ ರೂಪೇಶ್ ಶೆಟ್ಟಿ ಹಲವು ಸಿನಿಮಾಗಳಲ್ಲಿ ನಟಿಸಿದ್ದು, ಜತೆಗೆ ನಿರ್ದೇಶಕನಾಗಿಯೂ ಗುರುತಿಸಿಕೊಂಡಿದ್ದಾರೆ. ರೂಪೇಶ್ ಈ ಹಿಂದೆ ಗಿರ್ಗಿಟ್, ಸರ್ಕಸ್ ಸಿನಿಮಾಗಳನ್ನು ನಿರ್ದೇಶನ ಮಾಡಿದ್ದರು. ಇದೀಗ ಮತ್ತೆ ನಿರ್ದೇಶನದತ್ತ ಗಮನ ಹರಿಸಿದ್ದು, ಜೈ ಶೀರ್ಷಿಕೆಯಲ್ಲಿ ಸಿನಿಮಾವನ್ನು ನಿರ್ದೇಶನ ಮಾಡಿದ್ದಾರೆ. ಜತೆಗೆ ನಾಯಕನಾಗಿಯೂ ಅಭಿನಯಿಸಿದ್ದಾರೆ. ಸದ್ಯ ಜೈ ಸಿನಿಮಾದ ಟೀಸರ್ ರಿಲೀಸ್ ಆಗಿದೆ. ನಟ ಶ್ರೀಮುರಳಿ ಟೀಸರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಜೈ, ರೂಪೇಶ್ ಶೆಟ್ಟಿ ನಿರ್ದೇಶನದ ಮೂರನೆಯ ಸಿನಿಮಾವಾಗಿದ್ದು, ಈ ಚಿತ್ರದಲ್ಲಿ ರೂಪೇಶ್ ಶೆಟ್ಟಿ, ಕಬ್ಬಡ್ಡಿ ಆಟಗಾರನಾಗಿ ಕಾಣಿಸಿಕೊಂಡಿದ್ದಾರೆ. ಪೊಲಿಟಿಕಲ್ ಡ್ರಾಮಾ ಕಂಟೆಂಟ್ ಇರುವ ಸಿನಿಮಾ ಇದಾಗಿದ್ದು, ಕುತೂಹಲ ಮೂಡಿಸಿದೆ. ಜೈ ನವೆಂಬರ್ 14 ರಂದು ಕನ್ನಡ ಹಾಗೂ ತುಳು ಭಾಷೆಯಲ್ಲಿ ತೆರೆಗೆ ಬರಲಿದೆ. ಬಾಲಿವುಡ್ ನಟ ಸುನೀಲ್ ಶೆಟ್ಟಿ ಪವರ್ ಫುಲ್ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅದ್ವಿತಿ ಶೆಟ್ಟಿ ನಾಯಕಿಯಾಗಿ ಅಭಿನಯಿಸಿದ್ದು, ಉಳಿದಂತೆ ದೇವದಾಸ್ ಕಾಪಿಕಾಡ್, ರಾಜ್ ದೀಪಕ್ ಶೆಟ್ಟಿ, ನವೀನ್.ಡಿ.ಪಡೀಲ್, ಅರವಿಂದ ಬೋಳಾರ್, ಭೋಜರಾಜ ವಾಮಂಜೂರು, ಪ್ರಸನ್ನ ಶೆಟ್ಟಿ ಬೈಲೂರು, ಸಂದೀಪ್ ಶೆಟ್ಟಿ ಮಾಣಿಬೆಟ್ಟು, ಉಮೇಶ್ ಮಿಜಾರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಪ್ರಸನ್ನ ಶೆಟ್ಟಿ ಬೈಲೂರು ಕಥೆ, ಸಂಭಾಷಣೆ ಬರೆದಿದ್ದಾರೆ. ವಿನುತ್ ಛಾಯಾಗ್ರಹಣ, ಲೊಯ್ ವೆಲೆಂಟಿನ್ ಸಲ್ಡಾನ ಸಂಗೀತ ನಿರ್ದೇಶನ, ರಾಹುಲ್ ವಸಿಷ್ಠ ಸಂಕಲನ ಈ ಚಿತ್ರಕ್ಕಿದೆ. ಆರ್.ಎಸ್.ಸಿನಿಮಾಸ್, ಶೂಲಿನ್ ಫಿಲಂಸ್, ಮುಗ್ರೋಡಿ ಪ್ರೊಡಕ್ಷನ್ ಲಾಂಛನದಲ್ಲಿ ಅನಿಲ್ ಶೆಟ್ಟಿ, ಸುಧಾಕರ ಶೆಟ್ಟಿ ಮುಗ್ರೋಡಿ, ಮಂಜುನಾಥ ಅತ್ತಾವರ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಇದು ಕರಾವಳಿ ತೀರದಲ್ಲಿ ನಡೆಯುವ ಪೊಲಿಟಿಕಲ್ ಕಂಟೆಂಟ್ ಇರುವ ಚಿತ್ರ. ತುಳು ಭಾಷೆಯಲ್ಲಿ ಸಿದ್ಧವಾಗಿದ್ದು, ಅದೇ ಚಿತ್ರವನ್ನು ಕನ್ನಡಕ್ಕೆ ಡಬ್ ಮಾಡಿದ್ದೇವೆ. ಚಿತ್ರದ ಪ್ರಮುಖ ಪಾತ್ರದಲ್ಲಿ ಸುನಿಲ್ ಶೆಟ್ಟಿ ಅಭಿನಯಿಸಿದ್ದಾರೆ. ತಮ್ಮ ಭಾಷೆಯ ಅಭಿಮಾನದಿಂದ ಸಿನಿಮಾದಲ್ಲಿ ಬಣ್ಣಹಚ್ಚಿದ್ದು ಅದ್ಭುತವಾಗಿ ನಟಿಸಿದ್ದಾರೆ. ನಮ್ಮ ಚಿತ್ರದಲ್ಲಿ ಅನುಭವಿ ಕಲಾವಿದರ ದಂಡೆ ಇದೆ. ಅಂದುಕೊಂಡಂತೆ ಚಿತ್ರದ ಶೂಟಿಂಗ್ ಮುಗಿದಿದ್ದು, ಜೈ ಎಲ್ಲರೂ ಮೆಚ್ಚುವಂತೆ ಮೂಡಿಬಂದಿದೆ.

-ರೂಪೇಶ್ ಶೆಟ್ಟಿ

ವೀರೇಶ್ ಸಿನಿಮಾಸ್

ಕದಿರೇನಹಳ್ಳಿ ಮಹದೇಶ್ವರ
ಕೆಂಗೇರಿ ರಾಬಿನ್
ಜೆ.ಪಿ.ನಗರ ಸಿದ್ಧೇಶ್ವರ
ಚಿಕ್ಕಬಾಣಾವರ ಅಶೋಕ
ಯಶವಂತಪುರ ಗೋವರ್ಧನ್
PVR INOX: MALL OF ASIA | NEXUS | ORION | VAISHNAVI | REGALIA | MARKETCITY | AURA | VEGACITY | SPIRIT | UPTOWN | BHARTIYA | REX | GT | VR MALL | GLOBAL | FALCONCITY | SWAGATH | CENTRAL | LIDO | MANTRI | RMZ | GARUDA | YELAHANKA | NEIGHBOURHOOD | SBR | BROOKFIELD
cinépolis: ETA | MEENAKSHI | ORION EAST | LULU | SHANTINIKETAN | SJR
GOPALAN CINEMAS: ARCH | INNOVATION | GRAND | SIGNATURE | LEGACY
ROCKLINE cinemas JALAHALLI
MIRAJ SUNKADAKATTE
CINEPHILE THE MOVIE HUB HSR LAYOUT
KINO CINEMAS SEEGEHALLI
MOVIETIME CINEMAS R.R.NAGAR
VAISHNAVI VAIBHAVI UTHARAHALLI
ತುಮಕೂರು ಜೈಭಾರತ್, PVR INOX
ಚನ್ನಪಟ್ಟಣ ಬಾಲಾಜಿ
ಕುಣಿಗಲ್ ಆಕಾಶ್
ಕನಕಪುರ ಗೋಪಾಲಕೃಷ್ಣ
ಮಧುಗಿರಿ ಶಾಂತಲಾ
ಆನೇಕಲ್ ಅನ್ನಪೂರ್ಣೇಶ್ವರಿ
ಮೈಸೂರು ರಾಜ್‌ಕಮಲ್, PVR INOX: SATYAM | CENTRO | FORUM | GARUDA, DRC CINEMAS, VISION CINEMAS
ಚನ್ನರಾಯಪಟ್ಟಣ ಬಾಲಾಜಿ
ಹೊಳೆನರಸೀಪುರ ಎಸ್.ಎಲ್.ಎನ್
ಬನ್ನೂರು ಸೋಮೇಶ್ವರ
ಟಿ.ನರಸೀಪುರ ವಿಜಯಭಗವಾನ್
ಹುಲ್ಲಹಳ್ಳಿ ಯಜಮಾನ
ಶಿವಮೊಗ್ಗ ಮಂಜುನಾಥ, Bharath Cinemas
ಭದ್ರಾವತಿ ನೇತ್ರಾವತಿ
ಶಿಕಾರಿಪುರ ಮಾಲತೇಶ್
ಚನ್ನಗಿರಿ ಲಕ್ಷ್ಮಿ
ಬಾಳೆಹೊನ್ನೂರು ಸುದರ್ಶಿನಿ
ದಾವಣಗೆರೆ ತ್ರಿಶೂಲ್, MOVIETIME CINEMAS
ಚಿತ್ರದುರ್ಗ CHHOTU MAHARAJ
ಬಳ್ಳಾರಿ MOVIETIME CINEMAS
ಹುಬ್ಬಳ್ಳಿ ಅಪ್ಸರಾ, LAXMI CITY PRIDE MULTIPLEX, cinépolis
ಧಾರವಾಡ ಸಂಗಮ್, PVR INOX
ಬೆಳಗಾವಿ ಚಿತ್ರಾ, PVR INOX, KAPEEL
ಬಿಜಾಪುರ ಲಕ್ಷ್ಮಿ
ಲಕ್ಷ್ಮೇಶ್ವರ ಕೃಷ್ಣ
ಇಳಕಲ್ ಮಹಾಂತೇಶ್
ಗೋಕಾಕ್ ಆನಂದ್
ತಾಳೀಕೋಟೆ ಅಮೀರ್
ಬಾದಾಮಿ ಮಹಾಕೂಟೇಶ್ವರ
ಅಥಣಿ ದುರ್ಗಾಲಕ್ಷ್ಮಿ
ಮುಧೋಳ ಸುಭಾಷಿಣಿ
ಬ್ಯಾಡಗಿ ಶೋಭಾ
ಅಂಕಲಿ ಮಯೂರ
ಗುಲ್ಬರ್ಗ ತ್ರಿವೇಣಿ, PVR INOX, MIRAJ, SHETTY'S MULTIPLEX
ರಾಯಚೂರು MIRAJ
ಬೀದರ್ ಸಪ್ನ
ಗಂಗಾವತಿ ಅಮರ್
ಕೊಪ್ಪಳ ಶಿವ
ಮಾನವಿ ಅಪರ್ಣ
ಸಿಂಧನೂರು ಮಂಜುನಾಥ
ಕುಷ್ಟಗಿ ಮಾರುತಿ
ಮಸ್ಕಿ ವಿಜಯ
ಯಲಬುರ್ಗಾ ಪ್ರವೀಣ್
ದೇವದುರ್ಗ ಆನಂದ್
ಅಂಗಸುಗೂರು ಎಂಪೈರ್
ಶಿರಾವಾರ ಮಿನಿಶಿವ
ಮಂಗಳೂರು SP CINEMAS, PVR INOX, cinépolis, Bharath Cinemas
ಉಡುಪಿ Bharath Cinemas
ಮಣಿಪಾಲ PVR INOX, Bharath Cinemas
ಕುಂದಾಪುರ Bharath Cinemas
ಸುರತ್ಕಲ್ Cine GALAXY
ಪಡುಬಿದ್ರೆ Bharath Cinemas